# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೆಯ ಅಧಿವೇಶನ

## ಗುರುವಾರ, 06ನೇ ಮಾರ್ಚ್ 2025

## ವಿಷಯಾನುಕ್ರಮಣಿಕೆ (INDEX)

01. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

263 – ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಏಕರೂಪ ಟಿಕೆಟ್ ದರ ನಿಗದಿಪಡಿಸುವ ಬಗ್ಗೆ

– ಶ್ರೀ ಗೋವಿಂದರಾಜು

– ಡಾ॥ ಜಿ.ಪರಮೇಶ್ವರ (ಗೃಹ ಸಚಿವರು)

285 – ಮಡಿಕೇರಿಯ ಕೊಡವ ಹೆರಿಟೇಜ್ ಕಾಮಗಾರಿಯ ಕುರಿತು.

– ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)

– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)

266 – ರಾಜ್ಯದಲ್ಲಿನ ಕಾನೂನು ಸುವ್ಯಸ್ಥೆಯ ಬಗ್ಗೆ

– ಶ್ರೀ ಎಸ್.ಎಲ್. ಭೋಜೇಗೌಡ

– ಡಾ॥ ಜಿ.ಪರಮೇಶ್ವರ (ಗೃಹ (ಗುಪ್ತಚರ ಸಚಿವರು)

273 – ಕೆ.ಪಿ.ಎಸ್.ಸಿ. ನಡೆಸುತ್ತಿರುವ ಪರೀಕ್ಷೆಗಳಲ್ಲಿ ಆಗುತ್ತಿರುವ ಗೊಂದಲಗಳ ಕುರಿತು.

– ಡಾ: ಧನಂಜಯ ಸರ್ಜಿ

– ಶ್ರೀ ಎನ್. ಎಸ್.ಬೋಸರಾಜು(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

315 – ಮಾತಾ ಮಾಣಿಕೇಶ್ವರಿ ದೇವಸ್ಥಾನದ ಅಭಿವೃದ್ಧಿ ಕುರಿತು.

– ಶ್ರೀ ತಿಪ್ಪಣ್ಣಪ್ಪ ಕಮಕನೂರ

– ಶ್ರೀ ಹೆಚ್.ಕೆ.ಪಾಟೀಲ್(ಕಾನೂನು, ಸಂಸದೀಯ ವ್ಯವಹಾಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**279- ಪ್ರಸಾದಮ್ ಯೋಜನೆಯ ಅನುದಾನದ ಬಗ್ಗೆ.**

- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಹೆಚ್.ಕೆ.ಪಾಟೀಲ್(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**297- ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಬೇಕಾದ ಅಂತರ್ಜಲ ಅಭಿವೃದ್ಧಿಯ ಬಗ್ಗೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎನ್.ಎಸ್.ಬೋಸರಾಜು(ಸಣ್ಣ ನೀರಾವರಿ,ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**256 – ಸಿಎಲ್- 2 ಮತ್ತು ಸಿಎಲ್ - 9 ಸನ್ನದುಗಳ ಕುರಿತು**

- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು)

**280- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ದೊರೆಯದಿರುವ ಬಗ್ಗೆ.**

- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)
- ಶ್ರೀ ಎನ್. ಎಸ್.ಬೋಸರಾಜು(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. ನಿಯಮ 58ಎ ಮೇರೆಗೆ ಶೂನ್ಯ ವೇಳೆ ಸೂಚನೆಗಳು**

**ಅ) ಕೊಡಗು ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಿಸದೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಅನುದಾನ ಒದಗಿಸುವ ಕುರಿತು.**

- ಶ್ರೀ ಕುಶಾಲಪ್ಪ ಎಂ.ಪಿ. ಸುಜಾ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿನ ನಿವೃತ್ತ ನೌಕರರಿಗೆ ಪಿಂಚಣಿ ನೀಡದಿರುವ ಬಗ್ಗೆ.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಇ) "ಅಕ್ಷರ ದಾಸೋಹ" ನೌಕರರಿಗೆ ಗೌರವಧನ ಹೆಚ್ಚಿಸುವುದರೊಂದಿಗೆ ಬೇಡಿಕೆಗಳನ್ನು ಈಡೇರಿಸುವ ಕುರಿತು.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಪ್ರತಾಪ ಸಿಂಹ ನಾಯಕ್ ಕೆ.
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ಬೆಳಗಾವಿ ಜಿಲ್ಲೆಯ ಹಿಂಡಲಗಾ ಜೈಲಿನ ಖೈದಿಗಳು ಜೈಲಿನಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಅಳವಡಿಸಲಾದ 5ಜಿ ನೆಟ್ ವರ್ಕ್ ಜಾಮರ್‌ನಿಂದಾಗಿ ಸುತ್ತಮುತ್ತಲಿನ ನಾಗರಿಕರಿಗೆ/ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕುರಿತು.**

- ಡಾ: ಉಮಾಶ್ರೀ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಶಾಲೆಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಳಸದಿರುವಂತೆ ಕ್ರಮ ಕೈಗೊಳ್ಳುವ ಕುರಿತು.**

- ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಊ) ತುಂಗಾಭದ್ರ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರನ್ನು ತಡೆಗಟ್ಟಲು ನವಲಿ ಜಲಾಶಯವನ್ನು ನಿರ್ಮಾಣ ಮಾಡುವ ಕುರಿತು.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆಯನ್ನು ನಿಯಂತ್ರಿಸಲು ಜಿಲ್ಲಾಡಳಿತ ವಿಫಲವಾಗಿರುವ ಕುರಿತು.**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ಯಾದಗಿರಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಶಾಶ್ವತ ಪರಿಹಾರ ಒದಗಿಸುವ ಬಗ್ಗೆ.**

- ಡಾ:: ಬಿ.ಜಿ.ಪಾಟೀಲ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) "ಬ್ರಾಂಡ್ ಬೆಂಗಳೂರು" ಕಲ್ಪನೆಯಲ್ಲಿ ಮಂಡನೆಯಾದ 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾದ ಕಾಮಗಾರಿಗಳು ಇದುವರೆವಿಗೂ ಅನುಷ್ಠಾನಗೊಳ್ಳದಿರುವ ಬಗ್ಗೆ.**

- ಶ್ರೀ ಚಿದಾನಂದ್ ಎಂ.ಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಚಿತ್ರ ಸಾರಾಂಶ ಪುಸ್ತಕದಲ್ಲಿ ಚಲನಚಿತ್ರ ಅಕಾಡೆಮಿ ಗೂಗಲ್ ಟ್ರಾನ್ಸ್‌ಲೇಟರ್ ಬಳಕೆ ಮಾಡಿ ಹತ್ತಾರು ಎಡವಟ್ಟು ಮಾಡಿರುವ ಬಗ್ಗೆ.**

- ಶ್ರೀ ಕೇಶವ ಪ್ರಸಾದ್. ಎಸ್
- ಶ್ರೀ ಶಿವರಾಜ್ ಎಸ್.ತಂಗಡಗಿ (ಕನ್ನಡ ಮತ್ತು ಸಂಸ್ಕೃತಿ ಸಚಿವರು)

**ಒ) ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ಸುರಿದಿರುವ ಕಸದ ರಾಶಿಯಿಂದ ಸುತ್ತಮುತ್ತಲಿನ ಜನರಿಗೆ ಅನಾರೋಗ್ಯ ಉಂಟಾಗುತ್ತಿರುವ ಕುರಿತು.**

- ಶ್ರೀ ಎಂ.ನಾಗರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಓ) ರಾಜ್ಯ/ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಉಂಟಾದ ಶಿಕ್ಷಕರ ಕೊರತೆಯಿಂದ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವ ಕುರಿತು.**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**3) ನಿಯಮ 58ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು.**

**ಅ) ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಮುಂತಾದ ಕಾರಣಗಳಿಂದ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಆ) ರಾಜ್ಯದಲ್ಲಿ ನಾಯಿ ಕಡಿತ ಹಾಗೂ ರೇಬಿಸ್ ಪ್ರಕರಣಗಳು ವರದಿಯಾಗುತ್ತಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಇ) ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬ ಧೋರಣೆ ಕುರಿತಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ ಎನ್ನುವ ವಿಷಯ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)

**ಈ) ರಾಜ್ಯ ಗ್ರಾಮ ಪಂಚಾಯಿತಿ ನೌಕರರಿಗೆ ಕಾಲಮಿತಿಯೊಳಗೆ ಕನಿಷ್ಠ ವೇತನ ಜಾರಿಗೊಳಿಸುವ ಬಗ್ಗೆ.**

- ಶ್ರೀ. ಎನ್.ಎಸ್.ಬೋಸರಾಜು(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**4) ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು/ಅಧಿಕಾರಿಗಳ ಕುರಿತು ಪ್ರಕಟಣೆ**

**5) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ**

- ಶ್ರೀ ಡಿ.ಟಿ.ಶ್ರೀನಿವಾಸ(ಡಿ.ಟಿ.ಎಸ್.)
- ಶ್ರೀ ಶಶಿಲ್ ಜಿ.ನಮೋಶಿ
- ಶ್ರೀ ಸುನೀಲ್‌ಗೌಡ ಪಾಟೀಲ್
- ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎನ್.ರವಿಕುಮಾರ್
- ಶ್ರೀ ಆರ್.ಬಿ.ತಿಮ್ಮಾಪುರ (ಅಬಕಾರಿ ಸಚಿವರು)
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

**6) ಗಮನ ಸೆಳೆಯುವ ಸೂಚನೆಗಳು**

**ಅ) ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರದ ನೀತಿ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು.**

- ಡಾ: ಧನಂಜಯ ಸರ್ಜಿ
- ಶ್ರೀ ಮಧು ಬಂಗಾರಪ್ಪ(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

**ಆ) ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬ ಧೋರಣೆ ಕುರಿತಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ ಎನ್ನುವ ವಿಷಯ ಕುರಿತು.**

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಶಿವಾನಂದ ಎಸ್.ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

**7) ನಿಯಮ 330ರ ಮೇರೆಗೆ ಚರ್ಚೆ**

**ಅ) ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪಿಸುವ ಕುರಿತು.**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಡಾ: ತಳವಾರ್ ಸಾಬಣ್ಣ
- ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

**8) ಗಮನ ಸೆಳೆಯುವ ಸೂಚನೆಗಳು**

**ಇ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿಗೋಶನ್ ಆಸ್ಪತ್ರೆಗಳನ್ನು ವಿಭಾಗೀಯ ಅಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸುಮಾರು 8 ಜಿಲ್ಲೆಗಳಿಗೆ ಕೇಂದ್ರವನ್ನಾಗಿ ಮಾರ್ಪಡಿಸಬೇಕು ಎನ್ನುವ ಕುರಿತು.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಮಂಜುನಾಥ್ ಭಂಡಾರಿ

**೨) ನಿಯಮ ೩೩೦ ರ ಮೇರೆಗೆ ಚರ್ಚೆ**

**ಅ) ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆ ಅಡಿ ಕಳೆದ 19 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಲ್ಯಾಬ್ ಟೆಕ್ನಿಷಿಯನ್, ಸ್ಟಾಫ್ ನರ್ಸ್ ಹಾಗೂ ಆಯುಷ್ ವೈದ್ಯರುಗಳನ್ನು ಖಾಯಂಗೊಳಿಸುವ ಬಗ್ಗೆ.**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)

**ಆ) ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಯಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಸಿ.ಟಿ.ರವಿ
- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಡಿ.ಎಸ್. ಅರುಣ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಶರವಣ ಟಿ.ಎ.
- ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಎ.ವಸಂತ ಕುಮಾರ್
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು)

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಕೇಶವ ಪ್ರಸಾದ್ .ಎಸ್
- ಶ್ರೀ ಪಿ.ಹೆಚ್.ಪೂಜಾರ್
- ಡಾ: ಧನಂಜಯ ಸರ್ಜಿ

**10) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕಂತಹ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಎಸ್.ನವೀನ್
- ಶ್ರೀ ಎನ್.ರವಿ ಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎನ್.ಎಸ್.ಭೋಸರಾಜು(ಸಭಾನಾಯಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಗೋವಿಂದರಾಜು
- ಶ್ರೀ ಆರ್,ಬಿ.ತಿಮ್ಮಾಪುರ (ಅಬಕಾರಿ ಸಚಿವರು)
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕಾ ಸಚಿವರು)
- ಡಾ: ಉಮಾಶ್ರೀ

**11) ಪ್ರಕಟಣೆ**

**12) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕಂತಹ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.**

- ಶ್ರೀ ಎಂ.ನಾಗರಾಜು
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ

~ ~ ~ ~ ~

(102) 06-03-2025/10.30/ಬಿ.ಕೆ.ಪಿ.-ಬಿ.ಎನ್.ಎಸ್.

# ಕರ್ನಾಟಕ ವಿಧಾನ ಪರಿಷತ್ತು

**ಶುಕ್ರವಾರ, ದಿನಾಂಕ 06ನೇ ಮಾರ್ಚ್ 2025**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 01.ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 256**

**(ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್‌ರವರು ಗೈರು ಹಾಜರಿದ್ದರು)**

**ಪ್ರಶ್ನೆ ಸಂಖ್ಯೆ: 239**

**(ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿರವರು ಗೈರು ಹಾಜರಿದ್ದರು)**

**ಪ್ರಶ್ನೆ ಸಂಖ್ಯೆ: 322**

**(ಮಾನ್ಯ ಸದಸ್ಯರಾದ ಡಾ॥ ಎಂ,ಜಿ. ಮುಳೆರವರು ಗೈರು ಹಾಜರಿದ್ದರು)**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 263**
**ಸದಸ್ಯರ ಹೆಸರು : ಶ್ರೀ ಗೋವಿಂದರಾಜು**
**(ವಿಧಾನ ಸಭೆಯಿಂದ ಚುನಾಯಿತರಾದವರು)**
**ಉತ್ತರಿಸಬೇಕಾದ ದಿನಾಂಕ : 06.03.2025.**
**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಸಂಖ್ಯೆಯೆಷ್ಟು ಹಾಗೂ ಕಳೆದ 03 ವರ್ಷದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; (ಚಿತ್ರಮಂದಿರಗಳವಾರು ಮಾಹಿತಿ ಒದಗಿಸುವುದು) | ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಸಂಖ್ಯೆ:41. ಸದರಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಿಂದ ಸರ್ಕಾರಕ್ಕೆ ಪಾವತಿಸಿರುವ ಪರವಾನಗಿ ನವೀಕರಣ ಶುಲ್ಕದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಈ ಚಿತ್ರಮಂದಿರಗಳಿಗೆ ಟಿಕೆಟ್ ದರಗಳನ್ನು ನಿಗಧಿಮಾಡುವ ಅಧಿಕಾರ ಯಾರಿಗೆ ಇದೆ; ಪ್ರತಿ ಚಿತ್ರಮಂದಿರದಲ್ಲಿ ಒಂದೊಂದು ಟಿಕೆಟ್ ದರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚಿತ್ರಮಂದಿರಗಳಿಗೆ ಟಿಕೆಟ್ ದರಗಳನ್ನು ಚಿತ್ರಮಂದಿರಗಳ ಮಾಲಿಕರೇ ನಿರ್ಧಾರ ಮಾಡುವ ಪದ್ಧತಿ ಜಾರಿಯಲ್ಲಿದೆ. ಅವಶ್ಯವೆನಿಸಿದ್ದಲ್ಲಿ ದರ ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕಿದೆ.<br><br>ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಇ) | ಹಾಗಿದ್ದರೆ ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; | ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಈ) | ಕರ್ನಾಟಕದಲ್ಲಿ ಅನ್ಯ ಭಾಷಾ ಸಿನಿಮಾಗಳು ಬಿಡುಗಡೆಯಾದರೆ 500 ರೂಗಳಿಂದ 1500 ರೂಪಾಯಿಗಳಿಗೆ ಹೆಚ್ಚು ಮಾಡಲಾಗುತ್ತಿದ್ದು, ಇದರಿಂದ ಯಾರಿಗೆ ಅನುಕೂಲವಾಗುತ್ತದೆ; | ಅನ್ಯ ಭಾಷಾ ಸಿನಿಮಾಗಳಿಗೆ ಮಾತ್ರ ಟಿಕೆಟ್ ದರ ಹೆಚ್ಚು ಮಾಡುತ್ತಿರುವ ಬಗ್ಗೆ ಯಾವುದೇ ದೂರುಗಳು ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಉ) | ಕನ್ನಡ ಚಿತ್ರಗಳಿಗೂ ಸಹ 500 ರೂ ನಿಂದ 1000 ರೂ ಗಳವೆರಗೂ ಟಿಕೆಟ್ ದರ ನಿಗಧಿಪಡಿಸಿದರೆ, ಕನ್ನಡ ಚಿತ್ರಗಳನ್ನು ಪ್ರೋತ್ಸಾಹ ನೀಡುವವರು ಯಾರು; ಕನ್ನಡ ಚಿತ್ರಗಳಿಗೆ ಮಲ್ಟಿಪ್ಲೆಕ್ಸ್ ಚಿತ್ರಮಂದಿರದಲ್ಲಿ ಕನಿಷ್ಠ 100 ರೂ ನಿಂದ 150 ರೂವರೆಗೂ ನಿಗಧಿಪಡಿಸಲು ಸರ್ಕಾರದಿಂದ ಆದೇಶ ಹೊರಡಿಸಲು ಇರುವ ತೊಂದರೆ ಏನು; | ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಊ) | ರಾಜ್ಯಕ್ಕೆ ಪರಭಾಷಾ ಚಿತ್ರಗಳು ಬಿಡುಗಡೆಯಾದರೆ ಬೆಂಗಳೂರಿನಲ್ಲಿರುವ ಎಲ್ಲಾ ಮಲ್ಟಿಪ್ಲೆಕ್ಸ್ ಚಿತ್ರಮಂದರಿಗಳಲ್ಲಿ ಪ್ರದರ್ಶನಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದ್ದು, ಇದರಿಂದ ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ; ಇದಕ್ಕೆ ಪರಿಹಾರ ಏನು? | ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು ಬಹು ಪರದೆಗಳನ್ನು ಹೊಂದಿರುವುದರಿಂದ, ಅನ್ಯ ಭಾಷಾ ಚಿತ್ರಗಳು ಪ್ರದರ್ಶನಗೊಳ್ಳುತ್ತಿದ್ದರೂ ಸಹ, ಉಳಿದ ಪರದೆಗಳಲ್ಲಿ ಕನ್ನಡ ಭಾಷಾ ಚಿತ್ರಗಳಿಗೆ ಅವಕಾಶ ಇರುವ ಕಾರಣ, ಕನ್ನಡ ಚಿತ್ರಗಳಿಗೆ ಚಿತ್ರಮಂದಿರದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

## ಅನುಬಂಧ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 34 (263) ಪ್ರಶ್ನೆಗೆ ಸಂಬಂಧಿಸಿದಂತೆ ಉತ್ತರ

| ಕ್ರ.ಸಂ. | ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಹೆಸರು | ಕಳೆದ 3 ವರ್ಷಗಳಿಂದ ಸರ್ಕಾರಕ್ಕೆ ಪಾವತಿಸಿರುವ ಪರವಾನಗಿ ನವೀಕರಣ ಶುಲ್ಕ |
|---|---|---|
| 1 | 2 | 3 |
| 1 | ಇನೋವೆಟಿವ್ ಮಲ್ಟಿಪ್ಲೆಕ್ಸ್, ಮಾರತ್ತಹಳ್ಳಿ | 2,20,600 |
| 2 | ಮೀರಜ್ ಸಿನಿಮಾಸ್, ಹೆಗ್ಗನಹಳ್ಳಿ | 2,45,300 |
| 3 | ರಾಕ್‌ಲೈನ್ ಸಿನಿಮಾಸ್, ಜಾಲಹಳ್ಳಿ | 85,500 |
| 4 | ಮೂವಿ ಟೈಮ್ಸ್, ಹಲಗೇವಡೇರಹಳ್ಳಿ | 1,30,500 |
| 5 | ಗೋಪಾಲನ್ ಸಿನಿಮಾಸ್, ಮೈಸೂರು ರಸ್ತೆ | 2,90,250 |
| 6 | ಗೋಪಾಲನ್ ಸಿನಿಮಾಸ್, ರಾಜರಾಜೇಶ್ವರಿನಗರ | 1,95,750 |
| 7 | ಗೋಪಾಲನ್ ಸಿನಿಮಾಸ್, ಬನ್ನೇರುಘಟ್ಟ ರಸ್ತೆ | 1,95,750 |
| 8 | ಗೋಪಾಲನ್ ಸಿನಿಮಾಸ್, ಹಳೇ ಮದ್ರಾಸ್ ರಸ್ತೆ | 2,09,250 |
| 9 | ಗೋಪಾಲನ್ ಸಿನಿಮಾಸ್, ನಾಗವಾರ ಪಾಳ್ಯ | 1,14,900 |
| 10 | ಸಿನಿಪೊಲೀಸ್, ಗೋಪಾಲಪುರ | 3,24,000 |
| 11 | ಸಿನಿಪೊಲೀಸ್, ಶಿರಸಿ ವೃತ್ತ | 2,39,375 |
| 12 | ಸಿನಿಪೊಲೀಸ್, ಬಾಣಸವಾಡಿ | 1,05,660 |
| 13 | ಸಿನಿಪೊಲೀಸ್, ಹುಳಿಮಾವು | 2,02,320 |
| 14 | ಸಿನಿಪೊಲೀಸ್, ಬನ್ನೇರುಘಟ್ಟ ರಸ್ತೆ | 83,250 |
| 15 | ಸಿನಿಪೊಲೀಸ್, ಹೂಡಿ | 2,68,110 |
| 16 | ಐನೋಕ್ಸ್ ಪಿವಿಆರ್, ಸಂಪಿಗೆ ರಸ್ತೆ, ಮಲ್ಲೇಶ್ವರಂ | 1,89,000 |
| 17 | ಐನೋಕ್ಸ್ ಪಿವಿಆರ್, ಬ್ಯಾಟರಾಯನಪುರ | 3,33,000 |
| 18 | ಐನೋಕ್ಸ್ ಪಿವಿಆರ್, ಮೆಗ್ರತ್ ರಸ್ತೆ | 76,500 |
| 19 | ಐನೋಕ್ಸ್ ಪಿವಿಆರ್, ಸ್ವಾಗತ್ ರಸ್ತೆ, ತಿಲಕನಗರ | 90,000 |
| 20 | ಐನೋಕ್ಸ್ ಪಿವಿಆರ್, ಶಿಗೇಹಳ್ಳಿ | 1,23,000 |
| 21 | ಐನೋಕ್ಸ್ ಪಿವಿಆರ್, ಎಂ.ಜಿ.ರಸ್ತೆ | 65,250 |
| 22 | ಐನೋಕ್ಸ್ ಪಿವಿಆರ್, ವೈಟ್‌ಫೀಲ್ಡ್ ರಸ್ತೆ | 1,21,400 |
| 23 | ಐನೋಕ್ಸ್ ಪಿವಿಆರ್, ಮಾರೇನಹಳ್ಳಿ | 74,250 |
| 24 | ಐನೋಕ್ಸ್ ಪಿವಿಆರ್, ಬ್ರೂಕ್ ಫೀಲ್ಡ್ | 40,500 |

| | | |
|---|---|---|
| | | 1,84,500 |
| 25 | ಐನೋಕ್ಸ್ ಪಿವಿಆರ್, ಯಲಹಂಕ | 90,000 |
| 26 | ಐನೋಕ್ಸ್ ಪಿವಿಆರ್, ಯಲಹಂಕ ನ್ಯೂ ಟೌನ್ | 2,16,000 |
| 27 | ಐನೋಕ್ಸ್ ಪಿವಿಆರ್, ಚೊಕ್ಕನಹಳ್ಳಿ | 1,26,000 |
| 28 | ಐನೋಕ್ಸ್ ಪಿವಿಆರ್, ಬಿದರಹಳ್ಳಿ | 90,000 |
| 29 | ಐನೋಕ್ಸ್ ಪಿವಿಆರ್, ಬ್ರಿಗೇಡ್ ರಸ್ತೆ | 2,70,000 |
| 30 | ಐನೋಕ್ಸ್ ಪಿವಿಆರ್, ದೇವಸಂದ್ರ | 1,15,000 |
| 31 | ಐನೋಕ್ಸ್ ಪಿವಿಆರ್, ವೈಟ್‌ಫೀಲ್ಡ್ | 3,40,000 |
| 32 | ಐನೋಕ್ಸ್ ಪಿವಿಆರ್, ಕೋರಮಂಗಲ | 1,20,000 |
| 33 | ಐನೋಕ್ಸ್ ಪಿವಿಆರ್, ಬೆಳ್ಳಂದೂರು | 2,91,300 |
| 34 | ಐನೋಕ್ಸ್ ಪಿವಿಆರ್, ದೇವಸಂದ್ರ | 3,29,100 |
| 35 | ಐನೋಕ್ಸ್ ಪಿವಿಆರ್, ಬನ್ನೇರುಘಟ್ಟ ರಸ್ತೆ | 94,500 |
| 36 | ಐನೋಕ್ಸ್ ಪಿವಿಆರ್, ಮೈಸೂರು ರಸ್ತೆ | 1,76,000 |
| 37 | ಐನೋಕ್ಸ್ ಪಿವಿಆರ್, ಥಣಿಸಂದ್ರ | 2,00,400 |
| 38 | ಐನೋಕ್ಸ್ ಪಿವಿಆರ್, ರಾಜಾಜಿನಗರ | 2,00,000 |
| 39 | ಐನೋಕ್ಸ್ ಪಿವಿಆರ್, ಯಶವಂತಪುರ | 4,05,000 |
| 40 | ಐನೋಕ್ಸ್ ಪಿವಿಆರ್, ಕನಕಪುರ ರಸ್ತೆ | 1,71,000 |
| 41 | ಐನೋಕ್ಸ್ ಪಿವಿಆರ್, ಮಾಗಡಿ ರಸ್ತೆ | |
| | ಒಟ್ಟು | **74,42,215** |

**ಶ್ರೀ ಗೋವಿಂದರಾಜು:- (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಒಂದೊಂದು ಸಿನೆಮಾಗೆ ಒಂದೊಂದು ಟಿಕೆಟ್ ದರವನ್ನು ನಿಗದಿಪಡಿಸಲಾಗಿರುತ್ತದೆ. ಕನ್ನಡ ಸಿನೆಮಾಗಳಿಗೆ ಕಡಿಮೆ ಟಿಕೆಟ್ ದರವನ್ನು ನಿಗದಿಪಡಿಸಿರುತ್ತಾರೆ. ಬೇರೆ ಭಾಷೆಯ ಸಿನೆಮಾಗಳಿಗೆ ರೂ.500 ರಿಂದ ರೂ.1,500 ದ ವರೆಗೆ ಟಿಕೆಟ್ ದರವನ್ನು ಹೆಚ್ಚಿಗೆ ಮಾಡಿ ಪ್ರೇಕ್ಷಕರಿಂದ ಅವರಿಗೆ ಇಷ್ಟಬಂದಂತೆ ಟಿಕೆಟ್ ದರವನ್ನು ವಸೂಲಿ ಮಾಡುತ್ತಿದ್ದಾರೆ. ಅದರ ನಿಯಂತ್ರಣ ಸರ್ಕಾರದ ಪರಿಮಿತಿಯಲ್ಲಿ ಇದ್ದರೂ ಸಹ ಸರ್ಕಾರ ಅದರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಇದಕ್ಕೆ ಪೂರಕವಾಗಿ ಸನ್ಮಾನ್ಯ ಸಿದ್ಧರಾಮಯ್ಯನವರು 2017-18 ಸಾಲಿನ ಬಜೆಟ್ ಘೋಷಣೆ ಮಾಡಿದಾಗ ಏಪ್ರಿಲ್ ಒಂದನೇ ತಾರೀಖಿನಿಂದ ರೂ.200 ನಂತೆ ಸಮಾನವಾಗಿ ಟಿಕೆಟ್ ದರವನ್ನು ನಿಗದಿಪಡಿಸುತ್ತೇವೆಂದು ಬಜೆಟ್‌ನಲ್ಲೇ ಘೋಷಣೆ ಮಾಡಿದರು. ಬಜೆಟ್‌ನಲ್ಲಿ ಘೋಷಣೆ ಮಾಡಿದಂತಹ ವಾಗ್ದಾನವನ್ನು ಸರ್ಕಾರವು ಇಂದಿನವರೆಗೂ ಈಡೇರಿಸಿರುವುದಿಲ್ಲ.

**(ಮುಂದು)**

**ಶ್ರೀ ಗೋವಿಂದರಾಜು (ಮುಂದು):-**

ಒಳಾಡಳಿತ ಇಲಾಖೆಯಲ್ಲಿ ಯಾವುದೇ ಒಂದು ಪ್ರಸ್ತಾವನೆ ಸ್ವೀಕಾರ ಆಗಿಲ್ಲ ಎಂದು ಮಾನ್ಯ ಗೃಹ ಮಂತ್ರಿಗಳು ಹೇಳಿದ್ದಾರೆ. ಈ ಪ್ರಸ್ತಾವನೆಯನ್ನು ಕೊಡುವವರು ಯಾರು? ಇಲಾಖೆಯಲ್ಲಿ ಆ ಪ್ರಸ್ತಾವನೆಯನ್ನು ಸಿದ್ಧ ಪಡಿಸಬೇಕು. ಏಕೆಂದರೆ ಸಿನೆಮಾ ನಿಯಂತ್ರಣ ಕಾಯಿದೆಯಡಿಯಲ್ಲಿ ಎಲ್ಲಾ ಸಿನೆಮಾ ಥಿಯೇಟರ್‌ಗಳು ಬರುತ್ತವೆ. ಅದು ಟಿಕೆಟ್ ದರ ಇರಬಹುದು, ಅದರ ಪ್ರದರ್ಶನ ಇರಬಹುದು; ಸಿನೆಮಾಟೋಗ್ರಫಿ ಕಾಯಿದೆಯ ಪುಸ್ತಕದಲ್ಲಿ ಎಲ್ಲವನ್ನೂ ವಿಶ್ಲೇಷಣೆ ಮಾಡಿದ್ದಾರೆ. ಆದರೆ ಯಾವುದೇ ಕಾಯಿದೆಯನ್ನು ಈ ಮಲ್ಟಿಪ್ಲೆಕ್ಸ್‌ನವರು ಮೀರಿ ಅವರ ಇಷ್ಟಾನುಸಾರ ಅವರ ಟಿಕೆಟ್ ಅನ್ನು ಚಾರ್ಜ್ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಇವತ್ತಿನಿಂದಲೇ ಒಳಾಡಳಿತ ಇಲಾಖೆಯಲ್ಲಿ ಒಂದು ಪ್ರಸ್ತಾವನೆಯನ್ನು ಸಿದ್ಧ ಪಡಿಸಿ ಈ ಒಂದು ಸಿನೆಮಾ ಟಿಕೆಟ್ ದರವನ್ನು ನಿಯಂತ್ರಣ ಮಾಡಬೇಕು. ಕನ್ನಡ ಸಿನೆಮಾಕ್ಕೂ ಸಹ ಅಷ್ಟೇ ಟಿಕೆಟ್ ದರವನ್ನು ಇಡಬೇಕು ಎಂದು ಹೇಳಿ ಒಳಾಡಳಿತ ಇಲಾಖೆಯವರು ಒಂದು ಆದೇಶ ಮಾಡಿ implement ಮಾಡಬೇಕು.

**ಡಾ:ಜಿ.ಪರಮೇಶ್ವರ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಒಂದು peculiar system ಇದೆ. ಇದರ ಬಗ್ಗೆ ಏಕೆ ಯಾರೂ ಗಮನ ಹರಿಸಿಲ್ಲವೆಂದು ನನಗೂ ಅರ್ಥವಾಗುತ್ತಿಲ್ಲ. ಮಾನ್ಯ ಗೋವಿಂದರಾಜು ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಈಗಲಾದರೂ ಇದಕ್ಕೆ ಒಂದು ಹೊಸ ರೂಪವನ್ನು ಕೊಡಲು ಸಾಧ್ಯವಾಗಬಹುದು. ಚಿತ್ರಮಂದಿರಗಳಿಗೆ ಮಾಲೀಕರೇ ಟಿಕೆಟ್ ದರವನ್ನು ನಿಗದಿ ಮಾಡತಕ್ಕಂಥ ಪದ್ಧತಿ ಇನ್ನೂ ಕೂಡ ಜಾರಿಯಲ್ಲಿದೆ. ಅವರಿಗೆ ಬಿಟ್ಟುಬಿಟ್ಟಿದ್ದಾರೆ. ಏಕೆ ಆ ರೀತಿಯಾಗಿದೆಯೋ ಗೊತ್ತಿಲ್ಲ.

2017-18ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳುತ್ತಾರೆ. ಇದನ್ನು ರೂ.200 ರಂತೆ ಎಲ್ಲರಿಗೂ uniform ಆಗಿ ಒಂದು ದರ ನಿಗದಿ ಮಾಡುತ್ತೇವೆಂದು Budget speech ನಲ್ಲಿ ಹೇಳಿದ ಮೇಲೆ ಅದಕ್ಕೆ ಸರ್ಕಾರಿ ಆದೇಶ ಕೂಡ issue ಆಗುತ್ತದೆ. ದಿನಾಂಕ 11.05.2018ರಲ್ಲಿ ಒಂದು ಸರ್ಕಾರಿ ಆದೇಶವನ್ನು ಕೂಡ issue ಮಾಡುತ್ತಾರೆ. ಸರ್ಕಾರಿ ಆದೇಶ issue ಮಾಡಿದ ಮೇಲೆ theatre owners ಹೋಗಿ ಅದಕ್ಕೆ stay ತೆಗೆದುಕೊಳ್ಳುತ್ತಾರೆ. ನಂತರ ಆ ಆದೇಶವನ್ನೇ ಹಿಂಪಡೆಯಲಾಗುತ್ತದೆ. ತೆಗೆದುಕೊಂಡು ಮೊದಲಿನ ರೀತಿಯಲ್ಲೇ ಪದ್ಧತಿಯನ್ನು ಮುಂದುವರೆಸಲಾಗಿದೆ. ರಾಜ್ಯದಲ್ಲಿ ಸುಮಾರು 650 ಏಕತೆರೆ ಅಂದರೆ single screen ಮಾಡುವಂತಹ ಚಿತ್ರಮಂದಿರಗಳಿವೆ. ಅದರಲ್ಲಿ ನೂರು ಈಗಾಗಲೇ ಸ್ಥಗಿತವಾಗಿವೆ. ಏಕೆಂದರೆ ಬೇರೆ ಬೇರೆ platform ಗಳಲ್ಲಿ picture ಗಳು ನೋಡುವುದಕ್ಕೆ ಸಿಗುವುದರಿಂದ ನೂರು ಚಿತ್ರಮಂದಿರಗಳು ಸ್ಥಗಿತವಾಗಿದೆ. 150 ಚಿತ್ರಮಂದಿರಗಳು ಮುಚ್ಚುವ ಹಂತದಲ್ಲಿದೆ. ಬೆಂಗಳೂರು ಸಿಟಿಯಲ್ಲಿ 41 ಮಲ್ಟಿಪ್ಲೆಕ್ಸ್ ಇದೆ. ಆದರೆ ಇದೆಲ್ಲದಕ್ಕೂ ಅವರವರೇ ದರ ನಿಗದಿ ಪಡಿಸುತ್ತಾರೆ. ನಾನು ತಮಗೆ ಭರವಸೆ ಕೊಡುತ್ತೇನೆ. ಮುಂದಿನ ದಿನಗಳಲ್ಲಿ ಆದಷ್ಟು ಶೀಘ್ರವಾಗಿ ಇದಕ್ಕೆ ಏನಾದರೂ ಒಂದು ಪದ್ಧತಿಯನ್ನು ನಾವು ಒಳಾಡಳಿತ ಇಲಾಖೆಯಿಂದ ತರುತ್ತೇವೆ. ಏಕೆಂದರೆ ಇದನ್ನು regulate ಮಾಡದೆ ಹೋದರೆ ಬೇರೆ ಬೇರೆ

ರೀತಿಯಲ್ಲಿ ಅವರವರ ಇಷ್ಟಕ್ಕೆ ಬಂದಂತೆ ರೇಟ್ ಮಾಡುತ್ತಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಆದಷ್ಟು ಬೇಗ ಇದಕ್ಕೆ ಒಂದು ಪದ್ಧತಿಯನ್ನು ಜಾರಿಗೆ ತರಲಾಗುವುದು.

**ಶ್ರೀ ಗೋವಿಂದರಾಜು:-** ಮತ್ತೊಂದು ವಿಷಯವೆಂದರೆ ಒಳಗಡೆ ಮಾರುವ ಕುಡಿಯುವ ನೀರಿರಬಹುದು, ಕಾಫಿ-ಟೀ ಇರಬಹುದು, ತಿಂಡಿ ಇರಬಹುದು, ಅದನ್ನು ಒಳಗೆ ತೆಗೆದುಕೊಂಡು ಹೋಗುವುದಕ್ಕೆ ಅವರು ಬಿಡುವುದಿಲ್ಲ. ರೂ.20 ರ ಒಂದು ಬಾಟಲ್ ನೀರನ್ನು ರೂ.200ಕ್ಕೆ ಮಾರುತ್ತಾರೆ. ಅದು harassment. ಅವರು ನಮ್ಮ ಬಳಿ ಬಂದಿದ್ದಾರೆ, ಇನ್ನು ಎಲ್ಲಿಯೂ ಹೋಗುವುದಿಲ್ಲ. ಒಂದು ತಿಂಡಿ ತೆಗೆದುಕೊಳ್ಳಬೇಕಾದರೂ ಒಳ್ಳೆಯ ಕ್ವಾಲಿಟಿ ತಿಂಡಿಯನ್ನು ಅವರು ಮಾರುವುದಿಲ್ಲ. ಅದರ ಜೊತೆಗೆ 1:200 times rate ಜಾಸ್ತಿ ಮಾಡುತ್ತಾರೆ. ಅದಕ್ಕೂ ಸಹ ಒಂದು ನಿಯಂತ್ರಣ ಮಾಡಬಹುದು. ನಾನು ಏಕೆ ಹೇಳುತ್ತಿದ್ದೇನೆಂದರೆ ನನ್ನದೂ ಸಹ ಒಳ್ಳೆಯ ಚಿತ್ರಮಂದಿರವಿದೆ. ಅಂತಹ ಚಿತ್ರಮಂದಿರದಲ್ಲಿ ನಾವು ಒಂದು ಟಿಕೆಟ್‌ಗೆ ರೂ.200 ಅಷ್ಟೇ ಚಾರ್ಜ್ ಮಾಡುತ್ತೇವೆ. ನಾನು ಹೇಳಬೇಕಾದರೆ ನಾವು ಏನು ಮಾಡಿದ್ದೇವೆ ಎಂದು ಕೂಡ ಹೇಳಬೇಕಲ್ಲವೆ? ಅಂದರೆ ಬೆಂಗಳೂರಿನಲ್ಲಿ ಮಾತ್ರ ಇದು ವಿಚಿತ್ರ ಪದ್ಧತಿ. ಅದರಲ್ಲಿಯೂ ಈ ಮಲ್ಟಿಪ್ಲೆಕ್ಸ್‌ಗಳಲ್ಲಿ 150-200 ಸೀಟ್ ಇರುವ ಕಡೆ ಅವರಿಗಿಷ್ಟ ಬಂದಂತೆ ರೇಟ್ ನಿಗದಿ ಮಾಡುತ್ತಾರೆ. ಅವರು at least, water bottle ಅನ್ನು MRP (Maximum Retail Price) ಗೆ ಮಾರುವ ರೀತಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ಹೇಳಿದ ಹಾಗೆ ಥಿಯೇಟರ್‌ಗಳನ್ನು ಮುಚ್ಚಲಾಗುತ್ತಿದೆ. ಬೇರೆ ಬೇರೆ platform ಗಳಲ್ಲಿ ಫಿಲಂಗಳನ್ನು ನೋಡಬಹುದು. ಹಾಗಾಗಿ ಥಿಯೇಟರ್‌ಗಳ ಅವಶ್ಯಕತೆಯೇ ಇಲ್ಲ ಎನ್ನುವ ರೀತಿಗೆ ಬರುತ್ತಿದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಇದೊಂದು commercial activity ಆಗಿದೆ. ನೀವು ಹೇಳಿದಂತೆ 150-200 ಸೀಟು ಇರುತ್ತವೆ. ನಾವು ನೀರು ಕೊಡುತ್ತೇವೆ. ನಾವು ಬೇರೆ ಬೇರೆ ತಿಂಡಿ ತಿನಿಸು ಎಲ್ಲಾ ಕೊಡುತ್ತೇವೆ. Luxury seat ಗಳನ್ನು ಮಾಡಿ ಒಂದು ರೀತಿಯಲ್ಲಿ exploit ಮಾಡುವ ರೀತಿ ಇದೆ. ಅದನ್ನು regulate ಮಾಡುವುದಕ್ಕೆ ಒಂದು comprehensive ಆಗಿ ಮಾಡಿ, ತಾವು ಹೇಳಿದಂತೆ ವಾಟರ್ ಬಾಟಲ್ ಮುಂತಾದವುಗಳನ್ನು ಅದರಲ್ಲಿಯೇ ಸೇರಿಸುವ ರೀತಿಯಲ್ಲಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 285

**ಮಾನ್ಯ ಸದಸ್ಯರ ಹೆಸರು** : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

**ಉತ್ತರಿಸಬೇಕಾದ ದಿನಾಂಕ** : 06.03.2025

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕೇಂದ್ರ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ; | ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕಾಮಗಾರಿಯನ್ನು 2013-14ನೇ ಸಾಲಿನಲ್ಲಿ ರೂ.268.04 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪ್ರಾರಂಭಿಸಲಾಗಿತ್ತು. ತದನಂತರ, ಸದರಿ ಕಾಮಗಾರಿಯನ್ನು ಸರ್ಕಾರದ ಆದೇಶ ಸಂಖ್ಯೆ:ಟಿಓಆರ್ 84 ಟಿಡಿಪಿ 2020 ದಿನಾಂಕ:27-05-2020 ರ ಆದೇಶದನ್ವಯ ರೂ.330.45 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. |
| ಆ) | ಈ ಹೆರಿಟೇಜ್ ಕೇಂದ್ರದ ಕಾಮಗಾರಿಗೆ ಒಟ್ಟು ಮೀಸಲಿರಿಸಿದ ಅನುದಾನ ಎಷ್ಟು? | ಈ ಹೆರಿಟೇಜ್ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಟಿಓಆರ್/84/ಟಿಡಿಪಿ/2020, ದಿನಾಂಕ:27-05-2020 ರನ್ವಯ ಮೀಸಲಿಟ್ಟ ಒಟ್ಟಾರೆ ರೂ.330.45 ಲಕ್ಷಗಳ ಅನುದಾನವನ್ನು ಆರು ಕಂತುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. |
| ಇ) | ಸದರಿ ಕಾಮಗಾರಿ ಯಾವ ಹಂತದಲ್ಲಿದೆ; ಕಾಮಗಾರಿ ವಿಳಂಬವಾಗಲು ಕಾರಣವೇನು; | ಸರ್ಕಾರದ ಪರಿಷ್ಕೃತ ಆದೇಶ ಸಂಖ್ಯೆ: ಟಿಓಆರ್/84/ಟಿಡಿಪಿ/2020, ದಿನಾಂಕ:27-05-2020 ರನ್ವಯ ರೂ.330.45 ಲಕ್ಷಗಳ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಯನ್ವಯ ಅಂದಾಜು ಪಟ್ಟಿಯಲ್ಲಿರುವಂತೆ, 02 ಸಂಖ್ಯೆಯ ಐನ್ ಮನೆಗಳ ನಿರ್ಮಾಣ (ಅಡಿಗೆಮನೆ, ದೊಡ್ಡ ಹಾಲ್, ಲೈಬ್ರರಿ) ಬಯಲು ರಂಗಮಂದಿರ, ವಾಟರ್ ಟ್ಯಾಂಕ್ ಅಪ್ಪರ್ ಮತ್ತು ಲೋವರ್ ಡಿಸ್ಪ್ಲೇ ಭಾಗದ ತಡೆಗೋಡೆ ನಿರ್ಮಾಣ ಇತರೆ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಮೆಟ್ಟಿಲು ನಿರ್ಮಾಣ ಹಾಗೂ ಇತ್ಯಾದಿ ಸೌಲಭ್ಯಗಳನ್ನು ಪೂರ್ಣಗೊಳಿಸಲಾಗಿರುತ್ತದೆ. |
| ಈ) | ಕೊಡವ ಹೆರಿಟೇಜ್ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ಅವಶ್ಯವಿರುವ 495.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆ ಸಹಮತಿ | ಕೊಡವ ಹೆರಿಟೇಜ್ ಸೆಂಟರ್ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲು ಆಗಬೇಕಾಗಿರುವ ಪೂರಕ ಕಾಮಗಾರಿಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನ ರೂ.495.00 ಲಕ್ಷಗಳನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡದೇ ಇರುವುದರಿಂದ ಸದರಿ ಕಾಮಗಾರಿಗಳನ್ನು |

| | | |
|---|---|---|
| | ನೀಡದೇ ಇರಲು ಕಾರಣವೇನು; | ಸಿಎಸ್‌ಆರ್ ಅನುದಾನದಡಿಯಲ್ಲಿ ಕೈಗೊಳ್ಳುವಂತೆ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ/ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.<br><br>ಪ್ರಸ್ತುತ, ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಕೊಡಗು ಜಿಲ್ಲೆ, ಮಡಿಕೇರಿ ಇವರು ಸದರಿ ಕಾಮಗಾರಿಯನ್ನು ಸಿಎಸ್‌ಆರ್ ಅನುದಾನದಲ್ಲಿ ಕೈಗೊಂಡು ನಿರ್ವಹಣೆ ಮತ್ತು ಕಾರ್ಯಾಚರಣೆ ಮಾಡಲು ಕಷ್ಟಸಾಧ್ಯ/ ಕಾರ್ಯಸಾಧುವಲ್ಲದ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು ಪಿಪಿಪಿ (Public Private Partnership) ಮಾದರಿಯಲ್ಲಿ ಪೂರ್ಣಗೊಳಿಸಿ ನಿರ್ವಹಣೆ ಹಾಗೂ ಕಾರ್ಯಚರಣೆ ಮಾಡುವ ಬಗ್ಗೆ ಮಾರ್ಗದರ್ಶನ ನೀಡಲು ಕೋರಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಮುಂದಿನ ಕ್ರಮವಹಿಸಲಾಗುವುದು. |
| ಉ) | ಹೆಚ್ಚುವರಿ ಅನುದಾನವನ್ನು ಶೀಘ್ರ ಬಿಡುಗಡೆಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ವಿವರ ನೀಡುವುದು) | |

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿದ ಪ್ರಶ್ನೆ ಕೊಡವ Heritage ಕಾಮಗಾರಿ ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ಅವಕಾಶವಿರುವ ರೂ.4.95 ಕೋಟಿ ಹೆಚ್ಚುವರಿಯಾಗಿ ಮಂಜೂರು ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡದಿರಲು ಕಾರಣವೇನು? ನಾನು ಮೂರು ಬಾರಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸಿಎಸ್‌ಆರ್ ಅನುದಾನದಡಿಯಲ್ಲಿ ಕೈಗೊಳ್ಳುವಂತೆ ಪ್ರವಾಸೋದ್ಯಮ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈಗ ಕೊಟ್ಟಿರುವ ಉತ್ತರದಲ್ಲಿ ಪ್ರಸ್ತುತ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಕೊಡಗು ಜಿಲ್ಲೆ, ಮಡಿಕೇರಿ ಇವರು ಸದರಿ ಕಾಮಗಾರಿಯನ್ನು ಸಿಎಸ್‌ಆರ್ ಅನುದಾನದಲ್ಲಿ ಕೈಗೊಂಡು ನಿರ್ವಹಣೆ ಮತ್ತು ಕಾರ್ಯಾಚರಣೆ ಮಾಡಲು ಕಷ್ಟಸಾಧ್ಯ/ಕಾರ್ಯಸಾಧುವಲ್ಲದ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು PPP (Public Private Partnership) ಮಾದರಿಯಲ್ಲಿ ಪೂರ್ಣಗೊಳಿಸಿ ನಿರ್ವಹಣೆ ಹಾಗೂ ಕಾರ್ಯಾಚರಣೆ ಮಾಡುವ ಬಗ್ಗೆ ಮಾರ್ಗದರ್ಶನ ನೀಡಲು ಕೋರಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಪ್ರವಾಸಿಗರು ಕೊಡಗು ಜಿಲ್ಲೆಗೆ ಬರುತ್ತಿದ್ದಾರೆ. ಸರ್ಕಾರಕ್ಕೂ ಪ್ರವಾಸೋದ್ಯಮದಿಂದ ಒಳ್ಳೆಯ ರೆವಿನ್ಯೂ ಬರುತ್ತಿದೆ. ಹಾಗೆಯೇ ಕೊಡಗಿನ ಆಚಾರ-ವಿಚಾರ, ಸಂಸ್ಕೃತಿ, ಹಿಂದೆ ಇದ್ದಂತಹ ಪಾರಂಪರಿಕ ಜೀವನ ಶೈಲಿಯನ್ನು ಬಿಂಬಿಸುವ heritage ಅನ್ನು ಸ್ಥಾಪನೆ ಮಾಡಿದರೆ ಸರ್ಕಾರಕ್ಕೂ

ಹಣ ಬರುತ್ತದೆ. ಸರ್ಕಾರ ಆರ್ಥಿಕ ಇಲಾಖೆಯ ಅನುಮತಿ ಕೊಟ್ಟಿರುವುದಿಲ್ಲ ಎಂದು ಹೇಳಿದೆ. ಇವತ್ತು ಕರ್ನಾಟಕದಲ್ಲಿ ರೂ.4 ಲಕ್ಷ ಕೋಟಿಯ ಬಜೆಟ್ ಮಾಡುತ್ತಿದ್ದಾರೆ. ಅದರಲ್ಲಿ ರೂ.4 ಕೋಟಿ ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೆ? ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೆ, 2013-14ನೇ ಸಾಲಿನಿಂದಲೇ ಈ ಕೊಡಗು heritage ಕಾಮಗಾರಿ ಪ್ರಾರಂಭವಾಗಿದೆ. ಆದರೆ ಹೆಚ್ಚುವರಿಯಾಗಿ ರೂ.330 ಲಕ್ಷಗಳಿಗೆ ಅನುದಾನ 6 ಕಂತುಗಳಲ್ಲಿ ಬಿಡುಗಡೆಯಾಗಿದೆ. ಎಲ್ಲಾ ನಿಜ. ಆದರೆ ಅದು ಪೂರ್ಣಗೊಂಡಿಲ್ಲ. ಹೆಚ್ಚುವರಿಯಾಗಿರತಕ್ಕಂಥ ಕೆಲಸಗಳು ಆಗಬೇಕಾಗಿದೆ. ಆ ಹೆಚ್ಚುವರಿ ಕೆಲಸಗಳಿಗಾಗಿ ಹೆಚ್ಚುವರಿ ಅನುದಾನವನ್ನು ಸಿಎಸ್ಆರ್ ನಲ್ಲಿ ತೆಗೆದುಕೊಂಡು ಆ ಕೆಲಸವನ್ನು ಮಾಡಿ ಎಂದು ಡಿ.ಸಿ.ಯವರಿಗೆ 2020ರ ಸುಮಾರಿಗೆ ಕೇಳಲಾಗಿತ್ತು. ಆದರೆ ಡಿ.ಸಿ.ಯವರು ವಿವರವಾದ ಪತ್ರವನ್ನು ಬರೆದು ಸಿಎಸ್ಆರ್ ಮೇಲೆ depend ಆಗಿ ಕುಳಿತರೆ ನಮಗೆ ಬೇಕಾದಾಗ ಕೆಲಸ ಆಗುವುದಿಲ್ಲ. ಅದು ಕಾರ್ಯಸಾಧುವಲ್ಲ. ಅದು ಬೇಗ ಆಗಬೇಕಾಗಿದೆ. PPP model ನೊಳಗೆ ಮಾಡುವುದಕ್ಕೆ ಅವರು ಮಾರ್ಗದರ್ಶನ ಕೇಳಿದ್ದಾರೆ. ತಾವು ಒಪ್ಪುವುದಾದರೆ, ತಾವು ಕೈ ಜೋಡಿಸುವುದಾದರೆ PPP model ನಲ್ಲಿ ಮಾಡುವುದಕ್ಕೆ ಕೊಡಗು heritage ಕಾಮಗಾರಿ ಏನಿದೆ ಆ ಕಾಮಗಾರಿಯನ್ನು ನಾವು ಒದಗಿಸುತ್ತೇವೆ. ಇದು ಅತ್ಯಂತ ಅಗತ್ಯವಾಗಿ ಆಗಲೇಬೇಕಾದುದು. ಕೊಡಗು heritage ಅನ್ನು ಜನರಿಗೆ ತಿಳಿಸುವುದಕ್ಕೆ ಸಾಧ್ಯ ಮಾಡಿಕೊಡತಕ್ಕಂತಹ ಒಂದು ವಿಶೇಷ ಕಾರ್ಯಕ್ರಮ. PPP model ನಲ್ಲಿ ಮಾಡುವುದಕ್ಕೆ ಆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ. ಅದಕ್ಕೆ ಏನು ಬೇಕು ಮತ್ತು ಏನಾದರೂ ಕೈ ಜೋಡಿಸುವಂಥದ್ದು ಇದ್ದರೆ, ಅದಕ್ಕೆ ಸರ್ಕಾರ ಕೈ ಜೋಡಿಸುತ್ತದೆ.

**(ಮುಂದು)**

**(104) 06-03-2025/10.50/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ಪಿ.ಪಿ.ಪಿ. (Public-Private Partnership) ಮಾದರಿಯಲ್ಲಿ ಮಾಡುವುದರಿಂದ ಈಗಾಗಲೇ ಸುಮಾರು 14 ವರ್ಷಗಳಾಗಿವೆ. ಬಜೆಟ್‌ನಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ, ಕೆಲಸವನ್ನು ಪೂರ್ಣಗೊಳಿಸುವಂತಹ ಕಾರ್ಯಕ್ರಮವನ್ನು ಮಾಡಲಿ. ಏಕೆಂದರೆ, ಪ್ರವಾಸಿಗರಿಗೆ ಇಡೀ ದಕ್ಷಿಣ ಭಾರತದಲ್ಲಿಯೇ ಹೆಸರುವಾಸಿಯಾದಂಥದ್ದು ಕೊಡಗು ಜಿಲ್ಲೆ. ಅದೇ ರೀತಿ ಕಾವೇರಿ ನದಿಯ ನೀರು ನಾಲ್ಕು ರಾಜ್ಯಗಳಲ್ಲಿ ಹರಿಯುತ್ತಿದೆ. ದಯವಿಟ್ಟು ಸರ್ಕಾರದ ವತಿಯಿಂದ

ಬಜೆಟ್‌ನಲ್ಲಿ ಘೋಷಣೆ ಮಾಡಿ ಅದರ ಪೂರ್ಣ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿಯನ್ನು ಮಾಡುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಪ್ಪು ಮಾರ್ಗದರ್ಶನಕ್ಕೆ ಹೋಗುವುದು ಬೇಡ. ಈಗ ಪಿ.ಪಿ.ಪಿ. ಮಾಡೆಲ್ ಆದರೆ ಇದನ್ನು ಇನ್ನು ವಿಸ್ತಾರವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಅದು ಬಹುಬೇಗ ಆಗುತ್ತದೆ. ಈ ಕೆಲಸ 2013-14ರಿಂದ ನೆನೆಗುದಿಗೆ ಬಿದ್ದಿದೆ. ಈಗಾಗಲೇ ಇದಕ್ಕೆ ಹತ್ತು ವರ್ಷ ಪೂರ್ಣವಾಗಿ ಹೋಗಿದೆ. ಅದನ್ನು ಪಿ.ಪಿ.ಪಿ. ಮಾಡೆಲ್‌ನಲ್ಲಿ ಮಾಡೋಣ. ಅದನ್ನು ಬರುವ ಆರ್ಥಿಕ ವರ್ಷದೊಳಗೆಯೇ ಈ ಕಾರ್ಯಕ್ರಮವನ್ನು ಪೂರ್ತಿ ಮಾಡುವುದಕ್ಕೆ ಏನೇನು ಮಾಡಬೇಕು ಎಂದು ಆ ಒಂದು ಕೆಲಸವನ್ನು ಮಾಡೋಣ.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ನನ್ನದು ಅರಣ್ಯರೋದನ ಆಗುತ್ತಿದೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವು ಮೊದಲು ಪ್ರಶ್ನೆ ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ನಾನು ಪ್ರಶ್ನೆ ಕೇಳುವುದಕ್ಕೆ ಏಳು ಜನ ಸಚಿವರು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ನಾನು ಹೇಳುವುದನ್ನು ಕೇಳಿ. ಮೊದಲು ತಾವು ಪ್ರಶ್ನೆ ಕೇಳಿ ಆಮೇಲೆ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಏಳು ಜನ ಸಚಿವರು ಸದನದಲ್ಲಿ ಕಡ್ಡಾಯವಾಗಿ ಇರಬೇಕಲ್ಲವೇ?

**ಸಭಾಪತಿಯವರು:-** ನೀವು ಪ್ರಶ್ನೆ ಕೇಳುವುದನ್ನು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಭಾನಾಯಕರಿಗೆ ಮತ್ತು ಆಡಳಿತ ಪಕ್ಷದವರಿಗೆ ಇದು ಶೋಭೆ ತರುವಂಥದ್ದಲ್ಲ.

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 266 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಹಾಗೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಹಲವು ಕಿಡಿಗೇಡಿಗಳು ಮತ್ತು ದರೋಡೆಕೋರರಿಂದ ಕಾನೂನು ಸುವ್ಯವಸ್ಥೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಜ್ಯಾದ್ಯಂತ ಕಾನೂನು ಸುವ್ಯವಸ್ಥೆ ಹಾಳು ಮಾಡುವಂತಹ ಘಟನೆಗಳು ನಡೆಯದಂತೆ ಮುಂಗಡ ಮಾಹಿತಿಯನ್ನು ಕಲೆಹಾಕಿ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ನಿಗಾವಹಿಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ವೀಲ್ಹಿಂಗ್ ಹಾಗೂ ಎಷ್ಟೋ ಕಿಡಿಗೇಡಿಗಳು, ದರೋಡೆಕೋರರ ಕೈನಲ್ಲಿ ಚಾಕು, ಚೂರಿ, ಲಾಂಗ್‌ಗಳನ್ನು ಹಿಡಿದುಕೊಂಡು ಓಡಾಡುತ್ತಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಕರ್ತವ್ಯ ಲೋಪವನ್ನು ಗಮನಿಸಲಾಗಿದೆಯೇ; | ವೀಲ್ಹಿಂಗ್ ಮಾಡುವಂತಹ ಮತ್ತು ಕೈಯಲ್ಲಿ ಚಾಕು, ಚೂರಿ, ಲಾಂಗ್‌ಗಳನ್ನು ಹಿಡಿದುಕೊಂಡು ಓಡಾಡುತ್ತಾ ಸಮಾಜದಲ್ಲಿ ಶಾಂತಿ ಕದಡುತ್ತಿರುವುದು ಕಂಡು ಬಂದ ಕೂಡಲೇ ಅಂತಹವರನ್ನು ದಸ್ತಗಿರಿ ಮಾಡಿ ಬಂಧಿಸಿ, ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಿದೆ? | ಸಮಾಜದ ಶಾಂತಿ ಹಾಳು ಮಾಡುವ ಉದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ, ಗಲಭೆ ಸೃಷ್ಟಿಸುವವರ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣಗಳನ್ನು ದಾಖಲಿಸಿಕೊಂಡು ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡಲಾಗುತ್ತಿದೆ.<br>➢ ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಬೀಟ್ ವ್ಯವಸ್ಥೆ ಮಾಡಲಾಗಿದೆ ಹಾಗೂ ಸದರಿ ಬೀಟ್‌ಗಳಿಗೆ ಉಸ್ತುವಾರಿ ಅಧಿಕಾರಿಗಳನ್ನು ನೇಮಕ ಮಾಡಿ, ಯಾವುದೇ ಅಪರಾಧ ಕೃತ್ಯಗಳು ಜರುಗದಂತೆ ನಿಗಾವಹಿಸಲಾಗುತ್ತಿದೆ. ಒಂದು ವೇಳೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯ ನಿರ್ಲಕ್ಷತೆಯಿಂದಾಗಿ ಅಪರಾಧ ಕೃತ್ಯಗಳು ಜರುಗಲು ಕಾರಣವಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲಾಗುತ್ತಿದೆ.<br>➢ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 267 ಎಸ್‌ಎಸ್‌ಟಿ 2018 ದಿನಾಂಕ: 28.09.2018 ರಲ್ಲಿ ನೀಡಿರುವ ಪ್ರದತ್ತವಾದ ಅಧಿಕಾರದನ್ವಯ ಮತ್ತು ಪದೇ ಪದೇ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ರೌಡಿ ಆಸಾಮಿಗಳ ಬಗ್ಗೆ ನಿಗಾವಹಿಸಿ ಅವರುಗಳ ವಿರುದ್ಧ ಸುಮೋಟೊ ಪ್ರಕರಣಗಳನ್ನು ದಾಖಲಿಸಿ ಗಡಿಪಾರು ಮಾಡುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಸದರಿ ಅಸಾಮಿಗಳ ವಿರುದ್ಧ The |

| | | |
|---|---|---|
| | | Karnataka Control of Organised Crime Act-2000 ಮತ್ತು The Karnataka Prevention of Dangerous Activiti of Bootleggers, Drug-Offenders, Gamblers, Goondas, Immoral Traffic Offenders, Slum-Grabbers and video or Audio Pirates Act-1985 ರಡಿಯಲ್ಲಿ ಕ್ರಮ ಕೈಗೊಳ್ಳಕಾಗುತ್ತಿದೆ.<br>➢ ಸುಸಜ್ಜಿತವಾದ ಗಸ್ತು ಕರ್ತವ್ಯವನ್ನು ನಿರ್ವಹಿಸಲು ನಗರದಲ್ಲಿ ಹೊಯ್ಸಳ ವಾಹನವನ್ನು ಮತ್ತು ಚೀತಾ ವಾಹನಗಳನ್ನು ನಿಯೋಜಿಸಲಾಗಿದೆ. ಈ ಮೂಲಕ ನಗರದ ಯಾವುದೇ ಸ್ಥಳದಿಂದ 112 ಸಂಖ್ಯೆಗೆ ಕರೆಮಾಡಿ ಕೆಲವೇ ನಿಮಿಷಗಳ ಒಳಗಾಗಿ ಆ ಸ್ಥಳವನ್ನು ತಲುಪಿ ನೊಂದ ವ್ಯಕ್ತಿಗೆ ನ್ಯಾಯ ಕೊಡಿಸುವ ಹಾಗೂ ಅಪರಾಧ ಕೃತ್ಯವನ್ನು ತಡೆಯುವ ಯೋಜನೆಯನ್ನು ರೂಪಿಸಲಾಗಿದೆ.<br>➢ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರಪತ್ರಗಳನ್ನು ಹಂಚಿಕೆ ಮಾಡಿ ಅವರಿಗೆ ಅಪರಾಧ ಕೃತ್ಯಗಳ ಅರಿವು ಮೂಡಿಸಿ ಹಾಗೂ ಅಲ್ಲಿನ ಭಾತ್ಮೀದಾರರ ಮೂಲಕ ಅಪರಾಧ ಕೃತ್ಯಗಳ ಬಗ್ಗೆ ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಕ್ರಮ ವಹಿಸಲಾಗುತ್ತಿದೆ.<br>➢ ಪೊಲೀಸ್ ಠಾಣಾ ಸರಹದ್ದುಗಳಲ್ಲಿ ನಾಗರೀಕ ಸಮಿತಿ ಸದಸ್ಯರ, ಶಾಂತಿ ಪಾಲನಾ ಸಮಿತಿ ಸದಸ್ಯರ ಹಾಗೂ ಹಿರಿಯ ನಾಗರೀಕರ ಜನಸ್ನೇಹಿ ಸಭೆಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ಆ ಸಭೆಗಳಲ್ಲಿ ಸಾರ್ವಜನಿಕರಿಂದ ಪೊಲೀಸರಿಗೆ ಯಾವ ರೀತಿ ಮಾಹಿತಿಯನ್ನು ಒದಗಿಸಬಹುದು ಎಂಬ ಬಗ್ಗೆ ಹಾಗೂ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಪೊಲೀಸರು ಯಾವ ರೀತಿಯ ರಕ್ಷಣೆಯನ್ನು ನೀಡಲಾಗುವುದು ಎಂಬ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗುತ್ತಿದೆ. ಇದರಿಂದಾಗಿ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ರಕ್ಷಣೆಯನ್ನು ನೀಡಲು ನೆರವಾಗುತ್ತಿದೆ.<br>➢ ಮಹಿಳೆಯರಿಗೆ ಠಾಣೆಯ ಮತ್ತು ಅಧಿಕಾರಿಗಳ ದೂರವಾಣಿ ಸಂಖ್ಯೆಗಳನ್ನು ನೀಡಿ, ಯಾರಾದರೂ ಅನುಮಾನಾಸ್ಪದ/ ಅಪರಿಚಿತ ವ್ಯಕ್ತಿಗಳು ತಮ್ಮ ಮನೆಯ ಬಳಿ ಕಂಡು ಬಂದಲ್ಲಿ ಠಾಣೆಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡುವಂತೆ ತಿಳುವಳಿಕೆ ನೀಡಲಾಗಿರುತ್ತದೆ.<br>➢ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರನ್ನೊಳಗೊಂಡ ವಾಟ್ಸಪ್ ಗ್ರೂಪ್ ಅನ್ನು ತೆರೆದು ಮಾನಿಟರ್ ಮಾಡಲಾಗುತ್ತಿದೆ.<br>➢ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್ ರಚಿಸಿ ಮಾನಿಟರಿಂಗ್ ಮಾಡಲಾಗುತ್ತಿದೆ.<br>➢ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗುವ ಅಪರಾಧಿಗಳ ಮಾಹಿತಿಯನ್ನು ಪಡೆದು ಅವರ ಚಲನ-ವಲನದ ಮೇಲೆ ನಿಗಾ ಇಡಲಾಗುತ್ತಿದೆ.<br>➢ MCCTNS App ಮೂಲಕ ಫಿಂಗರ್ ಪ್ರಿಂಟ್ ಸ್ಕ್ಯಾನ್ ಮಾಡಿ, ಈ ಹಿಂದೆ ಪ್ರಕರಣ ದಾಖಲಾಗಿದ್ದಲ್ಲಿ ವಿಚಾರಣೆ ಮಾಡಲಾಗುತ್ತಿದೆ. |

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಭಾಪತಿಯವರಿಗೆ ನನ್ನ ಮಾತು ಎಂದರೆ, ಬಹಳ ಅಸಡ್ಡೆಯಾಗುತ್ತದೆ. ನಾನು ಪೀಠದ ಗೌರವವನ್ನು ಕಾಪಾಡಬೇಕೆಂದು ಬಹಳ ಪ್ರಯತ್ನಪಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ಅದು ಎಲ್ಲರಿಗೂ ಸಹ ಗೊತ್ತಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಪ್ರಯತ್ನಪಡುತ್ತಿದ್ದೇನೆ. ಆ ಪ್ರಯತ್ನಕ್ಕೆ ತಾವು ನನ್ನ ಜೊತೆ ಕೈ ಜೋಡಿಸುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ಅದು ನಿಮ್ಮಿಂದ ಆಗುವುದಿಲ್ಲ. ಈಗ ಪ್ರಶ್ನೆ ಕೇಳಿ ಎಂದು ಕರೆದಾಗ, ಪ್ರಶ್ನೆ ಕೇಳುವ ಪದ್ಧತಿ ಇದೆಯೋ ಇಲ್ಲವೋ ಎಂದು ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಏಳು ಜನ ಸಚಿವರನ್ನು ಸದನದಲ್ಲಿ ಹಾಜರುಪಡಿಸುವುದಕ್ಕೆ ಆಗುವುದಿಲ್ಲವೇ?

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವು ಅದನ್ನು ಆಮೇಲೆ ಹೇಳಬೇಕು. ಈಗ ಪ್ರಶ್ನೆ ಕೇಳಿದಾಗ, ಅದಕ್ಕೆ ಉತ್ತರವನ್ನು ಯಾರು ಹೇಳುತ್ತಾರೆಂದು ನೋಡಿಕೊಂಡು ಹೇಳಬೇಕು. ತಾವು ಅದನ್ನಾದರೂ ಕಲಿಯಿರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಹಲವು ಕಿಡಿಗೇಡಿಗಳು ಮತ್ತು ದರೋಡೆಕೋರರಿಂದ ಕಾನೂನು ಸುವ್ಯವಸ್ಥೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರ್ಕಾರ ಏನು ಉತ್ತರ ನೀಡಿದೆ ಎಂದರೆ, ರಾಜ್ಯಾದ್ಯಂತ ಕಾನೂನು ಸುವ್ಯವಸ್ಥೆ ಹಾಳು ಮಾಡುವಂತಹ ಘಟನೆಗಳು ನಡೆಯದಂತೆ ಸೂಕ್ತ ನಿಗಾವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಹಾಗಾದರೆ, ಈಗ ನಡೆದಿರುವುದಕ್ಕೆ ಏನು ಮಾಡುತ್ತಾರೆ? ನಡೆಯುತ್ತಿರುವುದಕ್ಕೆ ಏನು ಮಾಡುತ್ತಾರೆ? ಮುಂದೆ ನಡೆಯದಂತೆ... Is this the answer expected from such a senior and well-experienced Hon'ble Home Minister, who is about to become Chief Minister? ಅವರಿಂದ ನಾನು ಇಂತಹ ಉತ್ತರವನ್ನು ಬಯಸುವುದು ಉಂಟೆ?

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಎಸ್.ಎಲ್.ಭೋಜೇಗೌಡರು ಇದನ್ನು ರೆಡಿ ಇಟ್ಟುಕೊಂಡಿರುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೇಳಿದರೆ ತಾವು ಈ ರೀತಿ ಹೇಳುತ್ತೀರಿ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ, ನನಗೆ ಗೊತ್ತು, ತಾವು ಮಾತನಾಡಿ.

**ಡಾ: ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಲ್ಲಿ ನುಗ್ಗೆ ಮರ ಹತ್ತಿಸುವುದು ಎನ್ನುತ್ತಾರೆ. ನನಗೆ ಅದು ಬೇಡ. ಏಕೆಂದರೆ, ನುಗ್ಗೆ ಮರ ಹತ್ತಿದರೆ ಬೇರೆಯಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಒಳ್ಳೆಯ ಗಟ್ಟಿಮುಟ್ಟಾದ ಮರವನ್ನೇ ಹತ್ತಿಸುತ್ತೇನೆ.

**ಡಾ: ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಅದರ ಜೊತೆಗೆ ಗೂಂಡಾಗಳ ವರ್ತನೆ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ವೀಲ್ಹಿಂಗ್ ಮಾಡುವಂಥದ್ದು. ಇದೆಲ್ಲಾ ಇತ್ತೀಚಿನ ದಿನಗಳಲ್ಲಿ ಜಾಸ್ತಿಯಾಗಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಇದನ್ನು ಮೊದಲೇ ತಿಳಿದುಕೊಂಡು ನಿಯಂತ್ರಣ ಮಾಡಬೇಕೆಂಬ ಪ್ರಶ್ನೆಯನ್ನು ಸಹ ಎತ್ತಿದ್ದಾರೆ. ಈಗ ರಾಜ್ಯಾದ್ಯಂತ ಕಳೆದ ಮೂರು ವರ್ಷದಿಂದ 2023ರಲ್ಲಿ 136 ವೀಲ್ಹಿಂಗ್ ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಸುಮಾರು 128 ಜನರನ್ನು ಅರೆಸ್ಟ್ ಮಾಡಿ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಕ್ರಮ ಕೈಗೊಳ್ಳುತ್ತಿದ್ದೇವೆ. 2024ರಲ್ಲಿ 266 ವೀಲ್ಹಿಂಗ್ ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಸುಮಾರು 179 ಜನರನ್ನು ಅರೆಸ್ಟ್ ಮಾಡಲಾಗಿದೆ. 2025ರಲ್ಲಿ ಇಲ್ಲಿಯವರೆಗೆ ಸುಮಾರು 47 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಸುಮಾರು 30 ಜನರನ್ನು ಅರೆಸ್ಟ್ ಮಾಡಲಾಗಿದೆ. ಕಳೆದ ಮೂರು ವರ್ಷದಲ್ಲಿ ಅಂದರೆ ಕಳೆದ ಎರಡು ವರ್ಷ ಎರಡು ತಿಂಗಳಿನಲ್ಲಿ ಸುಮಾರು 449 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಸುಮಾರು 258 ಜನರನ್ನು ಅರೆಸ್ಟ್ ಮಾಡಿದ್ದೇವೆ. ಮಾನ್ಯ ಸದಸ್ಯರ ಮತ್ತೊಂದು ಬಹಳ ಪ್ರಮುಖವಾದ ಪ್ರಶ್ನೆ ಏನೆಂದರೆ, ಚಾಕು, ಚೂರಿ ಮತ್ತು ಲಾಂಗ್ ಇವುಗಳನ್ನೆಲ್ಲಾ ಇಟ್ಟುಕೊಂಡು ಓಡಾಡುತ್ತಾರೆ. ಅವರನ್ನು ಯಾರು ಕೇಳುವವರು ಮತ್ತು ಹೇಳುವವರು ಇಲ್ಲವೆಂದು. ಇಂತಹ ಪ್ರಕರಣಗಳು 2023ರಲ್ಲಿ ಸುಮಾರು 68 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಇಲ್ಲಿಯವರೆಗೆ ಸುಮಾರು 147 ಜನರನ್ನು ಬಂಧಿಸಿದ್ದೇವೆ. 2024ರಲ್ಲಿ ಸುಮಾರು 66 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಸುಮಾರು 187 ಜನರನ್ನು ಅರೆಸ್ಟ್ ಮಾಡಿದ್ದೇವೆ. 2025ರಲ್ಲಿ ಇಲ್ಲಿಯವರೆಗೆ ಎರಡು ತಿಂಗಳಿನಲ್ಲಿ ಸುಮಾರು 26 ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ಸುಮಾರು 86 ಜನರನ್ನು ಅರೆಸ್ಟ್ ಮಾಡಿದ್ದೇವೆ. ಅಂದರೆ ಈ ರೀತಿ ಪ್ರಕರಣಗಳು ಆದತಕ್ಷಣ ನಾವು ಅವರ ವಿರುದ್ಧ ಕ್ರಮ ಜರುಗಿಸುವಂಥದ್ದು ಮತ್ತು ಜೊತೆಗೆ ಅವರಿಗೆ ಕಾನೂನು ಪ್ರಕಾರ ಕಠಿಣವಾದಂತಹ ಶಿಕ್ಷೆ ಆಗಬೇಕು ಎನ್ನುವ ಪ್ರಕಾರ ಮಾಡುತ್ತಿದ್ದೇವೆ. ಮಾನ್ಯ ಶಾಸಕರು ಬೆಂಗಳೂರಿಗೆ ಸಂಬಂಧಪಟ್ಟಂತೆ ಬಹಳ ಒತ್ತು ನೀಡಿದ್ದಾರೆ. 2023ನೇ ಸಾಲಿನಲ್ಲಿ ವೀಲ್ಹಿಂಗ್ ಮಾಡುವಂತಹವರ ವಿರುದ್ಧ ಸುಮಾರು 242 ಪ್ರಕರಣಗಳನ್ನು ದಾಖಲು ಮಾಡಿದ್ದೇವೆ. ಅದರಲ್ಲಿ ಆರೋಪಿತರು ಸುಮಾರು 264 ಜನರು. ಅದರಲ್ಲಿ ಸುಮಾರು 207 ಜನರನ್ನು ಬಂಧಿಸಿದ್ದೇವೆ. 2024ನೇ ಸಾಲಿನಲ್ಲಿ ಮತ್ತೆ ಅದು ಜಾಸ್ತಿಯಾಗಿದೆ. ಅದರಲ್ಲಿ ಸುಮಾರು 532 ಪ್ರಕರಣಗಳು ದಾಖಲಾಗಿವೆ. ಸುಮಾರು 479 ಜನರನ್ನು ಅರೆಸ್ಟ್ ಮಾಡಿದ್ದೇವೆ. ಅವರನ್ನು ಅರೆಸ್ಟ್ ಮಾಡಿ ಅವರ ವಿರುದ್ಧ ಏನು ಕೇಸ್ ಹಾಕಬೇಕಾಗಿತ್ತೋ ಅದನ್ನೆಲ್ಲಾ ಮಾಡಿ, ಕ್ರಮ ಕೈಗೊಂಡಿದ್ದೇವೆ. 2025ರಲ್ಲಿ ಇಲ್ಲಿಯವರೆವಿಗೂ ಸುಮಾರು 114 ಪ್ರಕರಣಗಳನ್ನು ದಾಖಲಿಸಲಾಗಿದೆ. ಅದರಲ್ಲಿ ಸುಮಾರು 102 ಜನರನ್ನು ಅರೆಸ್ಟ್ ಮಾಡಿ, ಅವರ ವಿರುದ್ಧ ಕ್ರಮ ಜರುಗಿಸಲಾಗಿದೆ. ಈ ಚಾಕು, ಚೂರಿ ಮತ್ತು ಲಾಂಗ್ ಎಂದು ಏನು ಹೇಳಿದ್ದಾರೆ. ಬೆಂಗಳೂರು ಸಿಟಿಯಲ್ಲಿ 2023ರಲ್ಲಿ ಒಂದು ಪ್ರಕರಣ ದಾಖಲಾಗಿದೆ.

ಅದರಲ್ಲಿ ಇಬ್ಬರನ್ನು ಅರೆಸ್ಟ್ ಮಾಡಿದ್ದೇವೆ. 2024ರಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ. ಮೂರು ಪ್ರಕರಣಗಳಲ್ಲೂ ಅರೆಸ್ಟ್ ಮಾಡಿದ್ದೇವೆ. 2025ರಲ್ಲಿ ಒಂದೇ ಒಂದು ಪ್ರಕರಣ ದಾಖಲಾಗಿರುವುದು. ಅದರಲ್ಲಿ ಇಲ್ಲಿಯವರೆಗೆ 15 ಜನರನ್ನು ಅರೆಸ್ಟ್ ಮಾಡಿದ್ದೇವೆ. ನಾವು ಇದನ್ನು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುವುದು ಸಾಧ್ಯವಿಲ್ಲ. ಪೊಲೀಸ್ ಇಲಾಖೆ ಮತ್ತು ಸಮಾಜಕ್ಕೂ ಕೂಡ ಆಗುವುದಿಲ್ಲ. ಆದುದರಿಂದ ನಾವು ಈಗಾಗಲೇ ಬಹಳ ಕಠಿಣವಾದಂತಹ procedures ಗಳನ್ನು ಪೊಲೀಸ್ ಇಲಾಖೆಯ ವತಿಯಿಂದ ಜರುಗಿಸುತ್ತಿದ್ದೇವೆ. ತಮಗೆ ಗೊತ್ತಿರುವಂತೆ ಬೆಂಗಳೂರು ಸಿಟಿಯಲ್ಲಿ ಹೊಯ್ಸಳ ವಾಹನಗಳನ್ನು ಕೊಟ್ಟಿದ್ದೇವೆ. ಅವುಗಳೆಲ್ಲಾ fully loaded vehicles. ಇತ್ತೀಚೆಗೆ ಅಲ್ಲಿಗೆ ಹೋಗತಕ್ಕಂಥದ್ದಕ್ಕೆ ಒಬ್ಬರು ಎ.ಎಸ್.ಐ, ಕಾನಸ್ಟೇಬಲ್ ಮತ್ತು ಡ್ರೈವರ್ ಇರುತ್ತಾರೆ. ಮೊದಲು ಎ.ಎಸ್.ಐ. ಯವರು ಬರಿಗೈಯಲ್ಲಿ ಇರುತ್ತಿದ್ದರು. ಅಂದರೆ, maximum ಎಂದರೆ ಒಂದು ಲಾಠಿ ಇರುತ್ತಿತ್ತು. ಆದರೆ, ಇತ್ತೀಚೆಗೆ ಅವರಿಗೆ revolver ಗಳನ್ನು ಸಹ ಕೊಟ್ಟಿದ್ದೇವೆ. ಏಕೆಂದರೆ, ಅವರ ಬಳಿ armed ಇದ್ದರೆ ಒಂದು deterrent ಕೆಲಸ ಮಾಡಲಾಗುತ್ತದೆ. ಯಾರಾದರೂ ನೋಡಿದ ತಕ್ಷಣ ಹೆದರಿಕೊಳ್ಳುತ್ತಾರೆ ಎಂದು ಇತ್ತೀಚೆಗೆ ಅವರಿಗೆ revolver ಗಳನ್ನು ಸರಬರಾಜು ಮಾಡಿದ್ದೇವೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಬೀಟ್ ವ್ಯವಸ್ಥೆ 24/7 ಇರತಕ್ಕಂಥದ್ದು. ನಾವು ವಿಶೇಷವಾಗಿ ಬೆಂಗಳೂರು ಸಿಟಿಯನ್ನು ಫೋಕಸ್ ಮಾಡಿದ್ದೇವೆ. ನಾನು ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರಿಗೆ ಒಂದು ಮಾಹಿತಿ ಕೊಡುವುದಕ್ಕೆ ಬಯಸುತ್ತೇನೆ. ನಾನು ಹಿಂದೆ ಗೃಹ ಮಂತ್ರಿಯಾಗಿದಂತಹ ಸಂದರ್ಭದಲ್ಲಿ ಒಂದು ತಂಡವನ್ನು ಲಂಡನ್‌ಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿನ ಲಂಡನ್ ಮೆಟ್ರೋದವರು ಹೇಗೆ ಕೆಲಸ ಮಾಡುತ್ತಾರೆ ಮತ್ತು ಅಲ್ಲಿ ಯಾವ ರೀತಿಯಲ್ಲಿ response ಇದೆ ಎಂದು. ನಾವು ಅದನ್ನೇ ತೆಗೆದುಕೊಂಡು ಬಂದು, ಇಲ್ಲಿ ಕಾಪಿ ಮಾಡಿ, ಬೆಂಗಳೂರು ಸಿಟಿಗೆ ಸುಮಾರು 380 ರಿಂದ 400 ವಾಹನಗಳನ್ನು ಹಾಕಿ. ಅವುಗಳನ್ನು ಕಂಟ್ರೋಲ್ ರೂಮಿಗೆ ಕನೆಕ್ಟ್ ಮಾಡಿಕೊಂಡು, ಅವರಿಗೆ ಒಂದು ಏರಿಯಾವನ್ನು ಫಿಕ್ಸ್ ಮಾಡಿ, ಆ ಏರಿಯಾದಲ್ಲಿ ಆ ವಾಹನಗಳು ಮಾನಿಟರ್ ಮಾಡತಕ್ಕಂಥದ್ದು. ಈಗ ಏನಾದರೂ incident ಆದರೆ ತಕ್ಷಣ response ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಇದು ತಮಗೆ ಆಶ್ಚರ್ಯವಾಗಬಹುದು. ಆದರೆ, ಮಾನ್ಯ ಸದಸ್ಯರು ಬೇಕಾದರೆ ಬಂದು ಕಂಟ್ರೋಲ್ ರೂಮ್ ಅನ್ನು ಟೆಸ್ಟ್ ಮಾಡಬಹುದು. ಈಗ ಸುಮಾರು ಒಂಭತ್ತು ನಿಮಿಷದಲ್ಲಿ response ಸಿಗುತ್ತದೆ. ಈ ಒಂಬತ್ತು ನಿಮಿಷದಲ್ಲಿ ಏನೇ ಘಟನೆಯಾದರೂ ಕೂಡ, ಅಲ್ಲಿಗೆ ಪೊಲೀಸ್‌ನವರು ಒಂಬತ್ತು ನಿಮಿಷದಲ್ಲಿ reach ಆಗುತ್ತಾರೆ. ತಕ್ಷಣ ಅವರು ಕಂಟ್ರೋಲ್ ರೂಮ್‌ಗೆ ಕನೆಕ್ಟ್ ಮಾಡಿಕೊಂಡು, ಅವರಿಗೆ ಏನಾದರೂ ಅಡಿಷನಲ್ ಫೋರ್ಸ್ ಬೇಕಾದರೆ, ಪಕ್ಕದಲ್ಲಿ ಇರತಕ್ಕಂತಹ ಪೊಲೀಸ್ ಸ್ಟೇಷನ್‌ಗಳಿಗೆ ಮಾಹಿತಿ ಕೊಡುತ್ತಾರೆ. ಮತ್ತೆ ತಕ್ಷಣ enforcement ತೆಗೆದುಕೊಳ್ಳುತ್ತಾರೆ. ಇಷ್ಟು 24 ಗಂಟೆಯೂ ಸಹ ನಡೆಯುತ್ತಿರುತ್ತದೆ. ಮಾನ್ಯ ಸದಸ್ಯರು ಅದನ್ನು ಟೆಸ್ಟ್ ಮಾಡಬೇಕು. ಅದನ್ನು ಟೆಸ್ಟ್ ಮಾಡಿದಾಗ ಮಾತ್ರ ಗೊತ್ತಾಗುತ್ತದೆ. ನಾವು ಬೀಟ್ ವ್ಯವಸ್ಥೆಯನ್ನು ಸಹ ಮಾಡಿದ್ದೇವೆ. ನಾವು ಮಹಿಳಾ ಸುರಕ್ಷತೆಗೆ 'ಪಿಂಕ್ ಹೊಯ್ಸಳ' ವನ್ನು ಮಾಡಿದ್ದೇವೆ. ಅದರಲ್ಲಿ ಮಹಿಳೆಯರೆ

ಇರತಕ್ಕಂಥದ್ದು. ಮೊಹಲ್ಲಾಗಳು ಮತ್ತು station limits ನಲ್ಲಿ ಅಲ್ಲಿ ಶಾಂತಿ ಸಭೆಗಳನ್ನು ಮಾಡುವಂಥದ್ದು. ಒಟ್ಟಾರೆ ಮಾನಿಟರಿಂಗ್ ಮಾಡುವಂತಹ ವ್ಯವಸ್ಥೆಯನ್ನು ಬಹಳ effective ಆಗಿ ಮಾಡುತ್ತಿದ್ದೇವೆ.

(ಮುಂದು)

(105) 06.03.2025 11.00 LL-KS

**(ಸಭಾಪತಿಯವರ ಉಪಸ್ಥಿತಿ)**

**ಡಾ: ಜಿ. ಪರಮೇಶ್ವರ್ (ಮುಂದು):-**

ಆದರೂ ಕೂಡ ಅಲ್ಲೊಂದು ಇಲ್ಲೊಂದು ಘಟನೆಗಳು ನಡೆದುಬಿಡುತ್ತವೆ. ಯಾರೋ ಒಬ್ಬ ವ್ಯಕ್ತಿ ಚಾಕು ಹಿಡಿದುಕೊಂಡು ಓಡಾಡುತ್ತಿರುತ್ತಾನೆ ಅಥವಾ ಯಾರೋ ಒಬ್ಬ ವ್ಯಕ್ತಿ ಲಾಂಗ್ ಹಿಡಿದುಕೊಂಡು ಓಡಾಡುತ್ತಿರುತ್ತಾನೆ. ಅಂತಹವರು ವಿರುದ್ಧ ನಾವು ತಕ್ಷಣವೇ ಕ್ರಮ ತೆಗೆದುಕೊಂಡು, ಯಾರನ್ನು ಕೂಡ ನಾವು ಸ್ಪೇರ್ ಮಾಡುವುದಕ್ಕೆ ಬಿಡುವುದಿಲ್ಲ. ಆದುದರಿಂದ, ಬೆಂಗಳೂರು ನಗರದಲ್ಲಿ ಶಾಂತಿಯಿದೆ. ಯಾವುದೇ ಅಹಿತಕರ ಘಟನೆ ನಡೆದರೂ ಕೂಡ ನಾವು ಯಾವುದೇ ಮುಲಾಜಿಲ್ಲದೇ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ ಹಾಗೂ ಮುಂದೆ ಕೂಡ ತೆಗೆದುಕೊಳ್ಳುತ್ತೇವೆ. ಒಟ್ಟಾರೆಯಾಗಿ, ಬೆಂಗಳೂರು ನಗರವನ್ನು ಮತ್ತು ಕರ್ನಾಟಕ ರಾಜ್ಯವನ್ನು ಶಾಂತಿಯಿಂದ ಇಡಬೇಕೆಂದು ನಾವು ಅಗತ್ಯ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಜೊತೆಗೆ, ರೌಡಿಗಳ ವಿರುದ್ಧ ರೌಡಿಶೀಟರ್ ಫೈಲ್ ಓಪನ್ ಮಾಡುತ್ತೇವೆ. ತಮ್ಮ ಮಾಹಿತಿಗಾಗಿ ಹೇಳುವುದಾದರೆ, 2022 ರಲ್ಲಿ 44 ಗೂಂಡಾ ಪ್ರಕರಣಗಳು ಇವೆ. ಅವುಗಳನ್ನು ಗೂಂಡಾ ಕಾಯ್ದೆಯಡಿಯಲ್ಲಿ ಅರೆಸ್ಟ್ ಮಾಡಿ, ಅಗತ್ಯ ಕ್ರಮ ತೆಗೆದುಕೊಂಡಿದ್ದೇವೆ. 2023ರಲ್ಲಿ 53 ಗೂಂಡಾ ಪ್ರಕರಣಗಳು; 2024ರಲ್ಲಿ 34 ಗೂಂಡಾ ಪ್ರಕರಣಗಳು; 2025ರಲ್ಲಿ ಇಲ್ಲಿಯವರೆಗೂ 08 ಗೂಂಡಾ ಪ್ರಕರಣಗಳು; ಇದೆಲ್ಲವೂ ಬಹಳ ಕಠಿಣವಾಗಿ ಯಾರು ಇಂತಹ ರೆಗ್ಯುಲರ್ ಗೂಂಡಾಗಳು ಇರುತ್ತಾರೆ, ಅಂತಹವರನ್ನು ಹತ್ತಿಕ್ಕುವಂತಹ ಕೆಲಸ ಅಥವಾ ಕಂಟ್ರೋಲ್ ಮಾಡುವಂತಹದ್ದಕ್ಕೆ ಗೂಂಡಾ ಕಾಯ್ದೆಯಡಿಯಲ್ಲಿ ತರುತ್ತೇವೆ. ಹಾಗಾಗಿ, ಒಂದೆರಡು ಘಟನೆಗಳು ನಡೆದಿರಬಹುದು. ಅದು ಇಲ್ಲವೆಂದು ನಾನು ಹೇಳುವುದಿಲ್ಲ.

ಜೊತೆಗೆ, ಬೆಂಗಳೂರು ನಗರದಲ್ಲಿ ಸುಮಾರು 7,000 ಸಿಸಿಟಿವಿ ಗಳನ್ನು ಅಳವಡಿಸಿದ್ದೇವೆ. ಅದನ್ನು ಪೊಲೀಸ್ ಇಲಾಖೆಯಿಂದ ಹಾಗೂ ಕಾರ್ಪೋರೇಷನ್‌ನಿಂದ ಸೇರಿ 1,640 ಸ್ಥಳಗಳಲ್ಲಿ ಸಿಸಿಟಿವಿ ಗಳನ್ನು ಅಳವಡಿಸಿದ್ದೇವೆ. ಒಂದು ವೇಳೆ ತಾವು ನಮ್ಮ ಇಲಾಖೆಯ ಕಂಟ್ರೋಲ್ ರೂಮ್‌ಗೆ ಬಂದು ನೋಡಿದರೆ ತಮಗೂ ಆಶ್ಚರ್ಯ ಕೂಡ ಆಗಬಹುದು. ಉದಾಹರಣೆಗೆ ಹೇಳುವುದಾದರೆ, ಚಾಲುಕ್ಯ ವೃತ್ತದಲ್ಲಿ ತಾವು ನಿಂತುಕೊಂಡಿದ್ದರೆ, ತಮ್ಮ ಕೈಯಲ್ಲಿರುವ ವಾಚ್‌ನಲ್ಲಿ ಎಷ್ಟು ಸಮಯ ಇದೆ ಎಂಬುದನ್ನು ನಾವು ಕಂಟ್ರೋಲ್ ರೂಮ್‌ನಲ್ಲಿ ಕುಳಿತುಕೊಂಡು ನೋಡಬಹುದು. ಅಂದರೆ, ಅಷ್ಟರಮಟ್ಟಿಗೆ ಹೈ ರೆಸಲ್ಯೂಷನ್ ಕ್ಯಾಮರಾಗಳನ್ನು ನಾವು ಅಳವಡಿಸಿರುತ್ತೇವೆ. ಅದರ ಜೊತೆಗೆ, ಇತ್ತೀಚೆಗೆ Artificial Intelligence-enabled cameras ಅನ್ನು ನಾವು ಅಳವಡಿಸಿರುತ್ತೇವೆ. ಒಂದು ಬಾರಿ ಆ ಕ್ಯಾಮರಾದಲ್ಲಿ ಕ್ಯಾಪ್ಚರ್ ಆಗಿ, ಡೇಟಾ ನಮ್ಮ ಕಂಟ್ರೋಲ್

ರೂಮ್‌ಗೆ ಹೋದರೆ, ಅದು ನಮ್ಮಲ್ಲಿ ಇರುತ್ತದೆ. ಅವರು ಮತ್ತೊಂದು ಬಾರಿ ಬೆಂಗಳೂರು ನಗರಕ್ಕೆ ಬಂದು, ಒಂದು ವೇಳೆ ಎಲ್ಲಿಯಾದರೂ ಅವರು ಅಪರಾಧ ಮಾಡಿದರೆ, ಅವರನ್ನು ನೋಡಬೇಕಾದರೆ ತಕ್ಷಣವೇ ನಾವು ನಮ್ಮಲ್ಲಿರುವ ಡೇಟಾದಲ್ಲಿ ಪರಿಶೀಲಿಸಬಹುದಾಗಿರುತ್ತದೆ. ಅಷ್ಟರಮಟ್ಟಿಗೆ ಟೆಕ್ನಾಲಜಿಯನ್ನು ಈಗ ನಮ್ಮಲ್ಲಿ ನಾವು ಬಳಕೆ ಮಾಡುತ್ತಿದ್ದೇವೆ. ಅಷ್ಟೆ ಅಲ್ಲದೇ, ಡ್ರೋನ್ ಕ್ಯಾಮರಾಗಳು ಮತ್ತು ಪೋಲೀಸ್‌ನವರಿಗೆ ಬಾಡಿ ಕ್ಯಾಮರಾಗಳನ್ನು ಕೊಟ್ಟಿದ್ದೇವೆ. ಯಾವ ಯಾವ ಟೆಕ್ನಾಲಜಿಯಲ್ಲಿ ಏನೆಲ್ಲಾ ಅಗತ್ಯತೆ ಇದೆ, ಏನೆಲ್ಲಾ available technology ಇದೆ, ಅವೆಲ್ಲವನ್ನೂ ಬೆಂಗಳೂರು ನಗರ ಪೋಲೀಸ್‌ನವರಿಗೆ ಹಾಗೂ ಇಡೀ ಕರ್ನಾಟಕ ರಾಜ್ಯದ ಪೋಲೀಸ್‌ನವರಿಗೆ ಕೊಡುತ್ತಿದ್ದೇವೆ. ಒಟ್ಟಾರೆಯಾಗಿ, ಕರ್ನಾಟಕ ಪೋಲೀಸ್‌ನವರನ್ನು technology savvy ಅಂದರೆ, ಟೆಕ್ನಾಲಜಿಯನ್ನು ಬಳಕೆ ಮಾಡಿಕೊಂಡು ಕೆಲಸ ಮಾಡುವ ರೀತಿಯಲ್ಲಿ ಅವರನ್ನು ಉತ್ತೇಜಿಸುತ್ತಿದ್ದೇವೆ. ಇನ್ನೊಂದು ಮಾಹಿತಿಯನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕೆಟ್ಟುಹೋಗಿದೆ ಎಂದು ಮಾನ್ಯ ವಿರೋಧ ಪಕ್ಷದಿಂದ ಬಹಳ ಜನ ಮಾನ್ಯ ಸದಸ್ಯರು ಯಾವಾಗಲೂ ಮಾತನಾಡುತ್ತಿರುತ್ತಾರೆ. ಹಾಗಾಗಿ, ಒಂದು ಅಂಕಿ-ಅಂಶಗಳನ್ನು ನಾನು ಹೇಳಬೇಕೆಂದರೆ,...

**ಸಭಾಪತಿಯವರು:-** ಈ ಪ್ರಶ್ನೆಯನ್ನು ನಾನು ಬೇರೆ ರೂಪದಲ್ಲಿ ತೆಗೆದುಕೊಳ್ಳೋಣವೇ?

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಪುನಃ ಉಪಪ್ರಶ್ನೆ ಕೇಳುತ್ತಾರೆ.

**ಸಭಾಪತಿಯವರು:-** ಈಗಾಗಲೇ ತಾವು ಎಲ್ಲಾ ಮಾಹಿತಿಯನ್ನು ಹೇಳಿರುತ್ತೀರಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಯಾವುದೇ ಪ್ರಶ್ನೆಯನ್ನು ಕೇಳಿರುವುದಿಲ್ಲ. ಆದಾಗ್ಯೂ, ಪುನಃ ಪ್ರಶ್ನೆಯನ್ನು ಕೇಳುತ್ತೀನಿ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ತಲೆಯಲ್ಲಿ ಯಾವ ವಿಷಯ ಇದೆ ಎಂಬುದು ನನಗೆ ಗೊತ್ತಿದೆ. I have also studied psychology.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಸೈಕಾಲಜಿ ಬಹಳ ಚೆನ್ನಾಗಿದೆ. ಈ ಭೋಜೇಗೌಡನ ಮೈಂಡ್‌ನಿಂದ ಏನು ಆಚೆ ಬರುತ್ತದೆಯೆಂಬುದನ್ನು ಅವರು ಊಹೆ ಮಾಡುತ್ತಾರೆ. ಅದು ಸಂತೋಷದ ವಿಚಾರ.

**ಸಭಾಪತಿಯವರು:-** ಆಯಿತು, ಸಾಕು.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಒಂದು ಮಾಹಿತಿಯನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಎಲ್ಲಾ ಸದಸ್ಯರಿಗೂ ಈ ವಿಷಯ ಗೊತ್ತಾಗಲಿ ಎಂದು ನಾನು ಈ ಮಾಹಿತಿಯನ್ನು ಹೇಳುತ್ತಿದ್ದೇನೆ. ಇದರಲ್ಲಿ ಬೇರೆ ಯಾವುದೇ ಉದ್ದೇಶ ಇಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನೀಡುತ್ತಿರುವ ಉತ್ತರ ಸರಿಯಾಗಿದೆ.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯಾದ್ಯಂತ ನಡೆದಂತಹ ಕೊಲೆ ಪ್ರಕರಣಗಳ ಬಗ್ಗೆ ಹೇಳುವುದಾದರೆ, 2020 ರಲ್ಲಿ 1,315 ಪ್ರಕರಣಗಳು; 2021ರಲ್ಲಿ 1,340 ಪ್ರಕರಣಗಳೂ; 2022ರಲ್ಲಿ 1,366 ಪ್ರಕರಣಗಳು; 2023ರಲ್ಲಿ 1,294 ಪ್ರಕರಣಗಳು; 2024ರಲ್ಲಿ 1,208 ಪ್ರಕರಣಗಳು ಮತ್ತು 2025ರ ಜನವರಿ ತಿಂಗಳಿನಿಂದ ಇಲ್ಲಿಯವರೆಗೆ ಸುಮಾರು 100 ಪ್ರಕರಣಗಳು ಆಗಿರುತ್ತವೆ. ಅಂದರೆ, ರಾಜ್ಯಾದ್ಯಂತ ಕೊಲೆ ಪ್ರಕರಣಗಳ ಸಂಖ್ಯೆ ಕಡಿಮೆ ಆಗಿರುತ್ತವೆ. ನಾನು ಸಂಖ್ಯೆ ಆಧಾರದ ಮೇರೆಗೆ ಕಾನೂನು ಮತ್ತು ಸುವ್ಯವಸ್ಥೆ ಸರಿಯಾಗಿದೆ ಎಂದು ಹೇಳುವುದಕ್ಕೆ ಹೋಗುತ್ತಿಲ್ಲ. ಆದರೆ, ರೆಗ್ಯುಲೇಟೆಡ್ ಕಂಟ್ರೋಲ್ ಇದೆ ಎನ್ನುವಂತಹ ಸಂದೇಶವನ್ನು ಸದನಕ್ಕೆ ನೀಡುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, the reason behind this is very important.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಆದರೆ ಒಂದು ಆತಂಕ ನಮಗೆ ಇರುವುದೇನೆಂದರೆ, ಸೈಬರ್ ಕ್ರೈಂ ರಾಜ್ಯದಲ್ಲಿ ಜಾಸ್ತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿದಿನ ಸಾವಿರಗಟ್ಟಲೆ ಪ್ರಕರಣಗಳು ನಡೆಯುತ್ತಿರುತ್ತವೆ. ಅದಕ್ಕೆ ನಾವು ಈಗ ಒತ್ತು ಕೊಡುತ್ತಿದ್ದೇವೆ. ಅದರಂತೆ, ಸೈಬರ್ ಕ್ರೈಂ ಅನ್ನು ಕಂಟ್ರೋಲ್ ಮಾಡುವುದಕ್ಕೆ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಬಹುಶಃ ದೇಶದಲ್ಲಿಯೇ ಮೊದಲನೆ ಬಾರಿಗೆ ಒಬ್ಬ ಪೋಲೀಸ್ ಮಹಾನಿರ್ದೇಶಕ (ಡಿಜಿಪಿ) ರ ಹುದ್ದೆಯನ್ನು ಸೈಬರ್ ಕ್ರೈಂ ವಿಭಾಗಕ್ಕೆ ವರ್ಟಿಕಲ್ ಆಗಿ ಸೃಜನೆ ಮಾಡಿದ್ದೇವೆ. ಉದಾಹರಣೆಗೆ, DGP (Prisons), DGP (CID) ಇದ್ದಾರೆ. ಈ ರೀತಿ ಇನ್ನೊಂದು ಡಿಜಿಪಿ ಹುದ್ದೆಯನ್ನು ವರ್ಟಿಕಲ್ ಆಗಿ ಕ್ರಿಯೇಟ್ ಮಾಡಿ, ಅದಕ್ಕೆ ಒಬ್ಬರು ಎಡಿಜಿಪಿ, ಐಜಿಪಿ ಮತ್ತು ಏಳು ಜನ ಎಸ್‌ಪಿ ಹುದ್ದೆಗಳನ್ನು ಸೃಜನೆ ಮಾಡಿ, ಯಾವ ರೀತಿ ಈ ಸೈಬರ್ ಅಪರಾಧಗಳನ್ನು ಕಂಟ್ರೋಲ್ ಮಾಡಬೇಕೆಂದು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. 2020ರಲ್ಲಿ ಸುಮಾರು 10,575 ಸೈಬರ್ ಅಪರಾಧಗಳು ಇದ್ದದ್ದು, 2024ರ ವೇಳೆಗೆ 21,984 ಸೈಬರ್ ಪ್ರಕರಣಗಳಾಗಿರುತ್ತವೆ. ಅಂದರೆ, ಬಹುತೇಕ ದುಪ್ಪಟ್ಟು ಪ್ರಕರಣಗಳು ಆಗಿರುತ್ತವೆ. ಅಷ್ಟು ಜಾಸ್ತಿ ಸೈಬರ್ ಅಪರಾಧಗಳು ಆಗುತ್ತಿವೆ. ದಿನನಿತ್ಯ ಸಾವಿರಾರು ಕೋಟಿ ರೂಪಾಯಿ ಹಣವನ್ನು ಸಾರ್ವಜನಿಕರ ಬ್ಯಾಂಕ್ ಖಾತೆಗಳಿಂದ ತೆಗೆದುಕೊಂಡು fraud ಮಾಡುತ್ತಿದ್ದಾರೆ. ಅಷ್ಟೆ ಅಲ್ಲದೇ, data access ಮಾಡುತ್ತಿದ್ದಾರೆ. ಮೊನ್ನೆಯ ದಿವಸ ಮಾನ್ಯ ಕಂದಾಯ ಮಂತ್ರಿಗಳು, "ನಮ್ಮ ಇಲಾಖೆಯ ಅಧಿಕೃತ ಸಾಫ್ಟ್‌ವೇರ್ ಅನ್ನು ಯಾರೋ ಹ್ಯಾಕ್ ಮಾಡಿದ್ದರು" ಎಂದು ಹೇಳುತ್ತಿದ್ದರು. ಆದುದರಿಂದ, ಸುಮಾರು 15 ದಿವಸ ಅವರ ಇಲಾಖೆಯ ಯಾವುದೇ ರಿಜಿಸ್ಟ್ರೇಷನ್ ಅಥವಾ ಇತರೆ ಯಾವುದೇ activity ಆಗಿರುವುದಿಲ್ಲ. ಈ ರೀತಿಯಾಗಿ ಸೈಬರ್ fraud ಗಳು ಆಗುತ್ತಿವೆ. ಆದುದರಿಂದ, ನಾವು ಈ ಸೈಬರ್ ಕ್ರೈಂ ಪ್ರಕರಣಗಳಿಗೆ ಹೆಚ್ಚಿನ ಗಮನ ಕೊಡುತ್ತಿದ್ದೇವೆಂದು ನಾನು ಉತ್ತರ ನೀಡುತ್ತೇನೆ.

**ಸಭಾಪತಿಯವರು:-** ಈ ಪ್ರಶ್ನೆಗೆ ಸುಮಾರು ಹದಿನೈದು ನಿಮಿಷ ಸಮಯ ಆಗಿರುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಹದಿನೈದು ನಿಮಿಷ ಉತ್ತರ ಕೊಟ್ಟವರು ಯಾರು? ಆದರೆ, ಪ್ರಶ್ನೆ ಕೇಳಿದವನು ನಾನು.

**ಸಭಾಪತಿಯವರು:-** ಆಯಿತು, ಕೇಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸುದೀರ್ಘವಾದ ಉತ್ತರವನ್ನು ತಮ್ಮ ಒಳ್ಳೆಯ ಅನುಭವದಿಂದ ಮಾನ್ಯ ಸಚಿವರು ಕೊಟ್ಟಿರುತ್ತಾರೆ. ಅವರಿಗೆ ಹೃದಯ ಪೂರ್ವಕವಾದ ಧನ್ಯವಾದಗಳು.

**ಸಭಾಪತಿಯವರು:-** ಹಾಗಾದರೆ, ಪುನಃ ಏತಕ್ಕೆ ಪ್ರಶ್ನೆ ಕೇಳುತ್ತೀರಿ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇನ್ನೊಂದು ವಿಷಯ ಏನೆಂದರೆ, ನಮ್ಮ ಕರ್ನಾಟಕ ಪೋಲೀಸ್ ಕಾರ್ಯಕ್ಷಮತೆ ಬಗ್ಗೆ ಎರಡು ಮಾತಿಲ್ಲ. ಆದರೆ, ಇದರಲ್ಲಿ ಒಂದು ವಿಚಾರವನ್ನು ನಾವು ಬಹಳ ಗಂಭೀರವಾಗಿ ನೋಡಬೇಕಾಗಿದೆ. ಇದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಅಪರಾಧ ಕೃತ್ಯಗಳಲ್ಲಿ ಚಾಕು, ಚೂರಿ ಹಿಡಿದುಕೊಂಡು ಭಾಗಿಯಾಗುವವರು ಒಂದು ಅಂಶವಾಗಿದೆ. ಆದರೆ, ವೀಲ್ಹಿಂಗ್ ವಿಚಾರದ ಬಗ್ಗೆ ಹೇಳುವುದಾದರೆ, ಮಾನ್ಯ ಮಂತ್ರಿಗಳು ನಮ್ಮ ರಾಜ್ಯದ ಪೋಲೀಸರನ್ನು ಲಂಡನ್‌ಗೆ ಕರೆದುಕೊಂಡು ಹೋಗಿ ತರಬೇತಿ ನೀಡಿದ್ದು, forthwith ಅಪರಾಧಿಗಳನ್ನು ಹಿಡಿಯುವಂತಹ ಸಾಮರ್ಥ್ಯಕ್ಕೆ ಇಡೀ ನಗರದಾದ್ಯಂತ ಸಿಸಿಟಿವಿ ಗಳನ್ನು ಅಳವಡಿಸಿದ್ದೇವೆಂದು ಹೇಳಿದ್ದಾರೆ. ಆ ಕ್ಯಾಮರಾಗಳನ್ನು ಆನ್ ಮಾಡಿ ಶನಿವಾರ ಮತ್ತು ಭಾನುವಾರ ರಾತ್ರಿ 12.00 ಗಂಟೆ ಮೇಲೆ ಯಾವ್ಯಾವ ವಾಹನಗಳು, ಯಾವ್ಯಾವ ರೀತಿ ಓಡಾಡುತ್ತವೆ ಎಂಬ ವಿಚಾರವನ್ನು ಪೋಲೀಸ್‌ನವರು ಹಿಡಿದು, ಕೇವಲ ಒಂದು ಸೆಕೆಂಡ್‌ನಲ್ಲಿ ಮಾಹಿತಿಯನ್ನು ನೀಡಬಹುದಾಗಿರುತ್ತದೆ. ಆ ರೀತಿ ವೀಲ್ಹಿಂಗ್ ಮಾಡುವವರು ಯಾರು? ಈ ನಾಡಿನ ಉತ್ತಮವಾದ ಸಿನಿಮಾ ನಟರ ಮಕ್ಕಳು; ಉತ್ತಮವಾದಂತಹ ರಾಜಕಾರಣಿಯ ಮಕ್ಕಳು; ಅಧಿಕಾರಿಗಳ ಮಕ್ಕಳು; ಪೋಲೀಸ್ ಅಧಿಕಾರಿ ಸೇರಿದಂತೆ, ಬೇರೆ ಐಎಎಸ್ ಅಧಿಕಾರಿಗಳ ಮಕ್ಕಳು ಇರಬಹುದು; ಇಂತಹವರ ಮಕ್ಕಳೇ ಜಾಸ್ತಿ ಇರುವಂಥದ್ದು. ಏಕೆಂದರೆ, each bike costs more than Rs.20-30 lakhs. ಅದನ್ನು ಕೊಂಡುಕೊಳ್ಳುವುದಕ್ಕೆ ಬಡವರಿಗೆ ಸಾಧ್ಯವಿಲ್ಲ. ಇವರೆಲ್ಲರು ವಾರಾತ್ಯಂದಲ್ಲಿ ಅಂದರೆ, ಶನಿವಾರ ಅಥವಾ ಭಾನುವಾರ ಬೆಳಗ್ಗೆ ರಸ್ತೆಯಲ್ಲಿ ಯಾರಾದರೂ ಕುಟುಂಬಸ್ಥರು ತಮ್ಮ ವಾಹನದಲ್ಲಿ ಹೋಗುವಾಗ, ಪಕ್ಕದಲ್ಲಿ ಜರ್ ಎಂದು ಶಬ್ಧ ಮಾಡಿಕೊಂಡು ಹೋಗುತ್ತಾರೆ. ಪೋಲೀಸ್‌ನವರಿಗೆ ಯಾವ ಬೈಕ್ ಕೊಟ್ಟರೂ ಸಹ, ಅವರು ಆ ವಾಹನಗಳನ್ನು ಹಿಡಿಯುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಆಯಿತು, ಸಾಕು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ. ಇದು ಬಹಳ ಗಂಭೀರವಾದಂತಹ ವಿಷಯ.

**ಸಭಾಪತಿಯವರು:-** ಒಂದು ಪ್ರಶ್ನೆಗೆ ಇಪ್ಪತ್ತು ನಿಮಿಷ ಕಾಲಾವಕಾಶ ಆಗಿರುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡುವುದಕ್ಕೆ ಹದಿನೈದು ನಿಮಿಷ ಕಾಲಾವಕಾಶ ತೆಗೆದುಕೊಂಡಿರುತ್ತಾರೆ. The Hon'ble Minister should find out the way for this.

**ಸಭಾಪತಿಯವರು:-** ಒಂದು ಪ್ರಶ್ನೆಗೆ ಇಪ್ಪತ್ತು ನಿಮಿಷ ಕಾಲಾವಕಾಶ ತೆಗೆದುಕೊಳ್ಳುತ್ತಾರೆಯೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆ ರೀತಿ ವೀಲ್ಹಿಂಗ್ ಮಾಡುವವರನ್ನು ಹಿಡಿಯುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಲಿ. ಯಾರು ಈ ರೀತಿ ಮಾಡುತ್ತಾರೆಂದು ಮಾನ್ಯ ಮಂತ್ರಿಗಳಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ಗೊತ್ತಿದೆ.

**ಸಭಾಪತಿಯವರು:-** ಪ್ರಶ್ನೆ ಕೇಳುವುದಕ್ಕೆ ನಿಯಮ ಆದರೂ ಬೇಕಲ್ಲವೇ? ಒಂದು ಪ್ರಶ್ನೆಗೆ ಇಪ್ಪತ್ತು ನಿಮಿಷ ಸಮಯ ಬೇಕೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ಸಮಯ ನೀಡಿ. ತಾವು ಸಮಾಧಾನ ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿಯನ್ನು 10-50ಕ್ಕೆ ಪ್ರಾರಂಭ ಮಾಡಿದ್ದು, ಈಗ 11-10 ಆಗಿದೆ. ಅಂದರೆ, 20 ನಿಮಿಷ ಒಂದು ಪ್ರಶ್ನೆಗೆ ಸಮಯ ಬೇಕೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಸಮಾಧಾನ ತೆಗೆದುಕೊಳ್ಳದೇ ಇದ್ದರೆ, ಸ್ವಾಸ್ಥ್ಯ ಸಮಾಜವನ್ನು ಕಟ್ಟುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಆಯಿತು, ನಾನು 11-30 ಗಂಟೆಗೆ ಪ್ರಶ್ನೋತ್ತರ ಅವಧಿಯನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸ್ವಾಸ್ಥ್ಯ ಸಮಾಜವನ್ನು ಕಟ್ಟಬೇಕಲ್ಲವೇ? ಯಾರೇ ಅಧಿಕಾರಿಗಳ ಮಕ್ಕಳು ಆಗಲಿ ಅಥವಾ ಯಾವುದೇ ರಾಜಕಾರಣಿಗಳ ಮಕ್ಕಳು ಅಥವಾ ಯಾರು ಹೈಫೈ ಇದ್ದಾರಲ್ಲಾ ಅಂದರೆ, creamy layer of the Society ಅಂತಹವರ ಮಕ್ಕಳು ಮಾಡತಕ್ಕಂತಹ ವೀಲ್ಹಿಂಗ್ ಅಪರಾಧಗಳನ್ನು ಪೊಲೀಸ್‌ನವರು forthwith ಹಿಡಿಯಬಹುದು. ಅವರು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಸಹ, ಅವರನ್ನು ಹಿಡಿದು ಒಳಗಡೆ ಹಾಕಬೇಕು. ಇಂತಹ ಅಪರಾಧಗಳಲ್ಲಿ ನೂರಾರು, ಸಾವಿರಾರು ಪ್ರಕರಣಗಳನ್ನು ದಾಖಲಿಸಿದ್ದಾರೆ. ಆದರೆ, ಇದರಲ್ಲಿ ಶಿಕ್ಷೆ ಆಗಿರುವಂತಹ ಯಾವುದೇ ಒಂದೇ ಸಿಂಗಲ್ ಪ್ರಕರಣವನ್ನು ಹೇಳಿರುವುದಿಲ್ಲ. ಏತಕ್ಕೆ? ಏಕೆಂದರೆ, ಅಲ್ಲಿ ನಮ್ಮದು lapses ಇದೆ, including me. ಆದುದರಿಂದ, ದಯಮಾಡಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಮನವಿ ಮಾಡುತ್ತಾ, ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 280**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಡಿ.ಟಿ. ಶ್ರೀನಿವಾಸ್‌ರವರು ಸದನದಲ್ಲಿ ಗೈರು ಹಾಜರಾಗಿದ್ದರು)**

ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 38 (273) |
| ಸದಸ್ಯರ ಹೆಸರು | ಡಾ. ಧನಂಜಯ ಸರ್ಜಿ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 06.03.2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ಕೆ.ಪಿ.ಎಸ್.ಸಿ ಮೂಲಕ ನಡೆದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆಸಿದ ಪೂರ್ವಭಾವಿ ಪರೀಕ್ಷೆ ಮತ್ತು ಮರು ಪರೀಕ್ಷೆಗಳೆರಡರಲ್ಲೂ ಪ್ರಶ್ನೆ ಪತ್ರಿಕೆಗಳಲ್ಲಿ ದೋಷಗಳು ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಲೋಕಸೇವಾ ಆಯೋಗವು ಮೊದಲಿಗೆ ದಿನಾಂಕ:27-08-2024ರಂದು ನಡೆಸಿದ ಗೆಜೆಟೆಡ್ ಪ್ರೊಬೆಷನರ್ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗಳ ಕನ್ನಡ ಭಾಷಾಂತರದಲ್ಲಿನ ಲೋಪದೋಷಗಳ ಕುರಿತು ಬಹಳಷ್ಟು ಗೊಂದಲ ಉಂಟಾದ ಹಿನ್ನೆಲೆಯಲ್ಲಿ ಪ್ರಶ್ನೆಗಳ ಭಾಷಾಂತರವನ್ನು ಪರಿಶೀಲಿಸಲು, ಸರಾಸರಿ 15 ವರ್ಷಗಳಿಗೂ ಅಧಿಕ ಸೇವಾನುಭವವನ್ನು ಹೊಂದಿರುವ ಹಾಗೂ ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿರುವಂತಹ ವಿವಿಧ ವಿಷಯಗಳ ಮೂವರು ವಿಷಯ ತಜ್ಞರುಗಳನ್ನೊಳಗೊಂಡ ಒಟ್ಟು 11 ಸಮಿತಿಗಳನ್ನು ರಚಿಸಿ ವರದಿ ಪಡೆಯಲಾಗಿರುತ್ತದೆ. ಸದರಿ ಸಮಿತಿಯ ವಿಷಯ ತಜ್ಞರುಗಳು ಪ್ರಶ್ನೆಗಳ ಭಾಷಾಂತರವನ್ನು ಪರಿಶೀಲಿಸಿ, ಭಾಷಾಂತರದ ಲೋಪದಿಂದಾಗಿ ಪತ್ರಿಕೆ-1ರಲ್ಲಿ 05 ಪ್ರಶ್ನೆಗಳಿಗೆ ಹಾಗೂ ಪತ್ರಿಕೆ-2ರಲ್ಲಿನ 05 ಪ್ರಶ್ನೆಗಳ ಕೀ-ಉತ್ತರಗಳು ಪರಿಷ್ಕೃತಗೊಳ್ಳಲಿವೆ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ.<br><br>ವಿಷಯ ತಜ್ಞರುಗಳ ಸಮಿತಿಯು ನೀಡಲಾದ ಅಭಿಪ್ರಾಯದ ವರದಿಯನ್ನು ಆಯೋಗದ ಸಭೆಯಲ್ಲಿ ಚರ್ಚಿಸಿ ಮರು ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ದಿನಾಂಕ: 29-12-2024 ರಂದು ಮರುಪರೀಕ್ಷೆಯನ್ನು ನಡೆಸಲಾಗಿರುತ್ತದೆ. |

| | | |
|---|---|---|
| | | ದಿನಾಂಕ:29-12-2024ರಂದು ನಡೆಸಿದ ಗೆಜೆಟೆಡ್ ಪ್ರೊಬೆಷನರ್ ಪೂರ್ವಭಾವಿ ಮರುಪರೀಕ್ಷೆಗೆ ಸಂಬಂಧಿಸಿದಂತೆ, ಕೆಎಎಸ್ ಆಕಾಂಕ್ಷಿಗಳು ಸಲ್ಲಿಸಿರುವ ಮನವಿಗಳಲ್ಲಿ ದಿನಾಂಕ: 29-12-2024 ರಂದು ನಡೆದ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರುಪರೀಕ್ಷೆಯ ಎರಡೂ ಪತ್ರಿಕೆಗಳಲ್ಲಿ ಕನ್ನಡ ಭಾಷಾಂತರದಲ್ಲಿ ಲೋಪವಿರುವುದಾಗಿ ತಿಳಿಸಿರುತ್ತಾರೆ.<br><br>ಈ ಕುರಿತು ಪರಿಶೀಲಿಸುವ ಸಲುವಾಗಿ, ಮೂವರು ವಿಷಯ ತಜ್ಞರುಗಳನ್ನೊಳಗೊಂಡಂತೆ ಒಟ್ಟು 12 ವಿಷಯಗಳ ವಿಷಯ ತಜ್ಞರುಗಳ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಪತ್ರಿಕೆ-1 ಮತ್ತು ಪತ್ರಿಕೆ-2 ಸೇರಿದಂತೆ ಭಾಷಾಂತರ ಲೋಪದಿಂದಾಗಿ ಹಾಗೂ ತಾಂತ್ರಿಕ ದೋಷದಿಂದಾಗಿ ಒಟ್ಟು 6 ಪ್ರಶ್ನೆಗಳು ತಪ್ಪಾಗಿರುತ್ತವೆ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ. |
| ಆ | ಭಾಷಾಂತರದ ಎಡವಟ್ಟಿನಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಆಗಿರುವ ಅನ್ಯಾಯ ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; | ಆಯೋಗವು ಈ ಹಿಂದಿನ ಪರೀಕ್ಷೆಗಳ ತುಲನಾತ್ಮಕ ದತ್ತಾಂಶ ವಿಶ್ಲೇಷಣೆಯನ್ನು ನಡೆಸಿದ ನಂತರ 2023-24ನೇ ಸಾಲಿನಲ್ಲಿ ಕನ್ನಡ ಮಾಧ್ಯಮ ಪರೀಕ್ಷೆಯನ್ನು ತೆಗೆದುಕೊಂಡು ಮುಖ್ಯ ಪರೀಕ್ಷೆಗೆ ಅರ್ಹರಾದ ಕನ್ನಡ ಮಾಧ್ಯಮ ಅಭ್ಯರ್ಥಿಗಳ ಸಂಖ್ಯೆಗೂ, ಗೆಜೆಟೆಡ್ ಪ್ರೊಬೆಷನರ್ಸ್ 2017-18 ರಲ್ಲಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಯನ್ನು ತೆಗೆದುಕೊಂಡು ಅರ್ಹರಾಗಿದ್ದವರ ಸಂಖ್ಯೆಗೂ ಹೋಲಿಸಿದಲ್ಲಿ ಶೇ.6.50ರಷ್ಟು ಹೆಚ್ಚಳವಾಗಿದ್ದು, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಿಲ್ಲವೆಂದು ಆಯೋಗವು ತಿಳಿಸಿದೆ. |
| ಇ | ಸಾಹಿತಿಗಳು, ಚಿಂತಕರು, ವಿದ್ಯಾರ್ಥಿ ಸಂಘಟನೆಗಳು ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆ ನಡೆಸಲು ಒತ್ತಾಯಿಸುತ್ತಿರುವುದರ ಕುರಿತು ಸರ್ಕಾರದ ನಿಲುವೇನು; | ಸದರಿ ಪರೀಕ್ಷೆಯನ್ನು ರದ್ದುಪಡಿಸಿ ಹೊಸದಾಗಿ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಈ | ಕಳೆದ 10 ವರ್ಷಗಳಲ್ಲಿ ಕೆ.ಪಿ.ಎಸ್.ಸಿ ಯು ನಡೆಸಿದ ಪರೀಕ್ಷೆಗಳಲ್ಲಿ ಆಗಿರುವ ವಂಚನೆ, ಅವ್ಯವಹಾರ, ದೋಷಪೂರಿತ ಪ್ರಕರಣಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ದಿನಾಂಕ:24-01-2021ರಂದು ನಡೆಯ ಬೇಕಿದ್ದ 2019ನೇ ಸಾಲಿನ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಸಹಾಯಕರು/ಪ್ರಥಮ ದರ್ಜೆ ಸಹಾಯಕರು ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಪ್ರಶ್ನೆಪತ್ರಿಕೆಯು ಸೋರಿಕೆಯಾಗಿರುತ್ತದೆ.<br><br>ಸದರಿ ಪರೀಕ್ಷೆಯ ಪ್ರಶ್ನೆಪತ್ರಿಕೆಯ ಸೋರಿಕೆಯ |

| | | |
|---|---|---|
| | | ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾದ ಶ್ರೀಮತಿ ಸನಾಬೀಡಿ, ಶೀಘ್ರಲಿಪಿಗಾರರು, ಶ್ರೀ ಬಸವರಾಜ್ ಎಲ್.ಕುಂಬಾರ್, ಸಹಾಯಕರು, ಶ್ರೀ ರಾಮಪ್ಪ ಹೆರಾಕಲ್, ಕಿರಿಯ ಸಹಾಯಕರು ಇವರುಗಳನ್ನು ಆಯೋಗದ ಸೇವೆಯಿಂದ ವಜಾಗೊಳಿಸಲಾಗಿರುತ್ತದೆ.<br>ಮುಂದುವರೆದು, ಸದರಿ ಹುದ್ದೆಗೆ ದಿನಾಂಕ:28-02-2021ರಂದು ಪರೀಕ್ಷೆಯನ್ನು ನಡೆಸಲಾಗಿರುತ್ತದೆ. |
| ಉ | ಕೆ.ಪಿ.ಎಸ್.ಸಿ ಯಲ್ಲಿ ಸುಧಾರಣೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸುಧಾರಣೆ ತರಲು ಉನ್ನತ ಮಟ್ಟದಲ್ಲಿ ಹಲವಾರು ಸಭೆಗಳನ್ನು ನಡೆಸಿ, ಆಯೋಗವು ನಡೆಸುವ ಪರೀಕ್ಷೆಗಳನ್ನು ಜಾಗರೂಕತೆಯಿಂದ ಮತ್ತು ಪಾರದರ್ಶಕತೆಯಿಂದ ನಡೆಸುವಂತೆ ಆಯೋಗಕ್ಕೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಅಲ್ಲದೆ, ಪ್ರಶ್ನೆ ಪತ್ರಿಕೆಗಳಲ್ಲಿಯ ಕನ್ನಡ ಭಾಷಾಂತರ ಕಾರ್ಯವನ್ನು ಯಾವುದೇ ಲೋಪದೋಷಗಳಿಲ್ಲದೆ ಸಿದ್ಧಪಡಿಸಲು ಆಯೋಗದಲ್ಲಿ ಪರಿಣಿತ ಭಾಷಾಂತರಕಾರರಿಗೆ ಜವಾಬ್ದಾರಿ ನೀಡುವುದು ಹಾಗೂ ಭಾಷಾಂತರವನ್ನು ಖಚಿತಗೊಳಿಸಲು ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದವರನ್ನು ಜವಾಬ್ದಾರರನ್ನಾಗಿ ಮಾಡಲು ಕ್ರಮವಹಿಸುವುದು ಮತ್ತು ಮುಂದಿನ ದಿನಗಳಲ್ಲಿ ಈ ರೀತಿ ಲೋಪದೋಷಗಳಾಗದಂತೆ ಕಟ್ಟುನಿಟ್ಟಿನ ಕ್ರಮವಹಿಸುವಂತೆ ತಿಳಿಸಲಾಗಿದೆ.<br>ಮುಂದುವರೆದು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗಗಳ ಸಹಯೋಗದೊಂದಿಗೆ ಒಂದು ಕನ್ನಡ ಭಾಷಾ ತಜ್ಞರ ತಂಡವನ್ನು ರಚಿಸಲು ಪರಿಶೀಲಿಸಲಾಗುತ್ತಿದೆ. |

**ಡಾ: ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಂದಿನಂತೆ ಜಾಣ್ಮೆಯ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಕೊಟ್ಟು ಕನ್ನಡ ಮಾಧ್ಯಮದ ಅಭ್ಯರ್ಥಿಗಳ ದಿಕ್ಕನ್ನು ತಪ್ಪಿಸುತ್ತಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ, "2017-18ನೇ ಇಸವಿಗೆ ಹೋಲಿಸಿ 2023-24ರಲ್ಲಿ ಶೇಕಡ 6.50 ರಷ್ಟು ಅರ್ಹಗೊಂಡವರ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ, ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲ" ಎಂಬ ಉತ್ತರವನ್ನು ಕೊಡುತ್ತಾರೆ.

(ಮುಂದು)

(106) 06.03.2025 11.10 ವೈಎಲ್-ಎಂಡಿ (ಸಭಾಪತಿಯವರ ಉಪಸ್ಥಿತಿ)

ಡಾ॥ ಧನಂಜಯ ಸರ್ಜಿ (ಮುಂದು):-

2017-18ನೇ ಸಾಲಿನಲ್ಲಿ ಪರೀಕ್ಷೆ ನಡೆದಿದ್ದು, 2,120 ಅಭ್ಯರ್ಥಿಗಳ ಪೈಕಿ ಮಾಹಿತಿ ಹಕ್ಕಿನ ಆಯೋಗದ ಪ್ರಕಾರ 530 ಅಭ್ಯರ್ಥಿಗಳು ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿದ್ದಾರೆ. ಈ ಬಾರಿ 5,760 ಅಭ್ಯರ್ಥಿಗಳು ಪರೀಕ್ಷೆಗೆ ಆಯ್ಕೆಗೊಂಡಿದ್ದಾರೆ. ಶೇಕಡ 25 ರಷ್ಟು ಎಂದರೆ, 1,440 ಅಭ್ಯರ್ಥಿಗಳು ಆಯ್ಕೆಯಾಗಬೇಕಾಗಿತ್ತು. ಆದರೆ, ಸರ್ಕಾರದ ಉತ್ತರದಲ್ಲಿ 6.5 ರಷ್ಟು ಹೆಚ್ಚಳವೆಂದಾದರೆ, 530 ಅಭ್ಯರ್ಥಿಗಳ ಬದಲಾಗಿ 564 ಅಭ್ಯರ್ಥಿಗಳು ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯಬೇಕಾಗಿತ್ತು. ಅಂದರೆ, ಸುಮಾರು 876 ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಶೇಕಡ 6.5 ರಷ್ಟು ಎಂದಾದರೆ ಶೇಕಡ 130 ರಷ್ಟು ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿರುವುದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕೆಂದು ಬಯಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸಂಕನೂರವರೇ, ಆಗುವುದಿಲ್ಲ ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಆಗಲಿ. ತಾವು ಕೂರಿ ಎಂದು ಹೇಳಿದ ಮೇಲೆ ತಮ್ಮ ಆದೇಶವನ್ನು ಪಾಲಿಸುತ್ತೇವೆ.

**ಸಭಾಪತಿಯವರು:-** ಸಭಾನಾಯಕರು ಉತ್ತರ ನೀಡುತ್ತಾರೆ, ಕುಳಿತುಕೊಳ್ಳಿ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನೂ ಎರಡು ಪ್ರಶ್ನೆ ಕೇಳಬೇಕಾಗಿದೆ.

**ಸಭಾಪತಿಯವರು:-** ಸಭಾನಾಯಕರಿಗೆ ಉತ್ತರ ನೀಡಲು ಬಿಡುತ್ತೀರೋ, ಇಲ್ಲವೋ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಿಯಮ 330 ರಡಿ ತೆಗೆದುಕೊಂಡು ಬನ್ನಿ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರು ಮಾತನಾಡಿರುವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿ ಮಾನ್ಯ ಎಸ್.ವ್ಹಿ.ಸಂಕನೂರರವರು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರರವರೇ, ಇದು ಪ್ರಶ್ನೋತ್ತರ ಅವಧಿ ಎಂಬುದು ತಮಗೆ ತಿಳಿದಿದೆಯೇ, ಇಲ್ಲವೇ? ಮಾನ್ಯ ಸಭಾನಾಯಕರೇ, ಉತ್ತರ ನೀಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸರ್ಕಾರಕ್ಕೆ ಸಿಕ್ಕಿರುವ ಮಾಹಿತಿ ಪ್ರಕಾರ 2017-18ನೇ ಸಾಲಿನಲ್ಲಿ ಅಭ್ಯರ್ಥಿಗಳ ಸಂಖ್ಯೆಯನ್ನು ಏರಿಕೆ ಮಾಡಿದಾಗ 2023-24ನೇ ಸಾಲಿಗೆ ಕನ್ನಡ ಮಾಧ್ಯಮ ಪರೀಕ್ಷೆ ತೆಗೆದುಕೊಂಡಿರುವವರು ಶೇಕಡ 6.5 ರಷ್ಟು ಎಂದು ಉತ್ತರ ನೀಡಲಾಗಿದೆ. ಮಾನ್ಯ ಸದಸ್ಯರಿಗೆ ಅದರ ಸಂಪೂರ್ಣ ವಿವರ ಬೇಕಾದರೆ ಮತ್ತೆ ಉತ್ತರವನ್ನು ತರಿಸಿಕೊಡುತ್ತೇನೆ. ನನ್ನ ಹತ್ತಿರ ಇರುವ ಅಂಕಿ ಅಂಶಗಳ ಪ್ರಕಾರ ಈ ರೀತಿಯಾದ ಅಭಿಪ್ರಾಯ ಇದೆ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ,...

**ಸಭಾಪತಿಯವರು:-** ಡಾ॥ ಧನಂಜಯ ಸರ್ಜಿರವರೇ, ಈ ವಿಷಯವನ್ನು ನಿಯಮ 330 ರಡಿ ತೆಗೆದುಕೊಳ್ಳಲಾಗುವುದು. ಆಗ ತಮಗೆಲ್ಲರಿಗೂ ಮಾತನಾಡಲು ಅವಕಾಶ ಕಲ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 315
**ಮಾನ್ಯ ಸದಸ್ಯರ ಹೆಸರು** : ಶ್ರೀ ತಿಪ್ಪಣ್ಣಪ್ಪ ಕಮಕನೂರ
(ವಿಧಾನಸಭೆಯಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : 06-03-2025
**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

*****

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಮಾತಾ ಮಾಣಿಕೇಶ್ವರಿ ದೇವಸ್ಥಾನ ಗುರುಮಿಟಕಲ್ಲಿನ ಯಾಣ ಗುಂದಿಯಲ್ಲಿ ಪ್ರಸಿದ್ಧವಾಗಿದ್ದು, ಮಾತಾ ಮಾಣಿಕೇಶ್ವರಿಯವರು 97 ವರ್ಷಗಳ ಕಾಲ ಅನ್ನ ನೀರಿಲ್ಲದೆ ಬಾಳಿ ಬದುಕಿ ಮಾತೆಯವರು ವರ್ಷಕ್ಕೆ ಒಂದೇ ದಿನ ಅದರಲ್ಲೂ ಶಿವರಾತ್ರಿ ದಿನ ಭಕ್ತರಿಗೆ ದರ್ಶನ ಕೊಡುತ್ತಿದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ; | ಬಂದಿದೆ. ಹೌದು. |
| ಆ) | ಒಂದೇ ದಿನ ಯಾಣಗುಂದಿಯಲ್ಲೆ ಇದ್ದು, ಶ್ರೀಶೈಲ ಯಾಣಗುಂದಿಯಲ್ಲಿ ಇವರು ದರ್ಶನ ನೀಡುತ್ತಿದ್ದ ಮಾತ ಶಕ್ತಿ ಸ್ವರೂಪಿಣಿಯವರು ಧೈವಾಧೀನರಾಗಿ 2-3 ವರ್ಷ ಕಳೆದರೂ ಇಂತಹ ಮಹಾತ್ಮದ ದೇವಸ್ಥಾನ ಇನ್ನೂ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಆಗದೆ ಇರುವುದು ನಿಜವೇ; | |
| ಇ) | ಈ ದೇವಸ್ಥಾನ ಬೆಣ್ಣೆ ತೋರಾ ಡ್ಯಾಂ ನಿಂದ 2 ಕಿ.ಮೀ ಹತ್ತಿರದಲ್ಲಿದ್ದು, ಇದರ ಅಭಿವೃದ್ಧಿಯನ್ನು ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿರ್ವಹಿಸಿ ಇದೊಂದು ಆಕರ್ಷಣೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದೆ? | ಇಲಾಖೆಯಿಂದ ಈಗಾಗಲೇ ಮಾತಾ ಮಾಣಿಕೇಶ್ವರಿ ದೇವಸ್ಥಾನದ ಹತ್ತಿರ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br>1. 2017-18ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕಿನ ಯಾನಾಗುಂದಿ ಗ್ರಾಮದ ಮಹಾತಪಸ್ವಿನಿ ಮಾತಾ ಮಾಣಿಕೇಶ್ವರಿ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೆ.ಆರ್.ಐ.ಡಿ.ಎಲ್, ಬೆಂಗಳೂರು ಇವರ ಮೂಲಕ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.<br>2. 2016-17ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಂಜೂರಾಗಿದ್ದ ಕಲಬುರಗಿ ಜಿಲ್ಲೆಯ ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಬೆಣ್ಣೆತೋರಾ ಡ್ಯಾಂನಿಂದ (0.60 ಕಿ.ಮೀ ರಿಂದ 10.00 ಕಿ.ಮೀ) ಚಿಂಚೋಳಿ (ಹೆಚ್) ಕಾಳಗಿ ಚಿತ್ತಾಪೂರ ತಾಲ್ಲೂಕಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.586.62 ಲಕ್ಷಗಳ ಅಂದಾಜು ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆ ಮೂಲಕ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. |

| | | |
|---|---|---|
| | | ಆದರೆ, ಪ್ರಸ್ತುತ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/08/ವೆಚ್ಚ-7/2024, ದಿನಾಂಕ: 15.04.2024ರ ಅನುಬಂಧ-3ರಲ್ಲಿ ದೇವಸ್ಥಾನಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮುಜರಾಯಿ ಇಲಾಖೆಯಡಿ ಅನುದಾನ ಒದಗಿಸುವುದರಿಂದ, ಪ್ರವಾಸೋದ್ಯಮ ಇಲಾಖೆಯಡಿ ಯಾವುದೇ ದೇವಸ್ಥಾನಗಳ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು ಸಮಂಜಸವಾಗಿರುವುದಿಲ್ಲ. ಹಾಗೂ ಖಾಸಗಿ ಜಾಗ ಅಥವಾ ಖಾಸಗಿ ಸಂಸ್ಥೆಯ ಪ್ರದೇಶದಲ್ಲಿ ಕೈಗೊಳ್ಳಲಾಗುವ ಯಾವುದೇ ಕಾಮಗಾರಿಗಳಿಗೆ ಬಂಡವಾಳ ಲೆಕ್ಕಶೀರ್ಷಿಕೆ ಅಡಿ ಅನುದಾನ ಬಿಡುಗಡೆ ಮಾಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ಎಂಬುದಾಗಿ ತಿಳಿಸಲಾಗಿರುತ್ತದೆ.<br><br>ಕಾರಣ ಸದರಿ ಪ್ರವಾಸಿ ತಾಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಹೊಸ ಪ್ರಸ್ತಾವನೆಗಳು ಪ್ರಸ್ತುತ ಇಲಾಖೆಯ ಮುಂದೆ ಇರುವುದಿಲ್ಲ. |

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಹಾಯೋಗಿನಿ ಮಾತಾ ಮಾಣಿಕೇಶ್ವರಿ ಎಂಬ ದೇವಸ್ಥಾನವು ಗುಲ್ಬರ್ಗಾದ ಸೇಡಂ ತಾಲ್ಲೂಕಿನ ಯಾನಾಗುಂದಿಯಲ್ಲಿ ಅತ್ಯಂತ ಪ್ರಸಿದ್ಧವಾದ ದೇವಸ್ಥಾನ ಇದೆ. ಆ ಅಮ್ಮ 97 ವರ್ಷಗಳ ಕಾಲ ಅನ್ನ ನೀರಿಲ್ಲದೆ ಬಾಳಿ ಬದುಕಿದರು. ಸುಮಾರು 3-4 ವರ್ಷ ಅವರೇ ಸ್ವತಃ ನಿರ್ಮಾಣ ಮಾಡಿದಂಥ ಲಿಂಗದಲ್ಲಿ ಐಕ್ಯರಾದರು. ಅದಕ್ಕೂ ಮೊದಲು ಜೀವಂತ ಸಮಾಧಿಗೆ ಅವಕಾಶ ಕೇಳಿದಾಗ ಅದಕ್ಕೆ ಸರ್ಕಾರ ಒಪ್ಪಲಿಲ್ಲ. ಅಂತಹ ಶಿವಶರಣೆಯವರಾದ ಹೇಮರೆಡ್ಡಿ ಮಲ್ಲಮ್ಮ ಆಗಿರಬಹುದು, ಅಕ್ಕಮಹಾದೇವಿ ಆಗಿರಬಹುದು, ಅಂಥವರಿಗೆ ಸರಿಸಮಾನವಾಗಿ ಶ್ರೀಶೈಲ ಯಾನಾಗುಂದಿಯಲ್ಲಿರುವ ಮಾತಾ ಮಾಣಿಕೇಶ್ವರಿ ಅಮ್ಮನವರು ಶಿವರಾತ್ರಿ ಹಬ್ಬದಂದು ಒಂದೇ ದಿವಸ ಯಾನಗುಂದಿಯಲ್ಲಿ ಮತ್ತು ಶ್ರೀಶೈಲ ಯಾನಗುಂದಿಯಲ್ಲಿ ದರ್ಶನ ನೀಡಿದಂಥ ಮಹಾಯೋಗಿನಿಯಾಗಿದ್ದಾರೆ. ಈಗಾಗಲೇ ಮಾನ್ಯ ಸಚಿವರು ಉತ್ತರ ನೀಡಿದ್ದು, ಈ ಹಿಂದೆ ಆಗಿರುವಂಥ ಅಭಿವೃದ್ಧಿ ಕೆಲಸಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಹಾಗಾಗಿ, ನಾನು ಹೇಳುವುದೇನೆಂದರೆ, ಇದನ್ನು ಪ್ರವಾಸಿ ತಾಣವಾಗಿ ಘೋಷಣೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಈ ದೇವಸ್ಥಾನಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಡಿ.ಜತ್ತಿಯವರಿಂದ ಹಿಡಿದು ಮಾನ್ಯ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರ ತಂದೆಯವರಾದ ದಿವಂಗತ ಕೆ.ಹೆಚ್.ಪಾಟೀಲ್‌ರವರು, ಶ್ರೀ ಆರ್.ಗುಂಡೂರಾವ್‌ರವರು, ಶ್ರೀ ವೀರೇಂದ್ರ ಪಾಟೀಲ್‌ರವರು, ಕೇಂದ್ರ ಮಾಜಿ ಸಚಿವರಾದ ಶ್ರೀ ಬೂಟಾಸಿಂಗ್ ರವರು ಹಾಗೂ ಗೃಹ ಸಚಿವರಾದ ಮಾನ್ಯ ಅಮೀತ್ ಶಾ ರವರು ಮತ್ತು ಶ್ರೀ ಬಾಪುಗೌಡ ದರ್ಶನಾಪುರರವರು, ಶ್ರೀ ಸಿ.ಎಸ್.ನಾಡಗೌಡರು, ಧರ್ಮಸಿಂಗ್‌ರವರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಂದ ಹಿಡಿದು ಸಾವಿರಾರು ಮಂದಿ ಮಹಾನಾಯಕರು ಈ ತಾಯಿಯ ದರ್ಶನ ಮಾಡಿಕೊಂಡು, ಅವರ ಕೆಲಸವನ್ನು ಪೂರೈಸಿಕೊಂಡು ಹೋಗಿದ್ದಾರೆ. ತಾವು ಅತ್ಯಂತ ಪ್ರಭಾವಿ ಮಂತ್ರಿಗಳು ಹಾಗೂ ಅತ್ಯಂತ ಅನುಭಾವಿ ಮಂತ್ರಿಗಳು. ಮಾನ್ಯ ಎಚ್.ಕೆ.ಪಾಟೀಲ್‌ರವರು ಮುಖ್ಯಮಂತ್ರಿಗಳಿಗೆ ಸರಿಸಮಾನವಾಗಿರುವ ಸಚಿವರಾಗಿದ್ದೀರಿ. ನಾವು ಅತ್ಯಂತ ಕಡುಬಡತನದಲ್ಲಿದ್ದವರು. ಈ ದೇವಸ್ಥಾನವು ಒಂದು

ವೇಳೆ ಮುಂದುವರೆದ ಜಾತಿಯವರದ್ದಾಗಿದ್ದರೆ ಇಷ್ಟು ಹೊತ್ತಿಗೆ ಬಹಳ ಎತ್ತರದ ಸ್ಥಾನಕ್ಕೆ ತಲುಪುತ್ತಿತ್ತು. ಅದಕ್ಕಾಗಿ ಕೆಲವು ಕಡೆ 'ಉಳ್ಳವರು ಶಿವಾಲಯವ ಮಾಡುವರಯ್ಯ। ನಾನೇನ ಮಾಡಲಿ ಬಡವನಯ್ಯಾ॥' ಎನ್ನುವಂಥ ಪರಿಸ್ಥಿತಿ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಅಷ್ಟೇ ಕೇಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನೇ ಹೇಳಿದರೂ ಅಷ್ಟೇ. ನಮ್ಮ ಭಾಗದಲ್ಲಿ ಅದರ ಇತಿಹಾಸ ಉಳಿಯುತ್ತದೆ. ಹಿಂದುಳಿದ ವರ್ಗದ ಸುಮಾರು 60 ಲಕ್ಷದಷ್ಟು ಭಕ್ತರನ್ನು ಹೊಂದಿರುವ ಧರ್ಮ ದೇವತೆ 'ಮಾತಾ ಮಾಣಿಕೇಶ್ವರಿ'. ದಯವಿಟ್ಟು ಯಾವುದಕ್ಕೂ ಲೆಕ್ಕ ಹಾಕದ ಹಾಗೆ, ಸುಮಾರು 8 ಕಿಲೋ ಮೀಟರ್ ಅಂತರದಲ್ಲಿ ಒಂದೇ ಜಾತಿಗೆ ಸೇರಿರುವ ಪ್ರವಾಸೋದ್ಯಮ ಇಲಾಖೆಯಿಂದ ಎರಡು ಪ್ರವಾಸಿ ತಾಣಗಳನ್ನು ಘೋಷಣೆ ಮಾಡಲಾಗಿದೆ. ಹಾಗಾಗಿ, ಇದನ್ನು ಸಹ ಪ್ರವಾಸೋದ್ಯಮ ತಾಣವಾಗಿ ಘೋಷಣೆ ಮಾಡಿದರೆ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡಬಯಸುತ್ತೇನೆ.

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾವನ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರಿಗೆ ಆ ದೇವಸ್ಥಾನದ ಮೇಲೆ ಇರುವಂಥ ಕಳಕಳಿ, ಕಾಳಜಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ನಾನು ಸಹ 'ಮಾತಾ ಮಾಣಿಕೇಶ್ವರಿ' ಅಮ್ಮನವರ ಭಕ್ತ. ಮಾತಾ ಮಾಣಿಕೇಶ್ವರಿ ದೇವಸ್ಥಾನಕ್ಕೆ ಹಲವಾರು ಬಾರೀ ಬಂದಿದ್ದೇನೆ. ನಮ್ಮ ಚಿಕ್ಕಪ್ಪನವರು ವಿಶೇಷವಾಗಿ ಆ ತಾಯಿಯ ಬಗ್ಗೆ ಒಂದು ಪುಸ್ತಕವನ್ನೇ ಬರೆದಿದ್ದರು. ಇದೊಂದು ಪವಿತ್ರವಾಗಿರುವ ತಾಣವಾಗಿದೆ. ಈ ಒಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕು. ಇದು ಯಾವುದೋ ಒಂದು ಗುಡಿಯಾಗಿಲ್ಲ ಅಥವಾ ಮಠವಾಗಿಲ್ಲ. ಆದರೆ, ಆ ತಾಯಿ ಈ ಮನಕುಲಕ್ಕೆ ಕೊಟ್ಟಿರುವಂಥ ಸಂದೇಶವು ಅತ್ಯಂತ ಮಹತ್ವದ್ದಾಗಿದೆ ಹಾಗೂ ಸುಂದರ ಸ್ಥಳವಾಗಿದೆ. ಒಬ್ಬ ಮಹಾಯೋಗಿನಿ ಅನ್ನ-ನೀರಿಲ್ಲದೇ ವರ್ಷಾನುಗಟ್ಟಲೆ, ಸುಮಾರು 40, 50 ವರ್ಷಗಳವರೆಗೂ ಬದುಕಿರುತ್ತಾರೆ ಎಂದರೆ, ಅದು ವಿಜ್ಞಾನಕ್ಕೆ ಒಂದು ರೀತಿಯ ಸವಾಲು ಇದ್ದ ಹಾಗೆ. ಅಂತಹ ಒಂದು ವ್ಯಕ್ತಿತ್ವ ಹೊಂದಿದ್ದಂತಹ ಮಾತಾ ಮಾಣಿಕೇಶ್ವರಿ ಅಮ್ಮನವರು ಬಾಳಿ ಬದುಕಿರುವಂಥ ಕ್ಷೇತ್ರವನ್ನು ಪ್ರವಾಸಿತಾಣವಾಗಿ ಮಾಡಲು ಯೋಗ್ಯವಾಗಿದೆ. ಅಲ್ಲಿಗೆ ಬಹಳಷ್ಟು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಇದನ್ನು ಪ್ರವಾಸಿತಾಣವಾಗಿ ಮಾಡಲು ಪ್ರವಾಸೋದ್ಯಮ ಇಲಾಖೆಯವರು ಏನೇನು ನಿರ್ಣಯ ಕೈಗೊಳ್ಳಲು ಸಾಧ್ಯವೋ, ಅದೆಲ್ಲವನ್ನೂ ಕೈಗೊಳ್ಳುತ್ತೇವೆ. ಅದಕ್ಕೆ ಸೂಕ್ತವಾಗಿರುವಂಥ ಹಣಕಾಸನ್ನು ಸಹ ಒದಗಿಸುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಹಾಗೂ ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ. ಇಂತಹ ಸಚಿವರು ಇರಬೇಕು.

**ಸಭಾಪತಿಯವರು:-** ತಿಪ್ಪಣ್ಣಪ್ಪ ಕಮಕನೂರರವರೇ, ಸಾಕು ಮಾತನಾಡಿದ್ದು ಕುಳಿತುಕೊಳ್ಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರವರಿಗೆ 20 ನಿಮಿಷಗಳ ಸಮಯ ನೀಡಿದ್ದು, ನನಗೆ 10 ನಿಮಿಷವಾದರೂ ಕೊಡಬಹುದಲ್ಲವೇ?

**ಸಭಾಪತಿಯವರು:-** ಹಾಗೆಂದು ಎಲ್ಲರಿಗೂ ಸಮಯ ನೀಡಲು ಆಗುವುದಿಲ್ಲ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಇದು ಯಾವತ್ತೋ ಆಗಬೇಕಾಗಿತ್ತು. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳಿದ ಹಾಗೆ ಅವರ ಚಿಕ್ಕಪ್ಪನವರು ಬರೆದಿರುವ ಪುಸ್ತಕವನ್ನು ತೋರಿಸುವ ಸಲುವಾಗಿಯೇ ಈ ಸದನದೊಳಗೆ ತಂದಿದ್ದೇನೆ. ಆ ದೇವಸ್ಥಾನಕ್ಕೆ ಈ ರಾಷ್ಟ್ರದ ಎಲ್ಲಾ ನಾಯಕರು ಬಂದು ಬೇಡಿಕೊಂಡು ಹೋಗುತ್ತಾರೆ. ಆದರೆ, ಅವರ ಇಷ್ಟಾರ್ಥವು ನೆರವೇರಿದ ಮೇಲೆ ಆ ದೇವಸ್ಥಾನದ ಸನಿಹಕ್ಕೆ ಯಾರು ಬರುವುದಿಲ್ಲ. ಅದಕ್ಕಾಗಿ ದಯವಿಟ್ಟು ರೂ.200.00 ಕೋಟಿ ಹಣವನ್ನು ಮೀಸಲಿಡಬೇಕೆಂದು ಹೇಳುತ್ತಾ, ಮಾನ್ಯ ಸಚಿವರಿಗೆ ಸಾವಿರ ಕೋಟಿ ನಮಸ್ಕಾರಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 279
**ಮಾನ್ಯ ಸದಸ್ಯರ ಹೆಸರು** : ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 06.03.2025
**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ದೇವಸ್ಥಾನಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಪ್ರಸಾದ್ ಯೋಜನೆಯಡಿಯಲ್ಲಿ ಭರಿಸಲು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ | ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ದೇವಸ್ಥಾನಗಳಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗೆ ಇಲಾಖೆಯಿಂದ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಬಾಕಿ ಇರುವ ಪ್ರಸ್ತಾವನೆಗಳನ್ನು ಯಾವಾಗ ಕೇಂದ್ರಕ್ಕೆ ಸಲ್ಲಿಸಲಾಗುವುದು. ಎಷ್ಟು; ಯಾವ ಮತ್ತು ಯಾವೆಲ್ಲ ದೇವಸ್ಥಾನಗಳಿಗೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು (ದೇವಸ್ಥಾನವಾರು ವಿವರ ನೀಡುವುದು) | ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ ಯೋಜನೆಯಡಿ ವಿವಿಧ ಜಿಲ್ಲೆಗಳಿಂದ ಅನುದಾನ ಬಿಡುಗಡೆ ಕೋರಿ ಸ್ವೀಕೃತವಾದ ಪ್ರಸ್ತಾವನೆಗಳ ವಿವರ, ಪ್ರಸ್ತುತ ಹಂತದ ವಿವರ, ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸದೇ ಇರುವುದಕ್ಕೆ ಕಾರಣಗಳ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ) | ರಾಜ್ಯದ ಯಾವ ಯಾವ ಜಿಲ್ಲೆಗಳಿಂದ ಈ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಬಂದಿದೆ. ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸದೇ ಇರುವುದಕ್ಕೆ ಕಾರಣವೇನು. (ವಿವರ ನೀಡುವುದು) | |
| ಈ) | ಪ್ರಸಾದ್ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದೆ; ಇದಕ್ಕೆ ಇರುವ ಮಾನದಂಡಗಳೇನು? (ವಿವರ ನೀಡುವುದು) | ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ಹೊರಡಿಸಲಾಗಿರುವ ಪ್ರಸಾದ್ ಯೋಜನೆಯ ಮಾರ್ಗಸೂಚಿಗಳನ್ವಯ ದೇವಸ್ಥಾನಗಳಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:<br><br>ಶೌಚಾಯಲಗಳು, ಕ್ಲೋಕ್ ರೂಮ್, ವಿಶ್ರಾಂತಿ ಕೊಠಡಿ, ಮಾಹಿತಿ ಫಲಕಗಳು, ಸೈನೇಜ್‌ಗಳು, ಪ್ರವಾಸಿ ಮಾಹಿತಿ ಕೇಂದ್ರ, ಇಂಟರ್‌ಪ್ರಿಟೇಷನ್ ಕೇಂದ್ರಗಳು, ರಸ್ತೆಬದಿ ಸೌಲಭ್ಯ, ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯ, ರಸ್ತೆ ಸೌಲಭ್ಯ (Last Mile Connectivity), ನೀರಿನ ಕಾರಂಜಿ, ಫೆನ್ಸಿಂಗ್, ಲೈಟಿಂಗ್ಸ್, ಪಾಥ್‌ವೇ, ಆಸನಗಳು, ಕುಡಿಯುವ ನೀರಿನ ಸೌಲಭ್ಯ, ಕಸದಬುಟ್ಟಿಗಳು, ಎಸ್.ಟಿ.ಪಿ, |

| | | |
|---|---|---|
| | | ಪ್ರಥಮ ಚಿಕಿತ್ಸಾ ಕೇಂದ್ರ, ಕಾವಲು ಗೋಪುರ, ಧ್ವನಿ ಮತ್ತು ಬೆಳಕು, ರಂಗಮಂದಿರ, ಕರ-ಕುಶಲ ಕೇಂದ್ರ, ಕ್ಯಾಫೇಟೇರಿಯ, ಹೆಲಿಪ್ಯಾಡ್, ಸಿಸಿಟಿವಿ, ಹೆರಿಟೇಜ್ ವಾಕ್, ಕೌಶಲ್ಯಾಭಿವೃದ್ಧಿ, ತರಬೇತಿ, ಮೋಬೈಲ್ ಅಪ್‌ಲಿಕೇಷನ್ ಅಭಿವೃದ್ಧಿ ಇತ್ಯಾದಿ.<br><br>ಸದರಿ ಯೋಜನೆಯಡಿ ಅನುಮೋದನೆ ಪಡೆಯಲು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ಹೊರಡಿಸಲಾಗಿರುವ ಪ್ರಸಾದ್ ಯೋಜನೆಯ ಮಾರ್ಗಸೂಚಿಯನ್ನು **<u>ಅನುಬಂಧ -3</u>** ರಲ್ಲಿ ಒದಗಿಸಿದೆ. |

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದ್ದು, ಕರ್ನಾಟಕವು 'Temple Tourism' ಎಂಬ ಅತ್ಯಂತ ಪ್ರಖ್ಯಾತಿಯನ್ನು ಪಡೆದಿದೆ. ಕರ್ನಾಟಕದಲ್ಲಿ ಬೀದರ್‌ನಿಂದ ಹಿಡಿದು ಚಾಮರಾಜನಗರದವರೆಗೂ ಹಾಗೂ ಕಡಲತಡಿಯಿಂದ ಹಿಡಿದು ಕೋಲಾರದವರೆಗೂ ಮಾನ್ಯ ಸಚಿವರು ಇನ್ನಷ್ಟು ಮುತುವರ್ಜಿ ವಹಿಸಿಕೊಂಡು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ PRASHAD (Pilgrimage Rejuvenation and Spiritual Heritage Augmentation Drive) scheme ಯಡಿ 16 ಪ್ರಸ್ತಾವನೆಗಳನ್ನು ನೀಡಿದ್ದು, ಎರಡು ಪ್ರಸ್ತಾವನೆ ಮಾತ್ರ ಬಂದಿದೆ. ಇದರ ಕಡೆ ಇನ್ನಷ್ಟು ಮುತುವರ್ಜಿ ವಹಿಸಬೇಕು. ಏಕೆಂದರೆ, ಇಡೀ ದೇಶದಿಂದ ಉತ್ತರ ಭಾರತದ ಪ್ರಯಾಗ್‌ರಾಜ್ ನಲ್ಲಿ ನಡೆದಂಥ ಮಹಾಕುಂಭಮೇಳಕ್ಕೆ ಸುಮಾರು ರೂ.15,000 ದಿಂದ ರೂ.16,000 ಕೋಟಿ ಖರ್ಚು ಮಾಡಿದ್ದು, ಸುಮಾರು ರೂ.4,00,000 ಕೋಟಿ ಹಣ ಸಂಪಾದನೆಯಾಗಿದೆ. ದೇಶ–ವಿದೇಶದ ಭಕ್ತರೆಲ್ಲರೂ ಅಲ್ಲಿಗೆ ಆಗಮಿಸಿ ಮಿಂದೆದ್ದು ಹೋಗಿದ್ದಾರೆ. ಸುಮಾರು 66 ಕೋಟಿ ಜನರು ಭೇಟಿ ನೀಡಿದ್ದು, ಸುಮಾರು 30 ಕೋಟಿ ಜನರು ರೈಲ್ವೆ ಮೂಲಕ ಪ್ರಯಾಣಿಸಿದ್ದು ಮತ್ತು ಸುಮಾರು 60 ಲಕ್ಷ ಮಂದಿ ಬಸ್ಸಿನ ಮೂಲಕ ಪ್ರಯಾಣ ಮಾಡಿದ್ದಾರೆ. ಇನ್ನೂ ಲಕ್ಷಾಂತರ ಮಂದಿ ಕಾರಿನ ಮೂಲಕ ಪ್ರಯಾಣ ಮಾಡಿದ್ದಾರೆ. ಇದನ್ನೇ ಮಾದರಿಯಾಗಿ ತೆಗೆದುಕೊಂಡು ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ,... ಉದಾಹರಣೆಗೆ ಉಡುಪಿಯಲ್ಲಿರುವ ಕಾಪು ಮಾರಿಯಮ್ಮನ ಕ್ಷೇತ್ರದಲ್ಲಿ ಬ್ರಹ್ಮಕಲಶದ ಜೀರ್ಣೋದ್ಧಾರವಾಗಿದೆ. ಆ ದೇವಿಯು ನೆಲೆಸಿ 'ಯಾವ ಭಕ್ತರು ಹೆದರುವುದು ಬೇಡ, ನನ್ನ ಅಭಿವೃದ್ಧಿಯನ್ನು ನಾನೇ ಮಾಡಿಕೊಳ್ಳುತ್ತೇನೆ' ಎಂದು ಹೇಳಿದಾಗ ಅಲ್ಲಿದ್ದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರುಗಳಾದ ಶ್ರೀ ವಾಸುದೇವ್ ಶೆಟ್ಟಿಯವರು ಇರಬಹುದು, ಎಂ.ಆರ್.ಜಿ. ಸಮೂಹ ಸಂಸ್ಥೆಯ ಮುಖ್ಯ ಆಡಳಿತ ನಿರ್ದೇಶಕರಾದ ಡಾ॥ ಕೆ.ಪ್ರಕಾಶ್ ಶೆಟ್ಟಿ ಇರಬಹುದು. ಸುಮಾರು 60 ರಿಂದ 70 ಕೋಟಿವರೆಗೂ ಭಕ್ತರು ಬಂದಿರುವುದರಿಂದ ಆ ದೇವಸ್ಥಾನದ ಅಭಿವೃದ್ಧಿಯಾಗಿದೆ. ಈ ರೀತಿಯಾಗಿ ಅಭಿವೃದ್ಧಿ ಹೊಂದಿರುವ ಕಾರಣ ಇನ್ನಷ್ಟು ಮುತುವರ್ಜಿ ವಹಿಸಿಕೊಂಡು ಇದಕ್ಕೆ ಮಾನ್ಯ ಸಚಿವರು ಗಮನ ಕೊಡಬೇಕು.

(ಮುಂದು)

**(107) 06.03.2025/11.20/ಎಸ್‌ಕೆ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಮುಂದು)**

ಬ್ರಹ್ಮಕಲಶ ಎಂದರೆ ಇಡೀ ಭಾಗದ ಜನರ ಅಭಿವೃದ್ಧಿಯಾಗುತ್ತದೆ. ಅದು ಆ ರಾಜ್ಯದ ಬ್ರಹ್ಮಕಲಶವಾಗಿದೆ. ಆ ಕಾರಣಕ್ಕೋಸ್ಕರವಾಗಿ ಮಾನ್ಯ ಸಚಿವರು ಇದಕ್ಕೆ ಹೆಚ್ಚು ಮುತುವರ್ಜಿವಹಿಸಬೇಕು. ಅದರ ಜೊತೆಗೆ 16 ಪ್ರಸ್ತಾವನೆಗಳಲ್ಲಿ 2 ಪ್ರಸ್ತಾವನೆಗಳು ಬಂದಿವೆ. ಇನ್ನುಳಿದಿರುವುದು ಏತಕ್ಕೆ ಬಂದಿಲ್ಲ ಎಂಬ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಎಚ್. ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಿಶೋರ್ ಕುಮಾರ್ ಪುತ್ತೂರ್‌ರವರು ಮಹತ್ವದ ಪ್ರಶ್ನೆಯನ್ನು ಕೇಳಿದ್ದಾರೆ. ಈ PRASHAD ((Pilgrimage Rejuvenation and Spiritual Heritage Augmentation Drive)) ಯೋಜನೆಗೆ ವಿಶೇಷವಾದ ಒತ್ತನ್ನು ಕೊಟ್ಟಿದ್ದಾರೆ. ಪ್ರಸಾದ್ ಯೋಜನೆ ಈ ನಮ್ಮ ಪವಿತ್ರ ಕ್ಷೇತ್ರಗಳಿಗೆ ಪ್ರವಾಸ ಮಾಡುತ್ತಿರುವಂತಹವರಿಗೆ ಅನುಕೂಲತೆಗಳನ್ನು ಕಲ್ಪಿಸಬೇಕು. ಅದರಲ್ಲಿ ಮಹತ್ವದ ಪಾತ್ರಗಳನ್ನು ವಹಿಸುತ್ತಿದೆ. PRASHAD scheme ಎಂದರೆ, it is not just distribution of prasad. It is 'Pilgrimage Rejuvenation and Spiritual Heritage Augmentation Drive'. This is what the PRASHAD scheme is. ಈ ಯೋಜನೆಯಡಿಯಲ್ಲಿ ನಮ್ಮ ರಾಜ್ಯ ಬಹಳ ದೊಡ್ಡ ಪ್ರಮಾಣದ ಪ್ರಸ್ತಾವನೆಗಳನ್ನು ಕಳುಹಿಸಿದೆ. ಕೇಂದ್ರ ಸರ್ಕಾರದಿಂದ ಈ 'PRASHAD' ಯೋಜನೆಯಲ್ಲಿ ಬಹಳ ಕಡಿಮೆ ಯೋಜನೆಗಳು ಮಂಜೂರಾಗಿ ಬಂದಿವೆ. ಇತ್ತೀಚೆಗೆ 'PRASHAD' ಯೋಜನೆಯಡಿಯಲ್ಲಿ ಸವದತ್ತಿ ಶ್ರೀ ಯಲ್ಲಮ್ಮ ದೇವಸ್ಥಾನಕ್ಕೆ 18 ಕೋಟಿ ರೂಪಾಯಿಗಳು ಮತ್ತು ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿರುವ ಪಾಪನಾಶಿನಿಗೆ 22 ಕೋಟಿ ರೂಪಾಯಿಗಳು ಬಂದಿದೆ. ಅದೇ ರೀತಿಯಾಗಿ SASCI (Special Assistance to States for Capital Investment) ಯೋಜನೆಯಡಿಯಲ್ಲಿ ಈಗಾಗಲೇ 100 ಕೋಟಿ ರೂಪಾಯಿಗಳನ್ನು ಸವದತ್ತಿ ಶ್ರೀ ಯಲ್ಲಮ್ಮ ಕ್ಷೇತ್ರಕ್ಕೆ ಪಡೆದುಕೊಂಡಿದ್ದೇವೆ. ಅದೇ ರೀತಿಯಾಗಿ ಮೈಸೂರು ಚಾಮುಂಡಿ ದೇವಸ್ಥಾನಕ್ಕೆ 45 ಕೋಟಿ ರೂಪಾಯಿಗಳನ್ನು 'PRASHAD' ಯೋಜನೆಯಡಿಯಲ್ಲಿ ಪಡೆದುಕೊಂಡಿದ್ದೇವೆ. ಇಷ್ಟೊಂದು ಮಾಹಿತಿಯನ್ನು ಏತಕ್ಕೆ ಹೇಳಿದೆ ಎಂದರೆ, ಈ ರೀತಿಯಾಗಿ ನಮ್ಮ ಯೋಜನೆಗಳನ್ನು ಈಗ ಸ್ಪಂದಿಸುವುದರ ಬಗ್ಗೆ ಪ್ರಾರಂಭ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಿನ್ನೆ ಕೆಳಮನೆಯಲ್ಲಿ ನಾನು ಒಂದು ಮಾತನ್ನು ಹೇಳಿದ್ದೆ. ದಕ್ಷಿಣ ಕನ್ನಡ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳೊಳಗೆ ಪ್ರವಾಸಿ ಚಟುವಟಿಕೆಗಳನ್ನು ಉತ್ತೇಜನ ಮಾಡುವಷ್ಟು ಸದ್ಬುದ್ಧಿ, ಔದರ್ಯ, ಆಸಕ್ತಿ ಎನ್ನಿರಿ. ಇದನ್ನು ಬೇರೆ ಎಲ್ಲಿಯೂ ನೋಡುವುದಕ್ಕೆ ಸಿಗುವುದಿಲ್ಲ. ಮಾನ್ಯ ಸಭಾಪತಿಯವರೇ, ತಮಗೂ ಕೂಡ ಗೊತ್ತಿದೆ. ನಮ್ಮ ಭಾಗದ

ಹುಡುಗರು ಪ್ರವಾಸಕ್ಕೆ ಹೊರಟರೆ, ಆ ಪ್ರವಾಸ ಹುಬ್ಬಳ್ಳಿ, ಗದಗ್ ಜಿಲ್ಲೆಯಿಂದ ಪ್ರಾರಂಭವಾದರೆ ಮೈಸೂರು ಮುಟ್ಟುವವರೆವಿಗೂ ಒಂದು ಕಪ್ ಚಹಾವನ್ನು ಚಹಾ ಅಂಗಡಿಯಲ್ಲಿ ಕುಡಿಯುವುದಿಲ್ಲ. ಹೊರಗಡೆಯಿಂದ ಯಾವುದೇ ಆಹಾರವನ್ನು ತೆಗೆದುಕೊಂಡು ತಿನ್ನುವುದಿಲ್ಲ. ಎಲ್ಲಾ ಮಕ್ಕಳಿಗೂ ಸಹಿತ ಇಡಗುಂಜಿ ಗಣಪನಿಂದ ಹಿಡಿದು ಕೊಲ್ಲೂರು ದೇವಸ್ಥಾನ, ಧರ್ಮಸ್ಥಳ, ಉಡುಪಿ, ಮಠಗಳು, ಹೊರನಾಡು ಇವೆಲ್ಲ ಸ್ಥಳಗಳಲ್ಲಿ ಪ್ರಸಾದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಆ ರೀತಿಯಾಗಿ ಧಾರ್ಮಿಕ ಹೆಸರಿನೊಳಗೆ ಶೈಕ್ಷಣಿಕ ಪ್ರವಾಸಕ್ಕೂ ಕೂಡ ಒತ್ತು ಕೊಟ್ಟಿದ್ದೀರಿ. ನಮ್ಮ ಭಾಗದ ಮಕ್ಕಳಿಗೆ ಸಮುದ್ರ ನೋಡುವುದೇ ದೊಡ್ಡ ಸಂಗತಿ. ದಕ್ಷಿಣ ಕನ್ನಡದವರಿಗೆ ಸಮುದ್ರ ನೋಡುವುದೇ ಎಂದರೆ ನಿಮಗೇನೂ ಆಶ್ಚರ್ಯ ಎನಿಸುವುದಿಲ್ಲ. ನಮ್ಮ ಭಾಗದ ಮಕ್ಕಳಿಗೆ ಅಲ್ಲ, ಎಲ್ಲಾ grown up ಇದ್ದವರಿಗೂ ಸಹಿತ ಆ ಸಮುದ್ರ ನೋಡುವುದೇ ದೊಡ್ಡ ಸಂಗತಿ. ಅವೆಲ್ಲವುಗಳನ್ನು ನೋಡುವುದಕ್ಕೆ ಸಾಧ್ಯವಾಗುವ ರೀತಿಯಲ್ಲಿ ಇವೆಲ್ಲಾ ತಾಣಗಳ ವ್ಯವಸ್ಥಾಪಕರು ಬಹಳಷ್ಟು ಶ್ರಮ ಪಟ್ಟಿದ್ದಾರೆ. ಸರ್ಕಾರದ ಪರವಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಅದರ ಜೊತೆಗೆ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವಾಗಿ ಒಟ್ಟು 16 ಪ್ರಸ್ತಾವನೆಗಳಲ್ಲಿ 3 ಪ್ರಸ್ತಾವನೆಗಳು 'PRASHAD' ಯೋಜನೆಯಲ್ಲಿ ಮಂಜೂರಾಗಿದೆ. ಇನ್ನು ಪೆಂಡಿಂಗ್ ಅಂದರೆ ಅದು submission for DPR (Detailed Project Report) stage ನಲ್ಲಿ ಸಹಿತ ಬಹಳಷ್ಟು ಸಂಖ್ಯೆಯಲ್ಲಿದ್ದಾವೆ. ಇನ್ನೂ 11, 12 ಪ್ರಸ್ತಾವನೆಗಳನ್ನು ನಾವು ಬೇಗ ಕಳುಹಿಸಿಕೊಡುತ್ತೇವೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ, ಕೊಲ್ಲೂರು ದೇವಸ್ಥಾನಕ್ಕೆ ಸುಮಾರು 21.00 ಕೋಟಿ ರೂಪಾಯಿಗಳವರೆಗೂ ಪ್ರಸ್ತಾವನೆಯನ್ನು ಕೊಟ್ಟಿದ್ದೀರಿ. ಅದನ್ನು ಸಿದ್ಧಪಡಿಸುವುದಕ್ಕೆ 21 ಕೋಟಿ ರೂಪಾಯಿ ಹಣವಿಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಅದಕ್ಕೆ 21 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ, ಪ್ರಸ್ತಾವನೆಯನ್ನು ತಯಾರು ಮಾಡಿಕೊಟ್ಟರೆ ಒಳ್ಳೆಯದು. ನಾನು ಹೇಳುವುದೇನೆಂದರೆ, ತಾವು ಹಿರಿಯರಿದ್ದೀರಿ. ದೇವಸ್ಥಾನದ ಅಭಿವೃದ್ಧಿಗೆ ಸರ್ವ ಪಕ್ಷಗಳೆಲ್ಲವೂ ಒಟ್ಟಿಗೆ ಸೇರಿದಾಗ, 'Temple Tourism' ಅಭಿವೃದ್ಧಿಯಾಗುತ್ತದೆ. ರಾಜ್ಯವು ಕೂಡ ಅಭಿವೃದ್ಧಿಯಾಗುತ್ತದೆ ಎನ್ನುವುದು ನನ್ನ ಮನವಿಯಾಗಿದೆ. ಅದರ ಜೊತೆಗೆ ಪುತ್ತೂರ್ ನನ್ನ ಕ್ಷೇತ್ರವಾಗಿದ್ದು, ಅಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ 51 ಕೋಟಿ ರೂಪಾಯಿಗಳಷ್ಟು ಪ್ರಸ್ತಾವನೆಯನ್ನು ಕೊಟ್ಟಿದ್ದೀರಿ. ಎಲ್ಲಾ ಸಂಸದರನ್ನು ಕರೆದು ಒಂದು ಸರ್ವ ಪಕ್ಷ ಸಭೆ ಮಾಡಿದರೆ, ನಾವೆಲ್ಲರೂ ಜೊತೆ ಸೇರಿಕೊಂಡು ರಾಜಕೀಯವನ್ನು ಬದಿಗಿಟ್ಟುಕೊಂಡು ಅಭಿವೃದ್ಧಿ ಮಾಡಿದರೆ, ರಾಜ್ಯಕ್ಕೆ ತುಂಬಾ ಉತ್ತಮವಾಗುತ್ತದೆ. ಅದರ ಜೊತೆಗೆ 'Temple Tourism' ಜೊತೆ ಜೊತೆಗೆ 'Nature Tourism' ಕೂಡ ಮಾಡಬೇಕು. ನಮ್ಮ ಭಾಗದಲ್ಲಿ ತುಂಬಾ ಅವಕಾಶಗಳಿವೆ. ಈ ಹಿಂದೆ ಇಚ್ಛಾಶಕ್ತಿಯ ಕೊರತೆಯ ಕಾರಣಕ್ಕೋಸ್ಕರ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿಲ್ಲ. ತಾವೆಲ್ಲರೂ ಸೇರಿಕೊಂಡು ಒಂದು ಸರ್ವ ಪಕ್ಷದ ಸಭೆಯನ್ನು ಕರೆಯಿರಿ. ಎಲ್ಲಾ ಸಂಸದರು ಹಾಗೂ ಶಾಸಕರ ಜೊತೆಗೆ ನಾನು ಕೂಡ ಬರುತ್ತೇನೆ. ಕೇಂದ್ರ ಸರ್ಕಾರದಿಂದ ಬರುವಂತಹ ಅನುದಾನವನ್ನು ಆದಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡಬೇಕೆಂಬುದು ನನ್ನ ವಿನಂತಿಯಾಗಿದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ ಸಂಪೂರ್ಣವಾಗಿ ಬೆಂಬಲಿಸುತ್ತೇನೆ.

**ಶ್ರೀ ಎಚ್. ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡಿರುವ ಸಲಹೆ ಒಳ್ಳೆಯದು ಇದೆ. ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 297
2. ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ,
3. ಉತ್ತರಿಸಬೇಕಾದ ದಿನಾಂಕ : 06.03.2025.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸಣ್ಣ ನೀರಾವರಿ ಇಲಾಖೆಯಿಂದ ಅಂತರ್ಜಲ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಸಣ್ಣ ನೀರಾವರಿ ಇಲಾಖೆಯಿಂದ ಕೃಷಿ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕೆರೆಗಳು, ಅಣೆಕಟ್ಟು, ಪಿಕಪ್, ಬಂದಾರ, ಚೆಕ್ ಡ್ಯಾಂ, ಕಿಂಡಿ ಅಣೆಕಟ್ಟು, ಏತ ನೀರಾವರಿ ಯೋಜನೆ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳನ್ನು ಕರಾವಳಿ ಪ್ರದೇಶಗಳಲ್ಲಿ ಕೃಷಿ ಭೂಮಿಗೆ ಉಪ್ಪು ನೀರು ನುಗ್ಗುವುದನ್ನು ತಡೆಗಟ್ಟಲು ಕ್ಷಾರ ಭೂಮಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಗಳು ಅಂತರ್ಜಲ ಅಭಿವೃದ್ಧಿಗೆ ಪರೋಕ್ಷವಾಗಿ ಸಹಕಾರಿಯಾಗಿರುತ್ತವೆ.<br><br>ಪ್ರತಿ ವರ್ಷ ಸಣ್ಣ ನೀರಾವರಿ ಇಲಾಖೆಗೆ ವಿವಿಧ ಲೆಕ್ಕಶೀರ್ಷಿಕೆಗಳಡಿ ಒದಗಿಸಲಾಗುವ ಅನುದಾನ ಮತ್ತು ಯೋಜನೆಗಳ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಗೆ ಅನುಗುಣವಾಗಿ ಮೇಲೆ ತಿಳಿಸಿರುವ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. |
| ಆ. | ಕಳೆದ 2 ವರ್ಷಗಳಲ್ಲಿ ಎಷ್ಟು ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು ಸದರಿ ಚೆಕ್ ಡ್ಯಾಮ್‌ಗಳಲ್ಲಿ ಸಂಗ್ರಹಿಸಲಾಗುತ್ತಿರುವ ನೀರಿನ ಪ್ರಮಾಣ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) | ಕಳೆದ 2 ವರ್ಷಗಳಲ್ಲಿ 763 ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು ಸದರಿ ಚೆಕ್ ಡ್ಯಾಮ್‌ಗಳಲ್ಲಿ 2424.10 ಎಂ.ಸಿ.ಎಫ್.ಟಿ. ನೀರನ್ನು ಸಂಗ್ರಹಿಸಲಾಗುತ್ತಿದೆ.<br>ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ. | ಸಣ್ಣ ನೀರಾವರಿ ಇಲಾಖೆಯಿಂದ ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು? (ವಿವರ ಒದಗಿಸುವುದು) | ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

ಕಡತ ಸಂಖ್ಯೆ: MID/9/LCQ/2025

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ಲೆಕ್ಕ ಶೀರ್ಷಿಕೆ | | ಬೆಂಗಳೂರು | ಕೋಲಾರ | ಚಿಕ್ಕಬಳ್ಳಾಪುರ | ತುಮಕೂರು | ಚಿತ್ರದುರ್ಗ | ಶಿವಮೊಗ್ಗ | ಮೈಸೂರು | ಮಂಡ್ಯ | ಹಾಸನ | ಮಂಗಳೂರು | ಒಟ್ಟು |
|---|---|---|---|---|---|---|---|---|---|---|---|---|---|
| 1 | 2 | | 14 | 16 | 18 | 20 | 22 | 24 | 26 | 28 | 30 | 32 | 34 |
| I | 4702- ಸಣ್ಣ ನೀರಾವರಿ ಮೇಲಣ ಬಂಡವಳ ವೆಚ್ಚ ನಬಾರ್ಡ-436 | | | | | | | | | | | | |
| 1 | 4702-00-101-1-07-436 | ಕೆರೆಗಳ ಆಧುನೀಕರಣ | 1,501.63 | 1.99 | 350.27 | 655.17 | | | 137.08 | 176.91 | 304.46 | 3.35 | **3,373.56** |
| 2 | 4702-00-101-5-01-436 | ಆಣೆಕಟ್ಟು ಮತ್ತು ಬಂಧಾರ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | **811.09** |
| 3 | 4702-00-101-3-01-436 | ಏತ ನೀರಾವರಿ ಯೋಜನೆಗಳು | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | **74.10** |
| II | 4702-ಸಣ್ಣ ನೀರಾವರಿ ಮೇಲಿನ ಬಂಡವಾಳ ವೆಚ್ಚ ಇತರೆ-139 | | | | | | | | | | | | |
| 1 | 4702-00-101-1-02-139 | ಹೊಸ ಕೆರೆಗಳ ನಿರ್ಮಾಣ | 166.09 | 0.00 | 0.00 | 180.39 | 661.33 | 7.46 | 0.00 | 0.00 | 0.00 | 0.00 | **2,649.78** |
| 2 | 4702-00-101-1-07-139 | ಕೆರೆಗಳ ಆಧುನೀಕರಣ | 3,265.75 | 1,035.76 | 2,070.46 | 4,132.81 | 6,126.63 | 1,519.20 | 2,404.31 | 3,807.04 | 4,784.82 | 5,882.83 | **59,159.96** |
| 3 | 4702-00-101-5-01-139 | ಆಣೆಕಟ್ಟು ಮತ್ತು ಬಂಧಾರ | 1,520.60 | 573.26 | 1,145.53 | 5,677.02 | 7,075.28 | 4,182.79 | 1,126.24 | 2,088.12 | 6,571.57 | 1,950.46 | **90,896.34** |
| 4 | 4702-00-101-5-02-139 | ಪಶ್ಚಿಮ ವಾಹಿನಿ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 36,939.07 | **50,954.56** |
| 5 | 4702-00-101-3-01-139 | ಏತ ನೀರಾವರಿ ಯೋಜನೆಗಳು | 6,514.66 | 10,385.96 | 11,587.05 | 9,461.88 | 373.70 | 419.93 | 1,286.37 | 6,193.91 | 180.84 | 2,178.48 | **85,399.20** |
| 6 | 4702-00-789-0-00-422 | ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ.) | 2.83 | 3.15 | 0.00 | 195.37 | 33.49 | 0.00 | 0.00 | 21.85 | 89.88 | 0.00 | **1,031.17** |
| 7 | 4702-00-796-0-00-423 | ಗಿರಿಜನ ಉಪಯೋಜನೆ (ಟಿ.ಎಸ್.ಪಿ.) | 0.00 | 0.00 | 0.00 | 167.37 | 187.71 | 0.00 | 0.00 | 0.00 | 26.46 | 0.00 | **721.78** |
| 8 | 4702-00-800-8-00-133 | ವಿಶೇಷ ಅಭಿವೃದ್ಧಿ ಯೋಜನೆ(ಎಸ್.ಡಿ.ಪಿ.) | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | **10.25** |
| 9 | 4702-00-101-1-19-139 | PMKSY | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 | **14,489.27** |
| 10 | 2245-08-101-0-01-059 | ರಾಜ್ಯ ವಿಪತ್ತು ಉಪಶಮನ ನಿಧಿ (SDMF) | 0.00 | 0.00 | 57.21 | 73.23 | 43.42 | 0.00 | 0.00 | 147.16 | 0.00 | 106.40 | **1,331.43** |
| III | 4711- ಪ್ರವಾಹ ನಿಯಂತ್ರಣ ಕಾಮಗಾರಿಗಳು ನಾನ್‌ನಬಾರ್ಡ-140 | | | | | | | | | | | | |
| 1 | 4711-01-103-1-00-140 | ಪ್ರವಾಹ ನಿಯಂತ್ರಣ ನಾಗರೀಕ ಕಾಮಗಾರಿಗಳು. | 2,334.07 | 0.00 | 0.00 | 215.02 | 174.12 | 353.84 | 0.00 | 49.85 | 528.09 | 428.44 | **7,854.80** |
| | | ಉತ್ತರ ವಲಯದ ಒಟ್ಟು | **15305.63** | **12000.12** | **15210.52** | **20758.26** | **14675.68** | **6483.22** | **4954.00** | **12484.84** | **12486.12** | **47489.03** | 318757.29 |

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:297ಕ್ಕೆ ಅನುಬಂಧ-2**
**ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತದ ವಿವರ (ದಿನಾಂಕ:01.03.2025 ರಲ್ಲಿದ್ದಂತೆ)**

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ಲೆಕ್ಕ ಶೀರ್ಷಿಕೆ | | ಬೆಳಗಾವಿ | ಧಾರವಾಡ | ಹಳಿಯಾಳ | ವಿಜಯಪುರ | ಕಲಬುರಗಿ | ಬೀದರ | ಕೊಪ್ಪಳ | ಬಳ್ಳಾರಿ |
|---|---|---|---|---|---|---|---|---|---|---|
| 1 | 2 | | 3 | 4 | 5 | 6 | 7 | 8 | 9 | 10 |
| I | 4702- ಸಣ್ಣ ನೀರಾವರಿ ಮೇಲಣ ಬಂಡವಳ ವೆಚ್ಚ ನಬಾರ್ಡ-436 | | | | | | | | | |
| 1 | 4702-00-101-1-07-436 | ಕೆರೆಗಳ ಆಧುನೀಕರಣ | 0.00 | 25.00 | 0.00 | 116.05 | 83.11 | 0.00 | 0.00 | 18.54 |
| 2 | 4702-00-101-5-01-436 | ಆಣೆಕಟ್ಟು ಮತ್ತು ಬಂಧಾರ | 0.00 | 150.00 | 100.00 | 130.79 | 0.00 | 150.00 | 272.74 | 7.56 |
| 3 | 4702-00-101-3-01-436 | ಏತ ನೀರಾವರಿ ಯೋಜನೆಗಳು | 0.00 | 0.00 | 0.00 | 0.00 | 0.00 | 0.00 | 0.00 | 74.10 |
| II | 4702-ಸಣ್ಣ ನೀರಾವರಿ ಮೇಲಿನ ಬಂಡವಾಳ ವೆಚ್ಚ ಇತರೆ-139 | | | | | | | | | |
| 1 | 4702-00-101-1-02-139 | ಹೊಸ ಕೆರೆಗಳ ನಿರ್ಮಾಣ | 271.03 | 421.95 | 0.00 | 30.00 | 632.01 | 20.00 | 4.47 | 255.05 |
| 2 | 4702-00-101-1-07-139 | ಕೆರೆಗಳ ಆಧುನೀಕರಣ | 2850.51 | 8878.65 | 960.77 | 2142.99 | 3874.19 | 2850.00 | 1961.98 | 611.26 |
| 3 | 4702-00-101-5-01-139 | ಆಣೆಕಟ್ಟು ಮತ್ತು ಬಂಧಾರ | 12655.24 | 18775.37 | 2140.65 | 6328.30 | 7400.24 | 950.00 | 6801.10 | 3934.57 |
| 4 | 4702-00-101-5-02-139 | ಪಶ್ಚಿಮ ವಾಹಿನಿ | 0.00 | 0.00 | 14015.49 | 0.00 | 0.00 | 0.00 | 0.00 | 0.00 |
| 5 | 4702-00-101-3-01-139 | ಏತ ನೀರಾವರಿ ಯೋಜನೆಗಳು | 12993.10 | 3089.51 | 916.28 | 1186.62 | 5681.16 | 750.00 | 11966.74 | 233.01 |
| 6 | 4702-00-789-0-00-422 | ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ.) | 91.29 | 0.00 | 0.00 | 81.00 | 40.40 | 300.00 | 171.91 | 0.00 |
| 7 | 4702-00-796-0-00-423 | ಗಿರಿಜನ ಉಪಯೋಜನೆ (ಟಿ.ಎಸ್.ಪಿ.) | 0.24 | 0.00 | 40.00 | 0.00 | 0.00 | 300.00 | 0.00 | 0.00 |
| 8 | 4702-00-800-8-00-133 | ವಿಶೇಷ ಅಭಿವೃದ್ಧಿ ಯೋಜನೆ(ಎಸ್.ಡಿ.ಪಿ.) | 0.00 | 10.25 | 0.00 | 0.00 | 0.00 | 0.00 | 0.00 | 0.00 |
| 9 | 4702-00-101-1-19-139 | PMKSY | 0.00 | 0.00 | 0.00 | 0.00 | 14489.27 | 0.00 | 0.00 | 0.00 |
| 10 | 2245-08-101-0-01-059 | ರಾಜ್ಯ ವಿಪತ್ತು ಉಪಶಮನ ನಿಧಿ (SDMF) | 338.46 | 165.55 | 0.00 | 0.00 | 0.00 | 400.00 | 0.00 | 0.00 |
| III | 4711- ಪ್ರವಾಹ ನಿಯಂತ್ರಣ ಕಾಮಗಾರಿಗಳು ನಾನ್‌ನಬಾರ್ಡ-140 | | | | | | | | | |
| 1 | 4711-01-103-1-00-140 | ಪ್ರವಾಹ ನಿಯಂತ್ರಣ ನಾಗರೀಕ ಕಾಮಗಾರಿಗಳು. | 234.04 | 2647.51 | 711.00 | 0.00 | 178.82 | 0.00 | 0.00 | 0.00 |
| | | ಉತ್ತರ ವಲಯದ ಒಟ್ಟು | **29433.91** | **34163.79** | **18884.19** | **10015.75** | **32379.20** | **5720.00** | **21178.94** | **5134.09** |

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 297ಕ್ಕೆ ಅನುಬಂಧ-1**

ಕಳೆದ 2 ವರ್ಷಗಳಲ್ಲಿ ನಿರ್ಮಿಸಲಾದ ಚೆಕ್ ಡ್ಯಾಮ್ ಗಳ ವಿವರ

| ಕ್ರ.ಸಂ. | ಜಿಲ್ಲೆ | 2022-23 | | 2023-24 | | ಷರಾ |
|---|---|---|---|---|---|---|
| | | ಚೆಕ್ ಡ್ಯಾಂಗಳ ಸಂಖ್ಯೆ | ಸಂಗ್ರಹಿಸಲಾಗುತ್ತಿರುವ ನೀರಿನ ಪ್ರಮಾಣ (ಎಂ.ಸಿ.ಎಫ್.ಟಿ.ಗಳಲ್ಲಿ) | ಚೆಕ್ ಡ್ಯಾಂಗಳ ಸಂಖ್ಯೆ | ಸಂಗ್ರಹಿಸಲಾಗುತ್ತಿರುವ ನೀರಿನ ಪ್ರಮಾಣ (ಎಂ.ಸಿ.ಎಫ್.ಟಿ.ಗಳಲ್ಲಿ) | |
| 1 | 2 | 3 | 4 | 5 | 6 | 7 |
| 1 | ಬೆಂಗಳೂರು ನಗರ | 0 | 0.00 | 1 | 0.30 | |
| 2 | ಬೆಂಗಳೂರು ಗ್ರಾಮಾಂತರ | 54 | 15.35 | 16 | 6.01 | |
| 3 | ರಾಮನಗರ | 22 | 7.95 | 21 | 8.35 | |
| 4 | ಕೋಲಾರ | 3 | 5.95 | 1.00 | 2.10 | |
| 5 | ಚಿಕ್ಕಬಳ್ಳಾಪುರ | 40 | 75.40 | 93 | 99.73 | |
| 6 | ಚಿತ್ರದುರ್ಗ | 117 | 174.00 | 22 | 84.00 | |
| 7 | ದಾವಣಗೆರೆ | 23 | 92.00 | 4 | 17.00 | |
| 8 | ತುಮಕೂರು | 18 | 8.89 | 14 | 9.14 | |
| 9 | ಶಿವಮೊಗ್ಗ | 2 | 6.45 | 2 | 0.81 | |
| 10 | ಚಿಕ್ಕಮಗಳೂರು | 13 | 24.19 | 16 | 13.39 | |
| 11 | ಮೈಸೂರು | 18 | 30.00 | 21 | 32.00 | |
| 12 | ಚಾಮರಾಜನಗರ | 33 | 22.00 | 22 | 10.00 | |
| 13 | ಮಂಡ್ಯ | 6 | 30.60 | 4 | 25.20 | |
| 14 | ಹಾಸನ | 2 | 4.38 | 10 | 6.72 | |
| 15 | ಕೊಡಗು | 3 | 3.37 | 3 | 1.10 | |
| 16 | ಬಳ್ಳಾರಿ | 15 | 50.00 | 0 | 0.00 | |
| 17 | ವಿಜಯನಗರ | 18 | 114.00 | 42 | 70.75 | |
| 18 | ಕಲಬುರಗಿ | 9 | 40.00 | 16 | 226.46 | |
| 19 | ಯಾದಗಿರಿ | 2 | 27.00 | 0 | 0.00 | |
| 20 | ರಾಯಚೂರು | 2 | 52.00 | 0 | 0.00 | |
| 21 | ಕೊಪ್ಪಳ | 20 | 615.00 | 0 | 0.00 | |
| 22 | ಬೆಳಗಾವಿ | 0 | 0.00 | 9 | 22.05 | |
| 23 | ಬಾಗಲಕೋಟೆ | 1 | 196.00 | 0 | 0.00 | |
| 24 | ಧಾರವಾಡ | 1 | 35.00 | 2 | 16.98 | |
| 25 | ಗದಗ | 1 | 2.70 | 18 | 118.78 | |
| 26 | ಹಾವೇರಿ | 3 | 21.00 | 0 | 0.00 | |
| ಒಟ್ಟು | | **426** | **1653.23** | **337** | **770.87** | |
| ಕಳೆದ 2 ವರ್ಷಗಳಲ್ಲಿ ನಿರ್ಮಿಸಲಾದ ಒಟ್ಟು ಚೆಕ್ ಡ್ಯಾಮ್ ಗಳು ಮತ್ತು ನೀರು ಸಂಗ್ರಹಣೆಯ ಸಾಮರ್ಥ್ಯ | | **763** | **2424.10** | | | |

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅಂತರ್ಜಲ ಕುಸಿತ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಆ ಅಭಿವೃದ್ಧಿಗೆ ಪರೋಕ್ಷವಾಗಿ ಸಹಕಾರವಾಗುವಂತಹ ಎಲ್ಲಾ ಕಾರ್ಯ ಯೋಜನೆ ಮಾಡಿರುವ ಬಗ್ಗೆ ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಕಳೆದ 2 ವರ್ಷಗಳಲ್ಲಿ 763 ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡಿದ್ದೀರಿ. ಸದರಿ ಚೆಕ್ ಡ್ಯಾಮ್‌ಗಳಲ್ಲಿ 2,424.10 ಎಂ.ಸಿ.ಎಫ್.ಟಿ. ನೀರನ್ನು ಸಂಗ್ರಹಿಸಲಾಗುತ್ತಿದೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಚೆಕ್ ಡ್ಯಾಮ್‌ಗಳನ್ನು ಸರಿಯಾದ ಪ್ರಮಾಣದಲ್ಲಿ ನಿರ್ವಹಣೆ ಮಾಡದಿದ್ದರೆ, ಅದಕ್ಕೆ ಆಗುವಂತಹ ಹಾನಿಗಳ ಬಗ್ಗೆಯೂ ಕೂಡ ಯೋಚನೆ ಮಾಡಬೇಕಾಗಿದೆ. ಇದರಿಂದ ಪರಿಸರ ಕೂಡ ಹಾಳಾಗುವುದನ್ನು ನಾವು ನೋಡಿದ್ದೇವೆ. ಅನೇಕ ಕಡೆಗಳಲ್ಲಿ ಚೆಕ್ ಡ್ಯಾಮ್‌ಗಳು ಆಗಿರುತ್ತದೆ. ಆದರೆ ಅದರ ನಿರ್ವಹಣೆ ಮಾತ್ರ ಸರಿಯಾಗಿ ಆಗುತ್ತಿಲ್ಲ. ಒಮ್ಮೊಮ್ಮೆ ಚೆಕ್ ಡ್ಯಾಮ್ ಮಾಡಿ ಬಿಡುತ್ತೀರಿ. ಅದರ ನಿರ್ವಹಣೆಯ ವೆಚ್ಚವನ್ನು ಅವರು ಹೇಗೆ ಭರಿಸುತ್ತಾರೆ ಎಂಬುದು ಗೊತ್ತಿಲ್ಲ. ಅದಕ್ಕೋಸ್ಕರ ನನ್ನ ಆಶಯವಿರುವುದೇನೆಂದರೆ, ತಮ್ಮ ಸರ್ಕಾರ ಮತ್ತು ಸಮುದಾಯದ ಜೊತೆ ಸೇರಿ ಅದರ ನಿರ್ವಹಣೆ ಮಾಡುವಂತಹ ಕಾರ್ಯಕ್ರಮಗಳನ್ನು ಮಾಡಬೇಕು. ಮಹಾರಾಷ್ಟ್ರದ ಹಿವಾರೆ ಬಜಾರ್ ಗ್ರಾಮದಲ್ಲಿ ಸಮುದಾಯ ಮತ್ತು ಸರ್ಕಾರ ಒಟ್ಟಿಗೆ ಸೇರಿ ಮಾಡುವಂತಹದ್ದು. ಏಕೆಂದರೆ, ನಮ್ಮಲ್ಲಿ ಯಾವುದೇ ಚೆಕ್ ಡ್ಯಾಮ್‌ಗಳಿಗೆ ಸರಿಯಾದ ವ್ಯವಸ್ಥೆ ಇಲ್ಲ. ಅನೇಕ ಚೆಕ್ ಡ್ಯಾಮ್‌ಗಳು ಹಾಳಾಗಿರುವುದನ್ನು ನೋಡಿದ್ದೇವೆ. 763 ಚೆಕ್ ಡ್ಯಾಮ್‌ಗಳನ್ನು ನಿರ್ವವಣೆ ಮಾಡುವುದಕ್ಕೆ ತಗಲುವ ವೆಚ್ಚವೆಷ್ಟು ಎಂದು ಮಾನ್ಯ ಸಚಿವರು ಹೇಳಬೇಕು. ಅನುಬಂಧ-1ರಲ್ಲಿ ಇರುವಂತೆ 26 ಜಿಲ್ಲೆಗಳಲ್ಲಿ ಎಷ್ಟೆಷ್ಟು ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಗಿದೆ ಎಂಬ ಬಗ್ಗೆ ತಿಳಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 117 ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಗಿದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಗಿದೆ. ಒಂದೊಂದು ವರ್ಷಕ್ಕೆ ಎರಡೆರಡು ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಿಕೊಟ್ಟಿದ್ದೀರಿ. ಕೋಲಾರ ಜಿಲ್ಲೆ ನೀರಿಗೆ ಬಹಳ ಬರವಿರುವಂತಹ ಪ್ರದೇಶವಾಗಿದ್ದು, ಅಲ್ಲಿ ಕೂಡ 3 ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಗೆ 40 ಚೆಕ್ ಡ್ಯಾಮ್‌ಗಳನ್ನು ಕೊಟ್ಟಿದ್ದೀರಿ. ಈ ಸಂಖ್ಯೆಗಳನ್ನು ನೋಡಿದರೆ, ಕೆಲವು ಕಡೆ ಕಡಿಮೆ ಇರಬೇಕು. ಕೆಲವು ಕಡೆ ಹೆಚ್ಚು ಇರಬೇಕೆಂಬ ಬಗ್ಗೆ ಹೇಳುತ್ತೇನೆ. ಇಷ್ಟೊಂದು ದೊಡ್ಡ ಅಂತರವನ್ನು ಸರ್ಕಾರದಿಂದ ನಾವು ನಿರೀಕ್ಷೆ ಮಾಡುವುದಿಲ್ಲ. ಹಾಗೆಯೇ ಅನುಬಂಧ-2 ರಲ್ಲಿರುವಂತೆ, ತಾವು ಚೆಕ್ ಡ್ಯಾಮ್‌ಗಳ ಬಗ್ಗೆ ಉಲ್ಲೇಖ ಮಾಡಲಿಲ್ಲ. ನಾನು ಮೊದಲು ಕೇಳಿದ ಪ್ರಶ್ನೆಗೆ ಕೆರೆಗಳ ಆಧುನೀಕರಣ ತಗಲುವ ಗುತ್ತಿಗೆದಾರರಿಗೆ ಬಾಕಿ ಕೊಡುವಂತಹ ಮೊತ್ತವನ್ನು ಉಲ್ಲೇಖ ಮಾಡಿದ್ದೀರಿ. ಇದರಲ್ಲಿ ಕೇವಲ 19 ಜಿಲ್ಲೆಗಳು. ಜಿಲ್ಲಾವಾರು ವರದಿ ಎಂಬುದನ್ನು ನಾನು ತಿಳಿಸುತ್ತೇನೆ. ಇದರಲ್ಲಿ ಉತ್ತರ ವಲಯದ ಒಟ್ಟು ಎಂದು ಎರಡು ಕಡೆಗಳಲ್ಲಿ ಕೊಟ್ಟಿದ್ದೀರಿ. ಹಾಗಾದರೆ ಖಾಲಿ ಉತ್ತರ ವಲಯಕ್ಕೆ ಮಾತ್ರ ಗುತ್ತಿಗೆದಾರರಿಗೆ ಕೊಡುವುದು ಬಾಕಿ ಇದೆಯೇ? ಬೇರೆ ಕಡೆ ಬಾಕಿಯಿಲ್ಲವೇ? ಚೆಕ್ ಡ್ಯಾಮ್‌ಗಳಿಗೆ ತಗಲಿರುವ

ಬಾಕಿ ಎಷ್ಟು? ಇದನ್ನು ಕೂಡ ಮಾನ್ಯ ಸಚಿವರು ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತೇನೆ.

**ಶ್ರೀ ಎನ್. ಎಸ್ ಬೋಸರಾಜು (ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದೊಂದು ಜಿಲ್ಲೆಗಳಲ್ಲಿ ಚೆಕ್ ಡ್ಯಾಮ್‌ಗಳು ಎಷ್ಟಿವೆ ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಚೆಕ್ ಡ್ಯಾಮ್‌ಗಳು ಏತಕ್ಕೆ ಕಡಿಮೆಯಾಗಿದೆ ಎಂದರೆ, ಅಲ್ಲಿ ನದಿಗಳು ಇವೆ. ಚೆಕ್ ಡ್ಯಾಮ್‌ಗಳ ಬದಲು ಸಾಕಷ್ಟು ಬ್ಯಾರೇಜ್‌ಗಳು, ಕಿಂಡಿಗಳು, bridge-cum-barrages ಕೂಡ ಮಾಡಿದ್ದೇವೆ. ಅಣೆಕಟ್ಟುಗಳನ್ನು ಕೂಡ ಮಾಡಿದ್ದೇವೆ. ಕಳೆದ ತಿಂಗಳು ನಾನು ಸೊರಬ ಕ್ಷೇತ್ರಕ್ಕೆ ಬಂದು ಆರು ಬ್ಯಾರೇಜ್‌ಗಳಿಗೆ 63 ಕೋಟಿ ರೂಪಾಯಿಗಳಿಗೆ ಶಂಕು ಸ್ಥಾಪನೆಯನ್ನು ಮಾಡಿದ್ದೇವೆ. ಎಲ್ಲೆಲ್ಲಿ ನೀರಾವರಿಗ ಇದೆ. ಅಲ್ಲಿ ಮಾಡಿದ್ದೇವೆ. ಚಿತ್ರದುರ್ಗ ಜಿಲ್ಲೆಯಲ್ಲಿ ನೀರಾವರಿ ಇಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸೊರಬ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆಗಾಗಿ ಆಲಮಟ್ಟಿ ಭಾಗಕ್ಕೆ ಮಾತ್ರ ಹಣ ಬರುತ್ತದೆ. ಉಳಿವಿ ಭಾಗದ ಕಡೆಗಳಲ್ಲಿ ತುಂಬಾ ಸೊರಗಿ ಹೋಗಿರುತ್ತದೆ. ಆ ಭಾಗಕ್ಕೆ ಚೆಕ್ ಡ್ಯಾಮ್‌ಗಳನ್ನು ಕೊಡಬಹುದಲ್ಲವೇ?

**ಶ್ರೀ ಎನ್. ಎಸ್ ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹದ್ದೆಲ್ಲಾ ನನ್ನ ಗಮನದಲ್ಲಿದೆ. ಎಲ್ಲೆಲ್ಲಿ ನೀರು ಪೋಲಾಗಿ ಮುಂದೆ ಹೋಗುತ್ತಿದೆಯೋ, ಅದರಿಂದಾಗಿ ಅಲ್ಲಿರುವಂತಹ ಜನರಿಗೂ ಮತ್ತು ಪರಿಸರಕ್ಕೂ ತೊಂದರೆಯಾಗದಂತೆ, ಕೆಲವು ಕಡೆ ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡುವುದಕ್ಕೆ ಹೋದರೆ, ಆ back water ನಿಂದ ಕೆಲವು ರೈತರು submerge ಆಗುತ್ತದೆ ಎಂದು ಆಕ್ಷೇಪಣೆ ಮಾಡುತ್ತಾರೆ.

(ಮುಂದು)

(108) 06.03.2025/11.30/ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು:- (ಮುಂದು)**

ಈ ರೀತಿಯಾಗಿ ಎಲ್ಲೆಲ್ಲಿ ಮಾಡಬೇಕೆಂದು ರೈತರು ಮತ್ತು ಅಲ್ಲಿರತಕ್ಕಂಥ ಜನಪ್ರತಿನಿಧಿಗಳು ಗಮನಕ್ಕೆ ತರುತ್ತಾರೋ, ಅದನ್ನು ನಮ್ಮ ಇಲಾಖೆಯ ಅಧಿಕಾರಿಯವರು D.P.R. (Detailed Project Report) ತಯಾರು ಮಾಡಿ ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲಿ ರಾಜ್ಯಾದ್ಯಂತ ಎಲ್ಲಾ ಕಡೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಕೆಲವು ಕಡೆ ಅವುಗಳ maintenance ಸರಿ ಇಲ್ಲ ಎಂದು ಹೇಳಿದರು. ತಾವು ಹೇಳಿದಂತೆ ಮಳೆ ಜಾಸ್ತಿ ಬಂದಾಗ flood ಬಂದಂತಹ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ damage ಆಗಿವೆ. ಆ ರೀತಿ ಎಲ್ಲಾ ಕಡೆ ಇಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಹಲವು ಕಡೆ ಆಗಿದೆ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಅಟಲ್ ಭೂಜಲ್ ಯೋಜನೆಯಲ್ಲಿ ಕೇಂದ್ರ ಸರ್ಕಾರ ಸುಮಾರು 14 ಜಿಲ್ಲೆಗಳಲ್ಲಿ, 44 ತಾಲ್ಲೂಕುಗಳಲ್ಲಿ, 1,199 ಗ್ರಾಮ ಪಂಚಾಯಿತಿಗಳಲ್ಲಿ, ಇಡೀ ರಾಷ್ಟ್ರದಲ್ಲಿ 7 ರಾಜ್ಯಗಳಲ್ಲಿ ಮಾತ್ರ ಎಲ್ಲೆಲ್ಲಿ water ಬಹಳ deplete ಆಗುತ್ತದೋ ಅಲ್ಲಿ ಮಾತ್ರ ಗುರುತಿಸಿ ಕೊಟ್ಟಿದ್ದಾರೆ. ನಮಗೆ ಅವರದೇ 100% ಅನುದಾನ ಕೂಡ ಸಿಗುತ್ತದೆ. ಈಗ ಸುಮಾರು 4 ವರ್ಷ complete ಆಗಿದೆ. ನಾವು 5ನೇ ವರ್ಷದಲ್ಲಿದ್ದೇವೆ. ಇತ್ತೀಚೆಗೆ ಭಾರತ ಸರ್ಕಾರದಿಂದ ಎರಡ್ಮೂರು team ನಮ್ಮ ರಾಜ್ಯಕ್ಕೆ ಬಂತು. ಪ್ರಧಾನ ಕಾರ್ಯದರ್ಶಿಯವರಾದ ಶ್ರೀಮತಿ ದೇಬಶ್ರೀ ಮುಖರ್ಜಿಯವರು 7 ರಾಜ್ಯಗಳಿಗೆ ಹೋಗಿ ಭೇಟಿ ಮಾಡಿದಾಗ ಕರ್ನಾಟದಲ್ಲಿ ಮಾತ್ರ ಬಹಳ ಉತ್ತಮವಾಗಿ ಚೆಕ್ ಡ್ಯಾಂಗಳು, ಕಿಂಡಿ ಅಣೆಕಟ್ಟುಗಳನ್ನು ಅಟಲ್ ಭೂಜಲ್ ಯೋಜನೆಯಲ್ಲಿ ಮಾಡಿರತಕ್ಕಂಥದ್ದು ಬಹಳ perfect ಆಗಿ ಆಗಿದೆ ಎಂದು ಬಹಳ appreciate ಮಾಡಿದರು. ನಮಗೆ ರೂ.1,000 ಕೋಟಿ ಕೊಡುತ್ತೇವೆಂದು ಹೇಳಿದರು. ಈಗ ಅದರಲ್ಲಿ ರೂ.140 ಕೋಟಿ ಕಡಿಮೆ ಮಾಡಿ, ರೂ.860 ಕೋಟಿಗಳನ್ನು 7 ಇಲಾಖೆಗಳ ಮುಖಾಂತರ ಕೆಲಸಗಳಾಗುತ್ತವೆ. 1,199 ಗ್ರಾಮ ಪಂಚಾಯಿತಿಗಳಲ್ಲಿ ತಾವು ಹೇಳಿದಂತೆ, ಜನರ ಸಹಭಾಗಿತ್ವದಲ್ಲಿ ಮತ್ತು ಪಂಚಾಯಿಗಳಲ್ಲಿ ಮೀಟಿಂಗ್ ಮಾಡಿ ಅಲ್ಲಿ display ಸಹಿತ ಮ್ಾಡಿ ಅಲ್ಲಿ ಆ ಕೆಲಸ ನಡೆಯುತ್ತಿದೆ. ಉಳಿದ ಕಡೆಗಳಲ್ಲಿ ನಮಗೆ ಎಷ್ಟು ಕಡೆ ಮಾಡಲು ಸಾಧ್ಯವಾಗುತ್ತದೋ ಅಲ್ಲಿ ಗ್ರಾಮ ಪಂಚಾಯಿತಿ ಸದಸ್ಯರನ್ನು ಮತ್ತು ಗ್ರಾಮದಲ್ಲಿರತಕ್ಕಂಥ ಆ ರೈತರಿಗೆ ಉಪಯೋಗವಾಗುತ್ತದೋ ಅಲ್ಲಿ ಚೆಕ್ ಡ್ಯಾಂಗಳನ್ನು ಮಾಡುವುದರಿಂದ ಆ ಪಕ್ಕದ ರೈತರನ್ನೂ ಕೂಡ ಮನವರಿಕೆ ಮಾಡುವ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಹಂತ ಹಂತವಾಗಿ ಏನು ಅನುದಾನ ಸಿಗುತ್ತದೋ ಆ ರೀತಿಯಲ್ಲಿ demand ಆಧಾರದಲ್ಲಿ ನಾವು ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ ಮಾನ್ಯ ಸದಸ್ಯರು ಬಾಕಿ ಬಿಲ್ ಬಗ್ಗೆ ಹೇಳಿದರು. ಎರಡೂ ಕಡೆ . . .

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಉತ್ತರ ವಲಯದ್ದು ಮಾತ್ರ ಬಂದಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಉತ್ತರ ವಲಯ ಮತ್ತು ದಕ್ಷಿಣ ವಲಯ ಎರಡೂ ಇದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಉತ್ತರ ವಲಯದ್ದು ಮಾತ್ರ ಉತ್ತರ ಕೊಟ್ಟಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರಿಗೆ ಉತ್ತರ ವಲಯದ ಡೀಟೈಲ್ಸ್ ಸಿಕ್ಕಿದೆ. ದಕ್ಷಣ ವಲಯದ್ದು ಕಳುಹಿಸಿಕೊಡುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಉತ್ತರ ಬಂದಿದೆ. ಆದರೆ ಎರಡಲ್ಲೂ ಕೂಡ ಉತ್ತರ ವಲಯ ಎಂದು ಬರೆದಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಎರಡೂ ಉತ್ತರ ಬಂದಿದೆ. ಇಲ್ಲಿಯವರೆಗೆ ರೂ.3,187.57 ಕೋಟಿ ಬಾಕಿ ಬಿಲ್‌ಗಳಿವೆ. 2020 ರಿಂದ ಎಂದು ಹೇಳಬೇಕಾಗುತ್ತದೆ. ಈಗ ಇರತಕ್ಕಂಥದ್ದು ಮಾನ್ಯ ಸದಸ್ಯರು ಕೇಳಿದ್ದಾರೆ, ಅಷ್ಟನ್ನೂ ಕೂಡ ಹೇಳಿದ್ದೇನೆ. ಉಳಿದಿರುವುದನ್ನು ಎಲ್ಲೆಲ್ಲಿ ಎಷ್ಟೆಷ್ಟು ನೀರು ಸಂಗ್ರಹವಾಗುತ್ತದೆ ಅದರ details ಎಲ್ಲಾ ಕೊಟ್ಟಿದ್ದೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೆಲವು ಕಡೆ ತಾರತಮ್ಯ ಆಗಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ನೀರಾವರಿ ಪ್ರದೇಶದಲ್ಲಿ. . .

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಕೋಲಾರದಂತಹ ಜಿಲ್ಲೆಯಲ್ಲಿ ನೀರಿಗೆ ಬರ ಇದೆ. ಇಂತಹ ಕಡೆಗಳಲ್ಲಿ ನೀವು ಮಳೆ ನೀರು ಆವಿಯಾಗಿ ಹೋಗುವುದರ ಬದಲು, ಸರ್ಕಾರ ಅಂತಹ ಕಡೆಗಳಲ್ಲಿ ಚೆಕ್ ಡ್ಯಾಂಗಳನ್ನು ಮಾಡಿದರೆ ನೀರಾವರಿಗೆ ಸಾಕಷ್ಟು ಅನುಕೂಲವಾಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿಶೆಟ್ಟಿಯವರು ಕೋಲಾರದಲ್ಲಿ ಚೆಕ್‌ಡ್ಯಾಂ ಮಾಡಬಹುದೆಂದು ಹೇಳಿದ್ದಾರೆ. ನಾವು ಬೆಂಗಳೂರಿನಿಂದ ಬರುವ sewage water ನಿಂದ ಸುಮಾರು 13 ಟಿ.ಎಂ.ಸಿ. ಸಂಸ್ಕರಿಸಿದ ನೀರನ್ನು ಕೋಲಾರದ ಕೆರೆಗಳಿಗೆ ತುಂಬಿಸುತ್ತಿದ್ದೇವೆ. ಅಲ್ಲಿ ಚೆಕ್ ಡ್ಯಾಂಗಳ ಅವಶ್ಯಕತೆ ಇರುವುದಿಲ್ಲ. ಹಾಗಾಗಿ, ಅಲ್ಲಿ ಮಾಡಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ನಿರಾವರಿ ಪ್ರದೇಶ ಕಡಿಮೆ ಇದೆ. ಮಳೆ ನೀರು ಬಂದಿದ್ದನ್ನು ನಾವು groundwater improve ಮಾಡುವುದಕ್ಕೆ ಅಲ್ಲಿ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಎಲ್ಲೆಲ್ಲಿ water flow ಇದೆಯೋ ಅದನ್ನು ನೋಡಿಕೊಂಡು, ಎಲ್ಲೆಲ್ಲಿ wastage water ನದಿಗೆ ಹೋಗುತ್ತದೆ. ಆ ನದಿಗೆ ಹೋಗುವ water ಅನ್ನು ನಾವು ಸರಿಪಡಿಸುವುದಕ್ಕೆ ground water improve ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಆ ರೀತಿಯಾಗಿ ಏನಾದರೂ ತಮ್ಮ ಗಮನಕ್ಕೆ ಬಂದರೆ, ನಾವು ಅದನ್ನು ಸರ್ವೆ ಮಾಡಿಸಿ, ತಕ್ಷಣವೇ D.P.R. ಮಾಡಿಸುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ತಾವು ಅದಕ್ಕೆ ಉತ್ತರ ಕೊಟ್ಟಿಲ್ಲ. ಗ್ರಾಮಗಳಲ್ಲಿ ಹೋಗಿ ನಾವು display ಮಾಡುತ್ತೇವೆಂದು ಹೇಳಿದಿರಿ. ಆದರೆ ಸ್ಥಳೀಯ ಸಮುದಾಯವನ್ನು ಜೋಡಣೆ ಮಾಡಿ ನಿರ್ವಹಣೆ ಮಾಡಿ ಎಂದು ಹೇಳುತ್ತಿದ್ದೇನೆ. ಬರೀ ಸರ್ಕಾರದಿಂದಲ್ಲದೇ, ಅವರನ್ನೂ ಕೂಡ ಸೇರಿಸಿಕೊಳ್ಳಬೇಕು. ಏಕೆಂದರೆ, ಒಂದು ಚೆಕ್‌ಡ್ಯಾಂನಲ್ಲಿ ಕೊನೆಗೆ width, depth ಏನೂ ಇರುವುದಿಲ್ಲ. ನೀವು ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಿರುತ್ತೀರಿ. ಕೊನೆಗೆ ಅದು ಯಾವ ಪ್ರಮಾದಲ್ಲಿರುತ್ತದೆ ಎಂದರೆ, ಎಲ್ಲಾ ಕುಸಿದಿರುತ್ತದೆ. ಅದಕ್ಕೋಸ್ಕರ ಅದರ ನಿರ್ವಹಣೆಯನ್ನು ಅಲ್ಲಿಯ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮಾಡಬೇಕು. ಅಲ್ಲಿ display ಮಾಡುವುದಲ್ಲ. ನಾನು ಮಹಾರಾಷ್ಟ್ರದ ಹಿರೇವಾಡಿಯ ಬಗ್ಗೆ ಹೇಳಿದ್ದೇನೆ. ಇಲ್ಲಿಯೂ ಕೂಡ ಅದೇ ರೀತಿ ಮಾಡಿದರೆ ಬಹುಶಃ . . .

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಸಹಜವಾಗಿ ಒಂದೊಂದು ಚೆಕ್‌ಡ್ಯಾಂ ಕಟ್ಟಿರುವ

ಮತ್ತು ಅದರ ಸುತ್ತಮುತ್ತಲೂ ಇರುವ ಸರ್ವೇ ನಂಬರ್‌ನಲ್ಲಿರತಕ್ಕಂಥ ರೈತರ ಗಮನಕ್ಕೆ ತಂದು ಅವರು objection ಮಾಡಿದ್ದನ್ನು ಸರಿಪಡಿಸಿಯೇ ನಾವು ಅದನ್ನು ಮಾಡುತ್ತೇವೆ. ಅದನ್ನು department ನವರು maintain ಮಾಡಿದರೂ ಸಹಿತ ಅದರ ಆಗುಹೋಗುಗಳನ್ನು ನೋಡತಕ್ಕಂಥದ್ದು ಆ ರೈತರಿಗೆ ನಾವು ಮನವರಿಕೆ ಮಾಡಿಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ಅಟಲ್ ಭೂಜಲ್ ಯೋಜನೆಯಲ್ಲಿ ಅದೊಂದು programme ಹಾಕಿಕೊಂಡು ನಾವು ಎಲ್ಲಾ ಕಡೆ 1,199 ಗ್ರಾಮ ಪಂಚಾಯಿತಿಯಲ್ಲಿ ಜನರ ಸಹಭಾಗಿತ್ವದಲ್ಲಿ ಮಾಡಿದ್ದೇವೆ. ಬೇರೆ ಕಡೆ ಆ ರೀತಿ ಮಾಡುವಂತಹ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್ ರವರೇ, ಒಂದು ನಿಮಿಷ. ಮಾನ್ಯ ಉಪ ಮುಖ್ಯಮಂತ್ರಿಯವರ ಹೆಸರಿನಲ್ಲಿರುವಂತಹ ಪ್ರಶ್ನೆ ಸಂಖ್ಯೆ.274+223, ಶ್ರೀ ಪಿ.ಹೆಚ್.ಪೂಜಾರ್ ಮತ್ತು ಶ್ರೀ ನಿರಾಣಿ ಹಣಮಂತ್ ರುದ್ರಪ್ಪ; ಪ್ರಶ್ನೆ ಸಂಖ್ಯೆ.233, ಶ್ರೀ ಹೆಚ್.ಪಿ.ಸುಧಾಮ್ ದಾಸ್ ಮತ್ತು ಪ್ರಶ್ನೆ ಸಂಖ್ಯೆ.215, ಶ್ರೀ ಮಧು ಜಿ.ಮಾದೇಗೌಡ ರವರ ಪ್ರಶ್ನೆಗಳನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಬೇರೆ ಕೆಲಸದ ಮೇಲೆ ಹೋಗಿರುವುದರಿಂದ ಮುಂದಿನ ಗುರುವಾರ 13ನೇ ತಾರೀಖಿನಂದು ಉತ್ತರ ತೆಗೆದುಕೊಳ್ಳುವಂತೆ ಹೇಳಿದ್ದಾರೆ, ಅವೊತ್ತು ತೆಗೆದುಕೊಳ್ಳುತ್ತೇವೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್ ರವರೇ, ಅದಕ್ಕೆ ನಾನು ಏನು ಮಾಡಲಿ, ಅದನ್ನು ಸರ್ಕಾರ ಹೇಳಬೇಕು. ತಾವು ಒಂದು ನಿಮಿಷ ಕೇಳಿ. ಮಾನ್ಯ ಸಭಾನಾಯಕರೇ ಹೇಳಿ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭವಿಷ್ಯದ ಪ್ರಶ್ನೆ. ಏಳೆಂಟು ರೈತರ ಜೀವನದಲ್ಲಿ ಅಸಡ್ಡೆ ತೋರಿಸುವಂತಹ ಸರ್ಕಾರ. ಎಲ್ಲಾ ರೀತಿಯ complaint ಇದೆ. ಅಲ್ಲಿ ನೀರಾವರಿ ಯೋಜನೆಗೆ ಸಂಪೂರ್ಣವಾಗಿ ಅಸಡ್ಡೆ ತೋರಿಸುತ್ತಿದ್ದಾರೆ ಎನ್ನುವ ಮಾತಿದೆ. ನಾಳೆ ಬಜೆಟ್ ಮಂಡನೆ ಮಾಡುತ್ತಿದ್ದಾರೆ. ಆ ಬಜೆಟ್‌ನಲ್ಲಿ ನಮಗೆ ಪ್ರತಿಫಲ ಸಿಗುತ್ತದೋ, ಇಲ್ಲವೋ ಗೊತ್ತಿಲ್ಲ. ಇವತ್ತು ಸ್ವಲ್ಪ ಚರ್ಚೆ ಆಗುತ್ತದೆಂದು ನಮಗೆ ಆಪೇಕ್ಷೆ ಇತ್ತು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಅಧಿವೇಶನ ಮುಗಿಯುವುದರೊಳಗೆ ನಿಮಗೆ ಉತ್ತರ ಸಿಗುತ್ತದೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿಯುವುದು ಇರಲಿ. ಬಜೆಟ್‌ನಲ್ಲಿ ಏನು ತೋರಿಸುತ್ತಾರೆ, ಅದರ ಮೇಲೆ ನಮ್ಮ ಹಣೆಬರಹ ಗೊತ್ತಾಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಇವತ್ತು ಊರಿನಲ್ಲೇ ಇಲ್ಲ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಏನು ತೋರಿಸುತ್ತಾರೆ, ಅದರ ಮೇಲೆ ನಮ್ಮ ಹಣೆಬರಹ ಗೊತ್ತಾಗುತ್ತದೆ. ಮಾತನಾಡುವುದಕ್ಕೆ ಒಂದು ಅವಕಾಶ ಬೇಕಾಗಿದೆ. ಅದರ ಮೇಲೆ ಚರ್ಚೆ ಮಾಡಬೇಕಾಗಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಬೇರೆ urgent ಕೆಲಸದ ಮೇಲೆ ಹೊರಗೆ ಹೋಗಿದ್ದಾರೆ. ಅದನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತಂದಿದ್ದಾರೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಇವರು ಇದರಲ್ಲಿ ನುಣುಚಿಕೊಳ್ಳುವಂತಹ ಪ್ರವೃತ್ತಿ ಕಾಣುತ್ತಿದೆ, ಮತ್ತೆ ಇನ್ನೇನೂ ಕಾಣಿಸುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಸರಿ ಮಾಡಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಟ್ಟು 4 ಪ್ರಶ್ನೆಗಳಿವೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ದಯಮಾಡಿ. . .

**ಸಭಾಪತಿಯವರು:-** ಮಾನ್ಯ ಉಪ ಮುಖ್ಯಮಂತ್ರಿಯವರು "ವಿಧಾನ ಪರಿಷತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು. ಪೂರ್ವನಿಗದಿತ ಕಾರ್ಯಕ್ರಮ ಇರುವ ಹಿನ್ನೆಲೆಯಲ್ಲಿ, ದಿನಾಂಕ 06.03.2025ರಂದು ನಡೆಯಲಿರುವ ವಿಧಾನ ಪರಿಷತ್ತಿನ ಕಾರ್ಯಕಲಾಪದಲ್ಲಿ ನಾನು ಭಾಗವಹಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ; ಸದರಿ ದಿನದ ಕಲಾಪಕ್ಕೆ ಗೈರಾಗಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ತಮ್ಮನ್ನು ಅನುಮತಿ ಕೋರಿದೆ. ಬೆಂಗಳೂರು ಅಭಿವೃದ್ಧಿ ಮತ್ತು ಜಲಸಂಪನ್ಮೂಲ ಇಲಾಖೆ ಕಡೆಗೆ ಸಂಬಂಧಿಸಿದ ಸದರಿ ದಿನದಂದು ಬರುವ ವಿಷಯವನ್ನು ಮತ್ತೊಂದು ದಿನದಂದು ತೆಗೆದುಕೊಳ್ಳಬೇಕೆಂದು ತಮ್ಮನ್ನು ಕೋರಲಾಗಿದೆ ಎಂದು ಪತ್ರ ಬರೆದಿದ್ದಾರೆ. 13ನೇ ತಾರೀಖು ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ನಾನು ಏನು ಹೇಳುವುದಕ್ಕೆ ಆಗುತ್ತದೆ. ಅದನ್ನು ಸರ್ಕಾರ ಹೇಳಬೇಕು. ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ. ರವರೇ, ನಿಮ್ಮ ಪ್ರಶ್ನೆ ಸಂಖ್ಯೆ. 251 ಲೋಕೋಪಯೋಗಿ ಇಲಾಖೆಗೆ transfer ಆಗಿದೆ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮುಂದಿನ ಗುರುವಾರದಂದು ನನ್ನ ಪ್ರಶ್ನೆ ಬರುತ್ತದೆಯೇ?

**ಸಭಾಪತಿಯವರು:-** ಹೌದು. ಲೋಕೋಪಯೋಗಿ ಇಲಾಖೆಗೆ transfer ಆಗಿದೆ. Next week ತೆಗೆದುಕೊಳ್ಳಲಾಗುವುದು. ಈಗ ಶ್ರೀ ಸುನೀಲ್ ವಲ್ಯಾಪುರ್ ರವರ ಪ್ರಶ್ನೆ. ಶ್ರೀ ಸುನೀಲ್ ವಲ್ಯಾಪುರ್‌ರವರೇ, ನೀವು ವಿರೋಧ ಪಕ್ಷದ ವಿರೋಧ ಪಕ್ಷ ಉಪನಾಯಕರು ಇದ್ದೀರಿ. ನಾನು ನಿಮ್ಮ ಹೆಸರು ಕರೆದಾಗ absent ಆದರೆ ಹೇಗೆ?

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, absent ಆಗುವುದಿಲ್ಲ. Traffic jam ಆಗಿತ್ತು. ಮಾನ್ಯ ಗೃಹ ಸಚಿವರು ಇಲ್ಲೇ ಇದ್ದಾರೆ, ಅವರಿಗೆ ಹೇಳುವುದಕ್ಕೆ

ಬಯಸುತ್ತೇನೆ. ನಾನು ಬೆಳಗ್ಗೆ 9.30 ಗಂಟೆಗೆ ಮನೆಯನ್ನು ಬಿಟ್ಟಿದ್ದೇನೆ. ಅಲ್ಲಿಂದ ಇಲ್ಲಿಗೆ ಬರಬೇಕಾದರೆ ಒಂದು ಗಂಟೆ Traffic jam ಆಗಿತ್ತು.

**ಸಭಾಪತಿಯವರು:-** ಆಯಿತು, ಪ್ರಶ್ನೆ ಕೇಳಿ.

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 256 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 06.03.2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಎಲ್-7 ಸನ್ನದುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ದಿನಾಂಕ:28-02-2025ರ ಅಂತ್ಯಕ್ಕೆ ಒಟ್ಟು 3136 ಸಿಎಲ್-7 ಸನ್ನದುಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಸ್ಥಗಿತಗೊಂಡ ಸಿಎಲ್-2, ಸಿಎಲ್-9, ಎಂಎಸ್ಐಎಲ್ ಸನ್ನದುಗಳು ಹಾಗೂ ಬಾಕಿ ಉಳಿದ ಕೋಟಾವನ್ನು ಹರಾಜು ಮಾಡುವ ಕುರಿತ ಸುದ್ದಿ ದಿನಪತ್ರಿಕೆಯಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಗಿದ್ದು, ಈ ಚಿಂತನೆ ಸರ್ಕಾರಕ್ಕಿದೆಯೇ; ಅವುಗಳ ಸಂಖ್ಯೆ ಎಷ್ಟು; | 1987ರ ಸರ್ಕಾರದ ಆದೇಶದ ಕೋಟಾ ಅನ್ವಯ ಮಂಜೂರು ಮಾಡಲು ಬಾಕಿ ಇರುವ ಸಿಎಲ್-2 ಸನ್ನದುಗಳು ಹಾಗೂ ಸ್ಥಗಿತಗೊಂಡಿರುವ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳು ಮತ್ತು ಎಂ.ಎಸ್.ಐ.ಎಲ್ ಸಂಸ್ಥೆಗೆ ಹಂಚಿಕೆ ಮಾಡಿರುವ ಸಿಎಲ್(11-ಸಿ) ಸನ್ನದುಗಳಲ್ಲಿ ಸ್ಥಗಿತಗೊಂಡಿರುವ ಹಾಗೂ ಮಂಜೂರಾತಿಗೆ ಬಾಕಿಯಿರುವ ಸಿಎಲ್(11-ಸಿ) ಸನ್ನದುಗಳು ಮತ್ತು ಅಬಕಾರಿ ಆಯುಕ್ತರಿಂದ ಪೂರ್ವಾನುಮತಿ ಪಡೆದು ನಂತರ ಕಾರಣಾಂತರಗಳಿಂದ ಮಂಜೂರಾತಿಯಾಗದೇ ಇರುವ ಸಿಎಲ್(11-ಸಿ) ಸನ್ನದುಗಳ ಬಗ್ಗೆ ಪರ್ಯಾಯ ವ್ಯವಸ್ಥೆಯನ್ನು ಪರಿಶೀಲಿಸಲಾಗುತ್ತಿದೆ. ಹರಾಜು ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಇ) | ಈ ರೀತಿ ಬಾಕಿ ಉಳಿದ ಸಿಎಲ್-2 ಸನ್ನದುಗಳು, ಸ್ಥಗಿತಗೊಂಡ ಸಿಎಲ್-2, ಸಿಎಲ್-9 ಸನ್ನದುಗಳು, ಸ್ಥಗಿತಗೊಂಡ ಮತ್ತು ಬಾಕಿ ಉಳಿದ ಎಂ.ಎಸ್.ಐ.ಎಲ್ ಕೋಟಾ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು) | ಸರ್ಕಾರದ 1987ರ ಆದೇಶದನ್ವಯ ಬಾಕಿ ಉಳಿದ ಸಿಎಲ್-2 ಸನ್ನದುಗಳು, ಸ್ಥಗಿತಗೊಂಡ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳು ಮತ್ತು ಬಾಕಿ ಉಳಿದ ಎಂ.ಎಸ್.ಐ.ಎಲ್ ಸನ್ನದುಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | 2008-09 ಸಾಲಿನಲ್ಲಿ ಸ್ಥಗಿತಗೊಂಡ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳನ್ನು ಎಂ.ಎಸ್.ಐ.ಎಲ್ | ಕರ್ನಾಟಕ ಅಬಕಾರಿ (ಸ್ವದೇಶಿ & ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 3(11-ಸಿ) ಅನ್ನು ಅಧಿಸೂಚನೆ ಸಂಖ್ಯೆ: **FD/14/PES/2003(i),** |

| | | |
|---|---|---|
| | ಸಂಸ್ಥೆಗೆ ಹಸ್ತಾಂತರ ಮಾಡಿದ್ದು, ಮತ್ತೆ ಈಗ ಅಂತಹ ಸನ್ನದುಗಳನ್ನು ಹರಾಜು ಮಾಡಲು ಕಾನೂನಿನಲ್ಲಿ ಅವಕಾಶ ಇದೆಯೇ; | ದಿನಾಂಕ:30-06-2003ರಲ್ಲಿ ಸೇರ್ಪಡೆ ಮಾಡಲಾಗಿದ್ದು, ಸದರಿ ನಿಯಮ ಈ ಕೆಳಕಂಡಂತಿರುತ್ತದೆ.<br><br>**(11-C) Retail shop licence issued to Government Companies-** (1) **Notwithstanding anything contained in Rule 12,** a licence under this clause in Form CL(11-C) shall be granted by the Deputy Commissioner, only to such companies owned or controlled by the State Government and specified by the Government, for possession and sale of liquor in retail shops with a condition that such shops shall be exclusively maintained by them and shall not be transferred and sub-leased to others. Consumption of liquor within the licensed premised shall not be allowed under this category of licences.<br><br>ಸದರಿ ನಿಯಮಾನುಸಾರ ಸಿಎಲ್-11ಸಿ ಸನ್ನದನ್ನು ನೀಡುವಾಗ ಕರ್ನಾಟಕ ಅಬಕಾರಿ (ಸ್ವದೇಶಿ & ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 12 ಅನ್ನು ಪರಿಗಣಿಸಲು ಅಗತ್ಯತೆ ಇರುವುದಿಲ್ಲ.<br><br>ಇದಕ್ಕೆ ಪೂರಕವಾಗಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠದ W.P No.8259/2020, ಆದೇಶ ದಿನಾಂಕ:26-08-2020 ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ W.P No.147875/2020, ಆದೇಶ ದಿನಾಂಕ:15-06-2021 ರಲ್ಲಿ ಸಿಎಲ್-11ಸಿ ಸನ್ನದುಗಳ ಮಂಜೂರಾತಿಗೆ ಕರ್ನಾಟಕ ಅಬಕಾರಿ (ಸ್ವದೇಶಿ & ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 12 ಅನ್ನು ಪರಿಗಣಿಸುವ ಅಗತ್ಯತೆ ಇರುವುದಿಲ್ಲವೆಂದು ನ್ಯಾಯಾಲಯವು ಆದೇಶಿಸಿರುತ್ತದೆ.<br><br>ಎಂ.ಎಸ್.ಐ.ಎಲ್ ಸಂಸ್ಥೆಗೆ 2009ನೇ ಸಾಲಿನಲ್ಲಿ 463 ಸಿಎಲ್-11(ಸಿ) ಸನ್ನದುಗಳನ್ನು ಸ್ಥಾಪಿಸಲು ಅನುಮತಿ ನೀಡಿದ್ದು, ಇದರಲ್ಲಿ ಸ್ಥಗಿತಗೊಂಡಿರುವ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳು ಒಳಗೊಂಡಿರುವುದಿಲ್ಲವಾದ್ದರಿಂದ, ಸ್ಥಗಿತಗೊಂಡಿರುವ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳನ್ನು ಎಂ.ಎಸ್.ಐ.ಎಲ್ ಸಂಸ್ಥೆಗೆ ಹಸ್ತಾಂತರ ಮಾಡಲಾಗಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಉ) | ಇಂತಹ ಸ್ಥಗಿತಗೊಂಡ ಸನ್ನದುಗಳನ್ನು ಹರಾಜು ಮಾಡುವುದರಿಂದ ಆಗುವ ಸಾಧಕ-ಬಾಧಕಗಳು ಹಾಗೂ ಅನ್ಯ ರಾಜ್ಯಗಳ ಆರ್ಥಿಕ ಮತ್ತು ಇನ್ನಿತರ ವಲಯಗಳ ಮೇಲಾದ ಪ್ರಭಾವದ ಕುರಿತು ಅಧ್ಯಯನ ಮಾಡಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಸ್ಥಗಿತಗೊಂಡ ಸನ್ನದುಗಳ ಸಂಬಂಧ ಪರ್ಯಾಯ ವ್ಯವಸ್ಥೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಹರಾಜು ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಲ್ಲಿ ಪ್ರಶ್ನೆ ಸಂಖ್ಯೆ. 256ನ್ನು ಕೇಳಬಯಸುತ್ತೇನೆ. Sorry, ಮಾನ್ಯ ಅಬಕಾರಿ ಸಚಿವರಲ್ಲಿ ಕೇಳಬಯಸುತ್ತೇನೆ. ಮಾನ್ಯ ಗೃಹ ಸಚಿವರೇ, ನಿಮ್ಮ ಮೇಲೆ ಹೆಚ್ಚು ಪ್ರೀತಿ ಇದೆ. ಹಾಗಾಗಿ, ಬಾಯಲ್ಲಿ ಗೃಹ ಸಚಿವರೇ ಎಂದು ಬರುತ್ತಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ್ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಅಬಕಾರಿ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಎಂ.ಎಸ್.ಐ.ಎಲ್.ನಲ್ಲಿ 463 ಮಳಿಗೆಗಳನ್ನು ಸಾರ್ವಜನಿಕ ಹರಾಜಿನ ಮುಖಾಂತರ ಕೊಡಬೇಕೆಂದು ಅನೇಕ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ಆದರೆ ನಾವು ಆ ರೀತಿ ಹರಾಜು ಮಾಡುವ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೂ ಕೂಡ ಉತ್ತರದಲ್ಲಿ ಕೆಲವು ಕೋರ್ಟ್ ಆದೇಶಗಳನ್ನು ಕೂಡ ಕೋಟ್ ಮಾಡಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ 463 ಮಳಿಗೆಗಳನ್ನು ಎಂ.ಎಸ್.ಐ.ಎಲ್. ಮುಖಾಂತರವೇ ನೀವು ಕೊಡಬೇಕು. ಅದು ಬಿಟ್ಟು ಬೇರೆಯವರಿಗೆ ನೀವು ಹರಾಜಿನ ಮುಖಾಂತರ ಕೊಟ್ಟರೆ, ಅದರದ್ದು ಹರಾಜಿನಲ್ಲಿ ಹೆಚ್ಚಿಗೆ ಆಗಬಹುದು ಅಥವಾ ಕಡಿಮೆ ಕೂಡ ಆಗಬಹುದು. ಆ ಹರಾಜಿನಲ್ಲಿ ತೆಗೆದುಕೊಂಡಿರತಕ್ಕಂಥ ವ್ಯಕ್ತಿ ಆ ಎಂ.ಎಸ್.ಐ.ಎಲ್. ಮೂಲಕ ಮಾರಾಟ ಮಾಡಲು ಸರ್ಕಾರ ತೀರ್ಮಾನ ಮಾಡಿದೆ. ಎಂ.ಎಸ್.ಐ.ಎಲ್. ನಲ್ಲಿ M.R.P. (Maximum Retail Price) ಆಧಾರದ ಮೇಲೆ ಮದ್ಯವನ್ನು ಮಾರಾಟ ಮಾಡುವುದಕ್ಕೆ ಕಾನೂನು ಮಾಡಿದ್ದೀರಿ. ಹಾಗಾಗಿ, ಎಂ.ಎಸ್.ಐ.ಎಲ್. ಮುಖಾಂತರವೇ ಅವೆಲ್ಲಾ ಇರಬೇಕು. 463 ಮಳಿಗೆಗಳಿಂದ ಸರ್ಕಾರಕ್ಕೆ ರೆವೆನ್ಯೂ ಬರಬೇಕಾಗಿದೆ, ನಾನು ಅದನ್ನು ಒಪ್ಪುತ್ತೇನೆ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕರ ಮೇಲೆ ಹೊರೆ ಬೀಳುತ್ತದೆ. ಅದಕ್ಕಾಗಿ ಹರಾಜು ಮಾಡುವಂತಹ ಈ ಸಂಸ್ಕೃತಿಯನ್ನು ಮಾನ್ಯ ಸಚಿವರಾದ ತಾವು ಕೈಬಿಡಬೇಕೆಂದು ನಾನು ಮಾನ್ಯ ಸಭಾಪತಿಯವರ ಮುಖಾಂತರ ತಮಗೆ ಹೇಳಬಯಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ್ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಎಂ.ಎಸ್.ಐ.ಎಲ್. ಅಂಗಡಿಗಳನ್ನು ಹರಾಜು ಮುಖಾಂತರ ಕರೆದು ಕೊಡಬೇಕು ಎನ್ನತಕ್ಕಂಥ ಯೋಚನೆ ಸದ್ಯಕ್ಕೆ ಇಲ್ಲ. ಇದರ ಬಗ್ಗೆ ಚರ್ಚೆ ಆಗಿದೆ. ಆ ರೀತಿ ಏನಾದರೂ ಮಳಿಗೆಗಳನ್ನು ಹರಾಜು ಮುಖಾಂತರ ಮಾಡುವುದಾದರೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ. ಆಗ ತಾವು ತಮ್ಮ ವಿಚಾರಧಾರೆಗಳನ್ನು, ಹೇಳುತ್ತೀರೋ ಹೇಳಬಹುದು.

**(ಮುಂದು)**

(109)6.3.2025/11.40/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಬಿ. ತಿಮ್ಮಾಪುರ (ಮುಂದು):-**

ಒಂದು ವಿಚಾರವಿದೆ. ಎಂ.ಎಸ್.ಐ.ಎಲ್. ಅಂಗಡಿಯಿಂದ ಬಂದ ನಂತರ ಎಂ.ಆರ್.ಪಿ. ರೇಟ್‌ಗೆ ಸಿ.ಎಲ್-2 ನವರು ಪೈಪೋಟಿ ನಡೆಯುವುದರ ಮೂಲಕ ಎಂ.ಎಸ್.ಐ.ಎಲ್. ನವರು ಬಂದಾಗ ಸಿ.ಎಲ್-2ಗೆ ಅನುಕೂಲವಾಯಿತು. ಹರಾಜು ಮುಖಾಂತರ ಕೊಡುವುದಕ್ಕೆ ಎಲ್ಲಿಯೂ ಅದು ಪ್ರಾರಂಭವಾಗಿಲ್ಲ. ಪ್ರಾರಂಭವಾಗಿಲ್ಲದ್ದನ್ನು ಕೊಡಬಾರದೇಕೆ ಎಂಬ ಯೋಚನೆಯಲ್ಲಿದ್ದೇವೆ. ಹಾಗೇನಾದರೂ ತೀರ್ಮಾನ ತೆಗೆದುಕೊಂಡರೆ ತಮಗೆ ತಿಳಿಸುತ್ತೇವೆ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಹರಾಜು ಪದ್ಧತಿಯನ್ನು ಕಾನೂನಾತ್ಮಕವಾಗಿ ಮಾಡಬೇಕು. ಎಂ.ಎಸ್.ಐ.ಎಲ್. ಎನ್ನುವುದು ಒಂದು ಸರ್ಕಾರಿ ಸಂಸ್ಥೆ. ಆ ಸರ್ಕಾರಿ ಸಂಸ್ಥೆಯನ್ನು ತೆಗೆದುಕೊಂಡು ಹೋಗಿ ಹರಾಜು ಮಾಡುತ್ತೇನೆಂದರೆ, ಇದರ ಬಗ್ಗೆ ಕಾನೂನಾತ್ಮಕವಾಗಿ ತಾವೇ ಹೇಳಬೇಕು ಇದು ಮೊದಲನೆಯದು. ಎರಡನೆಯದಾಗಿ, ನಿಮಗೆ ರೆವಿನ್ಯೂ ಬೇಕಾಗಿದೆ ಅದನ್ನು ನಾನು ಒಪ್ಪುತ್ತೇನೆ. ಇನ್ನೂ ಸಾರಾಯಿಯ ಬಾಕಿ 500 ಕೋಟಿ ರೂಪಾಯಿಗಳಿವೆ. ಅಲ್ಲಿ ವಸೂಲಿ ಮಾಡಿ ನಿಮಗೆ ರೆವಿನ್ಯೂ ಬರಲು ಸುಲಭವಾಗುತ್ತದೆ. ಸಾರ್ವಜನಿಕರ ಮೇಲೆ ಹೊರೆಯನ್ನು ಹಾಕಿ ಹರಾಜು ಮಾಡುವುದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ತಾವು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

**ಶ್ರೀ ಆರ್.ಬಿ. ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಎಂ.ಎಸ್.ಐ.ಎಲ್. ಅಂಗಡಿಗಳು ಅವರು ಪ್ರಾರಂಭ ಮಾಡುತ್ತಿಲ್ಲ. ಸರ್ಕಾರ ಯಾವ ರೀತಿ ಕಾನೂನು ಮಾಡಬೇಕು, ಯಾವ ರೀತಿ ಹರಾಜು ಮಾಡಬೇಕೋ ಅದನ್ನು ಮಾಡುತ್ತದೆ. ಅದಕ್ಕೆ ಕಾನೂನಿನ ತೊಡಕು ಬರುತ್ತದೆ ಎಂಬುದೇನೂ ಇಲ್ಲ. ಆದರೆ ನಮ್ಮಲ್ಲಿನ್ನೂ ಆ ಯೋಚನೆ ಇಲ್ಲ. ಆ ಯೋಚನೆ ಬಂದಾಗ ತಿಳಿಸುತ್ತೇವೆ.

**ಸಭಾಪತಿಯವರು:-** ಮಾನ್ಯ ಮಂಜುನಾಥ್ ಭಂಡಾರಿಯವರೇ, ನಿಮ್ಮ ಹೆಸರನ್ನು ಕರೆದಿದ್ದೆ ಆಗ ನೀವು ಗೈರಾಗಿದ್ದಿರಿ. ನಿಮ್ಮ ಪ್ರಶ್ನೆ ಸಂಖ್ಯೆ 239 ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ. ಈಗ ಶ್ರೀ ಡಿ.ಟಿ. ಶ್ರೀನಿವಾಸ್‌ರವರ ಪ್ರಶ್ನೆ. ಶ್ರೀನಿವಾಸ್‌ರವರೇ, ನಿಮ್ಮ ಹೆಸರು ಕರೆದಾಗ ಹಾಜರಾಗುವುದನ್ನು ಕಲಿಯಿರಿ. ನಾಲ್ಕು ಜನ ಸದಸ್ಯರೂ ಗೈರಾಗಿದ್ದರೆ ಹೇಗೆ ಮಾಡಬೇಕು?

**ಶ್ರೀ ಡಿ.ಟಿ. ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಮೊದಲ ಬಾರಿಗೆ ತಡವಾಯಿತು, ಮೆಟ್ರೋದಲ್ಲಿ ಬಂದೆ. ಅದಕ್ಕೆ ಕ್ಷಮೆ ಕೋರುತ್ತೇನೆ.

**ಸಭಾಪತಿಯವರು:-** ನಾಳೆಯಿಂದ ತಡವಾಗಿ ಬಂದ ಯಾರ ಪ್ರಶ್ನೆಯನ್ನು ರಿಪೀಟ್ ಮಾಡುವುದಿಲ್ಲ. ಈಗ ಪ್ರಶ್ನೆ ಕೇಳಿ.

**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 280 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 06-03-2025 |
| ಉತ್ತರಿಸಬೇಕಾದವರು | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಪ್ರವೇಶ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ<br>• ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೂ ಅವರು ಕೋರಿರುವ ವಿದ್ಯಾರ್ಥಿನಿಲಯಗಳಲ್ಲಿ ಅಥವಾ ಸಮೀಪದಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಕಲ್ಪಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 124 ಪಕವಿ 2019, ದಿನಾಂಕ:17.07.2019ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಅದರಂತೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.<br>• ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಟ್ಟು 270 ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿದ್ದು, 2024-25ನೇ ಸಾಲಿನಲ್ಲಿ 29867 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದ್ದು, ಒಟ್ಟಾರೆ 23,938 ಮಂಜೂರಾತಿ ಸಂಖ್ಯೆಗೆ ಎದುರಾಗಿ, 5,929 ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಪ್ರವೇಶ ನೀಡಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ 2024-25ನೇ ಸಾಲಿನಲ್ಲಿ ಎಷ್ಟು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ದೊರೆತಿರುವುದಿಲ್ಲ; (ಸಂಪೂರ್ಣ ಮಾಹಿತಿ ಒದಗಿಸುವುದು) | |
| ಇ) | ವಿದ್ಯಾರ್ಥಿ ನಿಲಯದ ಪ್ರವೇಶ ಸೌಲಭ್ಯ ದೊರೆಯದೆ ಇರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |
| ಈ) | ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚಕ್ಕಾಗಿ ಪ್ರತಿ ತಿಂಗಳು ನೀಡುತ್ತಿರುವ ದರವು ಸಾಕಾಗುತ್ತದೆಯೇ; ಇಲ್ಲದಿದ್ದಲ್ಲಿ ದರವನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | 2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ ಭೋಜನಾ ವೆಚ್ಚದ ದರವನ್ನು ಮಾಸಿಕ ಪ್ರತಿ ವಿದ್ಯಾರ್ಥಿಗೆ ರೂ.100/-ರಂತೆ ಹೆಚ್ಚಿಸಿ, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ರೂ.1,750/- ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ರೂ.1,850/- ರ ದರಗಳಲ್ಲಿ ಉತ್ತಮ ಗುಣಮಟ್ಟದ ಆಹಾರವನ್ನು ನೀಡಲಾಗುತ್ತಿದೆ. |

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಅದು ವಾಸ್ತವಕ್ಕೆ ದೂರವಿದೆ ಎಂದು ಹೇಳಬಚ್ಛೆ ಪಡುತ್ತೇನೆ. ಏಕೆಂದರೆ, ಮಹಾನಗರ ಪಾಲಿಕೆಗಳು ಬೆಂಗಳೂರು ನಗರ ಇರಬಹುದು, ತುಮಕೂರು, ಧಾರವಾಡ, ಬೆಳಗಾವಿ, ಮೈಸೂರು ಮತ್ತು ದಾವಣಗೆರೆ ಇಂತಹ ಕಡೆ ವಿದ್ಯಾರ್ಥಿನಿಲಯಗಳಿಗೆ ಅರ್ಜಿಹಾಕಿಕೊಂಡವರು ಅದಕ್ಕೆ ಪೂರಕವಾಗಿ ಸಂಖ್ಯೆಗನುಗುಣವಾಗಿ ಅವರಿಗೆ ಸೀಟ್ ಸಿಗುತ್ತಿಲ್ಲ. ನಿರ್ದಿಷ್ಟವಾಗಿ ಪದವಿಪೂರ್ವ ಮತ್ತು ಡಿಗ್ರಿ ಕಾಲೇಜುಗಳ ವಿದ್ಯಾರ್ಥಿಗಳಿಗೆ; ಸಂಖ್ಯೆ 60 ಇದ್ದರೆ ಎಷ್ಟು ಅರ್ಜಿಗಳಿವೆಯೋ ಅಷ್ಟನ್ನೂ ಸಂಪೂರ್ಣವಾಗಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಪದವಿಪೂರ್ವ ಕಾಲೇಜುಗಳಲ್ಲಿ 5,929 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅವಕಾಶ

ಮಾಡಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಬೆಂಗಳೂರಿಗೆ ನಾವೇ ಪತ್ರ ಕಳುಹಿಸುತ್ತೇವೆ. ಒಬ್ಬ ವಿದ್ಯಾರ್ಥಿಯು ಕಾಲೇಜಿಗೆ ದಾಖಲಾಗಿ ಹಾಸ್ಟೆಲ್‌ಗೆ ಆನ್‌ಲೈನ್ ಅರ್ಜಿ ಹಾಕಿಕೊಂಡಿದ್ದರೂ ಸಹ ಪತ್ರ ಹಾಕಿದರೆ ಸಿಗುವಂತಹ ಉತ್ತರವೇನೆಂದರೆ, ಇನ್ನು ಮೂರು ತಿಂಗಳಿಗೆ ಕೊಠಡಿಗಳು ಖಾಲಿಯಾಗುತ್ತದೆ, ಅಲ್ಲಿಯವರೆಗೂ ನೀವು ಬೇರೆ ಕಡೆ ಇರಿ ಎನ್ನುವ ಸಂದೇಶ ಕೊಡುತ್ತಾರೆ. ಗ್ರಾಮಾಂತರ ಭಾಗದಿಂದ ಬಂದಂತಹ ಒಬ್ಬ ಬಡ ಹುಡುಗ ಮೂರು ತಿಂಗಳು ಎಲ್ಲಿರಬೇಕು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ನಾವು ಇದೇ ಇಲಾಖೆಯಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ; ಹಿಂದೆ ಶ್ರೀ ಆಂಜನೇಯರವರು ಸಚಿವರಾಗಿದ್ದಾಗ ಎಷ್ಟು ಅರ್ಜಿಗಳು ಬರುತ್ತವೋ ಅಷ್ಟು ಅರ್ಜಿಗಳಿಗೂ ಅವಕಾಶ ಮಾಡಿಕೊಡಬೇಕೆಂದು ಒಂದು ಆದೇಶವನ್ನು ಹೊರಡಿಸಿದರು. ಕೊಠಡಿಗಳು ಮೂರು ತಿಂಗಳಲ್ಲಿ ಖಾಲಿಯಾಗುವ ಹಾಗಿದ್ದರೆ ಮೂರು ತಿಂಗಳವರೆಗೂ ಅವರಿಗೆ ಇರಲು ಅವಕಾಶ ಮಾಡಿಕೊಟ್ಟು ಖಾಲಿಯಾದಾಗ ತುಂಬಿಕೊಳ್ಳುವ ಕೆಲಸ ಮಾಡಬೇಕು. ಇದೊಂದು ನನ್ನ ಮನವಿ. ಏಕೆಂದರೆ, ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಮೂರು ತಿಂಗಳು ಎಲ್ಲಿರಬೇಕು ಎನ್ನುವುದೇ ಇಲ್ಲಿರುವ ಪ್ರಶ್ನೆಯಾಗಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ಭೋಜನಕ್ಕೆ ನಿಗದಿಪಡಿಸಿರುವ ವೆಚ್ಚ ರೂ. 1,750/- ಇದೆ. ಅದಕ್ಕೆ ರೂ. 100/- ಗೆ ಹೆಚ್ಚಿಸಿ ರೂ. 1,850/- ಮಾಡಿದ್ದಾರೆ. ಜೈಲಿನಲ್ಲಿರುವ ಖೈದಿಗಳಿಗಿಂತ ಕಡಿಮೆ ವೆಚ್ಚ ಇದು. ಒಂದು ದಿವಸಕ್ಕೆ ರೂ.100/- ಆದರೆ ಹೊರಗಡೆ ಭೋಜನಕ್ಕೆ ರೂ. 3,000/- ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಇದನ್ನು ಒಂದಷ್ಟು ಹೆಚ್ಚಳ ಮಾಡಬೇಕಾಗಿದೆ. ಹಿಂದೆ ಹೊರಗಡೆ ಉಳಿಯುವುದಕ್ಕೆ Extra Boarding and Lodging Charges ಇತ್ತು. ಇವತ್ತು ಆ ವ್ಯವಸ್ಥೆಯೂ ಸಹ ಇಲ್ಲ. ಆ ನಿಟ್ಟಿನಲ್ಲಿ ಖಂಡಿತವಾಗಿಯೂ ಸರ್ಕಾರ ಒಂದು ಆದೇಶವನ್ನು ಮಾಡಬೇಕಾಗುತ್ತದೆ. ಕೊಠಡಿಗಳು ಖಾಲಿಯಾಗುವವರೆಗೂ ವಿದ್ಯಾರ್ಥಿಗಳು ಹೊರಗಡೆ ಉಳಿಯುವ ಬದಲು ಯಾವ್ಯಾವ ಹಾಸ್ಟೆಲ್‌ಗಳಿಗೆ ಅರ್ಜಿ ಹಾಕಿಕೊಂಡಿದ್ದಾರೋ ಅದೇ ಹಾಸ್ಟೆಲ್‌ಗಳಲ್ಲಿ ಉಳಿಯುವ ವ್ಯವಸ್ಥೆ ಮಾಡಿಕೊಟ್ಟು ತದನಂತರ ಕೊಠಡಿಗಳು ಖಾಲಿಯಾದಾಗ ತುಂಬಿಕೊಳ್ಳುವ ವ್ಯವಸ್ಥೆ ಮಾಡಿದರೆ ಗ್ರಾಮಾಂತರ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಸಹ ಇಲ್ಲಿಯೇ ಇದ್ದಾರೆ. ಬಹುಶಃ ಅವರು ಕೇಳಿಸಿಕೊಂಡಿದ್ದಾರೆಂದು ಕಾಣುತ್ತದೆ. ದಯವಿಟ್ಟು ಮಕ್ಕಳ ಭೋಜನಾ ವೆಚ್ಚವನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದೇವೆ. ಅದರಲ್ಲಿ ದಿನಾಂಕ 17.7.2019ರಲ್ಲಿ ಏನು ಸುತ್ತೋಲೆಯಾಗಿದೆ ಅದರ ಪ್ರಕಾರ ಆನ್‌ಲೈನ್‌ನಲ್ಲಿ ಪ್ರವೇಶಾವಕಾಶ ಆಗುತ್ತಿದೆ. 270 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ 2024-25ನೇ ಸಾಲಿನಲ್ಲಿ 29,867 ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದೆ. ಹಾಗೂ 5,929 ವಿದ್ಯಾರ್ಥಿಗಳಿಗೆ ಮಿತಿಗಿಂತ ಹೆಚ್ಚುವರಿಯಾಗಿ ಆನ್‌ಲೈನ್‌ನಲ್ಲಿ ಅರ್ಜಿ ಹಾಕಿರುವ

ವಿದ್ಯಾರ್ಥಿಗಳಿಗೆ ಅವಕಾಶ ಕೊಡಲಾಗಿದೆ. ಮಾನ್ಯ ಸದಸ್ಯರು ಹೇಳಿದ ವಿಚಾರದಲ್ಲಿ ನಿರ್ದಿಷ್ಟವಾಗಿ ಯಾವುದಾದರೂ ಪ್ರಕರಣವಿದ್ದರೆ ಪರಿಶೀಲಿಸುತ್ತೇವೆ.

**ಶ್ರೀ ಡಿ.ಟಿ. ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ನಿರ್ದಿಷ್ಟ ಪ್ರಕರಣವೆಂದರೆ, ಒಂದೊಂದು ಕೋರ್ಸ್‌ನ academic year ಪ್ರಾರಂಭವಾಗುವುದು ನರ್ಸಿಂಗ್‌ಗೆ ಬೇರೆ ಇರುತ್ತದೆ, ಪಿ.ಜಿ.ಗೆ ಬೇರೆ ಇರುತ್ತದೆ. ಆಗ ಇರುವಂತಹ 60 ಸೀಟ್‌ಗಳನ್ನು ಯು.ಜಿ. ಯವರು ಅರ್ಜಿ ಹಾಕಿಕೊಂಡು ತುಂಬಿರುತ್ತಾರೆ. ಪಿ.ಜಿ. ಯವರದ್ದು ಪಿ.ಜಿ.ಸಿ.ಇ.ಟಿ. ಆಗಿ ಅವರು ಬರುವಷ್ಟರಲ್ಲಿ ಅವರು ಅರ್ಜಿ ಹಾಕಿಕೊಂಡಾಗ ಇಲ್ಲಿರುವ ಅಂತಿಮ ವರ್ಷದ ವಿದ್ಯಾರ್ಥಿಗಳು ಖಾಲಿಯಾಗುವವರೆಗೂ ಕಾಯಬೇಕೆಂದು ಹೇಳುತ್ತಾರೆ. ಎಲ್ಲಿ ಕಾಯಬೇಕೆನ್ನುವ ವ್ಯವಸ್ಥೆ ಬಗ್ಗೆ ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅಂಕಿ-ಸಂಖ್ಯೆಗಳು ಸರ್ಕಾರದ ಹತ್ತಿರ ಇದೆ. ಇಷ್ಟು ಅರ್ಜಿಗಳಲ್ಲಿ ಹೆಚ್ಚುವರಿಯಾಗಿ ಬಂದ ಆನ್‌ಲೈನ್ ಅರ್ಜಿಗಳನ್ನು entertain ಮಾಡಿದ್ದೇವೆ. ಆನ್‌ಲೈನ್ ಅರ್ಜಿಗಳನ್ನು entertain ಮಾಡಿಲ್ಲದ ಬಗ್ಗೆ ಮಾನ್ಯ ಸದಸ್ಯರ ಬಳಿ ಏನಾದರೂ ಮಾಹಿತಿ ಇದ್ದರೆ ತಕ್ಷಣವೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಗೈಡ್‌ಲೈನ್ಸ್ ಪ್ರಕಾರ ಏನು ರೂಲ್ಸ್ ಇದೆ ಅದರ ಪ್ರಕಾರವೇ admissions ಮಾಡುತ್ತಿದ್ದೇವೆ. ಮಕ್ಕಳ ಭೋಜನಾ ವೆಚ್ಚದ ಬಗ್ಗೆ ಕೇಳಿದ್ದಾರೆ, ಈಗಾಗಲೇ ರೂ. 100/- ಹೆಚ್ಚಳ ಮಾಡಿ ರೂ. 1,750/- ಇದ್ದುದನ್ನು ರೂ. 1,850/- ಮಾಡಿದ್ದೇವೆ. ಅದನ್ನು ಇನ್ನೂ ಹೆಚ್ಚಳ ಮಾಡಬೇಕೆಂದು ಕೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸರ್ಕಾರ ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಡಿ.ಟಿ. ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, academic year commence ಆಗುವುದು ಒಂದೊಂದು ಕೋರ್ಸ್‌ಗೆ ಒಂದೊಂದು ಟೈಮಿಂಗ್ ಇದೆ. ಮೊದಲು ಪ್ರಾರಂಭವಾಗುವುದು ಯು.ಜಿ. ಯು.ಜಿ.ಗೆ ಬಂದಂತಹ ಮಕ್ಕಳು ಹಾಸ್ಟೆಲ್‌ಗೆ ಅರ್ಜಿ ಹಾಕುತ್ತಾರೆ. ಅದು ಆನ್‌ಲೈನ್‌ನಲ್ಲಿ ಸೀಟುಗಳು ಹಂಚಿಕೆಯಾಗುತ್ತವೆ. ತದನಂತರ ಪಿ.ಜಿ.ಸಿ.ಇ.ಟಿ. ನಡೆಯುತ್ತದೆ. ನರ್ಸಿಂಗ್‌ಗೆ ಪ್ರತ್ಯೇಕವಾಗಿದೆ, ಪಿ.ಜಿ.ಸಿ.ಇ.ಟಿ.ಗೆ ಪ್ರತ್ಯೇಕವಿದೆ, ಕಾನೂನು ಪದವಿಗೆ, ಬಿ.ಎಡ್. ಕೋರ್ಸ್‌ಗೆ ಪ್ರತ್ಯೇಕವಿದೆ. ಬೇರೆ ಬೇರೆ ಸಂದರ್ಭಗಳಲ್ಲಿ academic year ಪ್ರಾರಂಭವಾಗುವುದರಿಂದ ಅವರು ಆನ್‌ಲೈನ್‌ನಲ್ಲಿ ಅರ್ಜಿ ಹಾಕಿಕೊಳ್ಳುವಷ್ಟರಲ್ಲಿ waiting list ನಲ್ಲಿ ತೋರಿಸುತ್ತಿರುತ್ತದೆ. Waiting list ನಲ್ಲಿರುವುದು ಯಾವುದೆಂದರೆ, ಈಗಾಗಲೇ ಹಾಸ್ಟೆಲ್‌ನಲ್ಲಿರುವಂತಹ ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿ ಯಾವತ್ತು ಕೊಠಡಿ ಖಾಲಿ ಮಾಡುತ್ತಾನೆ ಅಲ್ಲಿಯವರೆಗೂ ಕಾಯಬೇಕು. ಅಂದರೆ ಹಾಸ್ಟೆಲ್‌ಗೆ ಅರ್ಜಿ ಹಾಕಿರುವ ವಿದ್ಯಾರ್ಥಿಗಳು ಹೊರಗಡೆ ಇರಬೇಕು. ಅಂದರೆ ಅವರು ಯಾವುದಾದರೂ ಪಿ.ಜಿ.ಯಲ್ಲಿರಬೇಕು, ಯಾರದ್ದಾದರೂ ಮನೆಯಲ್ಲಿರಬೇಕು. ಈ ರೀತಿ ಇರುತ್ತದೆ. ಅದಕ್ಕೆಲ್ಲಾ ಗ್ರಾಮಂತರ ಭಾಗದಿಂದ ಬರುವ ಮಕ್ಕಳಿಗೆ ತುಂಬಾ ಅವ್ಯವಸ್ಥೆಯಾಗುತ್ತದೆ. ಅದಕ್ಕೆ ನಾನು ಹೇಳುವುದೇನೆಂದರೆ, ಹಾಸ್ಟೆಲ್‌ಗಳಲ್ಲಿ 60 strength ಇದ್ದರೆ 10

ಸಂಖ್ಯೆಯನ್ನು ಹೆಚ್ಚುವರಿಯಾಗಿ ಮಾಡಿಕೊಂಡು ಅಲ್ಲಿಯೇ accommodation ಕೊಟ್ಟು ಕೊಠಡಿ ಖಾಲಿಯಾದಾಗ ಅವರಿಗೆ regularize ಮಾಡಿಕೊಡುವ ವ್ಯವಸ್ಥೆ ಮಾಡಿದರೆ ಸರಿಯಾಗುತ್ತದೆ ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತಹ ವಿಷಯ ನಮ್ಮ ಗಮನಕ್ಕೆ ಬಂದಿದೆ. ಮುಂಬರುವ ದಿನಗಳಲ್ಲಿ ಸಾಧ್ಯಾನುಸಾಧ್ಯತೆಗಳನ್ನು ನೋಡಿ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

**ಸಭಾಪತಿಯವರು:-** ಈಗ ಮಾನ್ಯ ಹೆಚ್.ಎಸ್. ಗೋಪಿನಾಥ್‌ರವರ ಪ್ರಶ್ನೆ, ಅವರು ಗೈರಾಗಿದ್ದಾರೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಶ್ರೀ ಸುನೀಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೇ, ಒಂದು ಸೆಕೆಂಡ್ . . .

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಇದು ಮುಗಿಯಲಿ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಇನ್ನೂ ಮುಗಿದಿಲ್ಲ.

**ಶ್ರೀ ಸುನೀಲ್ ವಲ್ಯಾಪುರೆ:-** ಕಲಬುರಗಿ ಜಿಲ್ಲೆಯಲ್ಲಿ ರೈತರು . . .

**ಸಭಾಪತಿಯವರು:-** ನಿಮಗೆ ತಿಳುವಳಿಕೆ ಇಲ್ಲವೇ? ಅಜೆಂಡಾ ಇನ್ನೂ ನಡೆಯುತ್ತಿದೆ ಕುಳಿತುಕೊಳ್ಳಿ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 6 ಮಾರ್ಚ್, 2025ರ ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 110 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಿದೆ)**

**ಸಭಾಪತಿಯವರು:-** ಮಂಡಿಸಲಾಯಿತು. ಈಗ ಶೂನ್ಯವೇಳೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆ ಕೊಟ್ಟಿದ್ದೇನೆ.

**ಸಭಾಪತಿಯವರು:-** ಶೂನ್ಯವೇಳೆ ಮುಗಿಯಲಿ, ನಂತರ ತೆಗೆದುಕೊಳ್ಳುತ್ತೇನೆ.

(ಮುಂದು)

**(110) 06.03.2025 (11.50) ಹೆಚ್‌ವಿ.ಆರ್‌ಎನ್** **(ಸಭಾಪತಿಯವರ ಉಪಸ್ಥಿತಿ)**

**2) ನಿಯಮ 58ಎ ಮೇರೆಗೆ ಶೂನ್ಯವೇಳೆ ಸೂಚನೆಗಳು**

ಅ) **ವಿಷಯ:- ಕೊಡಗು ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಸದೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಅನುದಾನ ಒದಗಿಸುವ ಕುರಿತು.**

---

**ಶ್ರೀ ಎಂ.ಪಿ.ಸುಜಾ ಕುಶಾಲಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ "ಕೊಡಗು ವಿವಿಗೆ ವಿಲೀನ ಆತಂಕ" ಎನ್ನುವ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಸುದ್ದಿಯಲ್ಲಿ "ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯ ಭೀತಿ" ಯ ಕುರಿತು ವರದಿಯಾಗಿತ್ತು.

ಈ ಹಿಂದಿನ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ರಚನೆಗೊಂಡ ವಿಶ್ವವಿದ್ಯಾಲಯಗಳ ಪೈಕಿ ಕೊಡಗು ಜಿಲ್ಲೆಯಲ್ಲಿಯೂ ಕೂಡ ವಿಶ್ವವಿದ್ಯಾಲಯ ರಚನೆಗೊಂಡು ಕಾರ್ಯಾರಂಭಗೊಂಡಿತ್ತು. ಆದರೆ, ಕಳೆದ ಎರಡು ವರ್ಷಗಳಂದ ಅಭಿವೃದ್ಧಿಗೆ ಇದುವರೆವಿಗೂ ಯಾವುದೇ ಅನುದಾನ ಈ ವಿಶ್ವವಿದ್ಯಾಲಯಕ್ಕೆ ನೀಡದ ಸರ್ಕಾರ ಇದರ ಅವನತಿಗೆ ಕಾರಣವಾಗುತ್ತಿದೆ. ಹಲವು ವರ್ಷಗಳ ಬೇಡಿಕೆ ಬಳಿಕ ವಿಲೀನಗೊಳಸಬಾರದೆಂಬ ಆಗ್ರಹ ವಿದ್ಯಾರ್ಥಿ ಸಮೂಹದಿಂದ ಕೇಳಬರುತ್ತಿದೆ. ಜಿಲ್ಲಾ ಕೇಂದ್ರ ಮಡಿಕೇರಿಯ ಎಡಕ್ಕೆ ಮಂಗಳೂರು ವಿವಿ ಹಾಗೂ ಬಲಕ್ಕೆ ಮೈಸೂರು ವಿವಿಗಳನ್ನು ಹೊಂದಿದ್ದರೂ ಕೂಡ ಕೊಡಗು ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಶೇಕಡಾ .16 ಮಾತ್ರವಾಗಿತ್ತು. ಅಂದರೆ ಪದವಿ ಹಾಗೂ ಉನ್ನತ ಶಿಕ್ಷಣ ಪಡೆಯುವ ಹಂಬಲವುಳ್ಳ ಹೆಣ್ಣುಮಕ್ಕಳನ್ನು ಸುರಕ್ಷತೆಯ ದೃಷ್ಟಿಯಿಂದ ದೂರದ ನಗರಗಳಿಗೆ ಕಳಸಲು ಪೋಷಕರು ಹಿಂದೇಟು ಹಾಕುತ್ತಿರುವುದು ಹಾಗೆಯೇ ಇತರ ಬಡ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶೈಕ್ಷಣಿಕ ಸಮಸ್ಯೆಗಳನ್ನು ಮನಗಂಡು, ಜಿಲ್ಲೆಗೊಂದು ವಿವಿ ಪರಿಕಲ್ಪನೆಯಂತೆ ಕೊಡಗು ಜಿಲ್ಲೆಯಲ್ಲಿ ಸ್ಥಾಪಿಸಲಾದ ವಿವಿಯನ್ನು ವಿಲೀನಗೊಳಸದೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು, ಸುಗಮವಾಗಿ ನಡೆಸಲು ಸೂಕ್ತ ಅನುದಾನವನ್ನು ಒದಗಿಸುವಂತೆ ಮತ್ತು ಸದರಿ ವಿವಿಯನ್ನು ಮುಚ್ಚುವ ನಿರ್ಧಾರವನ್ನು ಕೈಬಿಡುವಂತೆ ಆಗ್ರಹಿಸಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ಆ) **ವಿಷಯ: ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿನ ನಿವೃತ್ತ ನೌಕರರಿಗೆ ಪಿಂಚಣಿ ನೀಡದಿರುವ ಬಗ್ಗೆ.**

----

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇದರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲ ಹಾಗಾಗಿ ಮುಂದಿನ ತಿಂಗಳು ಅಂದರೇ ಮಾರ್ಚ್-1ರ ತಿಂಗಳಲ್ಲಿ ನಿವೃತ್ತಿ ನೌಕರರಿಗೆ ಪಿಂಚಣಿ ನೀಡಲು ಸಾಧ್ಯವಾಗುತ್ತಿಲ್ಲವೆಂದು ಪ್ರಭಾರಿ ಕುಲಪತಿಗಳೂ ಹಾಗೂ ಹಣಕಾಸು ಅಧಿಕಾರಿಗಳ ಹೇಳಿಕೆ ನೀಡಿದ್ದ ವಿಷಯವು ವಿಜಯವಾಣಿ, ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸುಮಾರು 1,800 ಜನ ನಿವೃತ್ತ ನೌಕರರು ಇದ್ದು, ಪ್ರತಿ ತಿಂಗಳು ರೂ.8 ರಿಂದ ರೂ.9 ಕೋಟಿಯಂತೆ ವಾರ್ಷಿಕ ರೂ.126 ಕೋಟಿ ಪಿಂಚಣಿಗಾಗಿ ಬೇಕಾಗಿದೆ. ಆದರೆ, ಸರ್ಕಾರ ಪ್ರಸ್ತುತ ವರ್ಷ ರೂ. 70 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಉಳಿದ ಹಣವನ್ನು ಕ.ವಿ.ವಿ., ಆಂತರಿಕ ಸಂಪನ್ಮೂಲಗಳಿಂದ ಕ್ರೋಢೀಕರಿಸಿ ಇಲ್ಲಿಯವರೆಗೆ ಪಿಂಚಣಿಯನ್ನು ನೀಡುತ್ತಾ ಬಂದಿದೆ. ಆದರೆ, ವಿಶ್ವವಿದ್ಯಾಲಯದಲ್ಲಿ ಹಣದ ಕೊರತೆ ಇರುವುದರಿಂದ ಮುಂದಿನ ತಿಂಗಳು ಮಾರ್ಚ್-1ಕ್ಕೆ ನೀಡಬೇಕಾದ ಪಿಂಚಣಿಯನ್ನು ನೀಡಲು ಸಾಧ್ಯವಿಲ್ಲವೆಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿರುವವರು. ಈ ಕುರಿತು ನಿವೃತ್ತ ನೌಕರರ ಸಂಘ ಪ್ರತಿಭಟನೆ ಮಾಡಿ ಪಿಂಚಣಿ ವೇತನ ಬಿಡುಗಡೆ ಮಾಡಲು ಕುಲಪತಿಗಳಿಗೆ ಮನವಿ ಸಲ್ಲಿಸಿ ಒತ್ತಾಯ ಮಾಡಿದ್ದುಂಟು. ಆದ್ದರಿಂದ ಸರ್ಕಾರ ಕೂಡಲೇ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಅನುದಾನವನ್ನು ಬಿಡುಗಡೆ ಮಾಡಲು ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ಇ) **ವಿಷಯ: "ಅಕ್ಷರ ದಾಸೋಹ" ನೌಕರರಿಗೆ ಗೌರವಧನ ಹೆಚ್ಚಿಸುವುದರೊಂದಿಗೆ ಬೇಡಿಕೆಗಳನ್ನು ಈಡೇರಿಸುವ ಕುರಿತು.**

----

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ವಿವಿಧ ಶಾಲೆಗಳಲ್ಲಿ ಸುಮಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿರುವ "ಅಕ್ಷರ ದಾಸೋಹ" ನೌಕರರಿಗೆ ಗೌರವಧನ ಹೆಚ್ಚಳ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬಿಸಿಯೂಟ ನೌಕರರು ಬೆಂಗಳೂರಿನಲ್ಲಿ ಪ್ರತಿಭಟನೆ ಮಾಡುತ್ತಿರುವುದು ಸರ್ಕಾರವು ಗಮನಿಸಬೇಕಾದ ಅಂಶವಾಗಿದೆ.

ಸದರಿ ನೌಕರರಿಗೆ ಗೌರವಧನ ಹೆಚ್ಚಳ ಮಾಡದೇ ಇರುವುದು ನೋವಿನ ಸಂಗತಿಯಾಗಿದೆ ಹಾಗೂ ಈಗಾಗಲೇ ಕೇರಳ, ತಮಿಳುನಾಡು ಹಾಗೂ ಹರಿಯಾಣ ರಾಜ್ಯಗಳಲ್ಲಿ ಇರುವಂತೆಯೇ ಕರ್ನಾಟಕದಲ್ಲಿಯೂ ಸಹ ವೇತನ ಪಾವತಿ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇನೆ.

ನಿವೃತ್ತರಾದವರಿಗೆ ಇಡಿಗಂಟು, ಹಲವು ಕಡೆ ಅಡುಗೆ ಕೋಣೆಗಳಿಗೆ ಮೂಲಭೂತ ಸೌಕರ್ಯವಿಲ್ಲದೇ ಇರುವುದನ್ನು ಸರಿಪಡಿಸಿ ಸುಸಜ್ಜಿತ ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಬೇಕು ಹಾಗೂ ಸದರಿ ಅಕ್ಷರ ದಾಸೋಹ ಯೋಜನೆಯನ್ನು ಸಂಪೂರ್ಣವಾಗಿ ಶಿಕ್ಷಣ ಇಲಾಖೆಯಡಿಯಲ್ಲಿಯೇ ನಡೆಸುವಂತೆ ಕ್ರಮವಹಿಸಬೇಕು. ಕೆಲಸದ ಸಮಯದಲ್ಲಿ ಮರಣ ಹೊಂದಿದರೆ ಸರ್ಕಾರವು ಸೂಕ್ತ ಪರಿಹಾರ ನೀಡಬೇಕು, ರಜಾ ಸಂದರ್ಭದಲ್ಲೂ ಸಹ ವೇತನ ಪಾವತಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ, ಸದರಿ ನೌಕರರು ದೂರದ ಊರುಗಳಿಂದ ತಮ್ಮ ಚಿಕ್ಕಚಿಕ್ಕ ಮಕ್ಕಳನ್ನು ಹೊತ್ತು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆದ್ದರಿಂದ ಸದರಿ ನೌಕರರಿಗೆ ಸರ್ಕಾರವು ಸೂಕ್ತ ಭದ್ರತೆ ಹಾಗೂ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಪ್ರತಾಪ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯ "ಅಕ್ಷರ ದಾಸೋಹ" ನೌಕರರು ತಮ್ಮ ಗೌರವಧನ ಹೆಚ್ಚಳವೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸುತ್ತಿದ್ದಾರೆ. ಗೌರವಧನವನ್ನು 26,000 ರೂಪಾಯಿಗಳಿಗೆ ಹೆಚ್ಚಿಸಿ ಅನುಷ್ಠಾನಕ್ಕೆ ತರಬೇಕು, ಅದುವರೆವಿಗೂ ಕೇರಳ, ತಮಿಳುನಾಡು ಹಾಗೂ ಹರಿಯಾಣ ರಾಜ್ಯಗಳಲ್ಲಿ ಇರುವಂತೆಯೇ ಕರ್ನಾಟಕದಲ್ಲೂ ವೇತನ ನೀಡಬೇಕೆಂದು ಆಗ್ರಹಿಸಿದ್ದಾರೆ. ಜೊತೆಗೆ ನಿವೃತ್ತರಾದವರಿಗೆ ಇಡಿಗಂಟು ನೀಡಬೇಕು, ಕೆಲಸದ ಸ್ಥಳದಲ್ಲಿ ಮರಣ ಹೊಂದಿದರೆ 25,00,000 ರೂಪಾಯಿಗಳಷ್ಟು ಪರಿಹಾರ ನೀಡಬೇಕು ಹಾಗೂ ಬೇಸಿಗೆ ರಜೆ, ದಸರಾ ರಜೆ ಹಾಗೂ ಚುನಾವಣೆ ಸಂದರ್ಭದ ವೇತನವನ್ನು ಕಡ್ಡಾಯವಾಗಿ

ವಿತರಣೆ ಮಾಡಬೇಕು ಮತ್ತು ಹಾಜರಾತಿ ಆಧಾರದಲ್ಲಿ ಕೆಲಸದಿಂದ ವಜಾಗೊಳಿಸುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮುಂದುವರೆದು, ಹಲವು ಕಡೆ ಅಡುಗೆ ಕೋಣೆಗಳು ಉತ್ತಮವಾಗಿಲ್ಲ. ಅಂತಹ ಕಡೆ ಸುಸಜ್ಜಿತ ಅಡುಗೆ ಕೋಣೆಗಳನ್ನು ನಿರ್ಮಿಸಬೇಕು. "ಕ್ಲಸ್ಟರ್" ಸಭೆಗಳನ್ನು ಕಡ್ಡಾಯವಾಗಿ ಪ್ರತಿ ಜಿಲ್ಲೆಯಲ್ಲೂ ನಡೆಸಬೇಕು ಹಾಗೂ "ಅಕ್ಷರ ದಾಸೋಹ" ಯೋಜನೆ ಸಂಪೂರ್ಣವಾಗಿ ಶಿಕ್ಷಣ ಇಲಾಖೆ ಅಡಿಯಲ್ಲಿಯೇ ನಡೆಯಬೇಕು ಎಂಬುವುದು ಅವರ ಪ್ರಮುಖ ಬೇಡಿಕೆಗಳಾಗಿವೆ.

ಶಿಕ್ಷಣ ವ್ಯವಸ್ಥೆಗೆ ಪೂರಕವಾಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿರುವ ಅಕ್ಷರ ದಾಸೋಹ ನೌಕರರು ನಿರಂತರವಾಗಿ ತಮ್ಮದೇ ಆದ ಕೊಡುಗೆ ಸಲ್ಲಿಸುತ್ತಾ ಬಂದಿದ್ದಾರೆ. ಆದುದರಿಂದ ಅಕ್ಷರ ದಾಸೋಹ ನೌಕರರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಬೇಕಾದ ಅಗತ್ಯ ಹಾಗೂ ಸೂಕ್ತ ಕ್ರಮಗಳನ್ನು ಈ ಕೂಡಲೇ ಕೈಗೊಳ್ಳಬೇಕೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ಈ) **ವಿಷಯ: ಬೆಳಗಾವಿ ಜಿಲ್ಲೆಯ ಹಿಂಡಲಗಾ ಜೈಲಿನ ಖೈದಿಗಳು ಜೈಲಿನಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಅಳವಡಿಸಲಾದ 5ಜಿ ನೆಟ್ ವರ್ಕ್ ಜಾಮರ್‌ನಿಂದಾಗಿ ಸುತ್ತಮುತ್ತಲಿನ ನಾಗರಿಕರಿಗೆ/ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕುರಿತು.**

---

**ಡಾ॥ ಉಮಾಶ್ರೀ(ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿ ಎರಡನೆಯ ಅತಿದೊಡ್ಡ ಹಿಂಡಲಗಾ ಜೈಲಿನ ಖೈದಿಗಳು ಜೈಲಿನಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಲ್ಯಾಂಡ್‌ಲೈನ್ 2G ನೆಟ್ ವರ್ಕ್ ಜಾಮರ್ ಆಳವಡಿಕೆ ಮಾಡಿದೆ. ತಾಂತ್ರಿಕವಾಗಿ ನಿಯಂತ್ರಣಕ್ಕೆ ಒಳಪಡಿಸಿದ ಈ ಒಂದು ಪ್ರಯತ್ನದಿಂದ ಜೈಲಿನ ಸುತ್ತಲಿನ ನಗರ ಪ್ರದೇಶದ ಜನರಿಗೂ, ಕೆಲವು ಗ್ರಾಮೀಣ ಪ್ರದೇಶದ ಜನರಿಗೂ, ಕಛೇರಿಗಳಿಗೂ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಬಹಳಷ್ಟು ತೊಂದರೆಯಾಗುತ್ತಿದೆ. ಜೈಲಿನ ಒಳಗೆ ಖೈದಿಗಳು ಮೊಬೈಲ್ ಬಳಸಲು ನಿಷೇಧವಿದ್ದರೂ ಅವರ ಕೈಗೆ ಹೇಗೆ ಮೊಬೈಲ್ ಸಿಗುತ್ತದೆ? ನಿಷೇಧವಿದ್ದ ಮೇಲೆ ಜಾಮರ್ ಅಗತ್ಯವೇಕೆ? ಮೊಬೈಲ್ ಒಳಗಡೆ ಹೋಗದಂತೆ ತಡೆಯುವಲ್ಲಿ ಕಾರಾಗೃಹ ಸಿಬ್ಬಂದಿ ವಿಫಲರಾಗಿದ್ದಾರೆ. ಅವರ ಮೇಲೆ ಶಿಸ್ತು ಕ್ರಮಕೈಗೊಳ್ಳಲಿ ಎಂಬ ಸಾಲುಸಾಲು ಪ್ರಶ್ನೆಗಳು ಸಾರ್ವಜನಿಕರಲ್ಲಿ ಮೂಡಿದೆ.

ಈ ಕಾರಣದಿಂದ ಜನರಿಗೆ ತೊಂದರೆ ಆಗದಂತೆ ತಜ್ಞರೊಂದಿಗೆ ಚರ್ಚಿಸಿ ಪರ್ಯಾಯವಾದ ವ್ಯವಸ್ಥೆಯನ್ನು ಅಳವಡಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ಉ) **ವಿಷಯ: ಶಾಲೆಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಳಸದಿರುವಂತೆ ಕ್ರಮ ಕೈಗೊಳ್ಳುವ ಕುರಿತು.**

----

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಾಲಾ ಮಕ್ಕಳಲ್ಲಿ ಫೋನ್ ಬಳಕೆ ಸಂಪೂರ್ಣ ನಿಷೇಧಿಸುವುದು ಅಪೇಕ್ಷಣೀಯವಲ್ಲ ಮತ್ತು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ. ಮಕ್ಕಳು ಮೊಬೈಲ್ ಫೋನ್ ಬಳಸುವುದರ ಮೇಲೆ ನಿಯಂತ್ರಣ ಹೇರಬೇಕು ಎಂದು ನ್ಯಾಯಮೂರ್ತಿ ಅನುಪ್ ಜೈರಾಮ್ ಭಂಭಾನಿ ರವರು ತಮ್ಮ ಆದೇಶದಲ್ಲಿ ತಿಳಿಸಿರುತ್ತಾರೆ. ಶಾಲಾ ಮಕ್ಕಳು ಮೊಬೈಲ್ ಫೋನ್ ಬಳಸುವುದನ್ನು ನಿಯಂತ್ರಿಸಲು ಕೆಲವು ಮಾರ್ಗಸೂಚಿಗಳನ್ನು ಹೈಕೋರ್ಟ್ ನಿಗದಿಪಡಿಸಿತ್ತು. ಜವಾಬ್ದಾರಿಯುತ ಆನ್‌ಲೈನ್ ನಡವಳಿಕೆ, ಡಿಜಿಟಲ್ ಸಂಬಂಧಿಸಿದ ನೀತಿ ಸೂತ್ರಗಳ ಬಗ್ಗೆ ಶಾಲಾ ಮಕ್ಕಳಿಗೆ ಶಿಕ್ಷಣ ತುಂಬಾ ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ ಅದಕ್ಕೆ ಒತ್ತು ನೀಡಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ. ಶೈಕ್ಷಣಿಕ ಮತ್ತು ಅದಕ್ಕೆ ಸಂಬಂಧಿಸಿರುವ ಶಿಕ್ಷಣ ತುಂಬಾ ಪ್ರಾಮುಖ್ಯತೆ ಹೊಂದಿರುವುದರಿಂದ ಶಾಲೆಗಳಲ್ಲಿ ಮೊಬೈಲ್ ಫೋನ್ ಬಳಸುವುದನ್ನು ನಿಷೇದಿಸಬೇಕು. ಈ ಬಗ್ಗೆ ಸದನದಲ್ಲಿ ಚರ್ಚಿಸಲು ಶೂನ್ಯ ವೇಳೆಯಲ್ಲಿ ಅವಕಾಶ ಕಲ್ಪಿಸಿದ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಊ) ವಿಷಯ: ತುಂಗಾಭದ್ರ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರನ್ನು ತಡೆಗಟ್ಟಲು ನವಲಿ ಜಲಾಶಯವನ್ನು ನಿರ್ಮಾಣ ಮಾಡುವ ಕುರಿತು.**

----

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನವಲಿ ಜಲಾಶಯ ಭಾಷಣಕ್ಕೆ ಸೀಮಿತವಾಗಿದೆ. ತುಂಗಭದ್ರಾ ಜಲಾಶಯದ ನೀರು ವ್ಯರ್ಥವಾಗಿ ಹರಿದು ಹೋಗದಂತೆ ತಡೆಯಲು ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ. ಆದರೆ, ಈ ವಿಷಯ ಕಳೆದ ಒಂದೂವರೆ ದಶಕದಿಂದ ಕೇವಲ ರಾಜಕಾರಣಿಗಳ ಭಾಷಣ, ಮಾತುಕತೆಗೆ ಸೀಮಿತವಾಗಿದ್ದು ಬೇಡಿಕೆ ಮಾತ್ರ ಈಡೇರುತ್ತಿಲ್ಲ. ತುಂಗಭದ್ರಾ ಡ್ಯಾಂನಲ್ಲಿ 30 ಟಿ.ಎಂ.ಸಿ.,ಗಿಂತ ಹೆಚ್ಚು ಹೂಳು ತುಂಬಿರುವ ಕಾರಣ ಪೂರ್ಣವಾಗಿ ನವಲಿ ಬಳಿ ಹೊಸ ಸಮಾನಾಂತರ ಜಲಾಶಯ ನಿರ್ಮಾಣ ಮಾಡುವುದಾಗಿ ದಶಕಗಳ ಹಿಂದೆ ಆಗಿನ ರಾಜ್ಯ ಸರ್ಕಾರ ಹೇಳಿತ್ತು. ಅನುದಾನ ನೀಡುವುದಾಗಿಯೂ ಘೋಷಿಸಿತ್ತು, ಸುಮಾರು 9,000 ಕೋಟಿ ರೂಪಾಯಿಗಳು ಮತ್ತು 15,000 ಕೋಟಿ ರೂಪಾಯಿಗಳಿಗೆ ಎರಡು ಡಿ.ಪಿ.ಆರ್., ಸಿದ್ಧಪಡಿಸಿತ್ತು. ನಂತರ 2020ರಲ್ಲಿ ಬಿ.ಜೆ.ಪಿ ಸರ್ಕಾರ ಈ ಯೋಜನೆಗಾಗಿ 13,000 ಕೋಟಿ ರೂಪಾಯಿಗಳ ಸಮಗ್ರ ಯೋಜನಾ ವರದಿಯನ್ನು ತಯಾರಿಸಿತ್ತು. ಆದರೆ, ಯೋಜನೆ ಮಾತ್ರ ಕಾರ್ಯರೂಪಕ್ಕೆ ಬಂದಿಲ್ಲ. ಇದಕ್ಕೆ ರಾಜಕೀಯ ನಾಯಕರ ಇಚ್ಛಾಶಕ್ತಿ ಕೊರತೆ ಕೂಡ ಒಂದು ಕಾರಣವಾಗಿದೆ. ತುಂಗಭದ್ರಾ ಜಲಾಶಯ ಪ್ರಸ್ತುತ ಒಟ್ಟು 105.78 ಟಿ.ಎಂ.ಸಿ., ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಜಲಾಶಯ ತುಂಬಿದ ಬಳಿಕ ಪ್ರತಿಬಾರಿಯೂ ವ್ಯರ್ಥವಾಗಿ ನದಿಗೆ ನೀರು ಹರಿದು ಹೋಗುವ ಪ್ರಮಾಣ ಹೆಚ್ಚಾಗುತ್ತಿದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ತುಂಗಭದ್ರಾ ನೀರಿನಲ್ಲಿ ಪಾಲು ಹೊಂದಿರುವುದು. ಇದರಿಂದ ರಾಜ್ಯ ಸರ್ಕಾರ ಉಳಿದೆರಡು ರಾಜ್ಯಗಳ ಜೊತೆ ಸಂಬಂಧ ಮಾಹಿತಿ ಸಾಧಿಸಿ ಯೋಜನೆ ಆರಂಭಿಸಬೇಕಾಗಿದೆ. ತುಂಗಭದ್ರಾ ಜಲಾಶಯದಲ್ಲಿ 19ನೇ ಗೇಟ್ ಚೈನ್ ಲಿಂಕ್ ತುಂಡಾಗಿ ಲಕ್ಷಾಂತರ ಕ್ಯೂಸೆಕ್ಸ್ ನೀರು ಪೋಲಾಯಿತು. ಒಂದು ವೇಳೆ ಸಮಾಂತರ ಜಲಾಶಯ ನಿರ್ಮಿಸಿದ್ದರೆ ಒಂದಷ್ಟು ನೀರನ್ನು ಉಳಿಸಿಕೊಳ್ಳಲು ಅವಕಾಶವಿತ್ತು ಎನ್ನುವುದು ರೈತರ ವಾದವಾಗಿದೆ. ಪ್ರತಿ ಬಾರಿ ಡ್ಯಾಮ್ ತುಂಬಿ ನೀರು ವ್ಯರ್ಥವಾಗಿ ಹರಿಯುವಾಗಲೆಲ್ಲಾ ಸಮಾನಾಂತರ ಜಲಾಶಯದ ಚರ್ಚೆ ಮುನ್ನೆಲೆಗೆ ಬರುತ್ತದೆ. ದಶಕದ ಹಿಂದಿನ ಯೋಜನೆ ಆರಂಭವಾಗಿದ್ದರೆ, ಈ ಭಾಗದಲ್ಲಿ ಮಳೆ ಕೊರತೆಯಿದ್ದಾಗ ಕೃಷಿ ಚಟುವಟಿಕೆಗೆ ನೀರಿನ ತೊಂದರೆ ತಪ್ಪುತ್ತಿತ್ತು ಆದರೆ ಇವರಿಗೆ ನವಲಿ ಬಳಿ ಜಲಾಶಯ ನಿರ್ಮಾಣಕ್ಕಾಗಿ ಕೇವಲ ಡಿ.ಪಿ.ಆರ್., ತಯಾರಿಸುವುದರಲ್ಲಿಯೇ ದಶಕಗಳೇ ಮುಗಿದಿದೆ. ಇನ್ನು ಆಂಧ್ರಪ್ರದೇಶ ತೆಲಂಗಾಣ ರಾಜ್ಯಗಳ ಸಿ.ಎಂ.ಗಳ ಜೊತೆ ಚರ್ಚೆ ಮಾಡುವುದಾಗಿ ಹೇಳಿಯೂ 5 ವರ್ಷ ಕಳೆದಿದೆ. ಇತರ ಜಲಾಶಯಗಳ ಬಗ್ಗೆ ಇರುವ ಕಾಳಜಿ ತುಂಗಭದ್ರಾ ಜಲಾಶಯದ ಬಗ್ಗೆ ಇಲ್ಲ. ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 40 ಸಾವಿರ ಎಕರೆ ಪ್ರದೇಶ ಬೇಸಿಗೆ ಬೆಳೆಯ ಭತ್ತ ಪೂರ್ಣ ಪ್ರಮಾಣದ ನೀರು ಹರಿಸಿಕೊಳ್ಳದೆ ಪ್ರತಿ ವರ್ಷ ನಷ್ಟ ಅನುಭವಿಸಬೇಕಿದೆ ಇನ್ನೂ 5 ಟಿ.ಎಂ.ಸಿ., ನೀರು ಸಂಗ್ರಹವಾದರೇ, ಇಲ್ಲಿನ

ಸಮಸ್ಯೆಗೆ ಪರಿಹಾರ ಸಿಗಲಿದೆ. ಮಾನ್ವಿ, ಸಿರವಾರ, ಮಸ್ಕಿ ಹಾಗೂ ರಾಯಚೂರು ಭಾಗಕ್ಕೂ ನೀರಿನ ಸಮಸ್ಯೆ ಇನ್ನೂ ಇದೆ. ತುಂಗಭದ್ರಾ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರು ತಡೆದಿಟ್ಟುಕೊಳ್ಳಲು ನವಲಿ ಜಲಾಶಯ ನಿರ್ಮಾಣವಷ್ಟೇ ಪರಿಹಾರವಾಗಿದೆ.

ಆದ್ದರಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

(ಮುಂದುವರಿದಿದೆ)

**(111) 06.03.2025 (12.00) ಪಿಕೆ(ಹೆಚ್‌ವಿ).ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಖ) ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆಯನ್ನು ನಿಯಂತ್ರಿಸಲು ಜಿಲ್ಲಾಡಳಿತ ವಿಫಲವಾಗಿರುವ ಕುರಿತು.**

---

**ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ನಿಯಂತ್ರಣಕ್ಕೆ ಬಾರದ ಮರಳು ಅಕ್ರಮ ದಂಧೆ", "ಕಣ್ಮುಚ್ಚಿ ಕುಳಿತ ಅಧಿಕಾರಿಗಳು", "ಕ್ಯಾರೇ ಎನ್ನದ ದಂಧೆಕೋರರು!" "ಅಕ್ರಮಕ್ಕೆ ಕುಸಿದು ಬೀಳುವ ಸ್ಥಿತಿಯಲ್ಲಿವೆ ಜಿಲ್ಲೆಯ ಹಲವು ಸೇತುವೆಗಳು" ಎಂಬ ಶೀರ್ಷಿಕೆಯಡಿ ದಿನಾಂಕ:05.03.2025ರ "ವಿಜಯ ಕರ್ನಾಟಕ" ದಿನ ಪತ್ರಿಕೆಯಲ್ಲಿ ವರದಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಡಳಿತ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪೊಲೀಸ್, ಕಂದಾಯ ಆರ್.ಟಿ.ಓ., ಪಿ.ಡಬ್ಲ್ಯೂ.ಡಿ., ಸಹಿತ ಹಲವು ವ್ಯವಸ್ಥೆಗಳಿದ್ದರೂ ಅಕ್ರಮ ಮರಳುಗಾರಿಕೆ ನಿಯಂತ್ರಿಸುವಲ್ಲಿ ಎಲ್ಲರೂ ವಿಫಲರಾಗಿದ್ದಾರೆ.

2024 ಏಪ್ರಿಲ್‌ನಿಂದ ಡಿಸೆಂಬರ್ ತನಕ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ, ಪೊಲೀಸ್, ಅರಣ್ಯ ಮತ್ತು ಲೋಕೋಪಯೋಗಿ ಇಲಾಖೆ ಮೂಲಕ 155 ಪ್ರಕರಣ ದಾಖಲಿಸಿದ್ದು, 49.60 ಲಕ್ಷ ರೂಪಾಯಿಗಳ ದಂಡ ವಿಧಿಸಿ, 73 ಎಫ್.ಐ.ಆರ್., ದಾಖಲಿಸಿದ್ದರೂ ಅಕ್ರಮ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದಾಗಿ ಜಿಲ್ಲೆಯ ಹಲವು ಸೇತುವೆಗಳು ಕುಸಿದು ಬೀಳುವ ಸ್ಥಿತಿಗೆ ತಲುಪಿರುವುದು ವಿಪರ್ಯಾಸವಾಗಿದೆ.

ಜನಪ್ರತಿನಿಧಿಗಳು, ಅಧಿಕಾರಿಗಳ ಕಣ್ಮುಂದೆಯೇ ರಾಜಾರೋಷವಾಗಿ ಅಕ್ರಮ ಮರಳುಗಾರಿಕೆ ನಡೆಯುತ್ತಿದ್ದರೂ ಕ್ರಮ ಕೈಗೊಳ್ಳಬೇಕಾದವರು ಕೈಕಟ್ಟಿ ಕುಳಿತಿದ್ದಾರೆ. ಪರಸ್ಪರ ಸಹಕರಿಸಿ ದಾಳಿ ಮಾಡಬೇಕಾದ ಅಧಿಕಾರಿಗಳೇ ಉಸ್ತುವಾರಿ ಸಚಿವರ ಕೆ.ಡಿ.ಪಿ., ಸಭೆಯಲ್ಲಿ ಆರೋಪ-ಪ್ರತ್ಯಾರೋಪ ಮಾಡಿದ್ದರು.

ನಾನ್ ಸಿ.ಆರ್.ಝಡ್ ವ್ಯಾಪ್ತಿಯ 18 ಕಡೆ ಮರಳು ದಿಬ್ಬ ತೆರವಿಗೆ ಅವಕಾಶ ನೀಡಲಾಗಿದೆ. ಸಿ.ಆರ್.ಝಡ್., ವ್ಯಾಪ್ತಿಯ ಮಂಗಳೂರು ಮತ್ತು ಉಳ್ಳಾಲ ತಾಲ್ಲೂಕಿನಲ್ಲಿ 2019ರಲ್ಲಿ ಮರಳುಗಾರಿಕೆ ನಿಷೇಧಿಸಲಾಗಿದೆ. ಪರ್ಮಂಕಿಯಲ್ಲಿ ಕಿರು ನೀರಾವರಿ ಇಲಾಖೆಗೆ, ಅಡ್ಯೂರಿನಲ್ಲಿ ಝಕರಿಯಾ ಕೋಡಿಬೆಟ್ಟು, ಮೊಗರು, ಎಂಬಲ್ಲಿ ಪ್ರವೀಣ್ ಆಳ್ವ ಮತ್ತು ರಾಜೇಂದ್ರ ಮೆಂಡನ್ ಎಂಬುವವರಿಗೆ ಮರಳುಗಾರಿಕೆಗೆ ಅನುಮತಿ ಇದೆ. ಉಳಿದೆಡೆ ಅಕ್ರಮವಾಗಿ ನಡೆಯುತ್ತಿದ್ದು, ಅತ್ತ ಅಧಿಕಾರಿಗಳು ಸುಳಿಯುವುದೇ ಇಲ್ಲ. ಪ್ರಸ್ತುತ ಯಂತ್ರಗಳ ಬಳಕೆ, ದ್ವೀಪ ಸೇತುವೆಗಳಿಗೆ ಹಾನಿ ಬಗ್ಗೆ ಸಾರ್ವಜನಿಕರಿಂದ ದೂರು ಬಂದರೆ ಮಾತ್ರ ಕೆಲವೊಮ್ಮೆ ದಾಳಿ ನಡೆಯುತ್ತದೆ.

ಜಿಲ್ಲಾ ಟಾಸ್ಕ್‌ಫೋರ್ಸ್‌ನಲ್ಲಿ ಕಂದಾಯ, ಪೊಲೀಸ್, ಆರ್.ಟಿ.ಓ., ಪಿಡಬ್ಲ್ಯೂಡಿ ಸಹಿತ 12 ಇಲಾಖೆಗಳಿಗೆ ದಾಳಿ ಮಾಡುವ ಅನುಮತಿ ಇದ್ದರೂ ಗಣಿ ಇಲಾಖೆಯನ್ನು ಮಾತ್ರ ಬೊಟ್ಟು ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ ಅಕ್ರಮದ ವಿರುದ್ಧ ದಾಳಿ ಮಾಡಲು ಗಣಿ ಇಲಾಖೆ ಬಳಿ ನಾಲ್ಕು ಮಂದಿ ತಾಂತ್ರಿಕ ಅಧಿಕಾರಿ ಮತ್ತು ಎರಡೇ ವಾಹನಗಳಿವೆ. ಆದ್ದರಿಂದ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಸಹಯೋಗ ಪಡೆದು ಅಕ್ರಮವನ್ನು ಮಟ್ಟ ಹಾಕಲು ಸೂಕ್ತ ಕ್ರಮಕೈಗೊಳ್ಳಬೇಕಾಗಿ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಎ) ವಿಷಯ: ಯಾದಗಿರಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಶಾಶ್ವತ ಪರಿಹಾರ ಒದಗಿಸುವ ಬಗ್ಗೆ.**

----

**ಡಾ|| ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:05.03.2025ರಂದು "ಕನ್ನಡಪ್ರಭ" ದಿನಪತ್ರಿಕೆಯಲ್ಲಿ "ಕಬ್ಬಿಣದ ಬುಟ್ಟಿಯಲ್ಲಿ ಕುಳಿತು ಸ್ನಾನ; ಅದೇ ನೀರು ಬಟ್ಟೆ ಸ್ವಚ್ಛತೆಗೆ ಬಳಕೆ" ಎನ್ನುವ ಶೀರ್ಷಿಕೆಯಡಿಯಲ್ಲಿ ವರದಿಯು ಪ್ರಕಟವಾಗಿತ್ತು.

ಯಾದಗಿರಿ ಜಿಲ್ಲೆಯಲ್ಲಿ ಸುಮಾರು 250ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬೇಸಿಗೆ ಶುರುವಾಗುವ ಮುನ್ನವೇ ನೀರಿನ ಸಮಸ್ಯೆ ಉಂಟಾಗಿದ್ದು, ಕುಡಿಯುವ ನೀರಿಗಾಗಿ ಸುರಪುರ ತಾಲ್ಲೂಕಿನ ಕೆಂಬಾವಿ ಸಮೀಪದ ಯುಕ್ತಾಪೂರ ಗ್ರಾಮದ ಇಲ್ಲಿನ ನಿವಾಸಿಗಳು ನೀರಿಗಾಗಿ ಪಡುವ ಪರಿಪಾಟಲು ಅಷ್ಟಿಷ್ಟಲ್ಲ. ನೀರಿನ ಸಮಸ್ಯೆ ಬಗ್ಗೆ ಕೇಳಿದರೆ ಇಲ್ಲಿನ ಜನರ ಕಣ್ಣಾಲಿಗಳಲ್ಲಿ ನೀರಾಡುತ್ತದೆ.

ಯುಕ್ತಾಪೂರ ಗ್ರಾಮ ಪಂಚಾಯಿತಿ 13 ಹಳ್ಳಿಗಳನ್ನೊಳಗೊಂಡ ದೊಡ್ಡ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ನಾಲ್ಕೈದು ದಿನಗಳಿಗೊಮ್ಮೆ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿರುವುದು ಕಂಡು ಬಂದಿರುತ್ತದೆ, ಸದರಿ ಗ್ರಾಮ ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

ಮಾನ್ಯ ಸಭಾಪತಿಯವರೇ, ಬಿರು ಬೇಸಿಗೆ ಆರಂಭದ ದಿನಗಳಲ್ಲಿಯೇ ನೀರಿನ ಸಮಸ್ಯೆಯ ಮುನ್ಸೂಚನೆಯಾಗಿದ್ದು, ಮುಂದಿನ ದಿನಮಾನದಲ್ಲಿ ಯಾವ ರೀತಿ ನೀರಿನ ಸಮಸ್ಯೆಯಾಗುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ. ಹಾಗಾಗಿ ಟ್ಯಾಂಕರ್ ಮೂಲಕ ನೀರು ಪೂರೈಸುವುದಲ್ಲದೆ ಶಾಶ್ವತ ನೀರಿನ ಸಮಸ್ಯೆಯ ಪರಿಹಾರದ ನಿಟ್ಟಿನಲ್ಲಿ ಚಿಂತನೆ ನಡೆಸಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರನ್ನು ಶೂನ್ಯವೇಳೆಯಲ್ಲಿ ಆಗ್ರಹಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಏ) ವಿಷಯ: "ಬ್ರಾಂಡ್ ಬೆಂಗಳೂರು" ಕಲ್ಪನೆಯಲ್ಲಿ ಮಂಡನೆಯಾದ 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾದ ಕಾಮಗಾರಿಗಳು ಇದುವರೆವಿಗೂ ಅನುಷ್ಠಾನಗೊಳ್ಳದಿರುವ ಬಗ್ಗೆ.**

----

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿಗೆ ಹೊಸ ರೂಪ ನೀಡಲು ಮಂಡನೆಯಾದ 2024-25ನೇ ಸಾಲಿನ ಬಿಬಿಎಂಪಿ ಬಜೆಟ್‌ನ ಅವಧಿ ಅಂತ್ಯವಾಗುತ್ತಿದ್ದರೂ ಮೂಲ ಉದ್ದೇಶದ ಯೋಜನೆಗಳಲ್ಲಿ ಹಲವು ಆರಂಭವನ್ನೇ ಕಂಡಿಲ್ಲ. ಸುಮಾರು 50 ಹೊಸ ಕ್ಯಾಂಟೀನ್ ಸ್ಥಾಪಿಸುವ ಭರವಸೆ ಎರಡು ವರ್ಷಗಳಿಂದ ಬಾಕಿ ಉಳಿದಿದೆ, ನಾಗರಿಕರ ಮನೆ ಬಾಗಿಲಿಗೆ ತೆರಳಿ ರೋಗ ನಿರೋಧಕ ಶಕ್ತಿ ಸುಧಾರಿಸಲು ಚುಚ್ಚು ಮದ್ದು ನೀಡುವ "ಆರೋಗ್ಯ ಸಾರಥಿ" 40 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ ಪೌರ ಕಾರ್ಮಿಕರಿಗೆ ಶರಣೆ ಸತ್ಯಕ್ಕಾ ಪ್ರಶಸ್ತಿ ಮಹಿಳೆಯರಿಗೆ "She Toilet" ನಿರ್ಮಾಣದಂತಹ ಯೋಜನೆಗಳು, 2025-26ರ ಬಜೆಟ್ ಮಂಡನೆ ಹತ್ತಿರವಾಗುತ್ತಿದ್ದರೂ ಹಿಂದಿನ ವರ್ಷದ ಯೋಜನೆಗಳು ಆರಂಭವಾಗುವ ಲಕ್ಷಣಗಳು ಕಂಡುಬಂದಿಲ್ಲ. ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಹದಗೆಟ್ಟಿದೆ, ಆರೋಗ್ಯ ಸಾರಥಿ, ಮನೋಬಿಂಬ, ಸಂವಾದ ಯುಟ್ಯೂಬ್, ಸದೃಢ ಆರೋಗ್ಯ ಯೋಜನೆಗಳು ಬಜೆಟ್ ಪುಸ್ತಕದ ಪ್ರಕಟಣೆಗಳಾಗಿಯೇ ಉಳಿದಿವೆ.

ರಸ್ತೆ ಗುಂಡಿ ಮುಚ್ಚಲು ಆರಂಭಿಸಲಾಗಿದ್ದ "ರಸ್ತೆ ಗುಂಡಿ ಗಮನ ತಂತ್ರಾಂಶ"ದ ಆಪ್ ಕೆಲವೇ ದಿನಗಳಲ್ಲಿ ಮುಚ್ಚಿಕೊಂಡಿದೆ. ನಾಗರಿಕರು ನೀಡುವ ದೂರಿಗೆ ಇಲ್ಲಿ ಪ್ರತಿಕ್ರಿಯೆಯೇ ಇಲ್ಲದಂತಾಗಿದೆ. ಸುಗಮ ಸಂಚಾರಕ್ಕೆ 880 ಕೋಟಿ ಆಕರ್ಷಕ ಬೆಂಗಳೂರಿಗೆ 225 ಕೋಟಿ, ಸ್ವಚ್ಛ ಬೆಂಗಳೂರಿಗೆ 150 ಕೋಟಿ ಆರೋಗ್ಯಕರ ಬೆಂಗಳೂರಿಗೆ 125 ಕೋಟಿ, ಹಸಿರು ಬೆಂಗಳೂರಿಗೆ 100 ಕೋಟಿ, ಟೆಕ್ ಬೆಂಗಳೂರಿಗೆ 50 ಕೋಟಿ, ಶಿಕ್ಷಣ ಬೆಂಗಳೂರಿಗೆ 50 ಕೋಟಿ ಹೀಗೆ ಬ್ರಾಂಡ್ ಬೆಂಗಳೂರಿಗೆ ಒಟ್ಟು 1,580 ಕೋಟಿ ಬಜೆಟ್‌ನಲ್ಲಿ ಮೀಸಲಿರಿಸಲಾಗಿದ್ದು; ಅವು ಇನ್ನೂ ಆರಂಭವಾಗಿರುವುದಿಲ್ಲ. ಬಜೆಟ್‌ನಲ್ಲಿನ ಯೋಜನೆಗಳು ಕೇವಲ ಕಾಗದದಲ್ಲಿ ಉಳಿಯದೇ ಕಾರ್ಯರೂಪಕ್ಕೆ ಬರುವಂತೆ ಆಗಬೇಕು.

ಈ ವಿಷಯದ ಕುರಿತು "ಪ್ರಜಾವಾಣಿ" ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯ ನಕಲನ್ನು ಲಗತ್ತಿಸಿರುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಐ) ವಿಷಯ: ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಚಿತ್ರ ಸಾರಾಂಶ ಪುಸ್ತಕದಲ್ಲಿ ಚಲನಚಿತ್ರ ಅಕಾಡೆಮಿ ಗೂಗಲ್ ಟ್ರಾನ್ಸ್‌ಲೇಟರ್ ಬಳಕೆ ಮಾಡಿ ಹತ್ತಾರು ಎಡವಟ್ಟು ಮಾಡಿರುವ ಬಗ್ಗೆ.**

----

**ಶ್ರೀ ಕೇಶವ ಪ್ರಸಾದ್.ಎಸ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ಪವರ್" ಸುದ್ದಿ ವಾಹಿನಿಯಲ್ಲಿ "ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡದ ಕಗ್ಗೊಲೆ !" ಎಂಬ ತಲೆ ಬರಹದಡಿಯಲ್ಲಿ ವರದಿ ಪ್ರಕಟಗೊಂಡಿರುತ್ತದೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಕನ್ನಡದ ಕಗ್ಗೊಲೆ ನಡೆದಿದ್ದು, ಚಲನ ಚಿತ್ರೋತ್ಸವದ ಚಿತ್ರ ಸಾರಾಂಶ ಪುಸ್ತಕದಲ್ಲಿ ಚಲನಚಿತ್ರ ಅಕಾಡೆಮಿ ಸಾಕಷ್ಟು ಎಡವಟ್ಟು ಮಾಡಿಕೊಂಡಿದೆ. ಕೆಲವು ಕಡೆ ಪದಗಳನ್ನು ತಪ್ಪಾಗಿ ಬರೆದರೆ; ಇನ್ನು ಕೆಲವು ಕಡೆ ಬರೆದಿರುವ ಕನ್ನಡವನ್ನು ಓದಿದರು ಕೂಡ ಅದರ ಅರ್ಥ ತಿಳಿಯದಂತೆ ಚಿತ್ರ ಸಾರಾಂಶ ಪುಸ್ತಕವನ್ನು ಮುದ್ರಿಸಲಾಗಿದೆ. ಕೆ.ಪಿ.ಎಸ್.ಸಿ., ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಯನ್ನೇ ತಪ್ಪಾಗಿ ಮುದ್ರಿಸಿ ವಿದ್ಯಾರ್ಥಿಗಳ ಜೀವನದ ಜೊತೆ ಆಟವಾಡುತ್ತಿರುವ ಸರ್ಕಾರ. ಇದೀಗ ಕನ್ನಡದ ಮಾನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಾಜು ಹಾಕಿದೆ. ಚಲನಚಿತ್ರೋತ್ಸವದ ಚಿತ್ರ ಸಾರಾಂಶ ಪುಸ್ತಕದಲ್ಲಿ ಸಾಕಷ್ಟು ಎಡವಟ್ಟಾಗಿ "ಆರೈಕೆ" ಪದದ ಬದಲಾಗಿ "ಹಾರೈಕೆ", "ಮೀರಿ" ಪದದ ಬದಲಾಗಿ "ಮಿರಿ" ಎಂದು ಮುದ್ರಿಸಿದ್ದಾರೆ.

ಇನ್ನು ಭಾವಾನುವಾದದ ಬಗ್ಗೆ ಕೇಳೋದೇ ಬೇಡ "ಯಾವುದೇ ಸಾಮ್ರಾಜ್ಯ ಪತನವಾದ ನಂತರ ಅಲ್ಲಿದ್ದ ಜನರ ಭವಿಷ್ಯ ಅವಶೇಷಗಳ ಅಡಿ ಹೂತು ಹೋಗುತ್ತದೆ" ಎಂದು ಮುದ್ರಿಸುವ ಬದಲು "ಸಾಮ್ರ್ಯಾಜ್ಯದ ಪತನದ ನಂತರ ಮಾನವನ ಕಳೇಬರ ಅವಶೇಷಗಳ ಅಡಿಯಲ್ಲಿ ಹೂತು ಹೋಗುತ್ತದೆ" ಎಂದು ಮುದ್ರಿಸಲಾಗಿದೆ. ಚಿತ್ರದ ಸಾರಾಂಶವನ್ನು ಬರೆಯುವಲ್ಲಿ ಹತ್ತಾರು ಎಡವಟ್ಟು ಮಾಡಿಕೊಂಡಿರುವ ಚಲನ ಚಿತ್ರೋತ್ಸವ ಅಕಾಡೆಮಿ ಭಾಷಾಂತರಕ್ಕೆ AI ಅಥವಾ ಗೂಗಲ್ ಟ್ರಾನ್ಸಲೇಟ್ ಬಳಕೆ ಮಾಡಿಕೊಂಡಿದ್ದೆ ಇದಕ್ಕೆಲ್ಲಾ ಕಾರಣವಾಗಿದ್ದು, ಕನ್ನಡ ನಾಡಿನಲ್ಲಿ ಕನ್ನಡ ಕೊಲೆಯಾಗುತ್ತಿರುವುದು ನಿಜಕ್ಕೂ ಆಘಾತಕಾರಿ ಸಂಗತಿಯಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಈ ರೀತಿ ಆಗದಂತೆ ಕ್ರಮವಹಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ಶೂನ್ಯವೇಳೆಯಲ್ಲಿ ಆಗ್ರಹಿಸುತ್ತಿದ್ದೇನೆ.

**ಶ್ರೀ ಶಿವರಾಜ್ ಎಸ್. ತಂಗಡಗಿ(ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ನಾಳೆ ಉತ್ತರವನ್ನು ಕೊಡುತ್ತೇನೆ.

(ಮುಂದುವರಿದಿದೆ)

(112) 6-3-2025 12.10 ಡಿಎಸ್-ವಿಕೆ (ಸಭಾಪತಿ ಯವರ ಉಪಸ್ಥಿತಿ)

**ಒ) ವಿಷಯ: ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ಸುರಿದಿರುವ ಕಸದ ರಾಶಿಯಿಂದ ಸುತ್ತಮುತ್ತಲಿನ ಜನರಿಗೆ ಅನಾರೋಗ್ಯ ಉಂಟಾಗುತ್ತಿರುವ ಕುರಿತು.**

------

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಲು ತಾವು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು. ದಿನಾಂಕ 05.03.2025 ರಂದು "ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಸುರಿದಿರುವ ಕಸದ ರಾಶಿ" ಎಂದು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಹೊಸಕೋಟೆಯಿಂದ ಜಂಗಮಕೋಟೆಗೆ ಸಂಪರ್ಕ ಹೊಂದಿರುವ ರಾಜ್ಯ ಹೆದ್ದಾರಿ ಬದಿಯಲ್ಲಿನ ಕೆ.ಐ.ಎ.ಡಿ.ಬಿ.ಗೆ ಸೇರಿದ ಜಾಗದಲ್ಲಿ ಅಪಾರ ಪ್ರಮಾಣದ ತ್ಯಾಜ್ಯ ರಾಶಿ ಸುರಿಯುತ್ತಿದ್ದ ಅದು ಬೆಂಗಳೂರು ನಗರಕ್ಕೆ ಸೇರಿದ ತ್ಯಾಜ್ಯ ಎಂಬ ಅನುಮಾನವನ್ನು ಸ್ಥಳೀಯರು ವ್ಯಕ್ತಪಡಿಸಿರುತ್ತಾರೆ. ಈ ಬಗ್ಗೆ ಸ್ಥಳೀಯ ಪಂಚಾಯಿತಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿರುತ್ತಾರೆ.

ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಚಿಕ್ಕಹುಲ್ಲೂರು ವ್ಯಾಪ್ತಿಯ ಕೆಎಂಎಫ್ ಶಿಬಿರ ಕಛೇರಿ ಮುಂಭಾಗ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ರಾತ್ರಿ ಸಮಯದಲ್ಲಿ ಲಾರಿಗಳಲ್ಲಿ ತಂದು ಕಸ ಸುರಿಯಲಾಗುತ್ತಿದ್ದು, ಬೆಟ್ಟದಂತೆ ತ್ಯಾಜ್ಯದ ರಾಶಿ ಬೆಳೆಯುತ್ತಿದೆ. ಒಂದೆಡೆ ತ್ಯಾಜ್ಯದ ದುರ್ನಾತ ಮತ್ತೊಂದೆಡೆ ಗಲೀಜಿನಿಂದ ಸುತ್ತಮುತ್ತಲಿನ ಜನಕ್ಕೆ ತೀವ್ರ ತೊಂದರೆಯಾಗಿದೆ. ಅಲ್ಲದೆ ಕಸವನ್ನು ಸುಡುತ್ತಿರುವುದರಿಂದ ದಟ್ಟವಾಗಿ ಹೊಗೆ ಆವರಿಸಿಕೊಳ್ಳುತ್ತಿದೆ. ಅಸ್ತಮಾ ಮತ್ತು ಶ್ವಾಸಕೋಶ ಸಮಸ್ಯೆ ಇರುವವರಿಗೆ ಕಂಟಕ ಎದುರಾಗಿದೆ ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸದರಿ ವಿಷಯದ ಕುರಿತು ಮತ್ತು ಕಸ ಸುರಿಯುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಕುರಿತು ಕೆ.ಐ.ಎ.ಡಿ.ಬಿ. ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಓ)ವಿಷಯ: ರಾಜ್ಯ/ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಉಂಟಾದ ಶಿಕ್ಷಕರ ಕೊರತೆಯಿಂದ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವ ಕುರಿತು.**

-------

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು. ದಿನಾಂಕ 05-03-2025ರ “ಪ್ರಜಾವಾಣಿ” ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಕಲ್ಯಾಣ ಕರ್ನಾಟಕ ಭಾಗದ ಹಾಗೂ ರಾಜ್ಯದಾದ್ಯಂತ ಅದೆಷ್ಟೋ ಶಾಲೆಗಳು ಶಿಕ್ಷಕರ ಕೊರತೆಯನ್ನು ಎದುರಿಸುತ್ತಿವೆ. ಶಿಕ್ಷಕರ ಕೊರತೆ ನೀಗಿಸಬೇಕು, ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶಿಕ್ಷಣ ಇಲಾಖೆ ಹಲವಾರು ಕ್ರಮ ಕೈಗೊಳ್ಳುತ್ತಿದೆ ಹಾಗೂ ಸರ್ಕಾರ ಅತಿಥಿ ಶಿಕ್ಷಕರ ಹುದ್ದೆಗಳ ಭರ್ತಿ ಮಾಡಿಕೊಂಡಿದ್ದು ಖುಷಿಯ ವಿಚಾರ. ಆದರೆ ಕಳೆದ 6-7 ತಿಂಗಳಿನಿಂದ ಇಲ್ಲಿಯವರೆಗೆ ಆ ಶಿಕ್ಷಕರಿಗೆ ವೇತನ ನೀಡದೆ ಇರುವುದು ವಿಪರ್ಯಾಸದ ಸಂಗತಿ. ಅದೆಷ್ಟೋ ಅತಿಥಿ ಶಿಕ್ಷಕರು ದೂರದ ಪ್ರದೇಶದಿಂದ ಶಾಲೆಗಳಿಗೆ ಶಿಕ್ಷಣ ನೀಡಲು ಪ್ರತಿ ದಿನ ಬರುತ್ತಾರೆ. ಆದರೆ ಅಂತಹ ಶಿಕ್ಷಕರಿಗೆ ವೇತನ ನೀಡದೆ ವಿಳಂಬ ಮಾಡುತ್ತಿರುವುದರಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಜುಲೈ ಮತ್ತು ಡಿಸೆಂಬರ್ ತಿಂಗಳಲ್ಲಿ ಎರಡು ಹಂತದಲ್ಲಿ ಶಿಕ್ಷಕರ ನೇಮಕಾತಿ ನಡೆದಿದೆ. ಆದರೆ ಯಾವೊಬ್ಬರ ಶಿಕ್ಷಕರಿಗೂ ಸರ್ಕಾರದಿಂದ ಇಲ್ಲಿಯವರೆವಿಗೂ ಒಂದು ರೂಪಾಯಿ ಸಂಬಳ ದೊರೆತಿಲ್ಲ. ಈ ಮುಂಚೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರಿಲ್ಲದ ಕಾರಣ ವಿದ್ಯಾರ್ಥಿಗಳು ಸಮರ್ಥ ಪಾಠ ಬೋಧನೆಯಿಂದ ವಂಚಿತರಾಗಿರುತ್ತಾರೆ. ಸರ್ಕಾರ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದರಿಂದ ಶಾಲೆಗಳಲ್ಲಿ ತರಗತಿಗಳು ಸರಾಗವಾಗಿ ನಡೆಯಲು ಅನುಕೂಲವಾಯಿತು. ಕಾರಣ ಸಮಸ್ಯೆ ಇತ್ಯರ್ಥಗೊಳಿಸಿದ ಅತಿಥಿ ಶಿಕ್ಷಕರಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡುವುದು ಮುಖ್ಯವಾಗಿದೆ.

ನಿಯಮದಂತೆ ಜಿಲ್ಲಾ ಪಂಚಾಯಿತಿ ಅನುದಾನದಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 10,000 ಹಾಗೂ ಪ್ರೌಢ ಶಾಲಾ ಶಿಕ್ಷಕರಿಗೆ 10,500 ರೂಪಾಯಿ ಪ್ರತಿ ತಿಂಗಳು ವೇತನ ಪಾವತಿಯಾಗಬೇಕು. ಕಳೆದ 7 ತಿಂಗಳಿನಿಂದ ತಡವಾಗಿ ವೇತನ ನೀಡಲಾಗುತ್ತಿದೆ ಎಂಬ ಗೋಳು ಮುಂದುವರೆದಿದೆ. ಒಮ್ಮೆ ಅನುದಾನ ಇರುವುದಿಲ್ಲ, ಬಂದರೂ ತಡವಾಗಿ ಬರುತ್ತದೆ. ನಂತರ ಬಿಇಓ ಕಚೇರಿ ಅಧಿಕಾರಿಗಳು ಆಯಾ ಶಾಲೆಯ ಎಚ್‌ಎಂ ಗಳಿಂದ ಶಿಕ್ಷಕರ ಹಾಜರಾತಿ ತರಿಸಿಕೊಂಡು ವೇತನದ ಬಿಲ್ ರೆಡಿ ಮಾಡಿ ಉಪ ಖಜಾನೆಗೆ ಕಳುಹಿಸಬೇಕು. ಅದು ಅಲ್ಲಿಂದ ಪಾಸಾದ ಬಳಿಕ ಆ ಸಂಬಳವನ್ನು ಆಯಾ ಶಾಲೆಗಳ ಮುಖ್ಯ ಗುರುಗಳ ಖಾತೆಗೆ ಜಮಾ ಮಾಡಿದ ಬಳಿಕ ಅವರು ಶಿಕ್ಷಕರ ಹೆಸರಿನ ಮೇಲೆ ಚೆಕ್ ನೀಡುತ್ತಾರೆ. ನಂತರ ಸಂಬಳ ದೊರೆಯುತ್ತದೆ. ಹೀಗಾಗಿ ಅತಿಥಿ ಶಿಕ್ಷಕರ ವೇತನ ಪ್ರತಿ ವರ್ಷ ತಡವಾಗಿಯೇ ಸಿಗುತ್ತಿದೆ.

ಆದ್ದರಿಂದ ಇದೊಂದು ಅತಿಥಿ ಶಿಕ್ಷಕರ ಜೀವನ ನಿರ್ವಹಣೆಯ ವಿಚಾರವಾಗಿರುವುದರಿಂದ ಈ ಬಗ್ಗೆ ಶೀಘ್ರವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**3) ನಿಯಮ 72ಎ ಅಡಿಯಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆ ಸೂಚನೆಗಳಿಗೆ ಸರ್ಕಾರದ ಲಿಖಿತ ಉತ್ತರಗಳು**

**ಅ) ವಿಷಯ: ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಮುಂತಾದ ಕಾರಣಗಳಿಂದ ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವ ಬಗ್ಗೆ.**

------

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ರವರು ದಿನಾಂಕ 04.03.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸನ್ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಸಭೆ ನಡೆಸಿದ್ದು, ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳೊಂದಿಗೆ ರಾಜ್ಯದಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಹಾಗೂ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಕೆಲವು ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿ, ವಿದ್ಯಾರ್ಥಿಗಳ ಪ್ರವೇಶಾತಿ, ಮೂಲಸೌಲಭ್ಯದ ಕೊರತೆ ಮುಂತಾದ ಪ್ರಮುಖ ಅಂಶಗಳ ಕುರಿತು ಮೊದಲ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಭೆಯಲ್ಲಿ ಸ್ವೀಕೃತವಾದ ಸಲಹೆಗಳನ್ನು ಪರಾಮರ್ಶಿಸಿ ಕೆಲವು ವಿಶ್ವವಿದ್ಯಾಲಯಗಳ ವಿಲೀನ, ಹೆಚ್ಚಿನ ಅನುದಾನದ ಅಗತ್ಯತೆ ಮತ್ತು ಹಂತ-ಹಂತವಾಗಿ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿಶ್ವವಿದ್ಯಾಲಯಗಳ ಬಲವರ್ಧನೆಗಾಗಿ ಉನ್ನತ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಒಟ್ಟಾರೆ ಸೇರಿ ವಿಸ್ತೃತವಾದ ವರದಿ/ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

**ಆ) ವಿಷಯ: ರಾಜ್ಯದಲ್ಲಿ ನಾಯಿ ಕಡಿತ ಹಾಗೂ ರೇಬಿಸ್ ಪ್ರಕರಣಗಳು ವರದಿಯಾಗುತ್ತಿರುವ ಬಗ್ಗೆ.**

-------

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿ ರವರು ದಿನಾಂಕ 04.03.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಧನಂಜಯ ಸರ್ಜಿ ಇವರು ಶೂನ್ಯ ವೇಳೆಯಲ್ಲಿ "ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಯಲ್ಲಿ ಪ್ರಕಟವಾದ "Dogbite cases, rabies deaths see surge across Karnataka" ಗಂಭೀರ ವಿಷಯುವನ್ನು ವಸ್ತು ನಿಷ್ಠವಾಗಿ ಪ್ರಕಟಿಸಲಾಗಿದೆ.

ರಾಜ್ಯದಲ್ಲಿ ಆರೋಗ್ಯ ಇಲಾಖೆಗೆ ತಲೆನೋವಾಗುವಷ್ಟು ನಾಯಿ ಕಡಿತ ಹಾಗೂ ರೇಬಿಸ್ ಪ್ರಕರಣಗಳು ವರದಿಯಾಗುತ್ತಿವೆ. ಕಳೆದ ವರ್ಷ 3,65,522 ನಾಯಿ ಕಡಿತ ಪ್ರಕರಣಗಳು ಹಾಗೂ 42 ಜನ ಮೃತಪಟ್ಟಿದ್ದು, ಈ ವರ್ಷದ ಜನವರಿಯಿಂದ ಇದುವರೆಗೆ 66,459 ನಾಯಿ ಕಡಿತ ಹಾಗೂ 8 ಮಂದಿ ಮೃತಪಟ್ಟಿರುವ ಪ್ರಕರಣ ನಮ್ಮ ರಾಜ್ಯದಲ್ಲಿ ನಡೆದಿರುವುದು ಆತಂಕ ಹಾಗೂ ಖೇದಕರ. ಕೋವಿಡ್ ನಂತರದ ವರ್ಷಗಳಲ್ಲಿ ನಾಯಿ ಕಡಿತ ಮತ್ತು ರೇಬಿಸ್ ಪ್ರಕರಣಗಳಲ್ಲಿ ಅತೀ ಹೆಚ್ಚಳ ಕಾಣುತ್ತಿದ್ದು, ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಶೇ. 47ರಷ್ಟು ಹೆಚ್ಚಳವಾಗಿದೆ. ಬೆಂಗಳೂರಿನಲ್ಲಿ 2,419 ನಾಯಿ ಕಡಿತ ಪ್ರಕರಣಗಳು ಹಾಗೂ 4 ರೇಬಿಸ್ ನಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ರಾಜ್ಯದ ರಾಜಧಾನಿಯಾಗಿ ಎಲ್ಲಾ ಸೌಲಭ್ಯ ಹಾಗೂ ತಿಳುವಳಿಕೆ ಇದ್ದಾಗ್ಯೂ, ಈ ಅಂಕಿ ಅಂಶಗಳು ಸರ್ಕಾರದ ನಿಷ್ಕ್ರಿಯತೆ ಹಾಗೂ ಕರ್ತವ್ಯ ವೈಫಲ್ಯವನ್ನು ಎತ್ತಿ ತೋರಿಸುತ್ತದೆ.

ಪತ್ರಿಕೆಯಲ್ಲಿ ವರದಿಯಾದಂತೆ ಸಂಪೂರ್ಣ ವ್ಯಾಕ್ಸಿನೇಷನ್ ಮಾಡದಿರುವುದು ಹಾಗೂ ನಾಯಿಗಳ ಸಂಖ್ಯೆ ನಿಯಂತ್ರಣ ಸೇರಿದಂತೆ ಹಲವು ನಿರ್ಲಕ್ಷ್ಯಗಳಿಂದ ರೇಬಿಸ್ ಮತ್ತು ನಾಯಿ ಕಡಿತದ ಕುರಿತು ತಿಳುವಳಿಕೆ ಕೊರತೆಯಿಂದಾಗಿ ಮಾರಣಾಂತಿಕವಾಗಲು ಕಾರಣವಾಗುತ್ತಿದೆ.

ಇದರೊಂದಿಗೆ, ಕಳೆದ ವರ್ಷ 13,235 ಹಾವು ಕಡಿತ ಪ್ರಕರಣಗಳು ಮತ್ತು 101 ಜನ ಹಾವು ಕಡಿತದಿಂದ ಮೃತಪಟ್ಟಿದ್ದು, ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ 1,600 ಕ್ಕೂ ಹೆಚ್ಚು ಹಾವು-ಕಡಿತ ಪ್ರಕರಣ ಹಾಗೂ 12 ಜನ ಹಾವು ಕಡಿತದಿಂದ ಸಾವು ಸಂಭವಿಸಿರುವುದಾಗಿ ವರದಿಯಾಗಿದೆ. ಹಳ್ಳಿ ಪ್ರದೇಶಗಳಲ್ಲಿ ತಿಳುವಳಿಕೆ ಕೊರತೆಯಿಂದಾಗಿ ಮನೆ ಮದ್ದು, ನಾಟಿ ಔಷಧಿಗಳ ಮೊರೆ ಹೋಗುವುದರಿಂದ ವಿಷಪೂರಿತ ಹಾವು ಕಡಿತ ಪ್ರಕರಣಗಳಲ್ಲಿ ಸಾವು ಸಂಭವಿಸುತ್ತಿವೆ.

ಅಂಕಿ ಅಂಶಗಳು ಆತಂಕಕಾರಿಯಾಗಿವೆ. ಆರೋಗ್ಯ ಇಲಾಖೆಯು ಇತರೇ ಇಲಾಖೆಗಳೊಂದಿಗೆ ಹಾಗೂ ಸ್ಥಳೀಯಾಡಳಿತದ ಸಹಯೋಗದೊಂದಿಗೆ, ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ಸಾರ್ವಜನಿಕರಿಗೆ ನೀಡಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿರುವ ವಿಷಯಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-

**ಹಾವು ಕಡಿತ ಪ್ರಕರಣಗಳ ವಿಷಯದ ಬಗ್ಗೆ:**

2024 ನೇ ಸಾಲಿನಲ್ಲಿ 13,235 ಹಾವು ಕಡಿತದ ಪ್ರಕರಣಗಳು ಹಾಗೂ 100 ಮರಣಗಳು IHIP (Integrated Health Information Platform) ತಂತ್ರಾಂಶದಲ್ಲಿ ವರದಿಯಾಗಿರುತ್ತವೆ ಹಾಗೂ 2025 ಜನವರಿ 01 ರಿಂದ 04.03.2025 ರ ತನಕ 1,650 ಹಾವು ಕಡಿತ ಪ್ರಕರಣಗಳು ಹಾಗೂ 10 ಮರಣಗಳು ವರದಿಯಾಗಿರುತ್ತದೆ.

ಮರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ದಿನಾಂಕ 12.02.2024 ರಂದು ಕರ್ನಾಟಕ ಸಾಂಕ್ರಾಮಿಕ ರೋಗಗಳ ಖಾಯಿಲೆ 2020, ಸೆಕ್ಷನ್ 3 ರನ್ವಯ ಹಾವು ಕಡಿತ ಹಾಗೂ ಮರಣಗಳನ್ನು ಘೋಷಿತ ಖಾಯಿಲೆಯೆಂದು ಆದೇಶ ಹೊರಡಿಸಲಾಗಿದೆ. ಈ ಆದೇಶದಂತೆ ಎಲ್ಲಾ ಹಾವು ಕಡಿತ ಹಾಗೂ ಮರಣ ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳನ್ನೊಳಗೊಂಡಂತೆ ಎಲ್ಲಾ ಕೇಂದ್ರಗಳು ಕಡ್ಡಾಯವಾಗಿ ಭಾರತ ಸರ್ಕಾರದ IHIP (Integrated Health Information Platform) ಯಲ್ಲಿ ವರದಿ ಮಾಡಲು ಸೂಚಿಸಲಾಗಿದೆ. ಈ ಆದೇಶದಿಂದಾಗಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2024-25 ವರ್ಷದಲ್ಲಿ ವರದಿಯಾಗಿರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗಿರುತ್ತದೆ.
2. ಎಲ್ಲಾ ವೈದ್ಯಾಧಿಕಾರಿಗಳಿಗೆ ಹಾವು ಕಡಿತದ ಚಿಕಿತ್ಸೆ ಬಗ್ಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ.
3. ಹಾವು ಕಡಿತಕ್ಕೆ ನೀಡಲಾಗಿರುವ Anti Snake Venom (ASV) ಅನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ

(ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆ) ಉಚಿತವಾಗಿ ನೀಡಲಾಗುತ್ತಿದೆ ಹಾಗೂ ಎಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ASV ಯನ್ನು ಇಟ್ಟುಕೊಳ್ಳಲು ಸೂಚಿಸಲಾಗಿದೆ.

4. ದಿನಾಂಕ 10.07.2024 ರಂದು ಅಂತರ್ ಇಲಾಖಾ ಕಾರ್ಯಾಗಾರವನ್ನು ನಡೆಸಿ, ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣದಲ್ಲಿ ತಮ್ಮ ತಮ್ಮ ಇಲಾಖೆಗಳ ಜವಾಬ್ದಾರಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ವಿವರಿಸಲಾಗಿದೆ.
5. ಹಾವು ಕಡಿತದ ಎಲ್ಲಾ ಮರಣಗಳನ್ನು ಕಡ್ಡಾಯವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Death Audit ಮಾಡಿ ವರದಿ ನೀಡಲು ಸೂಚಿಸಲಾಗಿದೆ.
6. ರಾಜ್ಯದಿಂದ ನೀಡಿರುವ IEC Posters ಹಾಗೂ ವಿಡಿಯೋಗಳನ್ನು ಉಪಯೋಗಿಸಿ IEC ಚಟುವಟಿಕೆಗಳನ್ನು ನಡೆಸಿ, ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲು ಜಿಲ್ಲೆಗಳಿಗೆ ಸೂಚಿಸಲಾಗಿದೆ.
7. ಸ್ಥಳೀಯ ಮಟ್ಟದಲ್ಲಿ ಗ್ರಾಮ ಪಂಚಾಯಿತಿ, NGOಗಳು, ಸಾಂಪ್ರದಾಯಕ ನಾಟಿ ಚಿಕಿತ್ಸಕರು ಹಾಗೂ ಇತರೆ ಸ್ಥಳೀಯ ಮುಖಂಡರು ಒಳಗೊಂಡಂತೆ ಇತರೆ ಇಲಾಖೆಗಳ (ಅರಣ್ಯ ಇಲಾಖೆ, ಕೃಷಿ ಇಲಾಖೆ, ಪಶು ಸಂಗೋಪನಾ ಹಾಗೂ ಮೀನುಗಾರಿಕೆ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಇತರೆ) ಸಹಯೋಗದೊಂದಿಗೆ IEC ಚಟುವಟಿಕೆಗಳನ್ನು ನಡೆಸಲು ಹಾಗೂ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.
8. ಸಾಂಪ್ರದಾಯಕ ನಾಟಿ ಚಿಕಿತ್ಸಕರಿಂದ ಹಾವು ಕಡಿತ ವ್ಯಕ್ತಿಯು ಆಸ್ಪತ್ರೆ ಸೇರುವುದು ತಡವಾದರೆ KPME Act ರ ಅನ್ವಯ ಅವರ ಮೇಲೆ ಕ್ರಮ ಜರುಗಿಸಲು ಜಿಲ್ಲೆಗಳಿಗೆ ತಿಳಿಸಲಾಗಿದೆ.
9. ಹಾವು ಕಡಿತ ಪ್ರಕರಣಗಳು ಯಾವ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡಬೇಕೆಂದು ಮ್ಯಾಪಿಂಗ್ ಮಾಡಲು ಹಾಗೂ ತಮ್ಮ ಕೇಂದ್ರದಲ್ಲಿ ಬರುವಂತಹ high risk area ಹಾಗೂ high risk population ಅನ್ನು ಗುರುತಿಸಿ, ಅಲ್ಲಿ ತೀವ್ರ ನಿಗಾವಹಿಸಲು ಮತ್ತು ಅಂತರ್ ಇಲಾಖಾ IEC ಚಟುವಟಿಕೆಗಳನ್ನು ನಡೆಸಲು ಸೂಚಿಸಲಾಗಿದೆ.

**ನಾಯಿ ಕಡಿತ ಪ್ರಕರಣಗಳ ವಿಷಯದ ಬಗ್ಗೆ:**

1. ನಾಯಿ ಕಡಿತ ಹಾಗೂ ರೇಬೀಸ್ ಖಾಯಿಲೆಯ ತಡೆಗಟ್ಟುವಿಕೆಗಾಗಿ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮ ಇಲಾಖೆಯಲ್ಲಿ ಅನುಷ್ಠಾನದಲ್ಲಿರುತ್ತದೆ. ಸದರಿ ಕಾರ್ಯಕ್ರಮದನ್ವಯ ರೇಬೀಸ್ ಖಾಯಿಲೆಯೂ ಒಂದು ಅಧಿಸೂಚಿತ ಖಾಯಿಲೆ ಎಂದು (Notifiable Disease) ಡಿಸೆಂಬರ್ 2022 ರಂದು ಸರ್ಕಾರದಿಂದ ಘೋಷಿಸಲಾಗಿದೆ.
2. ರಾಜ್ಯದಲ್ಲಿ ಕಳೆದ ವರ್ಷದಲ್ಲಿ (ಜನವರಿ ಇಂದ ಡಿಸೆಂಬರ್ 2024) ಆರೋಗ್ಯ ಇಲಾಖೆಯ ಅಂಕಿ ಅಂಶಗಳ ಅನ್ವಯ (IHIP Portal) ಒಟ್ಟು 3,61,522 ನಾಯಿ ಕಡಿತ ಪ್ರಕರಣಗಳು ಹಾಗೂ 42 ರೇಬೀಸ್ ಖಾಯಿಲೆಯಿಂದ ಮರಣಪಟ್ಟಿರುವ ಪ್ರಕರಣಗಳು ವರದಿಯಾಗಿರುತ್ತದೆ.
3. ನಾಯಿ ಕಡಿತಕ್ಕಾಗಿ Anti Rabies Vaccine ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ Rabies Immunoglobulin ಔಷಧಿಗಳನ್ನು ಎಲ್ಲಾ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲು ವ್ಯವಸ್ಥೆ ಮಾಡಲಾಗಿದೆ.
4. ವಿಶ್ವ ಆರೋಗ್ಯ ಸಂಸ್ಥೆಯ 'Zero by 30' ಅಂದರೆ 2030 ರ ವೇಳೆಗೆ ವಿಶ್ವದಾದ್ಯಂತ ರೇಬೀಸ್ ಖಾಯಿಲೆಯಿಂದಾಗುವ ಮರಣಗಳನ್ನು ಶೂನ್ಯಕ್ಕೆ ಇಳಿಸಲು ಇರುವ ಧ್ಯೇಯದನ್ವಯ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಸೂಚನೆಯಂತೆ, ರಾಜ್ಯದಲ್ಲಿ 'Joint Steering Committee for Dog mediated Rabies Elimination ಎಂಬ ಸಮಿತಿಯು ರಚನೆಗೊಂಡಿರುತ್ತದೆ.
5. ಇಲಾಖಾವತಿಯಿಂದ ನಾಯಿ ಕಡಿತ, ರೇಬೀಸ್ ಖಾಯಿಲೆಯ ತಡೆಗಟ್ಟುವಿಕೆ ಹಾಗೂ ಬೀದಿ ನಾಯಿಗಳ ಸಂಖ್ಯಾ ನಿಯಂತ್ರಣ ಹಾಗೂ ನಾಯಿಗಳಿಗೆ ರೇಬೀಸ್ ಚುಚ್ಚುಮದ್ದು ನೀಡುವಿಕೆಗೆ ಸಂಬಂಧಿಸಿದಂತೆ ಇತರ ಇಲಾಖೆಗಳೊಂದಿಗೆ ಅಂತರ್ ಇಲಾಖಾ ಸಮನ್ವಯ ಸಭೆಗಳನ್ನು ಆಯೋಜಿಸಲಾಗಿರುತ್ತದೆ.
6. ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ತರಬೇತಿಗಳನ್ನು ನೀಡಲಾಗಿರುತ್ತದೆ.
7. ನಾಯಿ ಕಡಿತ ಹಾಗೂ ರೇಬೀಸ್ ಖಾಯಿಲೆಗೆ ಸಂಬಂಧಪಟ್ಟಂತೆ ಕರ ಪತ್ರಗಳು ಹಾಗೂ ಪೋಸ್ಟರ್ ಗಳನ್ನು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಗ್ರಾಮ ಪಂಚಾಯ್ತಿಗಳಿಗೆ ವಿತರಿಸಿ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

ಸಂಖ್ಯೆ: ಆಕುಕ 11 ಎಸ್ ಎಂ ಎಂ 2025.

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಇ) **ವಿಷಯ: ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬ ಧೋರಣೆ ಕುರಿತಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ ಎನ್ನುವ ವಿಷಯ ಕುರಿತು.**

-----

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ದಿನಾಂಕ 04.03.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸರ್ಕಾರದ ಉತ್ತರ:-**

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ರೂ.14.00 ಕೋಟಿಗಳಿಗೂ ಹೆಚ್ಚಿನ ವಂಚನೆಯನ್ನು ಎಸಗಲಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದವರ ಮೇಲೆ ಮತ್ತು ಸರ್ಕಾರದ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ಕುರಿತು ಸೂಕ್ತ ತನಿಖೆಯನ್ನು ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಶ್ರೀ ವಿನಯ್‌ಕುಮಾರ್ ಸೊರಕೆ, ಮಾಜಿ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿ, ಉಡುಪಿ ಜಿಲ್ಲಾ ರೈತ ಸಂಘ, ಉಡುಪಿ ಜಿಲ್ಲೆ ಮತ್ತು ಶ್ರೀ ಮಂಜುನಾಥ ಭಂಡಾರಿ, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು ಇವರು ದಿನಾಂಕ:25.09.023 ಮತ್ತು 09.11.2023ರಂದು ಸರ್ಕಾರಕ್ಕೆ ಮನವಿ ಮತ್ತು ದೂರುಗಳನ್ನು ಸಲ್ಲಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಕುರಿತು ಪರಿಶೀಲಿಸಿ ವಾಸ್ತವಾಂಶವುಳ್ಳ ವರದಿಯೊಂದಿಗೆ ಈ ಪ್ರಕರಣದಲ್ಲಿ ಕೈಗೊಳ್ಳಬಹುದಾದ

ಅಭಿಪ್ರಾಯವನ್ನು ಕೂಡಲೇ ಸರ್ಕಾರಕ್ಕೆ ಕಳುಹಿಸಿ ಕೊಡುವಂತೆ ದಿನಾಂಕ:25.10.2023 ಮತ್ತು 16.01.2024ರ ಪತ್ರಗಳಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಲಾಗಿತ್ತು.

ಕಾರ್ಖಾನೆಯ ಸ್ಕ್ರ್ಯಾಪ್ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ನಿಯಮಬಾಹಿರವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರ ಶಾಸನಬದ್ಧ ವಿಚಾರಣೆಗೆ ಕ್ರಮ ಕೈಗೊಳ್ಳುವಂತೆ ಸಹಕಾರ ಸಂಘಗಳ ಉಪ ನಿಬಂಧಕರು (ಪ್ರ), ಉಡುಪಿ ಜಿಲ್ಲೆ, ಉಡುಪಿ ಇವರು ದಿನಾಂಕ: 24.11.2023ರ ಪತ್ರದಲ್ಲಿ ಕೋರಿರುತ್ತಾರೆಂದು, ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಸಂಬಂಧ ಉಡುಪಿ ಜಿಲ್ಲಾ ರೈತ ಸಂಘದವರು ಮಾನ್ಯ ಎಸಿಜೆ ಮತ್ತು ಜೆಎಂಎಫ್‌ಸಿ, ಉಡುಪಿ ನ್ಯಾಯಾಲಯದಲ್ಲಿ ಖಾಸಗಿ ದೂರು ಸಂಖ್ಯೆ:163/2023ನ್ನು ದಾಖಲಿಸಿದ್ದು, ಸದರಿ ದೂರಿನನ್ವಯ ಬ್ರಹ್ಮಾವರ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಕಾರ್ಖಾನೆಯ 03 ಕಂಪ್ಯೂಟರ್ ಹಾರ್ಡ್‌ಡಿಸ್ಕ್ ಗಳನ್ನು ವಶಕ್ಕೆ ಪಡೆದಿರುತ್ತಾರೆಂದು ಹಾಗೂ ಈ ಸಂಬಂಧದ ಪ್ರಕರಣದ ವಿಚಾರಣೆಯು ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಕಲಂ 64 ರ ವಿಚಾರಣೆಗೆ ಆದೇಶಿಸುವುದು ಸಮಂಜಸವಾಗಲಾರದು ಎಂದು ತಿಳಿಸುತ್ತಾ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬ್ರಹ್ಮಾವರ, ಉಡುಪಿ ಜಿಲ್ಲೆ- ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಸಂಬಂಧ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಲು ಕೋರಿ ದಿನಾಂಕ:30.01.2024ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 313 ಸಿಓಎಫ್ 2023, ದಿನಾಂಕ:20.11.2024 ರಲ್ಲಿ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ –ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಶ್ರೀ ರಾಧಾಕೃಷ್ಣ ಹೊಳ್ಳ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಈ ಮಧ್ಯೆ, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ರೂ.14.00 ಕೋಟಿಗಳಿಗೂ ಹೆಚ್ಚಿನ ವಂಚನೆಯನ್ನು ಎಸಗಲಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದವರ ಮೇಲೆ ಮತ್ತು ಸರ್ಕಾರದ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ವಿರುದ್ಧ ಸೂಕ್ತ ತನಿಖೆಯನ್ನು ನಡೆಸಲು ಕೋರಿ ಪ್ರಧಾನ ಕಾರ್ಯದರ್ಶಿ, ಉಡುಪಿ ಜಿಲ್ಲಾ ರೈತ ಸಂಘ, ಉಡುಪಿ ಜಿಲ್ಲೆ ಇವರು ದಿನಾಂಕ:25.10.2023ರಂದು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಅ.ಕ್ರ 203/2023 ಅನ್ನು ದಾಖಲಿಸಿರುತ್ತಾರೆ. ಸದರಿ ದೂರಿನ ಕುರಿತು ವಿಚಾರಣೆಯನ್ನು ನಡೆಸಲಾಗಿದೆಯೆಂದು ಐ.ಪಿ.ಸಿ ಕಲಂ 420, 405, 415, 418, 463, 464, 465,468, 474, 120(ಬಿ) ಜೊತೆಗೆ 34 ಐ.ಪಿ.ಸಿ & ಕಲಂ 23 Karnataka Transparency in Public procurements Act 1999 ರ ಪ್ರಕರಣದಲ್ಲಿ, ಆಪಾದಿತರುಗಳು ಕಲಂ 120(ಬಿ), 403, 409 ಜೊತೆಗೆ 34, 37 ಐಪಿಸಿ ಹಾಗೂ ಕಲಂ 23 Karnataka Transparency in Public procurements Act 1999 ರಂತೆ ಅಪರಾಧವೆಸಗಿರುವುದು ತನಿಖೆಯಿಂದ ದೃಢಪಟ್ಟಿದ್ದು, ಆಪಾದಿತ ಸರಕಾರಿ ನೌಕರ ಪ್ರವೀಣ್ ಬಿ ನಾಯಕ್ ಹಾಗೂ 10 ಮಂದಿ ನಿರ್ದೇಶಕರನ್ನು ನ್ಯಾಯಾಲಯದ

ಅಭಿಯೋಜನೆಗೆ ಒಳಪಡಿಸಲು ದೋಷಾರೋಪಣಾ ಪಟ್ಟಿ ಸಲ್ಲಿಸಲು ಸರ್ಕಾರದ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ದೊರಕಿಸಿಕೊಡುವಂತೆ ಮಹಾನಿರ್ದೇಶಕರು ಮತ್ತು ಪೋಲೀಸ್ ಮಹಾನಿರೀಕ್ಷಕರು ಕರ್ನಾಟಕ ರಾಜ್ಯ ಬೆಂಗಳೂರು ಇವರ ದಿನಾಂಕ:14.08.2024ರ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು,(ಪಿಸಿ.ಎ.ಎಸ್) ಒಳಾಡಳಿತ ಇಲಾಖೆ ಇವರನ್ನು ಕೋರಲಾಗಿರುತ್ತದೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು) ಇವರ ದಿನಾಂಕ:23.10.2024ರ ಅನಧಿಕೃತ ಟಿಪ್ಪಣಿಯಲ್ಲಿ, ಅಭಿಯೋಜನಾ ಮಂಜೂರಾತಿಯನ್ನು ನೀಡಲು ಕೋರಿ ಸಲ್ಲಿಸಿದ ಪ್ರಸ್ತಾವನೆಯ ಕುರಿತು ನಿಯಮಾನುಸಾರ ಸೂಕ್ತ ಕ್ರಮವಹಿಸುವಂತೆ ತಿಳಿಸಿ ಸಹಕಾರ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ 11 ಆರೋಪಿಗಳ ಪೈಕಿ ಆರೋಪಿ-01 ಆದ ಶ್ರೀ ಪ್ರವೀಣ್ ಬಿ ನಾಯಕ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರು ಸಹಕಾರ ಇಲಾಖೆ ಅಧಿಕಾರಿಯಾಗಿರುವುದರಿಂದ ಇವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಓ 60 ಇಸಿಐ 2025, ದಿನಾಂಕ:27.02.2025ರಲ್ಲಿ ಸಹಕಾರ ಇಲಾಖೆಯಿಂದ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ. ಉಳಿದಂತೆ, ಇನ್ನುಳಿದ 10 ಮಂದಿ ಆರೋಪಿತರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರುಗಳಾಗಿರುವುದರಿಂದ ಸದರಿಯವರುಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ ಸಕ್ಷಮ ಪ್ರಾಧಿಕಾರವಾದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಮುಂದಿನ ಕ್ರಮ ಕೈಗೊಳ್ಳಲು ಕೋರಿ ದಿನಾಂಕ:28.02.2025ರಂದು ಪ್ರಸ್ತಾವನೆಯನ್ನು ಸಹಕಾರ ಇಲಾಖೆಯಿಂದ ವರ್ಗಾಯಿಸಲಾಗಿರುತ್ತದೆ. ಪ್ರಸ್ತುತ ಸದರಿ 10 ನಿರ್ದೇಶಕರುಗಳ ಮೇಲೆ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988ರನ್ವಯ ಈ ಇಲಾಖೆಯಿಂದ ಅಭಿಯೋಜನಾ ಮಂಜೂರಾತಿ ನೀಡಲು ಇರುವ ಅವಕಾಶಗಳ ಕುರಿತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು ಸದರಿ ಅಭಿಪ್ರಾಯದನ್ವಯ ಮುಂದಿನ ಕ್ರಮವಹಿಸಲಾಗುವುದು.

---

ಸಂಖ್ಯೆ: ಸಿಐ 75 ಸಿಓಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

**ಈ) ವಿಷಯ: ರಾಜ್ಯ ಗ್ರಾಮ ಪಂಚಾಯಿತಿ ನೌಕರರಿಗೆ ಕಾಲಮಿತಿಯೊಳಗೆ ಕನಿಷ್ಠ ವೇತನ ಜಾರಿಗೊಳಿಸುವ ಬಗ್ಗೆ.**

-----

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು ದಿನಾಂಕ 05.03.2025 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಉತ್ತರ**: ಗ್ರಾಮ ಪಂಚಾಯತಿ ನೌಕರರಿಗೆ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸುವ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆಯನ್ನು ಪಾವತಿಸಲಾಗುತ್ತಿದೆ. ಅದರ ವಿವರ ಕೆಳಕಂಡಂತಿದೆ.

| ಕ್ರ ಸಂ. | ಪದನಾಮ | ಕನಿಷ್ಠ ವೇತನ ನೀಡುತ್ತಿರುವ ವಿವರ (ರೂ.ಗಳಲ್ಲಿ) | ವ್ಯತ್ಯಾಸವಾಗುವ ತುಟ್ಟಿಭತ್ಯೆ (ರೂ.ಗಳಲ್ಲಿ) | ಒಟ್ಟು (ರೂ.ಗಳಲ್ಲಿ) |
|---|---|---|---|---|
| 1 | ಬಿಲ್ ಕಲೆಕ್ಟರ್ | 15,196.72 | 2223.60 | 17420.32 |
| 2 | ಕ್ಲರ್ಕ ಕಂ ಡಾಟಾ ಎಂಟ್ರಿ ಆಪರೇಟರ್ | 15,196.72 | 2223.60 | 17420.32 |
| 3 | ವಾಟರ್ ಆಪರೇಟರ್ | 13,509.32 | 2223.60 | 15732.92 |
| 4 | ಅಟೆಂಡಂಟ್ | 12,873.52 | 2223.60 | 15097.12 |
| 5 | ಕ್ಲೀನರ್ಸ್ | 16,019.52 | 2223.60 | 18243.12 |

ಮುಂದುವರೆದು, ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆಯೊಂದಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಗ್ರಾಮ ಪಂಚಾಯಿತಿ ನೌಕರರಿಗೆ 10 ದಿನಗಳ ಸಾಂದರ್ಭಿಕ ರಜೆ, 2 ದಿನಗಳ ನಿರ್ಬಂಧಿತ ರಜೆ, ಮಹಿಳಾ ನೌಕರರಿಗೆ 180 ದಿನಗಳ ಪ್ರಸೂತಿ ರಜೆ ಮತ್ತು ಪುರುಷ ನೌಕರರಿಗೆ 15 ದಿನಗಳ ಪಿತೃತ್ವ ರಜೆ ನೀಡಲಾಗುತ್ತದೆ.

2) ಪ್ರಸ್ತುತ ಸೇವೆಯಿಂದ ನಿವೃತ್ತಿಯಾಗುವ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಅಥವಾ ಸೇವೆಯಲ್ಲಿ ಮರಣ ಹೊಂದಿದ ಸಿಬ್ಬಂದಿಯ ನ್ಯಾಯಬದ್ಧ ಅವಲಂಬಿತರಿಗೆ ಅವರು ಸಲ್ಲಿಸಿದ ಸೇವಾ ಅವಧಿಯ ಆಧಾರದ ಮೇಲೆ ಒಂದು ವರ್ಷದ ಸೇವೆಗೆ 15 ದಿನಗಳ ವೇತನದಂತೆ ಸೇವಾ ಅವಧಿಯ ಗರಿಷ್ಠ 20 ತಿಂಗಳ ವೇತನ ಮೀರದಂತೆ ನಿವೃತ್ತಿ ಹಾಗೂ ಮರಣೋತ್ತರ ಉಪದಾನಗಳನ್ನು ನೀಡಲಾಗುತ್ತಿದೆ.

3) ಗ್ರಾಮ ಪಂಚಾಯಿತಿ ಸಿಬ್ಬಂದಿಯು ಸೇವೆಯಲ್ಲಿದ್ದಾಗ ಮರಣ ಹೊಂದಿದಲ್ಲಿ ಅವರ ನ್ಯಾಯಬದ್ಧ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

4) ಗ್ರಾಮ ಪಂಚಾಯತಿ ನೌಕರರು ಸೇವೆಯಲ್ಲಿರುವಾಗಲೇ ಮೃತರಾದರೆ ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಶವಸಂಸ್ಕಾರಕ್ಕೆ ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಗ್ರಾಮ ಪಂಚಾಯತಿ ಸಂಪನ್ಮೂಲದಿಂದ ಭರಿಸಲು ಹಾಗೂ ಗ್ರಾಮ ಪಂಚಾಯತಿ ನೌಕರರು ಸೇವೆಯಲ್ಲಿರುವಾಗಲೇ ಮೃತರಾದರೆ ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಶವಸಂಸ್ಕಾರಕ್ಕೆ ರೂ.10.000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಗ್ರಾಮ ಪಂಚಾಯತಿ ಸಂಪನ್ಮೂಲದಿಂದ ಭರಿಸಲು ಅವಕಾಶ ಕಲ್ಪಿಸಲಾಗಿದೆ.

5) ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದಲ್ಲಿ ಮಂಜೂರಾದ ಹುದ್ದೆ ಖಾಲಿ ಇದ್ದಲ್ಲಿ, ವಾಟರ್ ಆಪರೇಟರ್/ ಅಟೆಂಡೆಂಟ್/ ಕ್ಲೀನರ್ಸ್ ವೃಂದದಿಂದ ಸಂಯುಕ್ತ ಜೇಷ್ಠತಾ ಪಟ್ಟಿ ಆಧಾರದ ಮೇಲೆ ಗ್ರಾಮ ಪಂಚಾಯಿತಿಯು ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

6) ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿ / ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಸೇವೆಯೊಳಗಿನ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಇರುವ ಹುದ್ದೆಗಳಿಗನುಸಾರವಾಗಿ ಬಿಲ್‌ಕಲೆಕ್ಟರ್ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ನೌಕರರಿಂದ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಗ್ರಾಮ ಪಂಚಾಯತಿ ನೌಕರರಿಗೆ ಆರೋಗ್ಯ ಭದ್ರತೆ ಕಲ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ.

1) ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದವರಿಗೆ ಅನಿರೀಕ್ಷಿತ ಸಂದರ್ಭಗಳಲ್ಲಿ ಅಪಘಾತಗಳಾದಲ್ಲಿ ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಆರ್ಥಿಕ ಭದ್ರತೆ ಒದಗಿಸುವ ಹಿತದೃಷ್ಟಿಯಿಂದ ಪ್ರಧಾನ ಮಂತ್ರಿಯವರ "ಜನ್‌ಧನ್" ಯೋಜನೆಯಡಿಯ ಈ ಕೆಳಕಂಡ ವಿಮಾ ಪಾಲಿಸಿಗಳನ್ನು ಕಡ್ಡಾಯವಾಗಿ ಮಾಡಿಸಲು ಮತ್ತು ಸಂಬಂಧಿಸಿದ ಸಿಬ್ಬಂದಿಗಳ ವೇತನದ ಬ್ಯಾಂಕ್ ಖಾತೆಗೆ ಲಿಂಕ್ ಮಾಡಿಸಿ, ವಾರ್ಷಿಕವಾಗಿ ಕಟಾವಣೆ ಮಾಡಲು ಅಗತ್ಯ ಕ್ರಮಕೈಗೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ತಿಳಿಸಲಾಗಿದೆ.

- ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ
- ಪ್ರಧಾನ ಮಂತ್ರಿ ಸುರಕ್ಷಾ ಜ್ಯೋತಿ ಭೀಮಾ ಯೋಜನೆ
- ಭಾರತೀಯ ಸ್ಟೇಟ್ ಬ್ಯಾಂಕ್‌ನ ಗ್ರೂಪ್ ಫರ್ಸನಲ್ ಆಕ್ಸಿಡೆಂಟ್ ಇನ್‌ಶ್ಯೂರೆನ್ಸ್

2) ಗ್ರಾಮ ಪಂಚಾಯತ್ ನೌಕರರು ಕೋವಿಡ್-19 ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಮರಣ ಹೊಂದಿದ್ದಲ್ಲಿ ಅವರ ಕುಟುಂಬದವರಿಗೆ 30 ಲಕ್ಷ ರೂ. ಪರಿಹಾರ ನೀಡಲು ಅಥವಾ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಅನಾರೋಗ್ಯಗೊಂಡಲ್ಲಿ ಸದರಿ ಚಿಕಿತ್ಸೆಗಾಗಿ ತಗಲುವ ವೈದ್ಯಕೀಯ ವೆಚ್ಚ ಭರಿಸಲು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಆಶ್ವಾಸನೆ ನಿಧಿಯನ್ನು ಸ್ಥಾಪಿಸಿ ಪರಿಹಾರ ನೀಡಲು ತಿಳಿಸಲಾಗಿದೆ.

3) ಗ್ರಾಮ ಪಂಚಾಯತಿ ನೌಕರರಿಗೆ ತೀವ್ರ ಸ್ವರೂಪದ ಕಾಯಿಲೆಗಳಾದ ಹೃದ್ರೋಗ ಶಸ್ತ್ರ ಚಿಕಿತ್ಸೆ, ಕ್ಯಾನ್ಸರ್, ಬೋನ್ ಮ್ಯಾರೋ ಟ್ರಾನ್ಸ್ ಪ್ಲಾಂಟ್, ಡಯಾಲಿಸಿಸ್ ಮತ್ತು ಮೂತ್ರಪಿಂಡ ಕಾಯಿಲೆಗಳಿಗೆ ತುತ್ತಾದಲ್ಲಿ ವೈದ್ಯಕೀಯ ವೆಚ್ಚ ಗರಿಷ್ಠ ರೂ. 50,000/- ಗಳನ್ನು ಒಂದು ಬಾರಿಗೆ ಮಾತ್ರ ಪಾವತಿಸಲು ಆದೇಶಿಸಲಾಗಿದೆ.

ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಸೇವಾ ಹಿರಿತನದ ವೇತನ ನಿಗಧಿಪಡಿಸಲು ಮತ್ತು ವೇತನ ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

**ಸಂಖ್ಯೆ: ಗ್ರಾಅಪ 187 ಗ್ರಾಪಂಅ 2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಗಳಿಗೆ ಉತ್ತರವನ್ನು ಬೇಗ ತರಿಸಿ ಕೊಡಿ. ಸದನದ ಗಮನಕ್ಕೆ ತರುವುದೇನೆಂದರೆ, ಡಾ॥ ಧನಂಜಯ ಸರ್ಜಿಯವರು, ಶ್ರೀ ಎಸ್.ವ್ಹಿ.ಸಂಕನೂರರವರು ಕೆ.ಪಿ.ಎಸ್.ಸಿ. ಪರೀಕ್ಷೆಯ ಬಗ್ಗೆ ನನಗೆ ಪ್ರಶ್ನೆಯನ್ನು ಕೇಳಿದ್ದೀರಿ. ಈ ಪ್ರಶ್ನೆ ನಿಯಮ 330 ರಲ್ಲಿ ಇರುವುದು ನನಗೆ ಗೊತ್ತಿತ್ತು. ಪ್ರಶ್ನೋತ್ತರ ವೇಳೆಯಲ್ಲಿ ಈ ಪ್ರಶ್ನೆಯನ್ನು ಕೇಳದಿದ್ದರೆ ಅದು ಭರವಸೆ ಸಮಿತಿಗೆ ಹೋಗುವುದಿಲ್ಲ. ಅದಕ್ಕೆ ನಾನು ಪ್ರಶ್ನೆಯನ್ನು ಕೇಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಅಂದರೆ, ನೀವು ಭರವಸೆ ಸಮಿತಿಯಲ್ಲಿ ಚರ್ಚೆ ಮಾಡುವುದಕ್ಕೆ ಅಧಿಕಾರವಿರಲಿ ಎನ್ನುವ ದೃಷ್ಟಿಯಿಂದ ಆ ಪ್ರಶ್ನೆಯನ್ನು ಕೇಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ನೀವು ನಿಯಮ 330 ರಲ್ಲಿ ಚರ್ಚೆ ಮಾಡಿದ್ದರೆ ಆ ಪ್ರಶ್ನೆ ಭರವಸೆ ಸಮಿತಿಗೆ ಹೋಗುತ್ತಿರಲಿಲ್ಲ. ಸಭಾಪತಿಯವರು ಹೇಳುವವರೆಗೆ ಸ್ವಲ್ಪ ತಾಳ್ಮೆಯಿಂದ ಇರಬೇಕು. ಇವತ್ತು ನಾಲ್ಕು ಜನರ ಹೆಸರನ್ನು ಕರೆದಾಗ ಅವರು ಗೈರು ಹಾಜರಾಗಿದ್ದರು. ಇನ್ನು ಮೇಲೆ ನಾನು ಕರೆದಾಗ ಇರಲಿಲ್ಲವೆಂದರೆ ನಾನು ಯಾರಿಗೂ ಮುಂದೆ ಅವಕಾಶ ಕೊಡುವುದಿಲ್ಲ. ಪ್ರಶ್ನೋತ್ತರ ಅವಧಿ ಒಂದು ಗಂಟೆ ಅವಧಿ ಇದ್ದರೆ ಇನ್ನೂ 75 ನಿಮಿಷಗಳನ್ನು ಹೆಚ್ಚಿಗೆ ಕೊಟ್ಟಿದ್ದೇನೆ.

**ಶ್ರೀ ಶರವಣ ಟಿ.ಎ.:–** ಮಾನ್ಯ ಸಭಾಪತಿಯವರೇ, ಈ ಸದನದ ಗೌರವ ಉಳಿಸಬೇಕೆಂದು ತಾವು ನಿನ್ನೆ ನಮಗೆಲ್ಲಾ ಪಾಠ ಮಾಡಿದ್ದೀರಿ. ನಮಗೂ ಅದರ ಬಗ್ಗೆ ಆಸಕ್ತಿ ಇದೆ, ನಾವು ಇಲ್ಲ ಎಂದು ಹೇಳುವುದಿಲ್ಲ. ಇವತ್ತು ಕಡ್ಡಾಯವಾಗಿ ಹಾಜರು ಇರಬೇಕಾದ ಸಚಿವರುಗಳು, ಅಧಿಕಾರಿಗಳು ಎಷ್ಟು ಜನರು ಇದ್ದಾರೆ ಎಂಬುದನ್ನು ನೋಡಿ.

**ಸಭಾಪತಿಯವರು:–** ತಾವು ಒಂದು ನಿಮಿಷ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆ ಅವಧಿಯಿಂದ ಇನ್ನು 75 ನಿಮಿಷಗಳ ಕಾಲ ಹೆಚ್ಚು ಮಾಡಿದ್ದೇನೆ. ನಿಮಗೆ ಸ್ವಲ್ಪ ತಾಳ್ಮೆ ಇರಬೇಕು. ನನ್ನ ಮಾತು ಮುಗಿದ ನಂತರ ತಾವು ಮಾತನಾಡಿ.

**4) ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು/ಅಧಿಕಾರಿಗಳ ಕುರಿತು ಪ್ರಕಟಣೆ**

1. ಶ್ರೀ ಸಿದ್ದರಾಮಯ್ಯ ರವರು, ಮಾನ್ಯ ಮುಖ್ಯಮಂತ್ರಿಗಳು
2. ಶ್ರೀ ಡಿ.ಕೆ.ಶಿವಕುಮಾರ್ ರವರು, ಮಾನ್ಯ ಉಪ ಮುಖ್ಯಮಂತ್ರಿಗಳು
3. ಡಾ॥ ಜಿ.ಪರಮೇಶ್ವರ್ ರವರು, ಮಾನ್ಯ ಗೃಹ ಸಚಿವರು
4. ಶ್ರೀ ಎಚ್.ಕೆ.ಪಾಟೀಲ್ ರವರು, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು
5. ಶ್ರೀ ಆರ್.ಬಿ.ತಿಮ್ಮಾಪುರ ರವರು, ಮಾನ್ಯ ಅಬಕಾರಿ ಸಚಿವರು
6. ಶ್ರೀ ಎನ್.ಎಸ್. ಬೋಸರಾಜು ರವರು, ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು

ತಂತ್ರಜ್ಞಾನ ಸಚಿವರು

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು**

1. ಶ್ರೀ ಎಂ.ಬಿ.ಪಾಟೀಲ್ ರವರು, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು, ಇವರು ನನ್ನ ಅನುಮತಿಯನ್ನು ತೆಗೆದುಕೊಂಡು ಹೊರಗೆ ಹೋಗಿದ್ದಾರೆ.
2. ಡಾ॥ ಹೆಚ್.ಸಿ.ಮಹದೇವಪ್ಪ ರವರು, ಮಾನ್ಯ ಸಮಾಜ ಕಲ್ಯಾಣ ಸಚಿವರು
3. ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್ ರವರು, ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
4. ಶ್ರೀ ಶರಣಬಸಪ್ಪ ದರ್ಶನಾಪೂರ ರವರು, ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು, ಇವರು ಆರೋಗ್ಯ ಸರಿಯಿಲ್ಲವೆಂದು ನನ್ನ ಅನುಮತಿಯನ್ನು ತೆಗೆದುಕೊಂಡಿದ್ದಾರೆ.
5. ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ ರವರು, ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
6. ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ ರವರು, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
7. ಶ್ರೀ ಡಿ.ಸುಧಾಕರ್ ರವರು, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು

**ಸದನದ ಪ್ರಾರಂಭದಿಂದ ಮುಕ್ತಾಯದವರೆಗೆ ಹಾಜರಿರುವ ಅಧಿಕಾರಿಗಳು**

1. ಶ್ರೀ ಅನ್ಮೋಲ್ ಜೈನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ.

**ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಹಾಜರಿರುವ ಅಧಿಕಾರಿಗಳು**

1. ಶ್ರೀ ರವಿ ಎಸ್. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ.
2. ಶ್ರೀ ಆರ್.ವೆಂಕಟೇಶ ಕುಮಾರ, ಅಬಕಾರಿ ಆಯುಕ್ತರು.
3. ಶ್ರೀ ಅನಿಲ್‌ಕುಮಾರ್‌ರತನ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.

ಇಷ್ಟು ಸಚಿವರುಗಳು, ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕು. ಪ್ರಶ್ನೋತ್ತರ ಮುಗಿದ ನಂತರ ನಿಮಗೆ ಗೊತ್ತಿರಲಿ ಎಂದು ನಾನು ಮಾರ್ಕ್ ಮಾಡಿ ಇಟ್ಟುಕೊಂಡಿದ್ದೇನೆ. ಅದನ್ನು ನಾನು ನಿಮ್ಮ ಗಮನಕ್ಕೆ ತಂದಿದ್ದೇನೆ. ಅದು ಸರ್ಕಾರಕ್ಕೆ ಬಿಟ್ಟಿರುವಂಥದ್ದು. ಸಚಿವರು ಸರಿಯಾಗಿ ಸದನಕ್ಕೆ ಬರುತ್ತಿಲ್ಲ ಎಂದು ನಾನು ನಿನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅದನ್ನು ಮಾನ್ಯ ಸಭಾನಾಯಕರಿಗೆ ಕೊಟ್ಟಿದ್ದೇನೆ. ನನ್ನ ಪ್ರಯತ್ನವನ್ನು ನಾನು ಪ್ರಾಮಾಣಿಕವಾಗಿ ಮಾಡಿದ್ದೇನೆ. ನಿಮ್ಮೆಲ್ಲರ ಸಹಕಾರ ಬೇಕಾಗುತ್ತದೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ದಿನಾಂಕ 10-03-2025 ರಂದು ನಿಯಮ 330 ರಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾವನೆ ಮಾಡುವುದಕ್ಕೆ ಐದು ನಿಮಿಷ ಸಮಯ ಕೊಡಿ. ಇದು ಬಹಳ ಮುಖ್ಯವಾದ ವಿಷಯವಾಗಿದೆ. ಆ ಭಾಗದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇವತ್ತು ಹೆಚ್ಚು ಕಡಿಮೆ ನೂರಕ್ಕಿಂತಲೂ ಹೆಚ್ಚು ಚಕ್ಕಡಿ ಗಾಡಿ ಅಥವಾ ಎತ್ತಿನ ಬಂಡಿಗಾಡಿಗಳಲ್ಲಿ ಜನರು ಬಂದು ಅಲ್ಲೇ ವಾಸಿಸುತ್ತಿದ್ದಾರೆ. ಅವರು ಅಲ್ಲೇ ಅಹೋರಾತ್ರಿ ಧರಣಿ ಮಾಡಿದ್ದಾರೆ. ರಸ್ತೆಗಳೆಲ್ಲಾ ಬಂದ್ ಮಾಡಿದ್ದಾರೆ. ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ದಯವಿಟ್ಟು ಇದರ ಬಗ್ಗೆ ಇವತ್ತೇ ಉತ್ತರ ಕೊಡಿ. ಆ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕು. ಇದು ಬಹಳ ಪ್ರಮುಖವಾದ ವಿಷಯವಾಗಿರುವುದರಿಂದ ದಯವಿಟ್ಟು ಇವತ್ತೇ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ನೀವು ನೋಟೀಸ್ ಕೊಟ್ಟಿರುವುದನ್ನು ನೋಡಿದಾಗ ಇದು ಬಹಳ ಮಹತ್ವವಾದ ವಿಷಯವಾಗಿದೆ ಎಂದು ನನಗೆ ಅರ್ಥವಾಗಿದೆ. ಆ ಹಿನ್ನೆಲೆಯಲ್ಲಿ ಇದನ್ನು ದಿನಾಂಕ 10-03-2025 ರಂದು ನಿಯಮ 330 ರಲ್ಲಿ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಏನಾದರೂ ಸರ್ಕಾರ ಮಧ್ಯಾಹ್ನ ತೆಗೆದುಕೊಳ್ಳುತ್ತೇವೆಂದರೆ ನಾನು ತಮಗೆ ತಿಳಿಸುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾವನೆಯನ್ನು ಮಂಡಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಕಮ್ಯುನಿಕೇಟ್ ಮಾಡುತ್ತೇನೆಂದು ಹೇಳಿದ್ದೇನಲ್ಲಾ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಇವತ್ತೇ ಉತ್ತರ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ, ಬಹಳ ಗಂಭೀರವಾದಂತಹ ಪರಿಸ್ಥಿತಿಯಾಗಿದೆ. ಬಹುಶಃ ಗೃಹ ಸಚಿವರಿಗೂ ಸಂದೇಶ ಬಂದಿರಬಹುದು.

**ಸಭಾಪತಿಯವರು:-** ನಿಮ್ಮ ನೋಟೀಸ್‌ನಲ್ಲೂ ಕೊಟ್ಟಿದ್ದೀರಿ. ಅದರ ಗಂಭೀರತೆಯನ್ನು ಅರಿತುಕೊಂಡು ನಾಳೆ ಬಜೆಟ್ ಇರುವುದರಿಂದ ಸೋಮವಾರ ದಿವಸ ಆ ವಿಷಯವನ್ನು ಹಾಕಿಕೊಂಡಿದ್ದೇನೆ.

(ಮುಂದು)

(113) 06/03/2025 12:20 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ(ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿನ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶವನ್ನು ನೀಡಿದ್ದೀರಿ.

**ಸಭಾಪತಿಯವರು:-** ನಿಮಗೆ ಮಾತನಾಡಲು ಕೇವಲ 10 ನಿಮಿಷಗಳ ಕಾಲಾವಕಾಶವನ್ನು ಮಾತ್ರವೇ ನೀಡಲಾಗಿದೆ. ನಿನ್ನೆಯ ದಿನ ನೀವು 20 ನಿಮಿಷಗಳವರೆಗೆ ಮಾತನಾಡಿದ್ದೀರಿ.

**ಶ್ರೀ ಡಿ.ಟಿ.ಶ್ರೀನಿವಾಸ(ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿನ ಕೇವಲ 13 ನಿಮಿಷಗಳ ಕಾಲಾವಕಾಶವನ್ನು ಮಾತ್ರವೇ ನೀಡಲಾಗಿತ್ತು. ನನ್ನ ಮಾತುಗಳನ್ನು ಮುಂದುವರೆಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಿನ್ನೆಯ ದಿನ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಬೇಕು ಬೇಡಗಳಿಂದ...

**ಸಭಾಪತಿಯವರು:-** ಶ್ರೀ ಶ್ರೀನಿವಾಸ್‌ರವರೇ ಒಂದು ನಿಮಿಷ ತಡೆಯಿರಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಪಕ್ಷವಾರು ಮಾತನಾಡುವವರ ಪಟ್ಟಿಯನ್ನು ನೀಡಿದ್ದು, ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ಭಾರತೀಯ ಜನತಾ ಪಕ್ಷದಿಂದ (ವಿರೋಧ ಪಕ್ಷದ ನಾಯಕರು)

1. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
2. ಶ್ರೀ ಅಡಗೂರ್ ಹೆಚ್.ವಿಶ್ವನಾಥ್
3. ಶ್ರೀ ಸಿ.ಟಿ.ರವಿ
4. ಶ್ರೀ ಶಶೀಲ್ ಜಿ.ನಮೋಶಿ
5. ಶ್ರೀ ಎನ್.ರವಿಕುಮಾರ್
6. ಶ್ರೀ ಎಸ್.ವ್ಹಿ.ಸಂಕನೂರ
7. ಶ್ರೀ ಸುನೀಲ್ ವಲ್ಯಾಪೂರೆ
8. ಶ್ರೀ ಡಿ.ಎಸ್.ಅರುಣ್
9. ಶ್ರೀ ಕೆ.ಎಸ್.ನವೀನ್
10. ಶ್ರೀಮತಿ ಭಾರತಿ ಶೆಟ್ಟಿ
11. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
12. ಶ್ರೀ ಚಿದಾನಂದ ಎಂ. ಗೌಡ
13. ಶ್ರೀ ಎನ್.ನಾಗರಾಜು (ಎಂ.ಟಿ.ಬಿ.)
14. ಶ್ರೀಮತಿ ಹೇಮಲತಾ ನಾಯಕ್

15. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
16. ಶ್ರೀ ಪಿ.ಹೆಚ್.ಪೂಜಾರ್ ರವರುಗಳು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ

1. ಶ್ರೀ ಐವನ್ ಡಿ'ಸೋಜಾ
2. ಡಾ॥ ಯತೀಂದ್ರ ಎಸ್
3. ಡಾ॥ ಉಮಾಶ್ರೀ
4. ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)
5. ಶ್ರೀ ಪುಟ್ಟಣ್ಣ
6. ಶ್ರೀ ರಾಜೇಂದ್ರ ರಾಜಣ್ಣ
7. ಶ್ರೀಮತಿ ಬಲ್ಕೀಸ್ ಬಾನು
8. ಶ್ರೀ ಜಗದೇವ್ ಗುತ್ತೇಗಾರ್
9. ಶ್ರೀ ಎ.ವಸಂತ ಕುಮಾರ್
10. ಶ್ರೀ ತಿಪ್ಪಣಪ್ಪ ಕಮಕನೂರ
11. ಶ್ರೀ ಎಂ.ಎಲ್.ಅನಿಲ್ ಕುಮಾರ್
12. ಶ್ರೀ ಎಂ.ನಾಗರಾಜು
13. ಶ್ರೀ ಕೆ.ಅಬ್ದುಲ್ ಜಬ್ಬರ್ ರವರುಗಳು.

ಜನತಾ ದಳ (ಜ್ಯಾ) ಪಕ್ಷದಿಂದ

1. ಶ್ರೀ ಎಸ್.ಎಲ್.ಭೋಜೇಗೌಡ
2. ಶ್ರೀ ಟಿ.ಎ.ಶರವಣ
3. ಶ್ರೀ ಗೋವಿಂದ ರಾಜು
4. ಶ್ರೀ ಸಿ.ಎನ್.ಮಂಜೇಗೌಡ ರವರುಗಳು.

ಇಷ್ಟು ಜನರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ತಮ್ಮ ಹೆಸರುಗಳನ್ನು ನೀಡಿದ್ದಾರೆ. ಸರದಿಯ ಪ್ರಕಾರ ನಿಮಗೆ ಮಾತನಾಡಲು ಅವಕಾಶವನ್ನು ನೀಡಲಾಗುವುದು. ನಿನ್ನೆಯ ದಿನ ಶ್ರೀ ಡಿ.ಟಿ.ಶ್ರೀನಿವಾಸ್ ರವರಿಗೆ ಮಾತನಾಡಲು ಅವಕಾಶವನ್ನು ನೀಡಲಾಗಿತ್ತು. ಮಧ್ಯದಲ್ಲಿಯೇ ಅವರ ಭಾಷಣವನ್ನು ನಿಲ್ಲಿಸಲಾಗಿತ್ತು.

ಹೀಗಾಗಿ ಇವತ್ತಿನ ದಿವಸ ಅವರಿಗೆ ಮೊದಲು ಅವಕಾಶವನ್ನು ನೀಡಿದ್ದೇನೆ. ಶ್ರೀ ಡಿ.ಟಿ.ಶ್ರೀನಿವಾಸ್ ರವರೇ ಮುಂದುವರೆಸಿ.

**5) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ**

**ಶ್ರೀ ಡಿ.ಟಿ.ಶ್ರೀನಿವಾಸ ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೆ, ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಿನ್ನೆಯ ದಿನ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಶ್ರೀ ಸಿ.ಟಿ. ರವಿಯವರು ಸದನದಲ್ಲಿ ಉಪಸ್ಥಿತರಿರಲಿಲ್ಲ. ನಾನು ಮಾತನಾಡುವ ಸಂದರ್ಭದಲ್ಲಿ ಅವರು ಉಪಸ್ಥಿತರಿರಬೇಕಾಗಿತ್ತು. ಏಕೆಂದರೆ, ಅವರ ಉಪಸ್ಥಿತಿಯಲ್ಲಿಯೇ ಕೆಲವೊಂದು ವಿಚಾರಗಳನ್ನು ಪ್ರಸ್ತಾಪಿಸಬೇಕಾಗಿತ್ತು. ಅನುಗ್ರಹ ಕೊಡುಗೆ ಯೋಜನೆಯಡಿ ಪಶುಪಾಲರಿಗೆ ನೆರವು, ಆಕಸ್ಮಿಕವಾಗಿ ಮರಣ ಹೊಂದಿದ ರಾಸು, ಕುರಿ ಮತ್ತು ಮೇಕೆಗಳಿರಬಹುದು; ಇವುಗಳಿಗೆ ನೆರವು ನೀಡಿರುವ ನಿಟ್ಟಿನಲ್ಲಿ ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ತೆಗೆದುಕೊಂಡ ನಿರ್ಣಯವನ್ನು ಖಂಡಿತವಾಗಿಯೂ ಸಹ ..., ನಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಈಗ ನೀಡುತ್ತಿರುವ ಪರಿಹಾರವು ಸಾಲದು ಎಂದು ಹೇಳಿರುವುದು ಸರಿಯಷ್ಟೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಆದರೆ, 2020 ನೇ ಸಾಲಿನಿಂದ ಹಿಡಿದು 2023 ನೇ ಸಾಲಿನವರೆಗೂ ನಾವು ಖುದ್ದಾಗಿ ಸಾಕಷ್ಟು ಬಾರಿ ಮನವಿಗಳನ್ನು ಸಲ್ಲಿಸಿ, ವಿನಂತಿಸಿಕೊಂಡರೂ ಸಹ ಚಿತ್ರದುರ್ಗ ಮತ್ತು ತುಮಕೂರು ಭಾಗದಲ್ಲಿ ಕುರಿಗಾಹಿಗಳು ಕುರಿಗಳನ್ನು ಹೊಡೆದುಕೊಂಡು ಮೇಯಿಸುವುದಕ್ಕಾಗಿ ಚಿಕ್ಕಮಗಳೂರು ಭಾಗಗಳಿಗೆ ಹೋಗುವ ಸಂದರ್ಭದಲ್ಲಿ ಲಾರಿ ಅಥವಾ ಮೆಟಾಡೋರ್‌ಗಳಿಂದ ಅಪಘಾತವಾಗಿ 10-20 ಕುರಿಗಳು ಸತ್ತು ಹೋದ ಸಂದರ್ಭದಲ್ಲಿ ಪರಿಹಾರ ನೀಡುವಂತೆ ನಾವುಗಳು ಸಾಕಷ್ಟು ಬಾರಿ ಮನವಿಗಳನ್ನು ಮಾಡಿದ್ದೇವೆ. ಆದರೂ ಸಹ 2020 ನೇ ಸಾಲಿನಿಂದ 2023 ನೇ ಸಾಲಿನವರೆಗೆ ಅಸುನೀಗಿದ ಯಾವುದೇ ರಾಸುಗಳಿಗೆ ಅನುಗ್ರಹ ಕೊಡುಗೆ ಯೋಜನೆಯಡಿ ಒಂದು ರೂಪಾಯಿಯಷ್ಟೂ ಪರಿಹಾರ ದೊರೆತಿರುವುದಿಲ್ಲ ಎಂಬ ಅಂಶವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ, 2023 ನೇ ಸಾಲಿನ ಕೊನೆಯ ಹಂತದಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿದರು. ಆದರೂ ಸಹ ಯಾವುದೇ ನಿಖರವಾದ ಅನುದಾನವನ್ನು ನೀಡಿರಲಿಲ್ಲ. ಮುಖ್ಯಮಂತ್ರಿಗಳು ಇದನ್ನು ಘೋಷಣೆ ಮಾಡಿದ ನಂತರ ಪಶುಸಂಗೋಪನಾ ಸಚಿವರು ಒಂದಿಷ್ಟು ಅನುದಾನದ ಮೊತ್ತವನ್ನು ನಿಗದಿಪಡಿಸಿದ್ದಾರೆ. ಈ ನಿಟ್ಟಿನಲ್ಲಿ ನಾವು ಖಂಡಿತವಾಗಿಯೂ ಸಹ ಧನ್ಯವಾದಗಳನ್ನು ತಿಳಿಸಬೇಕು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕುರಿಯನ್ನು ಮೇಯಿಸುವ ನಮ್ಮ ಸಮಾಜವಿರಬಹುದು ಅಥವಾ ಯಾರೇ ಇರಬಹುದು ಅವರಿಗೆ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ.

ಆದರೂ ಸಹ ನೀಡುವ ಅನುದಾನದ ಮೊತ್ತದಲ್ಲಿ ಒಂದಿಷ್ಟು ಬದಲಾವಣೆಗಳನ್ನು ಮಾಡಿದರೆ ಖಂಡಿತವಾಗಿಯೂ ಸಹ ..., ಶ್ರೀ ರವಿಯರವರು ಪ್ರಸ್ತಾಪಿಸಿದಂತೆ, ಅನುದಾನದ ಮೊತ್ತವನ್ನು ಹೆಚ್ಚು ಮಾಡುವುದೂ ಸಹ ಇಲ್ಲಿ ಪ್ರಸ್ತುತವಾಗಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಸಹ ಒಂದು ಕಡೆ ಕುರಿ, ಎತ್ತು ಮತ್ತು ಇತರೆ ಪ್ರಾಣಿಗಳು ಅಸುನೀಗುತ್ತವೆ. ಕಾಡಂಚಿನಲ್ಲಿ ವಾಸಿಸುವ ಕಾಡುಗೊಲ್ಲರ ಕುರಿಗಳನ್ನು ಮಂದೆ ಹಾಕಿರುವ ಪ್ರದೇಶಗಳಲ್ಲಿ ತೋಳ ಬಂದು ಪ್ರಾಣಿಗಳನ್ನು ಎತ್ತುಕೊಂಡು ಹೋಗುವ ಸಂದರ್ಭದಲ್ಲಿಯೂ ಸಹ ಖಂಡಿತವಾಗಿಯೂ ಸಹಾಯ ಧನವನ್ನು ನೀಡಬೇಕು. ಈಗ ನೀಡುತ್ತಿರುವ 5,000/- ರೂಪಾಯಿಗಳ ಸಹಾಯ ಧನವನ್ನು ಹೆಚ್ಚು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಗಮನಹರಿಸಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಹಿಂದೆ ಜಾರಿಯಲ್ಲಿದ್ದ ಅನುಗ್ರಹ ಕೊಡುಗೆ ಯೋಜನೆಯು ಸ್ಥಗಿತಗೊಂಡ ಸಂದರ್ಭದಲ್ಲಿ ಅದಕ್ಕೆ ಮರುಜೀವ ನೀಡಿದ ಸರ್ಕಾರವನ್ನು ಖಂಡಿತವಾಗಿಯೂ ಸಹ ನಾವು ಶ್ಲಾಘಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪ್ರಸ್ತುತ ಶ್ರೀ ಸಿ.ಟಿ.ರವಿ ಯವರು ಸದನದಲ್ಲಿ ಉಪಸ್ಥಿತರಿದ್ದಾರೆ; ಹೀಗಾಗಿ ಪ್ರವಾಸೋದ್ಯಮದ ಬಗ್ಗೆ ಒಂದೆರೆಡು ಮಾತುಗಳನ್ನು ಹೇಳವುದಕ್ಕೆ ಬಯಸುತ್ತೇನೆ. ಏಕೆಂದರೆ ಅವರು ಈ ಹಿಂದೆ ಪ್ರವಾಸೋದ್ಯಮ ಸಚಿವರಾಗಿದ್ದ ಸಂದರ್ಭದಲ್ಲಿ ಖಂಡಿತವಾಗಿಯೂ ಸಹ ಅವರಿಗೆ ಕಾಳಜಿ ಇತ್ತು. ಚಿತ್ರದುರ್ಗ ಭಾಗದಲ್ಲಿ ಹಬ್‌ವೊಂದನ್ನು ಮಾಡಬೇಕೆಂಬ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವು. ಒಳ್ಳೆಯ ಕೆಲಸವನ್ನು ಮಾಡುವ ಮನಸ್ಸನ್ನು ಇಟ್ಟುಕೊಂಡು ಆ ಸಂದರ್ಭದಲ್ಲಿ ಅವರು ಸಾಕಷ್ಟು ಸಂಶೋಧನೆಯನ್ನು ಮಾಡಿದ್ದರು ಎಂದು ನಾನು ಭಾವಿಸುತ್ತೇನೆ. ಆ ಸಂದರ್ಭದಲ್ಲಿ ಅವರು ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಪ್ರಸ್ತಾವನೆಗಳನ್ನೂ ಸಹ ಸಲ್ಲಿಸಿದ್ದರು; ಆದರೆ, ಯಾವುದೂ ಸಹ ಕಾರ್ಯಗತವಾಗಲಿಲ್ಲ. ಇವತ್ತಿನ ದಿವಸ ನಮ್ಮ ಸರ್ಕಾರವು ಪ್ರವಾಸೋದ್ಯಮ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಘೋಷಣೆ ಮಾಡಿದೆ. ಇದರಲ್ಲಿ ರೋಪ್‌ವೇ ಇರಬಹುದು. ಏಕೆಂದರೆ, ನಾವು ಬೇರೆ ದೇಶಗಳಿಗೆ ಮತ್ತು ರಾಜ್ಯಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ರೋಪ್‌ವೇಗಳ ಮೂಲಕ ದೇವಸ್ಥಾನಗಳನ್ನು ತಲುಪಿದಾಗ, ಬಹಳಷ್ಟು ಸಮಯ ಉಳಿತಾಯವಾಗುವುದನ್ನು ನಾವು ನೋಡಿದ್ದೇವೆ. ಆದರೆ, ಈ ರೀತಿಯ ಅವಕಾಶಗಳು ನಮ್ಮ ರಾಜ್ಯದಲ್ಲಿ ಆಗಿರಲಿಲ್ಲ. ಇವತ್ತಿನ ದಿವಸ ಸಾಕಷ್ಟು ಪ್ರವಾಸೋದ್ಯಮ ತಾಣಗಳನ್ನು ಗುರ್ತಿಸಿ, ರೋಪ್‌ವೇ ಮಾಡುವುದಕ್ಕಾಗಿ ಸಾವಿರಕ್ಕೂ ಹೆಚ್ಚು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ನಿಗದಿಪಡಿಸಿ, ಅಭಿವೃದ್ಧಿ ಮಾಡುವ ಯೋಜನೆಯನ್ನು ನಮ್ಮ ಸರ್ಕಾರವು ಕೈಗೊಂಡಿದೆ. ನಾವು ಕೆಲವೊಂದು ದೇಶಗಳಿಗೆ ಭೇಟಿ ನೀಡುತ್ತೇವೆ. ಇವತ್ತಿನ ದಿವಸ ಕೆಲವೊಂದು ದೇಶಗಳ ಸಂಪೂರ್ಣ ಆರ್ಥಿಕತೆಯು ಪ್ರವಾಸೋದ್ಯಮದ ಮೇಲೆಯೇ ನಿಂತಿದೆ. ಈ ನಿಟ್ಟಿನಲ್ಲಿ ಇದುವರೆಗೆ ಆಡಳಿತ ನಡೆಸಿದ ಸರ್ಕಾರಗಳು ಯಾವುದೇ ಇರಬಹುದು ಅದು ರಾಜ್ಯದಲ್ಲಾಗಿರಲಿ ಅಥವಾ ಕೇಂದ್ರದಲ್ಲಿರಲಿ ಪ್ರವಾಸೋದ್ಯಮಕ್ಕೆ ನಮ್ಮ ರಾಷ್ಟ್ರದಲ್ಲಿ ಒತ್ತುಕೊಡದೇ ಇರುವುದು ಖಂಡಿತವಾಗಿಯೂ ವಿಷಾದನೀಯ ಸಂಗತಿಯಾಗಿದೆ. ಏಕೆಂದರೆ, ಈಗ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟಗಳಲ್ಲಿ ಸಾಕಷ್ಟು

ಪ್ರವಾಸೋದ್ಯಮ ತಾಣಗಳು ಗುತ್ತಿಸಲ್ಪಟ್ಟಿವೆ. ನಮಗೆ ಗೊತ್ತಿಲ್ಲದಂತೆ, ಅಂತರ್ಜಾಲದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಜನ ಪ್ರವಾಸಿಗರು ಗುರ್ತಿಸಿಕೊಂಡು ಸ್ವಯಂಪ್ರೇರಿತರಾಗಿ ಬರುತ್ತಿದ್ದಾರೆ. ಆದರೆ, ಸರ್ಕಾರವು ಇದರ ಬಗ್ಗೆ ಗಮನಹರಿಸಿ, ನಮ್ಮ ರಾಷ್ಟ್ರದ ಮತ್ತು ರಾಜ್ಯದ ಆರ್ಥಿಕತೆಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಇದರ ಹೆಜ್ಜೆಯಾಗಿ ಪ್ರಸಕ್ತ ಸಾಲಿನಲ್ಲಿ ಮಂಡನೆ ಮಾಡುವ ಆಯವ್ಯಯದಲ್ಲಿ ನಮ್ಮ ಸರ್ಕಾರದ ಪ್ರವಾಸೋದ್ಯಮ ಸಚಿವರು ತುಂಬಾ ಅದ್ಭುತವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರಿಗೂ ಸಹ ನಾನು ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಇದರ ಜೊತೆಗೆ ಮತ್ತೊಂದು ಅಂಶವನ್ನು ಹೇಳಬಯಸುತ್ತೇನೆ. ಉದ್ದೇಶ ಒಳ್ಳೆಯದಿದ್ದಾಗ ನಮ್ಮ ಮನಸ್ಥಿತಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ. ಏಕೆಂದರೆ, ಈ ನಾನು ಅಧಿಕಾರದಲ್ಲಿದ್ದಾಗ ಮಾಡಿದ್ದು ಸರಿ ಮತ್ತು ಈಗ ಮಾಡುವುದು ಸರಿಯಲ್ಲ ಎನ್ನುವ ಮನಸ್ಥಿತಿ ಸರಿಯಾದುದಲ್ಲ. ಹಿಂದಿನ ಸರ್ಕಾರದ ಅವಧಿಯಲ್ಲಿ ಲೋಕಾಯುಕ್ತ ಸಂಸ್ಥೆಯು ನೀಡಿದ ವರದಿಯು ಸರಿಯಾಗಿದೆ ಹಾಗೂ ಅದೇ ಸಂಸ್ಥೆ ಈಗ ನೀಡಿರುವ ವರದಿಯು ಸರಿಯಾಗಿಲ್ಲ ಎಂದು ನಾವೇ ಆಪಾದನೆ ಮಾಡಿದ ಸಂದರ್ಭದಲ್ಲಿ, ನಾವೇ ಜನಪ್ರತಿನಿಧಿಗಳಾಗಿ ನಮ್ಮನ್ನು ನೋಡುವ ಜನರಿಗೆ ನಾವು ನೀಡುವ ಸಂದೇಶವೇನು ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂಭತ್ತು ವಿಶ್ವವಿದ್ಯಾಲಯಗಳ ಬಗ್ಗೆ ನಾನು ಖಂಡಿತವಾಗಿಯೂ ಸಹ ಮಾತನಾಡಲೇಬೇಕಾದ ಅವಶ್ಯಕತೆ ಇದೆ. ಈ ವಿಚಾರದಲ್ಲಿ ನನಗೆ ಆದ ಕಹಿ ಅನುಭವವನ್ನು ಖಂಡಿತವಾಗಿಯೂ ಸಹ ಹಂಚಿಕೊಳ್ಳಲೇಬೇಕು. ಏಕೆಂದರೆ ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದವನಾಗಿದ್ದೇನೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಾಗೂ ರಾಜೀವ ಗಾಂಧಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿದ ಸಾಕಷ್ಟು ಸದಸ್ಯರು ಇಲ್ಲಿ ಇದ್ದೇವೆ. ಬೆಂಗಳೂರು ವಿಶ್ವವಿದ್ಯಾಲಯವನ್ನು ಉತ್ತರ ಮತ್ತು ದಕ್ಷಿಣ ಎಂಬುದಾಗಿ ವಿಭಜಿಸಿದಾಗ..., ಖಂಡಿತವಾಗಿ ಈಗಲೂ ಸಹ ಇದಕ್ಕೆ ಬೇಕಾದ ಪೂರ್ಣ ಪ್ರಮಾಣದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆಗಿಲ್ಲ. ಖಾಸಗಿ ವಿದ್ಯಾ ಸಂಸ್ಥೆಗಳನ್ನು ಹೊಂದಿರುವ ನಾವು ಎನ್.ಎ.ಎ.ಸಿ. (NAAC – National Assessment and Accreditation Council) ಮತ್ತು ಐ.ಎಸ್.ಓ. ಸರ್ಟಿಫಿಕೇಟ್‌ಗಳನ್ನು ಹೊಂದಿದ್ದರೂ ಸಹ ವಿಶ್ವವಿದ್ಯಾಲಯ ಅನುದಾನ ಆಯೋಗ (ಯು.ಜಿ.ಸಿ.) ಕೆಳಗಡೆ ನಾವು ವಿಶ್ವವಿದ್ಯಾಲಯದ ಮೂಲಕ ಸಂಶೋಧನೆ ಮತ್ತು ಅಭಿವೃದ್ಧಿ ಅಡಿ ಸಲ್ಲಿಸಿದ ಅನುದಾನ ಕೋರಿ ಪ್ರಾಜೆಕ್ಟ್ ವರದಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ, ಕಳೆದ ಜನವರಿ ಮಾಹೆಯ 14 ನೇ ತಾರೀಖಿನಂದು ನಾನೇ ಖುದ್ದಾಗಿ ಅಲ್ಲಿಗೆ ಹೋಗಿ ವಿಚಾರಿಸಿದಾಗ, ಅಲ್ಲಿನವರು ನನಗೆ "ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ನಿಯಮ – 12(ಬಿ) ರಡಿ ದೃಢೀಕರಣವಿಲ್ಲ. ಹೀಗಾಗಿ ಸಲ್ಲಿಸಿರುವ ಪ್ರಾಜೆಕ್ಟ್‌ಗಳಿಗೆ ಅನುದಾನ ನೀಡುವುದಕ್ಕೆ ಸಾಧ್ಯವಿಲ್ಲ" ಎಂಬುದಾಗಿ ಪ್ರತ್ಯುತ್ತರವನ್ನು ನೀಡುತ್ತಾ, ನಮ್ಮ ಮನವಿಗಳನ್ನು ತಿರಸ್ಕರಿಸಿರುತ್ತಾರೆ. ಅಂದರೆ ಬಹಳ ವರ್ಷಗಳ ಹಿಂದೆ ಪ್ರಾರಂಭಗೊಂಡಿರುವ ವಿಶ್ವವಿದ್ಯಾಲಯಗಳಿಗೆ ಇದುವರೆವಿಗೂ ನಿಯಮ 12(ಬಿ) ರಡಿ ದೃಢೀಕರಣವಿಲ್ಲ, ಸಂಶೋಧನಾ ಮತ್ತು

ಅಭಿವೃದ್ಧಿ ಕೇಂದ್ರವಿಲ್ಲ. ಮುಂದುವರೆದು, ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸುಮಾರು 275 ಕಾಲೇಜುಗಳು ಬರುತ್ತವೆ. ಈ ಪೈಕಿ ನಮ್ಮದೂ ಸಹ ಒಂದು ಕಾಲೇಜು ಇದೆ. ಇಷ್ಟು ಕಾಲೇಜುಗಳು ತಮಗೆ ಎನ್.ಎ.ಎ.ಸಿ., ಎನ್.ಬಿ.ಎ. (NBA – National Board of Accreditation) ಮತ್ತು ಐ.ಎಸ್.ಓ. ಸರ್ಟಿಫಿಕೇಟ್‌ಗಳಿವೆ ಮತ್ತು ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳಿವೆ. ಇಂತಹ ಕಾಲೇಜುಗಳಲ್ಲಿ ಮಾಡಿದ ಪ್ರಾಜೆಕ್ಟ್‌ಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅನುದಾನ ಕೋರಿ ಅರ್ಜಿ ಸಲ್ಲಿಸಿದಾಗ ಅದು ಆಗದೇ ಇರುತ್ತದೆ. ಹಿಂದಿನ ಸರ್ಕಾರದ ಆಡಳಿತಾವಧಿಯ ಕೊನೆಯ ಹಂತದಲ್ಲಿ ತೆಗೆದುಕೊಂಡ ನಿರ್ಣಯವು..., ಆಗ ದಿಢೀರನೇ ಒಂಭತ್ತು ವಿಶ್ವವಿದ್ಯಾಲಯಗಳನ್ನು ಘೋಷಣೆ ಮಾಡಿದರು. ಇದಕ್ಕೆ ಅವರು ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿರಲಿಲ್ಲ ಎನ್ನುವುದು ನನ್ನ ಅನಿಸಿಕೆಯಾಗಿದೆ. ಇದಕ್ಕಿಂತಲೂ ಪೂರ್ವದಲ್ಲಿ ಘೋಷಣೆಯಾದ ವಿಶ್ವವಿದ್ಯಾಲಯಗಳಿಗೆ ಇವತ್ತಿನ ದಿವಸ ನಿಯಮ 12(ಬಿ) ರಡಿ ದೃಢೀಕರಣವಿಲ್ಲ. ಇದರ ವ್ಯಾಪ್ತಿಗೊಳಪಡುವ 276 ಕಾಲೇಜುಗಳಿಗೆ ಖಂಡಿತವಾಗಿಯೂ ಸಹ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ಯಾವುದೇ ಮಾನ್ಯತೆ ಇಲ್ಲ.

(ಮುಂದು)

(114) 06-03-2025(12-30) bkp-bns **(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಟಿ ಶ್ರೀನಿವಾಸ್** (ಮುಂದು)

ಕೇಂದ್ರ ಸರ್ಕಾರ ನಿಗದಿಪಡಿಸಿದಂತಹ ಅನುದಾನದಿಂದ ಯಾವುದೇ ಸಹಾಯ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮೊನ್ನೆ ತೆಗೆದುಕೊಂಡಿರುವಂತಹ ನಿರ್ಣಯ ಸರಿ ಇದೆ. ಏತಕ್ಕೆಂದರೆ ಹಾಲಿ ಇರುವಂತಹ ವಿಶ್ವವಿದ್ಯಾನಿಲಯಗಳನ್ನು ಸದೃಢ ಮಾಡಿ, ಅದರ ಕೆಳಗಡೆ ಬರುವಂತಹ ಎಲ್ಲಾ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಏನೇನು ಸಮಸ್ಯೆಗಳಿವೆ ಅಥವಾ ಅವರಿಗೆ ಫಂಡಿಂಗ್‌ಗೋಸ್ಕರ ಅನುಕೂಲ ಮಾಡಿಕೊಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಆ ನಿಟ್ಟಿನಲ್ಲಿ ಖಂಡಿತವಾಗಿ ಸರ್ಕಾರ ಕಾರ್ಯೋನ್ಮುಖವಾಗಬೇಕೆಂದು ಹೇಳುತ್ತಾ, ಅದರ ಜೊತೆಯಲ್ಲಿಯೇ ಈಗ ಮೈಕ್ರೋ ಫೈನಾನ್ಸ್ ವಿಚಾರವನ್ನು ತೆಗೆದುಕೊಂಡರೆ ಅದರ ವಿಚಾರವಾಗಿ ಖಂಡಿತವಾಗಿ ರಾಜ್ಯದಲ್ಲಿ ಸಾಕಷ್ಟು ಕಡೆ ಪ್ರಾಣಗಳು ಹೋಗಿರುವುದನ್ನು ನಾವುಗಳೆಲ್ಲರೂ ನೋಡಿರುತ್ತೇವೆ. ಇಲ್ಲಿಯೂ ಸಹ ಅದರ ವಿಚಾರವಾಗಿ ಚರ್ಚೆಗಳಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಈ ರಾಜ್ಯ ಸರ್ಕಾರ ಒಂದು ಧೃಢವಾದ ನಿರ್ಧಾರ ಮಾಡಿ ಅದಕ್ಕೊಂದು ಕಾಯಿದೆಯನ್ನು ತಂದಿತು. ಕಾಯಿದೆಯನ್ನು ತಂದಂತಹ ಸಂದರ್ಭದಲ್ಲಿ ನಮ್ಮ ಸರ್ಕಾರ ನಿರ್ಣಯ ಕೈಗೊಂಡು, ಅದು ಕಾಯಿದೆಯಾಗಿ ಹೊರಬರಬೇಕು. ಆ ಒಂದು span ನಲ್ಲಿಯೇ ಸಾಕಷ್ಟು ವ್ಯತ್ಯಾಸಗಳಾಯಿತು. ಅದಕ್ಕೆ ಯಾರು ಕಾರಣ? ಏತಕ್ಕೆ

ತಡವಾಯಿತು ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ಖಂಡಿತವಾಗಿ ನಾವು ಯೋಚನೆ ಮಾಡಬೇಕಾಗುತ್ತದೆ.

**ಉಪ ಸಭಾಪತಿಯವರು:-** ಶ್ರೀಯುತ ಶ್ರೀನಿವಾಸ್‌ರವರೆ, ಇನ್ನೂ ಮಾತನಾಡಲಿಕ್ಕೆ 24 ಜನರು ಸದಸ್ಯರುಗಳಿದ್ದಾರೆ. ನಾಳೆ ಬಜೆಟ್ ಇದೆ. ಇದಾದನಂತರ ಬಜೆಟ್ ಮೇಲೆ ಚರ್ಚೆಯಾಗುತ್ತದೆ. ಈಗ ಅವಕಾಶ ಸಿಕ್ಕುವಂತಹವರಿಗೆ ಅವಕಾಶಗಳು ಸಿಗುವುದಿಲ್ಲ. ಇದಕ್ಕೆ ಎಲ್ಲರೂ ಸಹಕಾರ ಮಾಡಬೇಕು. ಹೇಳಲಿಕ್ಕೆ ಎಲ್ಲರಿಗೂ ಅವಕಾಶ ಇದೆ.

**ಶ್ರೀ ಡಿ.ಟಿ ಶ್ರೀನಿವಾಸ್:-** ಕೊನೆಯದಾಗಿ, 5 ನಿಮಿಷ ಮಾತನಾಡುತ್ತೇನೆ.

**ಉಪಸಭಾಪತಿಯವರು:-** ಇಲ್ಲ, ಆಗುವುದಿಲ್ಲ. ನಿನ್ನೆಯೂ ಮಾತನಾಡಿದ್ದೀರಿ.

**ಶ್ರೀ ಡಿ.ಟಿ ಶ್ರೀನಿವಾಸ್:-** ನಿನ್ನೆ ನನಗೆ ಕೇವಲ 13 ನಿಮಿಷಗಳ ಕಾಲ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದರು.

**ಉಪ ಸಭಾಪತಿಯವರು:-** ಇದು ಸೇರಿದರೆ 25 ನಿಮಿಷಗಳಾಗುತ್ತದೆ. ದಯವಿಟ್ಟು ಸಹಕಾರ ಮಾಡಿ. ಒಂದು ನಿಮಿಷದಲ್ಲಿ ಮುಗಿಸಿ.

**ಶ್ರೀ ಡಿ.ಟಿ ಶ್ರೀನಿವಾಸ್ :-** ಮಾನ್ಯ ಸಭಾಪತಿಯವರೆ, ಮುಗಿಸುತ್ತೇನೆ. ಒಂದೇ ಒಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಶ್ರೀಮಾನ್ ಸಿ.ಎಸ್. ಅಶ್ವಥ್ ರವರು "ಒಳಿತು ಮಾಡು ಮನುಸ, ನೀ ಇರೋದು ಮೂರು ದಿವಸ. ಉಸಿರು ನಿಂತ ಮ್ಯಾಗೆ ನಿನ್ನ ಹೆಸರಜ ಹೇಳುತಾರ, ಪ್ರೀತಿ ಪ್ರೇಮ ಹಂಚಿ ಹೋಗಬೇಕು ನೀನು ಅಲ್ಲ." ಎಂದು ಹೇಳುತ್ತಾರೆ. ಆದರೆ, ನಾನು ಹೇಳುತ್ತೇನೆ, "ಶಾಶ್ವತವಾದ ಕೆಲಸವನ್ನು ಮಾಡಿ ಹೋಗಬೇಕು ನೀನು ಅಲ್ಲಿ ಸತ್ತಮೇಲೆ ನಿನಗೆ ಹೆಸರುಂಟು ಇಲ್ಲಿ." ಈ ಸಾಲಿನಲ್ಲಿ ಸೇರುವವರು ಯಾರು ಎಂದರೆ, ಶ್ರೀ ಜವಹಾರ್‌ಲಾಲ್ ನೆಹರುರವರು, ಅವರು ಪಂಚವಾರ್ಷಿಕ ಯೋಜನೆಗಳನ್ನು ತಂದು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ 36 ಕೋಟಿ ಇದ್ದಂತಹ ಜನಸಂಖ್ಯೆ ಇಂದು 146 ಕೋಟಿ ಆಗಿರುತ್ತದೆ. ಅದಕ್ಕೆ ಪೂರಕವಾಗಿರುವಂತಹ ಯೋಜನೆಗಳನ್ನು ರೂಪಿಸಿದಂತಹವರು. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು. ರೈತರು ಮತ್ತು ರೈತರ ಕೂಲಿಗಳ ಬಗ್ಗೆ ಮನಗಂಡಂತಹವರು. ಇಂದಿರಾಗಾಂಧಿಯವರು 1971 ರಲ್ಲಿ ಬರಗಾಲ ಇದ್ದಂತಹ ಸಂದರ್ಭದಲ್ಲಿ ಗರೀಬಿ ಹಠಾವೋ ತಂದಂತಹವರು. ಅಟಲ್ ಬಿಹಾರಿ ವಾಜಪೇಯಿ ಅವರನ್ನು ಇವತ್ತು ನೆನಪು ಮಾಡಿಕೊಳ್ಳಲೇಬೇಕು. 1961 ಮತ್ತು 1965 ರಲ್ಲಿ ಯುದ್ಧವಾಗುತ್ತದೆ. 1967 ರಲ್ಲಿ ಬಾಂಗ್ಲಾದೇಶ ವಿಮೋಚನಾ ಯುದ್ಧವಾದ ಸಂದರ್ಭದಲ್ಲಿ ಇಂದಿರಾಗಾಂಧಿಯವರು ಕೈಗೊಂಡಂತಹ ಕೆಲಸಗಳನ್ನು ಮನಗಂಡು 'ಉಕ್ಕಿನ ಮಹಿಳೆ' ಎಂದು ಹೇಳಿದಂತಹ ಮಹಾನ್ ನಾಯಕ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು. ಏಕೆಂದರೆ, ಯಾರೇ ಕೆಲಸ ಮಾಡಲಿ ಅದನ್ನು ಶ್ಲಾಘನೆ ಮಾಡಲೇಬೇಕು. ಇವತ್ತು ಚತುಷ್ಪಥ ರಸ್ತೆಗಳು ಬರುತ್ತಿವೆ. ಆ ರೀತಿ infrastructure ಅನ್ನು

develop ಮಾಡಿದರೆ ಮಾತ್ರ ರಾಷ್ಟ್ರ ಮುಂದುವರೆಯುತ್ತದೆ ಎಂದು ಮನಗಂಡಂತಹವರು. ಅವರ ಜೊತೆಜೊತೆಯಲ್ಲೇ ಶ್ರೀಯುತ ರಾಜೀವ್‌ಗಾಂಧಿಯವರು, ಮನಮೋಹನ್‌ಸಿಂಗ್ ರವರು ಇರಬಹುದು...

**ಶ್ರೀ ಸಿ.ಟಿ.ರವಿ:-** ಮಾನ್ಯ ಶ್ರೀನಿವಾಸ್‌ರವರೆ, 1967 ರಲ್ಲಿ ಅಲ್ಲ 1970-71ರಲ್ಲಿ ಬಾಂಗ್ಲಾ ವಿಮೋಚನಾ ಯುದ್ಧ ನಡೆದಿತ್ತು.

**ಶ್ರೀ ಡಿ.ಟಿ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, 1961 ರಲ್ಲಿ ಚೈನಾ ಯುದ್ಧ ನಡೆಯುತ್ತದೆ, 1965ರಲ್ಲಿ ಪಾಕಿಸ್ತಾನ್ ಯುದ್ಧ ನಡೆಯುತ್ತದೆ. ತದನಂತರದಲ್ಲಿ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಪಾಲ್ಗೊಂಡಂತಹ ಸಂದರ್ಭದಲ್ಲಿ, 'ನೀನು ಈ ಭಾರತದ ಉಕ್ಕಿನ ಮಹಿಳೆ' ಎಂದು ಹೇಳುವ ಧೈರ್ಯವನ್ನು ಅವರು ಮಾಡುತ್ತಾರೆ. ಎಷ್ಟೇ ಅನ್ಯಾಯವಾದರೂ ಸಹಿಸಿಕೊಂಡವರು ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು. ಇವತ್ತು ಅವರು ಇಲ್ಲದೇ ಇರಬಹುದು. ಆದರೆ, ಅವರ ನಿದರ್ಶನಗಳು ನಮ್ಮಲ್ಲಿ ಉಳಿಯುತ್ತವೆ. ಶ್ರೀ ರಾಜೀವ್ ಗಾಂಧೀಯವರ 'I.T.' **(ಗೊಂದಲ)** ಇರಬಹುದು, (**ಗೊಂದಲ)** ಸಿಂಗ್ ಅವರ 'ಆಧಾರ್' **(ಗೊಂದಲ)** ಇರಬಹುದು, ಒಬ್ಬ ಮನುಷ್ಯ ಹೋದಮೇಲೆ ನೆನಪು ಮಾಡಿಕೊಳ್ಳುತ್ತೇವೆ. ಡಾ॥ ಮನಮೋಹನ್ ಸಿಂಗ್‌ರವರು ಇತಿಹಾಸದ ಪುಟಗಳಲ್ಲಿ ಸೇರಿಕೊಂಡಿದ್ದಾರೆ.

**ಉಪ ಸಭಾಪತಿಯವರು:-** ಶ್ರೀಯುತ ಶ್ರೀನಿವಾಸ್‌ರವರು ಅರ್ಥ ಮಾಡಿಕೊಳ್ಳಬೇಕು. ಇನ್ನು 24 ಜನರು ಮಾತನಾಡುವವರು ಇದ್ದಾರೆ.

**ಶ್ರೀ ಡಿ.ಟಿ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಇವತ್ತು ದಿವಂಗತ ಡಿ. ದೇವರಾಜ ಅರಸ್‌ರವರು, ದಿವಂಗತ ಎಸ್.ಬಂಗಾರಪ್ಪನವರು, ಹಾಗೂ ಶ್ರೀ ಎಂ ವೀರಪ್ಪ ಮೊಯಿಲಿಯವರನ್ನು ನೆನಪು ಮಾಡಿಕೊಳ್ಳಬೇಕು. ಇವತ್ತು ನಾನು ಇಲ್ಲಿ ಮಾತನಾಡಬೇಕಾದರೆ 1993 ರಲ್ಲಿ ತಂದಂತಹ ಸಿ.ಇ.ಟಿ. ಎಂದು ನಾನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಸಣ್ಣ ಸಣ್ಣ ಸಮಾಜಗಳು ಇವತ್ತು ತಲೆ ಎತ್ತಿದ್ದಾರೆಂದರೆ ಅಂದು ಶ್ರೀ ಡಿ. ದೇವರಾಜ ಅರಸ್‌ರವರು ನಮ್ಮೆಲ್ಲಾ ಹಿಂದುಳಿದ ವರ್ಗದವರಿಗೆ ತಂದಂತಹ ಮೀಸಲಾತಿ ವಿಷಯಗಳಿರುತ್ತದೆ. ಹಾಗಾಗಿ, ಇತಿಹಾಸ ಪುಟಗಳಲ್ಲಿ ನಾವು ನಿಂತು ಹೋಗಿಬರಬೇಕಾಗುತ್ತದೆ. ನಾವೆಲ್ಲರೂ ಸೆಲಬ್ರಿಟಿಗಳು ಎನ್ನುತ್ತಾರೆ. ರಾಜಕಾರಣಿಗಳು, ಅದರ ಜೊತೆಗೆ ಸಿನಿಮಾ ಆಕ್ಟರ್‌ಗಳು ಇವತ್ತು ಸೆಲಬ್ರಿಟಿಗಳಾಗಿರುತ್ತಾರೆ.

**ಉಪ ಸಭಾಪತಿಯವರು:-** ದಯವಿಟ್ಟು ಮುಗಿಸಬೇಕು.

**ಶ್ರೀ ಡಿ.ಟಿ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ಈ ರೀತಿಯಲ್ಲಿ ನಾವು ಯಾರಿಂದ ಆಗಿದ್ದೇವೆ. ಜನರಿಂದ ಆಗಿರುತ್ತೇವೆ. ನಮ್ಮದು ಎಷ್ಟೇ ಕಷ್ಟಗಳಿದ್ದರೂ ಸಹ ಮನೆಯಲ್ಲಿ ನಮ್ಮ ಜೇಬಿನಲ್ಲಿ ಇಲ್ಲದಿದ್ದರೂ ಸಹ ನಮ್ಮ ಕ್ಷೇತ್ರದ ಜನರು ಬಂದು ನಮ್ಮನ್ನು ಕೇಳಿದಾಗ ನಾವು ಅವರಿಗೆ ಸಹಾಯ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಆದರೂ ಸಹ ನಾವು ತೆಗಳಿಕೆಗೆ ಒಳಗಾಗುತ್ತೇವೆ. ಇವತ್ತು ಜನರಿಂದ ಆದಂತಹ ಏನು, so called stars ಎಂದು ನಾವು ಏನು ಕರೆಯುತ್ತೇವೆ, ಕನ್ನಡದ ಬಗ್ಗೆ ಅವರಿಗೆ

ಅಭಿಮಾನ ಇರುವುದಿಲ್ಲ. ಕನ್ನಡ ರಾಜ್ಯೋತ್ಸವಕ್ಕೆ ಅವರನ್ನು ಕರೆದರೆ ಏಜೆಂಟ್ ಮೂಲಕ ಅವರು ಏನು ನಿಗದಿಪಡಿಸಿರುವಂತಹ ಚೆಕ್ ಅನ್ನು ನೀಡಿದರೆ ಮಾತ್ರ ಇವತ್ತು ಬರುವಂತಹವರಾಗಿರುತ್ತಾರೆ. ಅದಕ್ಕೋಸ್ಕರ ನಮ್ಮ ಉಪ ಮುಖ್ಯಮಂತ್ರಿಯವರು ಅವರ ನಟ್ ಮತ್ತು ಬೋಲ್ಟ್ ಅನ್ನು ಟೈಟ್ ಮಾಡಬೇಕೆಂದು ಹೇಳಿದರು. ಈ ನಿಟ್ಟಿನಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಎಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣದ ಅನೇಕ ಅಂಶಗಳನ್ನು ಇವತ್ತು ನಾವೆಲ್ಲಾ ಸದಸ್ಯರುಗಳು ಸರ್ಕಾರ ಮಾಡುತ್ತಿರುವಂತಹ ಅನೇಕ ವಿಷಯಗಳ ಬಗ್ಗೆ ರಾಜ್ಯಪಾಲರ ಮೂಲಕ ಹೇಳಿಸಿದಂತಹ ಅಂಶಗಳು ಏನಿವೆ, ಇವುಗಳನ್ನು ತೆಗೆದುಕೊಂಡು ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾವೆಲ್ಲರೂ ನಮ್ಮ ನಮ್ಮ ಪ್ರಯತ್ನಗಳನ್ನು ಮಾಡಿ ಸರ್ಕಾರದ ಗಮನವನ್ನು ಸೆಳೆಯುತ್ತೇವೆ ಮತ್ತು ಆಗಬೇಕಾದಂತಹ ವಿಷಯದ ಬಗ್ಗೆ ಸರ್ಕಾರ ಸ್ವಲ್ಪ ಗಮನಹರಿಸಿ ಕಾರ್ಯರೂಪದಲ್ಲಿ ತರಬೇಕೆನ್ನುವ ಉದ್ದೇಶದಿಂದ ನಾನು ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಪತಿಯವರೆ, ಎಲ್ಲರಿಗೂ ಗೊತ್ತಿರುವಂತಹ ವಿಷಯ ಏನೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿಯೂ ಕೂಡ ಭಾಷಾವಾರು ಪ್ರಾಂತಗಳು ರಚನೆಯಾಗಬೇಕೆಂದು ಹೇಳಲಾಯಿತು. Linguistic States ಆಗಬೇಕೆಂದು ಹೇಳಿ ಅದು ಕಾಂಗ್ರೆಸ್ ಪಕ್ಷದ ಒಂದು ನೀತಿ ಕೂಡ ಆಗಿತ್ತು. ಬಹುಶಃ 1929 ರಲ್ಲಿ ಕಾಂಗ್ರೆಸ್ ಪಕ್ಷದ ಒಂದು ರೆಸಲೂಷನ್ ಸಹಿತ ಮಾಡಲಾಯಿತು. ನಾವು ಬರುವಂತಹ ದಿನಗಳಲ್ಲಿ State Reorganisation ಅಥವಾ ಭಾಷಾವಾರು ಪ್ರಾಂತಗಳನ್ನು ರಚನೆ ಮಾಡಬೇಕೆನ್ನುವ ತೀರ್ಮಾನವನ್ನು ಕೂಡ ಕೈಗೊಳ್ಳುತ್ತಾರೆ. ಅದಾದಮೇಲೆ ಒಬ್ಬ ನಾಯಕರು ಧರಣಿ-ಸತ್ಯಾಗ್ರಹ ಸಹ ಮಾಡುತ್ತಾರೆ. ಅವರ ಮರಣದ ನಂತರ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಜವಹಾರ್‌ಲಾಲ್ ನೆಹರುರವರು ನಾವು ಇದನ್ನು `Fazal Ali Commission' ಎಂದು ಹೇಳಿ ಕಮಿಷನ್ ಅನ್ನು ನೇಮಕ ಮಾಡಿ ಆ ವರದಿಯನ್ನು ಸಲ್ಲಿಸುವಂತಹ ಕೆಲಸವನ್ನು ಮಾಡಿದ ಮೇಲೆ Fazal Ali Commission ನ ವರದಿ ಜಾರಿಗೆ ಬಂದಾದ ಮೇಲೆ 1956 ರಲ್ಲಿ ಅಂದಿನ ಮೈಸೂರು ರಾಜ್ಯ ಸ್ಥಾಪನೆಯಾಯಿತು. ನಾನು ಏತಕ್ಕೆ ಇದನ್ನು ಉಲ್ಲೇಖ ಮಾಡುತ್ತಿದ್ದೇನೆಂದರೆ ಕಲ್ಯಾಣ ಕರ್ನಾಟಕದ ಭಾಗ. ಹೈದ್ರಾಬಾದ್ ನಮಗೆ ಬಹಳ ಹತ್ತಿರದ ಪ್ರದೇಶ. ಆದರೆ, linguistic ಆಧಾರದ ಮೇಲೆ option ಅನ್ನು ಕೊಟ್ಟರು. ನೀವು ಹೈದ್ರಾಬಾದ್ ಸ್ಟೇಟ್‌ನಲ್ಲಿಯೇ ಉಳಿಯುತ್ತೀರಾ ಅಥವಾ ಹತ್ತಿರ ಇರುವುದರಿಂದ ಅನುಕೂಲವಾಗುವುದರಿಂದ ಇದು ಆಗಬಹುದಲ್ಲವೇ ಎಂದು ಹೇಳಿದರು. Would you like to join Mysore State ಎಂದು ಕೇಳಿದಾಗ ನಮಗೆ ಭಾಷಾವಾರು ಪ್ರಾಂತ್ಯ ಎಂದು ಹೇಳಿದರೆ ನಾವು ಕನ್ನಡ ಭಾಷೆಯನ್ನು ಮಾತನಾಡುವವರು ನಮಗೆ ಅನುಕೂಲವಾಗಿಲ್ಲವೆಂದರೂ ಪರವಾಗಿಲ್ಲ, ದೂರ

ಆದರೂ ಪರವಾಗಿಲ್ಲ, ನಾವು ಕರ್ನಾಟಕ ರಾಜ್ಯಕ್ಕೆ ಅಥವಾ ಅಂದಿನ ಮೈಸೂರು ರಾಜ್ಯಕ್ಕೆ ಸೇರುತ್ತೇವೆಂದು ಆ ಭಾಗದ ಅನೇಕ ನಾಯಕರು ಅಂದರೆ, ಸ್ವಾಮಿ ರಾಮಾನಂದ ತೀರ್ಥರವರನ್ನು ಒಳಗೊಂಡು ಅನೇಕ ನಾಯಕರು, ಇಲ್ಲ, ನಾವು ಈ ಕಡೆಯೇ ಸೇರಿಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದನ್ನು ಬಹುಶಃ ಯಾರು ಮರೆಯಬಾರದು. ನಾನು ಇದನ್ನು ಏತಕ್ಕೆ ಒತ್ತು ಕೊಟ್ಟು ಹೇಳುತ್ತಿದ್ದೇನೆಂದರೆ ಆಗಾಗ ಕರ್ನಾಟಕವನ್ನು ಆಳುವವರು ಯಾರೇ ಆಗಲಿ, ಯಾವುದೇ ಪಕ್ಷದವರಾಗರಲಿ, ನಮ್ಮನ್ನು ಅಂದರೆ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಮತ್ತು ಅಲ್ಲಿ ನೀಡಬೇಕಾದ ಅನುಕೂಲತೆ ಬಗ್ಗೆ ನಾವು ಒದರುವುದನ್ನು ಕೇಳಬೇಕಾಗುತ್ತದೆ. ಆದರೆ, ನಾನು ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ನಾವು ಏನು ಭಿಕ್ಷೆಯನ್ನು ಬೇಡುತ್ತಿಲ್ಲ, ನಮ್ಮ ಹಕ್ಕುಗಳನ್ನು ನಾವು ಕೇಳುತ್ತಿದ್ದೇವೆ. ಯಾರು ಮರೆಯಬಾರದು. ನಾವು ಯಾರಿಗೂ ಭಿಕ್ಷೆಯನ್ನು ಬೇಡುತ್ತಿಲ್ಲ, we are asking our right. ಇದು ಹಿಂದುಳಿದ ಭಾಗವೆಂದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಪ್ರಾರಂಭದಲ್ಲಿ ಶ್ರೀಮಾನ್ ಧರ್ಮಸಿಂಗ್‌ರವರು ತಮ್ಮ ವರದಿಯನ್ನು ಸಹ ಕೊಟ್ಟರು. ಅವರ ವರದಿಯ ಆಧಾರದ ಮೇಲೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು 1982 ರಲ್ಲಿ ರಚನೆ ಮಾಡಿದರು. ಆದರೆ, ಒಂದು ವಿವರವಾದ ವರದಿ ಇರಬೇಕೆಂದು ಹೇಳಿ, ಶ್ರೀಮಾನ್ ಎಸ್.ಎಂ. ಕೃಷ್ಣ ರವರು 2002 ರಲ್ಲಿ National Planning Commissionನ ಸದಸ್ಯರಾದ ಹಾಗೂ State Deputy Chairman of Planning Commission ಆಗಿದ್ದಂತಹ ಡಾ॥ ನಂಜುಂಡಪ್ಪನವರಿಗೆ ಆ ಒಂದು ಜವಾಬ್ದಾರಿಯನ್ನು ಕೊಟ್ಟಾದ ಮೇಲೆ ಅವರು ವರದಿಯನ್ನು ಕೊಟ್ಟರು. ಆದರೆ, ದುರ್ದೈವದ ಸಂಗತಿ ತದನಂತರ ಅದನ್ನು ತಕ್ಷಣ ಜಾರಿಗೆ ತರಲಿಲ್ಲ. ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಗೆ ಅಭಿನಂದನೆಗಳನ್ನು ಹೇಳುತ್ತೇನೆ. ಅವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಆ ಡಾ॥ ನಂಜುಂಡಪ್ಪನವರ ವರದಿಯನ್ನು ಜಾರಿಗೆ ತಂದರು. ಅದಕ್ಕೆ implementation committee ಯನ್ನು ರಚನೆ ಮಾಡಿ, ನನ್ನ ಒಂದು ಸುದೈವ, ನನ್ನನ್ನು ಆ ಕಮಿಟಿಯ ಅಧ್ಯಕ್ಷರನ್ನಾಗಿಯೂ ಕೂಡ ಅವರು ಮಾಡಿದ್ದರು.

**(ಮುಂದು)**

**(115) 06.03.2025 12.40 ಎಸ್‌ವಿ-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಶೀಲ್ ಜಿ.ನಮೋಶಿ (ಮುಂದು):-**

ಪ್ರಾರಂಭದಲ್ಲಿ ಬಹಳ ಕಡಿಮೆ ಮೊತ್ತ ಕೊಟ್ಟರು. ಆದರೆ ಅದಾದ ಮೇಲೆ ರೂ.2800 ಕೋಟಿ S.D.P. ಎಂದು ಹೇಳಿ ಆ ಹಣ ಕೂಡ sanction ಮಾಡಿದ್ದರು. Subsequently, regular Budget ನಲ್ಲಿ merge ಆದ ಹಾಗೆ ಮಾಡಿ ಆ implementation ಗೆ ಆ ಪ್ರಮಾಣದ ಮಹತ್ವ ಬರಲಿಲ್ಲ. ಆದರೂ ಕೂಡ ನಾನು ಏಕೆ ಇದರ ಉಲ್ಲೇಖ ಮಾಡುತ್ತಿದ್ದೇನೆಂದರೆ ತದನಂತರ 1990ರಲ್ಲಿ ನಾವೂ ಕೂಡ ಒಂದು ಹೋರಾಟ ಮಾಡಿದ್ದೇವೆ. ಆ ಹೋರಾಟ ಸಮಿತಿಯ ಅಧ್ಯಕ್ಷ ನಾನೂ ಆಗಿದ್ದೆನು. ಅನೇಕ ಹೋರಾಟದ ನಂತರ ನಾವೇನು ಬೇಡಿಕೆ

ಇಟ್ಟಿವೆಂದರೆ ನಮ್ಮ ಭಾಗದ ಉದ್ಯೋಗಾವಕಾಶಗಳನ್ನು ನಮಗೆ ಕೊಡಿ. ನಮ್ಮ ಭಾಗದಲ್ಲಿ ಕೊಡಬೇಕಾದಂತಹ ಸೀಟುಗಳನ್ನು, medical education ಅಥವಾ professional college ಗಳ admission ಗಳನ್ನು ನಮ್ಮ ಭಾಗಕ್ಕೆ ಕೊಡಿ ಮತ್ತು ವಿಶೇಷವಾದ ಹಣಕಾಸಿನ ನೆರವು ಆ ಭಾಗಕ್ಕೆ ಕೊಟ್ಟಾಗ ಮಾತ್ರ, we will be on par with the other parts of Karnataka. ಇದು ಅದರ ಮುಖ್ಯಾಂಶವಾಗಿತ್ತು. ಈ ಕಾರಣದಿಂದ subsequently, ಸಾಕಷ್ಟು ಹೋರಾಟದ ನಂತರ Article 371 J ಬಂದಿತು. ನಾನು ಇಲ್ಲಿ ಹೇಳಬೇಕಾಗುತ್ತದೆ. Article 371 A, B, C, D, ಇದು ಸ್ವಾತಂತ್ರ್ಯಾನಂತರ 1952ರಿಂದ ಬಂದಿತು. ಅಂದಿನ ಆಂಧ್ರಪ್ರದೇಶಕ್ಕೆ 1952ರಲ್ಲಿ Article 371 A, B ಬಂದಿತು. ತದನಂತರ ಗುಜರಾತ್ ಮುಂತಾದ ಕಡೆಗಳಿಗೆ Article 371 C, D ಎಲ್ಲಾ ಬಂದಿತು. ಆದರೆ ನಮ್ಮ ಭಾಗಕ್ಕೆ Article 371 J ಬಂದದ್ದು ದಿನಾಂಕ 01.01.2013 ರಲ್ಲಿ. ಈ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೇಂದ್ರ ಸಚಿವರಾಗಿದ್ದರು. ಅವರು ಆ ವಿಷಯವನ್ನು ತೆಗೆದುಕೊಂಡು ಅದನ್ನು implement ಮಾಡಬೇಕೆಂದು ಒತ್ತಾಯ ಕೂಡ ಮಾಡಿದ್ದರು. ಅವರ ಪ್ರಯತ್ನವನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಎರಡೂ ಮನೆಯಲ್ಲಿ ಬಿಲ್ ಅನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ಇದನ್ನು ತಕ್ಷಣ ಜಾರಿಗೆ ತರಬೇಕು ಎಂದು ಹೇಳಿ ಆ ಬೇಡಿಕೆಯನ್ನು, ಪ್ರಸ್ತಾವನೆಯನ್ನು ಇಟ್ಟು ಕೇಂದ್ರಕ್ಕೆ ಕಳುಹಿಸಿದ್ದಾದ ಮೇಲೆ Central Government has taken cognizance. ಅದಾದ ಮೇಲೆ ದಿನಾಂಕ 01.01.2013ರಂದು Article 371 J ಬಂದಿತು.

ದುರ್ದೈವದ ಸಂಗತಿ ಏನೆಂದರೆ ಇವತ್ತಿನವರೆಗೆ Article 371 J ಅನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತಂದಿಲ್ಲ. ಮಾನ್ಯ ಬೋಸರಾಜು ಅವರು ಇಲ್ಲಿಯೇ ಇದ್ದಾರೆ. ಅವರು ಸುದೀರ್ಘವಾಗಿ 45-50 ವರ್ಷ ರಾಜಕೀಯವನ್ನು ಈ ಭಾಗದಲ್ಲಿ ಮಾಡಿದ್ದಾರೆ. ಇದಕ್ಕಾಗಿ ಸಮಿತಿಯನ್ನು ರಚಿಸಲಾಗಿದ್ದು, ರೂ.37,662 ಕೊಟ್ಟಿದ್ದೇವೆ ಇತ್ಯಾದಿ ವಿವರಗಳನ್ನು ಹೇಳುತ್ತಾರೆ. ನಾನು ಏಕೆ ಇದನ್ನು ಒತ್ತು ಕೊಟ್ಟು ಹೇಳುತ್ತಿದ್ದೇನೆಂದರೆ Rules frame ಮಾಡಿ ಈಗ 12 ವರ್ಷ ಆಯಿತು. ಆದರೆ ಸಾಕಷ್ಟು ತಪ್ಪುಗಳಿವೆ. ಆ ತಪ್ಪುಗಳನ್ನು ಸರಿಪಡಿಸುವಂತಹ ಪ್ರಯತ್ನ ಇಲ್ಲಿಯವರೆಗೆ ಆಗಿಲ್ಲ. ಸರಿಪಡಿಸಬೇಕೆನ್ನುವ ಪ್ರಯತ್ನ ಇಲ್ಲಿಯವರೆಗೆ ಆಗಿಲ್ಲ. ಅನೇಕ ವಿಚಾರಗಳನ್ನು ಹೇಳಬೇಕಾಗುತ್ತದೆ. ಉದಾಹರಣೆಗಾಗಿ ನಂಜುಂಡಪ್ಪ ವರದಿ ಒಂದು ಮುಖ್ಯವಾದ ವಿಷಯ ಏನು ಹೇಳುತ್ತದೆಯೆಂದರೆ ಇಡೀ ಸರ್ಕಾರಿ ನೌಕರರಲ್ಲಿ ಬರೀ 4% ಮಾತ್ರ ಕಲ್ಯಾಣ ಕರ್ನಾಟಕ ಭಾಗದವರಿದ್ದಾರೆ. ಇದನ್ನು ಹೆಚ್ಚಿಸಬೇಕು. ಇನ್ನೊಂದು ಬಹಳ ಮುಖ್ಯವಾದುದು 8% State Government offices ನಲ್ಲಿ ಮೀಸಲಾತಿ ಕೊಡಬೇಕೆಂದು ಹೇಳಿದ್ದಾರೆ. ದುರ್ದೈವ ಎಂದರೆ ಇದನ್ನು 20-25% office ಗಳಲ್ಲಿ ಕೂಡ ನೀತಿ-ನಿಯಮಾನುಸಾರ ಆ ಮೀಸಲಾತಿ ಕೊಡುತ್ತಿಲ್ಲ. ಏಕೆ ಮಾಡುತ್ತಿಲ್ಲ? ಸರಿ ಮಾಡಲಿಕ್ಕೆ ತೊಂದರೆ ಏನು? ಆ ಭಾಗದ ಜನರು ಸರ್ಕಾರಿ ನೌಕರಿಗೆ ಬರಬಾರದೆ? ಒಂದು ಆಶ್ಚರ್ಯದ ಸಂಗತಿ ಎಂದರೆ, ರಾಜ್ಯ ವಿಧಾನ ಮಂಡಲದಲ್ಲಿ ಕೂಡ ನಮಗೆ ಏನು ಮೀಸಲಾತಿ ಕೊಡಬೇಕಾಗಿತ್ತೋ ಅದನ್ನು ತಳ್ಳಿ ಹಾಕಿದ್ದಾರೆ.

ತಳ್ಳಿ ಹಾಕಿ ಕೋರ್ಟ್‌ಗೆ ಹೋಗಿರುವಂಥದ್ದು ಇಲ್ಲಿಯವರೆವಿಗೂ ಇತ್ಯರ್ಥವಾಗಿಲ್ಲ. Till today problem is there. ನಮ್ಮ ಭಾಗದವರಿಗೆ ಇಲ್ಲಿ ಕೊಡಬೇಕಾದ 8% ಮೀಸಲಾತಿ ಇನ್ನೂ implement ಆಗಿಲ್ಲ. ಯಾವಾಗ ಸರಿ ಮಾಡುತ್ತೀರಿ? ನಾವು ಯಾವ ಭಿಕ್ಷೆಯನ್ನೂ ಕೇಳುತ್ತಿಲ್ಲ ಎಂದು ನಾನು ಪದೇ ಪದೇ ಹೇಳುತ್ತೇನೆ. ನೀವು ಯಾವಾಗ ಸರಿ ಮಾಡುತ್ತೀರಿ? ಏಕೆ ಸರಿ ಮಾಡುತ್ತಿಲ್ಲ?

ನಾನು ನಮ್ಮ ಭಾಗದ ಸಚಿವರನ್ನು ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಭಾಗದ ಜನರಿಗೆ ಎಲ್ಲಾ ಕಡೆ ಉದ್ಯೋಗಾವಕಾಶ ಸಿಗಬೇಕೋ ಬೇಡವೋ ಎಂದು ನಾನು ನಮ್ಮ ಭಾಗದ ಸಚಿವರನ್ನು ಕೇಳಬಯಸುತ್ತೇನೆ. ಏಕೆ ಅದರ ಬಗ್ಗೆ ಪ್ರಯತ್ನ ಮಾಡುತ್ತಿಲ್ಲ? ಉದ್ಯೋಗಾವಕಾಶದ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಬೇರೆ ಬೇರೆ ಸುತ್ತೋಲೆ ಬಂದಿತು. 2015, 2016 ರಲ್ಲಿ ಸುತ್ತೋಲೆಗಳು ಬಂದವು. Exact date ನನಗೆ ನೆನಪಿಲ್ಲ. 2019ರಲ್ಲಿ ಬಂದಿತು. 2020ರಲ್ಲಿ ಬಂದಿತು. 2022ರಲ್ಲಿ ಬಂದಿತು. ದಿನಾಂಕ 01.01.2023ರಂದು ನಮ್ಮ ಸರ್ಕಾರವಿದ್ದಾಗ ಮಾನ್ಯ ಶ್ರೀರಾಮುಲು ಅವರು, Article 371 J ಕುರಿತು Cabinet sub committee ಇದ್ದಂತಹ ಸಮಿತಿಯಲ್ಲಿ ನಾವು ಇದನ್ನು ಪ್ರಸ್ತಾವನೆ ಮಾಡಿ implement ಮಾಡಿಸಿದ್ದೇವೆ. ಆ Circular ಅನ್ನು ಕೂಡ ತಂದಿದ್ದಾರೆ.

ನನ್ನ ಪ್ರಶ್ನೆ ಏನೆಂದರೆ ಇಷ್ಟೆಲ್ಲಾ ಗೊಂದಲ ಏಕೆ? ನೇಮಕಾತಿ ಮಾಡುವುದರಲ್ಲಿ ಒಂದು ಪದ್ಧತಿ ಮಾಡಬೇಕು. ತಪ್ಪೇಕೆ? ಇದನ್ನು ಸರಿಪಡಿಸಲಿಕ್ಕೆ ನಿಮಗೆ ಏನಾಗಿದೆ? 12 ವರ್ಷಗಳಾದರೂ ಸರಿಪಡಿಸಲಿಕ್ಕೆ ಆಗಲಿಲ್ಲವೆ? ಇಲ್ಲಿ ಒಂದು basic question ಏನಿದೆ ಎಂದು ಹೇಳಬಯಸುತ್ತೇನೆ. ಎಸ್.ಸಿ.-ಎಸ್.ಟಿ. ಮೀಸಲಾತಿ ಕೊಡುತ್ತೇವೆ.

**ಉಪ ಸಭಾಪತಿಯವರು:-** 10 ನಿಮಿಷ ಆಯಿತು. ನಿಮಗೆ ಇನ್ನೂ ಎಷ್ಟು ಸಮಯ ಬೇಕು? ಇನ್ನೂ 24 ಜನ ಮಾತನಾಡುವವರಿದ್ದಾರೆ. ಇನ್ನೊಂದು ಐದು ನಿಮಿಷದಲ್ಲಿ ಮುಗಿಸಿ. ನಾಳೆ ಬಜೆಟ್ ಮಂಡನೆಯಾಗಲಿದೆ. ಇನ್ನುಳಿದವರಿಗೂ ಅವಕಾಶ ಸಿಗಬೇಕು. ನಾನು ಅದನ್ನೇ ಪುನರುಚ್ಚರಿಸುತ್ತಿದ್ದೇನೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ನನಗೆ ನೀವು ಅರ್ಧ ಗಂಟೆಯಾದರೂ ಅವಕಾಶ ಕೊಡಬೇಕು. ಏಕೆಂದರೆ ಆಡಳಿತ ಪಕ್ಷದವರಿಗೆ ಆಸಕ್ತಿ ಕಡಿಮೆ. ನಾವು ವಿರೋಧ ಪಕ್ಷದವರು ಹೇಳಿ ಸರಿಪಡಿಸೋಣವೆಂದರೆ ನಮಗೆ ಅವಕಾಶ ಕೊಡಲಿಲ್ಲವೆಂದರೆ ಅವರು ಹೇಗೆ ಸರಿಮಾಡುತ್ತಾರೆ ಎಂಬುದು ನನ್ನ ಪ್ರಶ್ನೆ. ಆದ್ದರಿಂದ ದಯವಿಟ್ಟು ಅರ್ಧ ಗಂಟೆ ಕಾಲಾವಕಾಶ ಕೊಡಿ.

**ಉಪ ಸಭಾಪತಿಯವರು:-** ಇಲ್ಲ. ಇನ್ನು 10 ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಶಶೀಲ್ ಜಿ.ನಮೋಶಿ:-** ನನಗೆ ನೀವು ಕಾಲಾವಕಾಶ ಕೊಡಬೇಕೆಂದು ದಯವಿಟ್ಟು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಎಲ್ಲಾ ನೇಮಕಾತಿಗಳು ಒಂದಿಲ್ಲೊಂದು ಕಾರಣದಿಂದ they are all in the High Court. ಏಕೆ ಸರಿಪಡಿಸಲಿಲ್ಲ? ಸರಿಪಡಿಸುವುದಕ್ಕೆ ತೊಂದರೆ ಏನಾಯಿತು? ಕೇಂದ್ರದವರು ನೀಟ್ ಪರೀಕ್ಷೆ ಮಾಡುತ್ತಾರೆ.

NEET examination results are taken by all the States. ಎಲ್ಲರೂ ತೆಗೆದುಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲೂ ಸಹ, professional colleges ನಡೆಸುವ ಎಲ್ಲರಿಗೂ ತಿಳಿದಿರುವ ವಿಷಯ. Government seats ಗೆ ಅದೇ ಮೆರಿಟ್ ತೆಗೆದುಕೊಳ್ಳುತ್ತೇವೆ. Private seat ಗಳಿಗೂ ಅದೇ ಮೆರಿಟ್ ತೆಗೆದುಕೊಳ್ಳುತ್ತೇವೆ. N.R.I. (Non-Resident Indian) ಸೀಟ್ ಇರಲಿ, ಮ್ಯಾನೇಜ್‌ಮೆಂಟ್ ಸೀಟ್ ಇರಲಿ ಆ ಒಂದು ಮೆರಿಟ್ ಮೇಲೆಯೇ ಮಾಡುತ್ತೇವೆ. ಇಲ್ಲಿ ಕಲ್ಯಾಣ ಕರ್ನಾಟಕದವರಿಗೆ ಒಂದು ಪರೀಕ್ಷೆ. ಬೇರೆ ಭಾಗದವರಿಗೆ ಒಂದು ಪರೀಕ್ಷೆ. ಇದನ್ನು ಯಾರು ಹೇಳಿದ್ದಾರೆ? ಒಂದೇ ಪರೀಕ್ಷೆ ಸಾಕು. ಹತ್ತಾರು ಪರೀಕ್ಷೆ ಬೇಕಾಗಿಲ್ಲ. ಆ ವಿದ್ಯಾರ್ಥಿ ಪಾಪ ಅದಕ್ಕೂ ಶುಲ್ಕ ಕಟ್ಟಬೇಕು, ಇದಕ್ಕೂ ಶುಲ್ಕ ಕಟ್ಟಬೇಕು. ಆ ಪರೀಕ್ಷೆಯನ್ನೂ ಕಟ್ಟಬೇಕು, ಈ ಪರೀಕ್ಷೆಯನ್ನೂ ಕಟ್ಟಬೇಕು. ಒಂದೇ ಪರೀಕ್ಷೆ ಮಾಡಿ. ನಿಮಗೆ ಏಕೆ ಅದನ್ನು ಮಾಡಲಿಕ್ಕೆ ಬರಲಿಲ್ಲ? ಒಂದು ಮುಖ್ಯವಾದ ವಿಚಾರವನ್ನು ನಾನು ಹೇಳಬಯಸುತ್ತೇನೆ. ಎಸ್.ಸಿ.-ಎಸ್.ಟಿ. ಮೀಸಲಾತಿ ಇದೆ. ಇದು ಒಂದು Constitutional reservation. 15+3=18% ಎಸ್.ಸಿ.-ಎಸ್.ಟಿ. ಮೀಸಲಾತಿ ಕೊಡುತ್ತೇವೆ. ಆದರೆ ಉಳಿದ 82%ನಲ್ಲಿ ಎಲ್ಲರೂ ಪರೀಕ್ಷೆ ಕೊಡಬಹುದು. ಎಸ್.ಸಿ. ಯವರು ಪರೀಕ್ಷೆ ತೆಗೆದುಕೊಳ್ಳಬಹುದು. ಇಲ್ಲಿ ಏಕೆ ಹಾಗೆ ಮಾಡುತ್ತಿಲ್ಲ? ಇಲ್ಲಿ compartment ಮಾಡಿದ್ದಾರೆ. ಅದನ್ನೇ ಬೇರೆ, ಇದನ್ನೇ ಬೇರೆ ಮಾಡಿದ್ದಾರೆ ಎಂದು ಮಾನ್ಯ ಹೆಚ್.ಕೆ.ಪಾಟೀಲರವರಿಗೆ ನಾನು ನೋವಿನಿಂದ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ರೀತಿ compartment ಮಾಡಿ, he/she is not eligible to appear for the examinations of non-Kalyana Karnataka. ಯಾರು ಹೇಳಿದ್ದಾರೆ? ಎಸ್.ಸಿ. ಯವರಿಗೆ General quota ದಲ್ಲಿ ಪರೀಕ್ಷೆ ಕೊಡುವುದಿಲ್ಲವೆ? ಕಲ್ಯಾಣ ಕರ್ನಾಟಕದವರಿಗೆ ಏಕೆ ಅದರಲ್ಲಿ appear ಆಗಲಿಕ್ಕೆ ಬಿಡಲಿಲ್ಲ? ಇಲ್ಲಿಯವರೆಗೆ ಕೆ.ಪಿ.ಎಸ್.ಸಿ. ಯವರು ಪರೀಕ್ಷೆ ಮಾಡುತ್ತಾರೆ; ಅವರದೊಂದು ಪದ್ಧತಿ. Karnataka Examination Authority (KEA) ಅವರು ಪರೀಕ್ಷೆ ಮಾಡುತ್ತಾರೆ; ಅವರದೊಂದು ಪದ್ಧತಿ. ಬೇರೆ ಬೇರೆ Authorities ಬೇರೆ ಬೇರೆ ರೀತಿಯಲ್ಲಿ ಪರೀಕ್ಷೆ ಮಾಡುತ್ತೀರಿ. ಇವೆಲ್ಲಾ ಬರುವುದು ಡಿ.ಪಿ.ಎ.ಆರ್. ಅಡಿಯಲ್ಲಿ. But, why different examinations? ಬೇರೆ ಪದ್ಧತಿ ಏಕೆ? ಇದನ್ನು ಸರಿಪಡಿಸುವುದಕ್ಕೆ ನಾನು ಮಾನ್ಯ ಸಚಿವರನ್ನು ವಿನಂತಿ ಮಾಡುತ್ತೇನೆ. ಇದನ್ನು ನಾವು ದಿನಾಂಕ 01.02.2023ರ ಆದೇಶದಿಂದ ಆ ಒಂದು ರೂಲ್‌ನಲ್ಲಿ ಸರಿಪಡಿಸಿದ್ದೇವೆ. The matter is in the High Court. 15 ಬೇರೆ ಬೇರೆ ಪ್ರಕರಣಗಳು ಬಾಕಿಯಿವೆ. ಮೂರು ವರ್ಷಗಳಿಂದ ಕೇಸ್ ನಡೆಯುತ್ತಿದೆ. ಹೆಚ್ಚು ಕಡಿಮೆ 15,000 ಜನರಿಗೆ ಇದು ಸಂಬಂಧ ಪಡುತ್ತದೆ.

**(ಮುಂದು)**

**(116) 06-03-2025/12.50/ಎಂವಿ-ಕೆಎಸ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಶೀಲ್ ಜಿ. ನಮೋಶಿ (ಮುಂದು):-**

ಇವತ್ತು ಇದು ಹೆಚ್ಚು ಕಡಿಮೆ 15,000 ಸಾವಿರ ಜನರಿಗೆ ಸಂಬಂಧಪಡುತ್ತದೆ. ಇದನ್ನು ಏಕೆ clear ಮಾಡಿಲ್ಲ? ಏಕೆ ಪ್ರಯತ್ನ ಮಾಡುತ್ತಿಲ್ಲ? ಸರ್ಕಾರ ಸುಮ್ಮನೆ ಕುಳಿತುಕೊಂಡಿದೆ. ನಾನು ಆ ಸಮಿತಿಯ ಅಧ್ಯಕ್ಷರಾದ ಶ್ರೀ ಪ್ರಿಯಾಂಕ್ ಖರ್ಗೆಯವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಚಿವರಾದ ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಮತ್ತು ಮತ್ತು ಶ್ರೀ ಈಶ್ವರ ಖಂಡ್ರೆಯವರು ಸಹ ಆಸಕ್ತಿ ವಹಿಸುತ್ತಾರೆ. ಅವರು ಇದರ ಬಗ್ಗೆ ಏಕೆ ಗಮನಹರಿಸುತ್ತಿಲ್ಲ? ಇದರ ಬಗ್ಗೆ ಕಳಕಳಿ ವಹಿಸಿ, ಇದನ್ನು ಏಕೆ ಸರಿಪಡಿಸುತ್ತಿಲ್ಲ. ಇದಕ್ಕೆ ಒಂದೇ ರೂಲ್ ಅನ್ನು ಮಾಡಲಿ. ಏನಾದರೂ ಸಲಹೆ ಸೂಚನೆಗಳಿಗೆ ಬೇಕಾದರೆ ನಾನು ಬರುತ್ತೇನೆ ಮತ್ತು ತಜ್ಞರ ಸಲಹೆ ಸೂಚನೆ ತೆಗೆದುಕೊಳ್ಳಲಿ. ಹೌದು ಇದು ಸರಿ ಇದೆ ಎಂದು 2024ರಲ್ಲಿಯೇ ಎಂದು ರೂಲ್ ಮಾಡಿದ್ದಾರೆ. ಆದರೆ, ಅದರ proceedings ಬಂದಿಲ್ಲ. ಅದೇ ರೀತಿ ಪ್ರಮೋಷನ್‌ನಲ್ಲೂ ಸಹ ಹಾಗೆಯೇ ಇರಬೇಕಲ್ಲವೇ? ಇದು ಯಾವಾಗ ಬೆಳಕಿಗೆ ಬಂತು ಎಂದರೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೈಸ್ಕೂಲ್ ಹೆಡ್ ಮಾಸ್ಟರ್‌ಗಳಿಗೆ ಪ್ರಮೋಷನ್ ಬಂತು. ಆ ಪ್ರಮೋಷನ್ ಬಂದಾಗ, ಭಾಗದ ಎಲ್ಲರೂ ಸೇರಿಕೊಂಡು ಆ ಪ್ರಮೋಷನ್ ಬೇಡವೇ ಬೇಡ ಎಂದರು. ಏಕೆಂದರೆ, ಇದರಲ್ಲಿ ನಮಗೆ ಮೀಸಲಾತಿಯನ್ನು ಕೊಡುತ್ತಿಲ್ಲ. ಮತ್ತೆ compartment ಮಾಡಿ, ಏನಾಗಿದೆ ಎಂದರೆ Constables and Assistant Masters ಗಳಿಗೆ 1997ರ ಪಟ್ಟಿಯಲ್ಲಿ ಇದ್ದಾರೆ, ಅವರಿಗೆ ಪ್ರಮೋಷನ್ ಬಂದಿಲ್ಲ. Non-Kalyana Karnataka ಭಾಗದವರಿಗೆ 2003ರಲ್ಲಿ ಬಂದಿರುವಂತಹವರಿಗೆ ಪ್ರಮೋಷನ್ ಬಂದಿದೆ. ಅದೇ ರೀತಿ 1997ರಲ್ಲಿ ಇದ್ದಂತಹ Constables ಗಳು ಹವಾಲ್ದಾರ್ ಆಗಲಿಲ್ಲ. ಆದರೆ, 2002ರಲ್ಲಿ ಇದ್ದಂತಹವರು ಹವಾಲ್ದಾರ್ ಆಗಿದ್ದಾರೆ. ಏಕೆಂದರೆ, compartment ಅನ್ನು ಬೇರೆ ಬೇರೆ ಮಾಡಿದ್ದಾರೆ. ಅದಕ್ಕೆ ಅಲ್ಲಿ ಏನು ಮಾಡಬೇಕಾಗಿತ್ತು ಎಂದರೆ, ಎಲ್ಲದಕ್ಕೂ ಎಲ್ಲರೂ ಅರ್ಹರು ಎಂದು ಪರೀಕ್ಷೆಯನ್ನು ನೀಡಿದ್ದರೆ, ಅವರಿಗೂ eligibility ಬರುತ್ತಿತ್ತು. ಇವರಿಗೂ eligibility ಬರುತ್ತಿತ್ತು. ಯಾರಿಗೂ ಅನ್ಯಾಯವಾಗುತ್ತಿರಲಿಲ್ಲ. 2017ರಲ್ಲಿ ಪದವಿ ಕಾಲೇಜಿನ ನೇಮಕಾತಿಗೆ ಸಂಬಂಧಪಟ್ಟಂತೆ ಕೋರ್ಟ್ ತೀರ್ಪು ನೀಡಿದೆ. The Kalyan Karnataka reservation is also similar to a SC (Scheduled Castes) and ST (Scheduled Tribes) reservation. ಇದಕ್ಕೆ ಕೇಂದ್ರ ಸರ್ಕಾರದವರು ಒಂದು Constitutional amendment ಮಾಡಿಕೊಟ್ಟಿದ್ದಾರೆಯೇ ಹೊರತು ಇದು ನಮ್ಮ ಮತ್ತು ಅವರ ಮನೆಯಲ್ಲಿ ಆಗಿರುವಂತಹ ಬದಲಾವಣೆಯಲ್ಲ. ಆದರೂ ಕೂಡ ಇದನ್ನು ಏಕೆ ಸರಿಪಡಿಸಿಲ್ಲ? ಇವತ್ತು ನಾನು ಇದನ್ನು ತಕ್ಷಣ ಸರಿಪಡಿಸಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಬಹಳ ಒತ್ತುಕೊಟ್ಟು ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ವರ್ಷ ಗುಲ್ಬರ್ಗದಲ್ಲಿ ಕ್ಯಾಬಿನೆಟ್ ಸಭೆ ಮಾಡಿದರು. ಆ ಕ್ಯಾಬಿನೆಟ್ ಸಭೆಯಲ್ಲಿ ಮಾನ್ಯ ಸಭಾನಾಯಕರಾದ ಶ್ರೀ ಎಸ್.ಎನ್.ಬೋಸರಾಜು ರವರು ಸಹ ಇದ್ದರು ಎಂದು ಕಾಣಿಸುತ್ತದೆ. ಆಗ ಅಲ್ಲಿ ಅನೇಕ ನಿರ್ಣಯಗಳನ್ನು ತೆಗೆದುಕೊಂಡರು. ಆಗ ಬಹಳ ದೊಡ್ಡ ಪ್ರಮಾಣದ ಪತ್ರಿಕೆ ಹೇಳಿಕೆಯನ್ನು ನೀಡಿದರು. ಅಂದರೆ, ಸುಮಾರು 11,000/- ಕೋಟಿ ರೂಪಾಯಿಗಳನ್ನು ಈ ಭಾಗದ ಅಭಿವೃದ್ಧಿ ಕೆಲಸಕ್ಕಾಗಿ ಮೀಸಲಿಡುತ್ತೇವೆ ಮತ್ತು ಖರ್ಚು ಮಾಡುತ್ತೇವೆಂದು ದೊಡ್ಡದಾದ

ಘೋಷಣೆಯನ್ನು ಮಾಡಿದರು. ಆದರೆ, ಕಾರ್ಯರೂಪದಲ್ಲಿ ಏನು ಬಂತು? ನಾನು ಒಂದೇ ಒಂದು ಉದಾಹರಣೆಯನ್ನು ಮಾನ್ಯ ಸಭಾನಾಯಕರಾದ ಶ್ರೀ ಎಸ್.ಎನ್.ಬೋಸರಾಜು ರವರಿಗೆ ಸಂಬಂಧಪಟ್ಟಂತೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ಹಟ್ಟಿ ಗೋಲ್ಡ್ ಮೈನ್ಸ್ ಬಹಳ ಪ್ರಮುಖವಾದಂತಹ ನಮ್ಮ ಭಾಗದ, ನಮ್ಮ ದೇಶದಲ್ಲಿಯೇ ಮತ್ತು ರಾಜ್ಯದಲ್ಲಿಯೇ ಬಹಳ ದೊಡ್ಡದಾದಂತಹ ಒಂದು gold production unit. ಮೈನಿಂಗ್‌ನಲ್ಲಿ ಸಾಕಷ್ಟು ಓರ್ ಸಿಕ್ಕಿದೆ. ಆ ಕಾಲದಿಂದ ಇವತ್ತಿನವರೆಗೆ ಹೆಚ್ಚು ಕಡಿಮೆ 3,500 ಕೆಜಿ ಪ್ರತಿವರ್ಷ ಅಲ್ಲಿ ಬಂಗಾರ ಉತ್ಪಾದನೆಯಾಗುತ್ತದೆ. ಮಾನ್ಯ ಕೇಂದ್ರ ಸರ್ಕಾರದವರು ಸರ್ವೆ ಮಾಡಿ, ಸುಮಾರು ಹನ್ನೊಂದು ಕಡೆಗಳಲ್ಲಿ ಅಂದರೆ, ಹಟ್ಟಿ ನಾರ್ಥ್, ತುಪ್ಪದೂರು ಸೌತ್, ಹಿರೇನಾಡೂರ್, ಹಟ್ಟಿ ಸೌತ್, ಮಸ್ಕಿ, ಹಿರೆಬಡ್ನಾಳ್, ಮಸ್ಕಿ ಶಾಂಗೊಳ್, ರೋಡಲಬಂಡಾ ಎಂದು ಈ ಎಲ್ಲಾ ಹನ್ನೊಂದು ಕಡೆಗಳಲ್ಲಿ ಸಾಕಷ್ಟು ಮೈನಿಂಗ್ ಓರ್ ಇದೆ. ಆದುದರಿಂದ ನೀವು ಮೈನಿಂಗ್ ಮಾಡಿ ಎಂದು ಕೇಂದ್ರ ಸರ್ಕಾರ ವರದಿ ಕೊಟ್ಟಮೇಲೆ ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಮತ್ತೆ ಅವರು ಕೂಡ ಪ್ರಶ್ನೆ ಮಾಡಿದ್ದಾರೆ. ಅಂದರೆ, ಅದನ್ನು ನಮಗೆ ಕೊಟ್ಟರೆ ನಾವು ಮಾಡುತ್ತೇವೆಂದು. ಅದಕ್ಕೆ ಇವತ್ತು ನಾವು ಗಮನಹರಿಸಬೇಕು. ನಮ್ಮ ರಾಜ್ಯದಲ್ಲಿ ಒಂದು public sector undertaking ಸರಿಯಾಗಿ ನಡೆಯುತ್ತಿದೆಂದರೆ, ಅದು ಹಟ್ಟಿ ಗೋಲ್ಡ್ ಮೈನ್. There is no other company in India. ಅಷ್ಟು ಒಳ್ಳೆಯ ರೀತಿಯಲ್ಲಿ ಉತ್ಪಾದನೆ ಮಾಡಿ, ಬಂಗಾರವನ್ನು ಉತ್ಪಾದನೆ ಮಾಡುವಂತಹ ಮತ್ತೊಂದು ಕಂಪನಿ ಇಲ್ಲ. ಆದರೆ, ಇಷ್ಟೆಲ್ಲಾ ಇದ್ದರೂ ಕೂಡ, ಅವರಿಗೆ ಏಕೆ ನೀವು ಮೈನಿಂಗ್ ಪ್ರಾಜೆಕ್ಟ್ ಮಾಡುವುದಕ್ಕೆ ಬಿಡುತ್ತಿಲ್ಲ. ರಾಜ್ಯ ಸರ್ಕಾರ ಸುಮ್ಮನೆ ಕುಳಿತ್ತಿದೆ. ಅದನ್ನು privatize ಮಾಡಬೇಕು ಎನ್ನುತ್ತಾರೋ? ಮತ್ಯಾರಿಗೆ ಕೊಡಬೇಕು ಎಂದು ಇದ್ದಾರೋ? ಈ HGML (Hutti Gold Mines Company Limited) capable ಇಲ್ಲವೇ? ಇಲ್ಲಿ ಒಂದೇ ಕಡೆಗಳಲ್ಲಿ ಸುಮಾರು 4,500 ಜನರು ಕೆಲಸ ಮಾಡುತ್ತಾರೆ. ಮಾನ್ಯ ಹೆಚ್.ಕೆ.ಪಾಟೀಲ್ ಸಾಹೇಬರೆ ಮತ್ತು ಡಾ:ಹೆಚ್.ಸಿ.ಮಹದೇವಪ್ಪ ಸಾಹೇಬರೆ ಹೆಚ್ಚು ಕಡಿಮೆ ಹನ್ನೊಂದು ಕಡೆಗಳಲ್ಲಿ ಮೈನಿಂಗ್ ಶುರುವಾದರೆ, ಸುಮಾರು 40 ಸಾವಿರದಿಂದ 50 ಸಾವಿರ ಜನರಿಗೆ ಉದ್ಯೋಗ ಸಿಗುತ್ತದೆ. ಈ ರೀತಿ ಇರುವಾಗ ಇದನ್ನು ಏಕೆ ಮಾಡಬಾರದು. ಅವರು ವರದಿ ಕೊಟ್ಟು ಸುಮಾರು ಮೂರು ವರ್ಷವಾಗಿದೆ. ಇವರು ಇನ್ನು ಏಕೆ ಸುಮ್ಮನಿದ್ದಾರೆ? ಮೈನಿಂಗ್ ಅನ್ನು ಏಕೆ ಮಾಡಲಿಲ್ಲ? ಅವರು ಮೈನಿಂಗ್ ಮಾಡುವುದಕ್ಕೆ ಅನುಮತಿ ಏಕೆ ಕೊಡಲಿಲ್ಲ? ಒಟ್ಟಾರೆ ಇದು ಏನು ಹೇಳುತ್ತದೆಂದರೆ, ಈ ಮೈನಿಂಗ್‌ಗೆ ಯಾವುದೇ ರೀತಿಯ ಅನುಮತಿ ಬೇಕಾಗಿಲ್ಲ. ಇದು ಸರ್ಕಾರದ್ದು ಆಗಿರುವುದರಿಂದ ಅವರು ಟೆಂಡರ್ ಕರೆದು ಕೊಡಬೇಕಾಗಿಲ್ಲ. Hutti Gold Mines is a proven good industry. ಅದು ದೊಡ್ಡ ಇಂಡಸ್ಟ್ರಿ. ಇದನ್ನು ಮಾಡಬೇಕೆಂದು ನಾನು ಬಹಳ ಒತ್ತಾಯ ಮಾಡುತ್ತೇನೆ. ನಾನು ಮತ್ತೊಂದು ಹೇಳುವುದಕ್ಕೆ ಇಚ್ಛೇಪಡುವುದೇನೆಂದರೆ, ಆರ್ಟಿಕಲ್ 371(ಜೆ) ಬಂದ ಮೇಲೆ ಮೀಸಲಾತಿ ಶಾಲಾ-ಕಾಲೇಜುಗಳಲ್ಲಿ ಏನು ಅಡ್ಮಿಷನ್ಸ್ ಏನು ಆಗುತ್ತವೆ. ಆ ಭಾಗದ ಜನರಿಗೆ ಶೇಕಡಾ 80, 75 ಅಥವಾ 70 ಮೀಸಲಾತಿ ಅದೇ ಭಾಗದ ಜನರಿಗೆ ಸಿಗಬೇಕು. ಬೇರೆ ಬೇರೆ ಕೆಟಗರಿ 'ಎ', 'ಬಿ', 'ಸಿ' ಮತ್ತು 'ಡಿ' ಗುಂಪಿನ ಉದ್ಯೋಗದ ಅವಕಾಶ

ಯಾರಿಗೆ ಕೊಡುತ್ತಾರೆ, ಅದೇ ಭಾಗದ ಜನರಿಗೆ ಸಿಗಬೇಕು ಎಂಬುದು ಒಂದು. ಮತ್ತೊಂದು ಕಡೆ ಹಣವನ್ನು ಮೀಸಲಾತಿ ಇಟ್ಟಿದ್ದಾರೆ. ಹಣ ಮೀಸಲಾತಿ ಅಭಿವೃದ್ಧಿಗಾಗಿ ಎಷ್ಟೆ ಹಣ ಕೊಟ್ಟರೂ ಕೂಡ ರಾಜ್ಯದ ಉಳಿದ ಭಾಗದವರು ಇವರಿಗೆ ಇಷ್ಟನ್ನು ಏಕೆ ಕೊಟ್ಟಿದ್ದೀರಿ ಎಂದು ಕೇಳುವಂಥದ್ದು ಇಲ್ಲವಂತೆ, as it is a Constitutional amendment. ಪ್ರಾರಂಭದಲ್ಲಿ ಅನುಚ್ಛೇದ 371(ಜೆ) ಅಡಿಯಲ್ಲಿ ಕೆ.ಕೆ.ಆರ್.ಡಿ.ಬಿ.ಯನ್ನು ಏನು ರಚನೆ ಮಾಡಿದ್ದಾರೆ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ಒಂದು ಕಾಲದಲ್ಲಿ ಸುಮಾರು 500/- ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಕಳೆದ ವರ್ಷ ಸುಮಾರು 3,000/- ರೂಪಾಯಿಗಳನ್ನು ನೀಡಿದ್ದರು. ಅದನ್ನು ಈ ವರ್ಷದಿಂದ 5,000/- ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗ ದುಃಖದ ಸಂಗತಿ ಏನೆಂದರೆ, ಈ ಹಿಂದೆ ಕೊಟ್ಟಂತಹ 3,000/- ಕೋಟಿ ರೂಪಾಯಿ ಇನ್ನು ಖರ್ಚಾಗಿಲ್ಲ. ಈಗ ಅದರ action plan ಪೂರ್ತಿಯಾಗಿಲ್ಲ. ಈ ವರ್ಷ 5,000/- ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಕೇವಲ ಡಂಗೂರ ಹೊಡಯುತ್ತಿದ್ದೇವೆ. 5,000/- ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಎಲ್ಲರೂ ಹೊಡೆದುಕೊಳ್ಳುತ್ತಿದ್ದಾರೆ. ಈಗ ಅದರ ಹಣ ಕೊಟ್ಟಿರುವುದು ಯಾವಾಗ ಗೊತ್ತೇ? ಇದು ಬಹಳ ಆಶ್ಚರ್ಯದ ಸಂಗತಿ ಏನೆಂದರೆ, ಹಣ ಬಿಡುಗಡೆಯಾಗಿರುವುದು ಈ Session decide ಆದಮೇಲೆ ಫೆಬ್ರವರಿ 28ರವರೆಗೆ ಸುಮಾರು 750/- ಕೋಟಿ ರೂಪಾಯಿಗಳ ಮೊದಲನೇ ಕಂತನ್ನು ನೀಡಿದ್ದಾರೆ. ಅಂದರೆ, ಹಿಂದೆ ನೀಡಿರುವಂತಹ ಹಣ ಇನ್ನೂ ಖರ್ಚಾಗಿಲ್ಲ. ಇವರು ಏನು ಮಾಡುತ್ತಿದ್ದರು? ಅವರ ಸಾಮರ್ಥ್ಯ ಇದೇನಾ? ಈಗ ಲೋಕೋಪಯೋಗಿ ಇಲಾಖೆ, ಲ್ಯಾಂಡ್ ಆರ್ಮಿ ಮತ್ತು ನಿರ್ಮಿತಿ ಕೇಂದ್ರಕ್ಕೆ ಕೊಡುತ್ತಾರೆ. ಇವತ್ತು ಲೋಕೋಪಯೋಗಿ ಇಲಾಖೆ 10,000/- ಕೋಟಿ ರೂಪಾಯಿಗಳ ಬಹಳ ದೊಡ್ಡ ಬಜೆಟ್ ಇದೆಯೆಂದು, ಬಹಳ ದೊಡ್ಡ ಇಲಾಖೆಯನ್ನು ಸೃಷ್ಟಿ ಮಾಡಿ, ಕೆಲಸ ಮಾಡಿಸುತ್ತಿದ್ದಾರೆ. ಈಗ 5,000/- ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎಂಬುದು ಎಲ್ಲರಿಗೂ ಅನುಭವ ಇರುವಂತಹ ಮಾತು. Why don't you create an engineering team? ಅವರು ಇಂಜಿನಿಯರಿಂಗ್ ತಂಡವನ್ನು ರಚನೆ ಮಾಡಿ, ಅದನ್ನು ಏಕೆ ಖರ್ಚು ಮಾಡುತ್ತಿಲ್ಲ. ಇದರಲ್ಲಿ ಬಹಳ ಸ್ಪಷ್ಟವಾಗಿ ಏನು ಕಂಡು ಬರುತ್ತದೆಂದರೆ, ಬೆಂಗಳೂರಿನಲ್ಲಿ ಮೇಲೆ ಅಧಿಕಾರದಲ್ಲಿ ಕುಳಿತಿರುವಂತಹವರು ಸ್ವಲ್ಪ ಖರ್ಚು ಮಾಡಿ, ಉಳಿದ ಹಣ ನಮ್ಮ ಬೊಕ್ಕಸಕ್ಕೆ ಉಳಿಯಲಿ ಎಂದು ಹೇಳುತ್ತಾರೆ. ಆ ಹಿಂದುಳಿದ ಭಾಗ ಹಾಗೆಯೇ ಹೋಗಲಿ ಎನ್ನುವುದು ಏನು? ಖರ್ಚು ಮಾಡುವಂತಹ ಸಾರ್ಮಥ್ಯ ಇಲ್ಲವೆಂದರೆ, ಇದಕ್ಕೆ ಹನ್ನೆರಡು ವರ್ಷ ಬೇಕಾಯಿತೆ? ಈಗ 5,000/- ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದರೆ, ಅದು ಸುಮ್ಮನೆ ಅಲ್ಲ. ಅವರು ಏಕೆ ಕೊಡುತ್ತಿಲ್ಲ. ಅವರು ಏಕೆ separate engineering department ಅನ್ನು ಮಾಡುತ್ತಿಲ್ಲ. Why we are unable to implement it, ಎಂಬುದನ್ನು ಮಾನ್ಯ ಸಭಾನಾಯಕರಾದ ಶ್ರೀ ಎನ್.ಎಸ್.ಬೋಸರಾಜು ಸಾಹೇಬರೆ ತಾವು ದಯವಿಟ್ಟು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಒಂದು ಒಳ್ಳೆಯ ಇಂಜಿನಿಯರಿಂಗ್ ತಂಡವನ್ನು ರಚನೆ ಮಾಡಿ, ಅವರಿಗೆ ಕೆಲಸವನ್ನು

ಅವರಿಗೆ ನೀಡಲಿ. ಈಗ ಲ್ಯಾಂಡ್ ಆರ್ಮಿಗೆ ಕೊಡುತ್ತಾರೆ. ನಾನು ಅದರ ಬಗ್ಗೆ ಉಲ್ಲೇಖ ಮಾಡುವುದಿಲ್ಲ. ಅದು ತಮಗೆ ಗೊತ್ತಿದೆ. ಈಗ ಲ್ಯಾಂಡ್ ಆರ್ಮಿ ಇರಲಿ, ನಿರ್ಮಿತಿ ಕೇಂದ್ರವಿರಲಿ ಮತ್ತೆ ಲೋಕೋಪಯೋಗಿ ಇಲಾಖೆ ಇರಲಿ. ಅವರು ತಮ್ಮ ಕೆಲಸ ಮುಗಿಸಿ, ಉಳಿದ ಕೆಲಸ ಮಾಡುವಂತಹವರು. ಈಗ ಎಷ್ಟು ಖರ್ಚಾಗಿದೆ. ಇದೆಲ್ಲಾ ಏಕೆ ವಿಳಂಬ. ಇದನ್ನು ಏಕೆ utilize ಮಾಡಿಲ್ಲ. ಅಂದರೆ, ಅದು ಖರ್ಚಾಗಿಲ್ಲ. ಈ ವರ್ಷ ಆರ್ಥಿಕ ಇಲಾಖೆಯವರು ಪತ್ರ ಬರೆಯುತ್ತಾರೆ. ಆಗಸ್ಟ್ ತಿಂಗಳಿನಲ್ಲಿ ಈ ವರ್ಷದ ಹಣ ಕೊಡಿ ಎಂದು ಪತ್ರ ಬರೆದರೆ, ಅದಕ್ಕೆ ಅವರು ಹಿಂದೆ ಕೊಟ್ಟಿರುವುದನ್ನು ಖರ್ಚು ಮಾಡಿ, ಈ ಹಿಂದೆ ಕೊಟ್ಟಿರುವುದನ್ನು ಖರ್ಚು ಮಾಡಿಲ್ಲ. ಮತ್ತೇನು ಕೊಡೋಣವೆಂದು ಹೇಳುತ್ತಾರೆ.

**ಉಪ ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿಯವರೆ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಸುಮಾರು 25 ನಿಮಿಷವಾಗಿದೆ. ತಾವು ತಮ್ಮ ಮಾತನ್ನು conclude ಮಾಡಿ. ನಿಮಗೆ ಕೊನೆಯ ಐದು ನಿಮಿಷಗಳು ಮಾತ್ರ ಉಳಿದಿದೆ. ಈಗ ಅರ್ಧಗಂಟೆಯಾಗುತ್ತದೆ. ಆದುದರಿಂದ ಆಗುವುದಿಲ್ಲವೆಂದು ಹೇಳುತ್ತಿದ್ದೇನೆ. ಇನ್ನೂ 24 ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆಂದು ಒತ್ತಿ ಹೇಳುತ್ತಿದ್ದೇನೆ. ಈಗ ಬೇರೆಯವರಿಗೆ ಅವಕಾಶ ಬೇಡವೆಂದು ಎಲ್ಲರೂ ಒಪ್ಪಿದರೆ, ನನ್ನದೇನೂ ಅಭ್ಯಂತರವಿಲ್ಲ. ತಾವು ಐದು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ವಿಷಯವನ್ನು ಟಚ್ ಮಾಡಿದ್ದೇನೆ. ನಾನು ನನ್ನ ಮಾತನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** Ok.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೇಪಡುತ್ತೇನೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಹಣ ಖರ್ಚಾಗುತ್ತಿಲ್ಲ. ಈಗ ಖರ್ಚಾಗುತ್ತಿಲ್ಲವೆಂದು ಅದನ್ನು ಅಲ್ಲಿಗೆ, ಇಲ್ಲಿಗೆ ಕೊಡಿ ಎಂದು ಕೇಳುತ್ತಿಲ್ಲ. ಜನಪ್ರತಿನಿಧಿಗಳು, ನಾವು ಎಂ.ಎಲ್.ಸಿ.ಗಳು ಚುನಾಯಿತ ಪ್ರತಿನಿಧಿಗಳು. ನಮ್ಮ ಭಾಗದಲ್ಲಿ ಸುಮಾರು ಐದು ಲೋಕಸಭಾ ಸ್ಥಾನಗಳಿವೆ. ಈ ಬಾರಿ ಅಲ್ಲಿ ಎಲ್ಲರೂ ಸಹ ಕಾಂಗ್ರೆಸ್ ಪಕ್ಷದವರು ಗೆದ್ದು ಬಂದಿದಾರೆ. ಇಬ್ಬರು ರಾಜ್ಯಸಭಾ ಸದಸ್ಯರು ಇದ್ದಾರೆ. ಅವರಿಗಾದರೂ ಒಂದಷ್ಟು ಹಣವನ್ನು ಕೊಡಬೇಕು ಅಲ್ಲವೇ? ಅಲ್ಲಿ ಎಂ.ಎಲ್.ಸಿ. ಕಡೆಗೆ ಹಣ ಕೊಡಬೇಕಾಗಿಲ್ಲ.

(ಮುಂದು)

(117) 06.03.2025 01.00 LL-KS

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಶೀಲ್ ಜಿ. ನಮೋಶಿ(ಮುಂದು)**

ಏನ್ರೀ, ತಿಪ್ಪಣ್ಣನವರೇ? ಯಾಕೋ ನಮ್ಮ ಚಂದು ಪಾಟೀಲ್‌ರವರು ಸುಮ್ಮನೆ ಕುಳಿತಿದ್ದಾರೆ. ಅರೇ! ಕೇಳಬೇಕಲ್ರೀ. ದುಡ್ಡು ಕೇಳಬಾರದೇ? ಸ್ವಲ್ಪ ಜೋರಾಗಿ ಹೇಳಿ ನೀವು ಕೂಡ.

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸದನದ ಹೊರಗಡೆ ಇದ್ದೆವು. ನಮ್ಮ ಭಾಗದ ಬಗ್ಗೆ ಚರ್ಚೆ ನಡೆಯುತ್ತಿದೆ, ನಾವು ಕೂಡ ಕೇಳಬೇಕಂತಲೇ ನಾವು ಸದನದ ಒಳಗಡೆ ಬಂದು ಕುಳಿತಿರುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಬೇರೆ ವಿಷಯ ಅಥವಾ ಇಡೀ ರಾಜ್ಯದ ವಿಷಯ ಕೇಳುತ್ತಿಲ್ಲ.

**ಶ್ರೀ ಎ. ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಶಶೀಲ್ ಜಿ. ನಮೋಶಿಯವರೇ ಈಗಾಗಲೇ ನಾವು ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷರಲ್ಲಿ ವಿಧಾನ ಪರಿಷತ್ತಿನ ಸದಸ್ಯರಿಗೂ ಕೂಡ ಅನುದಾನ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಅದಕ್ಕೆ ಅವರು ಈಗಾಗಲೇ ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಂಡಿದ್ದು, ತಮಗೆ ಅನುದಾನ ಕೊಡುತ್ತೇವೆಂದು ಹೇಳಿರುತ್ತಾರೆ. ಅಲ್ಲದೇ, ತಮ್ಮ ಅನಿಸಿಕೆಗೆ ನಾವುಗಳು ಕೂಡ ಬೆಂಬಲವನ್ನು ಸೂಚಿಸುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಮಂಡಳಿ ಅಧ್ಯಕ್ಷರು ಇದಕ್ಕೆ ಏನೂ ಮಾಡುವುದಿಲ್ಲ. ಹಾಗಾಗಿ, ದಯಮಾಡಿ ತಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ವಿಚಾರದ ಬಗ್ಗೆ ಮನವಿ ಮಾಡಿ, ಆ ಭಾಗದ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಕೋರಿಕೊಳ್ಳಬೇಕು. ಮಲೆನಾಡು ಅಭಿವೃದ್ಧಿ ಪ್ರದೇಶದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದು, ನಾನು ಆ ವಿಚಾರದ ಬಗ್ಗೆ ಏನನ್ನೂ ಮಾತನಾಡುವುದಿಲ್ಲ. ಆದರೆ, ಕಲ್ಯಾಣ ಕರ್ನಾಟಕ ಬೇರೆ ಜಿಲ್ಲೆಗಳ ಲೆವಲ್‌ಗೆ ಯಾವಾಗ ಬರಬೇಕು? ಅಂದರೆ, ಇನ್ನೂ ನೂರು ವರ್ಷ ಬೇಕೇ ಮಾನ್ಯ ಮಹದೇವಪ್ಪ ಸಾಹೇಬರೇ? ಈ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಹಣ ಖರ್ಚು ಮಾಡಬೇಕೆಂದು ಡಾ॥ ನಂಜುಂಡಪ್ಪ ವರದಿ ಹೇಳುತ್ತದೆ. ಆ ರೀತಿ ಹೆಚ್ಚಿನ ಹಣ ಮಾಡುವುದಕ್ಕೆ ಆಗಿಲ್ಲವೆಂದರೆ, ನಾವೇನು ಎಂಎಲ್‌ಸಿಗಳಾಗಿ ಸುಮ್ಮನೆ ಇಲ್ಲಿಗೆ ಬಂದಿರುವುದಿಲ್ಲ. ನಮ್ಮ ವ್ಯಾಪ್ತಿಗೆ 40 ವಿಧಾನಸಭಾ ಕ್ಷೇತ್ರ ಬರುತ್ತವೆ. ನಮಗೆ ಕೇವಲ 2 ಕೋಟಿ ರೂಪಾಯಿಗಳ ಅನುದಾನ ನೀಡುತ್ತಿದ್ದು, ಅದನ್ನು ಇಟ್ಟುಕೊಂಡು ನಾವು ಏನು ಮಾಡಬೇಕು. ಅದೇ ರೀತಿ, ಪಾರ್ಲಿಮೆಂಟರಿ ಸದಸ್ಯರಿಗೆ 8 ವಿಧಾನಸಭಾ ಕ್ಷೇತ್ರ ಬರುತ್ತದೆ. ಅವರಿಗೂ ಕೂಡ 2 ಕೋಟಿ ರೂಪಾಯಿಗಳ ಅನುದಾನ ನೀಡಲಾಗುತ್ತದೆ. ಅದನ್ನು ಇಟ್ಟುಕೊಂಡು ಅವರು ಏನು ಮಾಡಬೇಕು. ಕಲ್ಯಾಣ ಕರ್ನಾಟಕದವರಾದ ನಾವುಗಳು ಬೇರೆ ಕಡೆ ಖರ್ಚು ಮಾಡುವುದಕ್ಕೆ ಹಣ ಕೇಳುತ್ತಿಲ್ಲ. ನಾವು ಕೂಡ ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಿಗೆ ಖರ್ಚು ಮಾಡುವುದಕ್ಕೆ ನಾವು ಹಣ ಕೊಡುತ್ತೇವೆ. ಹಾಗಾಗಿ, ಏತಕ್ಕಾಗಿ ನಮಗೆ ಹೆಚ್ಚಿನ ಅನುದಾನ ನೀಡುವುದಿಲ್ಲ? ಇದು ಸರಿಯಲ್ಲ. ಇದು ನನಗೆ ಗೊತ್ತಿಲ್ಲ. ಕಾಂಗ್ರೆಸ್ ಪಕ್ಷದ ಎಂಎಲ್‌ಎ, ಎಂಎಲ್‌ಸಿ ಮತ್ತು ಎಂಪಿಗಳು ಆಗಿದ್ದರೂ ಕೂಡ ಇದನ್ನು ಏತಕ್ಕೆ ಕೇಳುತ್ತಿಲ್ಲವೆಂಬುದು ನನಗೆ ಗೊತ್ತಿಲ್ಲ.

**(ಗೊಂದಲ)**

**ಶ್ರೀ ಸುನೀಲ್‌ಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಹಿಂದಿನ ಅವಧಿಯಲ್ಲಿಯೂ ಸಹ ಇಷ್ಟೇ ಇತ್ತು. ಆಗ ನಾವು ಮತ್ತು ನಮ್ಮ ಶ್ರೀ ಮಂಜುನಾಥ ಭಂಡಾರಿಯವರು ಶ್ರೀ ಬಸವರಾಜ ಬೊಮ್ಮಾಯಿ ಸಾಹೇಬರಿಗೆ...

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಮ್ಮ ಅವಧಿಯಲ್ಲಿ ಆಗಿಲ್ಲವೆಂದು ಜನ ನಿಮ್ಮನ್ನು ಆರಿಸಿದ್ದಾರೆ. ಹಾಗಾಗಿ, ಅದನ್ನು ಬಿಡಿ. ಒಟ್ಟಿನಲ್ಲಿ ನಮ್ಮ ಭಾಗ ಅಭಿವೃದ್ಧಿ ಆಗಬೇಕು. ಅದು ಮೊದಲು.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆಕೆಆರ್‌ಡಿಬಿ ನಲ್ಲಿ ಮಾನ್ಯ ಶಾಸಕರಿಗೆ ಹೆಚ್ಚಿನ ಅನುದಾನ ಕೊಡಬೇಕೆಂಬುದು ಮಾನ್ಯ ಶಶೀಲ್ ಜಿ. ನಮೋಶಿಯವರ ಒತ್ತಾಯವಾಗಿದೆ.

**ಶ್ರೀ ಸುನೀಲ್‌ಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನವನ್ನು ಹೆಚ್ಚು ಮಾಡಬೇಕೆಂದು ನಾನು, ಶ್ರೀ ಮಂಜುನಾಥ ಭಂಡಾರಿಯವರು ಹಾಗೂ ಶ್ರೀ ರವಿಯವರು ಹಾಗೂ ಇತರೆ ಎಂಎಲ್‌ಸಿಗಳು ಸೇರಿ, ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ ಬಸವರಾಜ ಬೊಮ್ಮಾಯಿಯವರ ಮನೆಗೆ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದೆವು. ಅಲ್ಲದೇ, ಎಂಎಲ್‌ಸಿ ಗಳಾದ ನಮಗೆ 2, 3 ಅಥವಾ 5 ಜಿಲ್ಲೆಗಳ ವ್ಯಾಪ್ತಿ ಬರುತ್ತಿದ್ದು ಸರ್ಕಾರದಿಂದ ನೀಡುವಂತಹ 2 ಕೋಟಿ ರೂಪಾಯಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನ ಸಾಕಾಗುವುದಿಲ್ಲ. ತಾವು ಕೂಡ ಎಂಎಲ್‌ಸಿ ಯಾಗಿ, ಎಂಎಲ್‌ಎ ಯಾಗಿ ನಂತರ ಮುಖ್ಯಮಂತ್ರಿಯಾಗಿರುತ್ತೀರಿ. ಹಾಗಾಗಿ, ಇದರ ಬಗ್ಗೆ ಹೆಚ್ಚಿನ ಅನುಭವವಿದೆ ಎಂದು ಅವರನ್ನು ವಿನಂತಿ ಮಾಡಿರುತ್ತೇವೆ. ಆದರೆ, ಅವರು ಆಗುವುದಿಲ್ಲವೆಂದು ನಮ್ಮನ್ನು ಕಳುಹಿಸಿಬಿಟ್ಟರು.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾವು ಮಾಡಿರುವುದಿಲ್ಲ ಅಲ್ಲವೇ? ಈಗ ಇವರು ಮಾಡಲಿ. ಇವರುಗಳು ಸರ್ಕಾರಕ್ಕೆ ಒತ್ತು ಕೊಟ್ಟು ಕೇಳಲಿ. ಏತಕ್ಕೆ ಇವರು ಕೇಳುತ್ತಿಲ್ಲ?

**ಶ್ರೀ ಸುನೀಲ್‌ಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಆಗಲೇ ಮಾತನಾಡುತ್ತಾ ನಮ್ಮ ಭಾಗದ ಸದಸ್ಯರು ಮಾತನಾಡದೇ ಸುಮ್ಮನೆ ಕುಳಿತಿದ್ದಾರೆ ಎಂದು ಹೇಳಿದ್ದೀರಿ. ಅದಕ್ಕೆ ನಾವು ಸುಮ್ಮನೆ ಕುಳಿತಿಲ್ಲ. ನಮ್ಮ ಭಾಗದ ಅಭಿವೃದ್ಧಿಗಾಗಿ ಶಾಸಕರ ಅನುದಾನವನ್ನು ಹೆಚ್ಚು ಮಾಡಬೇಕೆಂದು ಹಿಂದಿನಿಂದಲೂ ನಿರಂತರ ಹೋರಾಟ ಮಾಡುತ್ತಿದ್ದೇವೆಂದು ಹೇಳಿರುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ತಾವು ಕೂಡ ಈ ವಿಷಯದಲ್ಲಿ ಸರ್ಕಾರವನ್ನು ಒತ್ತಾಯ ಮಾಡಬೇಕು.

**ಉಪ ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿಯವರಿಗೆ ಹಾಗೂ ತಮ್ಮೆಲ್ಲರಿಗೂ ನಾನು ಹೇಳುವುದೇನೆಂದರೆ, ನೀವು ನೀವುಗಳೇ ಜಗಳವಾಡಿದರೆ ಏನು ಬರುತ್ತದೆ. ಅದರ ಬದಲಾಗಿ, ಎಲ್ಲ

ಎಂಎಲ್‌ಸಿಗಳು ಒಗ್ಗಟ್ಟಾಗಿ ಹೋರಾಟ ಮಾಡಿದರೆ, ಎಲ್ಲರಿಗೂ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ತಮಗೆ ನೀಡುತ್ತೇನೆ. ಈಗ ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಬಹಳಷ್ಟು ವಿಷಯಗಳಿದ್ದವು. ಆದರೂ ಸಹ ನನ್ನ ಮಾತುಗಳನ್ನು ಬೇಗ ಪೂರ್ಣಗೊಳಿಸುತ್ತೇನೆ. ನಾನು ಈ ಸದನದ ಎಲ್ಲಾ ಸದಸ್ಯರಿಗೆ ಹಾಗೂ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಡಾ॥ ನಂಜುಂಡಪ್ಪ ವರದಿ ಬಹಳ ಸ್ಪಷ್ಟವಾಗಿ ಏನು ಹೇಳುತ್ತದೆಯೆಂದರೆ, ನಮ್ಮ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬಹುತೇಕ ಅಂದರೆ, 21 ತಾಲ್ಲೂಕುಗಳು ಕಲ್ಯಾಣ ಕರ್ನಾಟಕ ಭಾಗದ ತಾಲ್ಲೂಕುಗಳಾಗಿವೆ. ನಂತರ, ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಲ್ಲಿವೆ ಎಂದರೆ, ಮುಂಬೈ ಕರ್ನಾಟಕ ಅಥವಾ ಕಿತ್ತೂರು ಕರ್ನಾಟಕ ಅಲ್ಲ; ಇವೊತ್ತಿನ ದಿವಸ ಉತ್ತರ ಕರ್ನಾಟಕ ಎಂದು ಏನು ಹೇಳುತ್ತೇವೆಯಲ್ಲಾ, ಅದು ಉತ್ತರ ಕರ್ನಾಟಕ ಅಲ್ಲ. ಉತ್ತರ ಕರ್ನಾಟಕ ಎಂದರೆ ನಾನು ಕಿತ್ತೂರು ಕರ್ನಾಟಕ ಎಂದು ತಿಳಿದುಕೊಳ್ಳುತ್ತೇನೆ. ಆದರೆ, ನಮ್ಮ ಭಾಗ ಕಲ್ಯಾಣ ಕರ್ನಾಟಕ. ಹಾಗಾಗಿ, ತಮಗೆಲ್ಲರಿಗೂ ವಿನಂತಿ ಮಾಡುವುದೇನೆಂದರೆ, ಉತ್ತರ ಕರ್ನಾಟಕ ಎಂದು ಹೇಳುತ್ತಾ, ನಮಗೆ ಎಲ್ಲರಿಗಿಂತಲೂ ಹೆಚ್ಚು ಮೋಸ ಮಾಡುತ್ತಾರೆ. ದಯವಿಟ್ಟು, ಉತ್ತರ ಕರ್ನಾಟಕ ಶಬ್ಧ ಬಳಕೆ ಮಾಡಬೇಡಿ. ತಪ್ಪಿಯೂ ಕೂಡ ಆ ಶಬ್ಧ ಬಳಕೆ ಮಾಡಬೇಡ್ರೀ. ಉತ್ತರ ಕರ್ನಾಟಕ ಹಿಂದುಳಿದ ಭಾಗ ಎಂದು ಹೇಳಿ ಕಲಬುರಗಿಯ ಅಂಕಿ-ಅಂಶಗಳನ್ನು ತೋರಿಸಿ, ಹುಬ್ಬಳ್ಳಿ-ಧಾರವಾಡಕ್ಕೆ ಕೊಡ್ರಿ... ನಾನು ಈ ವಿಷಯವನ್ನು ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಪೀಠದಲ್ಲಿ ಇದ್ದಾಗ ಇನ್ನು ಜೋರಾಗಿ ಹೇಳಬೇಕೆಂದಿದ್ದೆನು. ಅವರು ಈಗ ತಮ್ಮ ಸ್ಥಾನದಲ್ಲಿ ಇಲ್ಲ. ಆದರೆ, ಅವರು ಇದ್ದಿದ್ದರೆ ಅಷ್ಟೇ ಜೋರಾಗಿ ಈ ಮಾತನ್ನು ಹೇಳುತ್ತಿದ್ದೆನು. ಇವರು ಕೂಡ ಅದೇ ರೀತಿ ಮಾಡುತ್ತಾರೆ. ಕಲ್ಯಾಣ ಕರ್ನಾಟಕ ಎಂದರೆ, most neglected region. ಹಾಗಾಗಿ, ಮಾನ್ಯ ಸಚಿವರಾದರೂ ಈ ಬಗ್ಗೆ ಸ್ವಲ್ಪ ಕೇಳಬೇಕಲ್ಲವೇ? ದಯಮಾಡಿ, ಉತ್ತರ ಕರ್ನಾಟಕ ಎಂದು ನಮ್ಮ ಭಾಗವನ್ನು ಹೇಳಬೇಡಿ.

**ಉಪ ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿಯವರೇ, ದಯಮಾಡಿ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚು ಅನುದಾನ ಕೊಟ್ಟಂತಹ ಇತಿಹಾಸ ಇದ್ದರೆ, ಅದು ನಮ್ಮ ಸರ್ಕಾರ. ಈ ಹಿಂದೆ ಬಿಜೆಪಿಯವರು 3,000 ಕೋಟಿ ರೂಪಾಯಿ ಅನುದಾನ ಕೊಟ್ಟಿದ್ದರು. ಆದರೆ, ನಾವು ಒಟ್ಟು 5,000 ಕೋಟಿ ಅನುದಾನ ನೀಡಿರುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಏಕೆಂದರೆ ಕಿತ್ತೂರು ಕರ್ನಾಟಕ ಪ್ರದೇಶಕ್ಕಿಂತಲೂ ಅತ್ಯಂತ ಹಿಂದುಳಿದ ಪ್ರದೇಶ ಬೆಂಗಳೂರು ಕರ್ನಾಟಕ ಇದೆ. Bengaluru is more backward region than Mumbai Karnataka or Kittur Karnataka regions. ಆದರೂ

ಕೂಡ ನಾವು ಅತ್ಯಂತ ಹಿಂದುಳಿದಿದ್ದೇವೆಂದು ಶ್ರೀ ಹೆಚ್.ಕೆ. ಪಾಟೀಲ್‌ರವರ ಹಾದಿಯಾಗಿ ಎಲ್ಲರೂ ಕೂಡ ಅದನ್ನೇ ಹೇಳುತ್ತಾರೆ. ಉದಾಹರಣೆಗಳನ್ನು ಕೊಡುವಾಗ ನಮ್ಮ ಭಾಗದ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ. ಆದರೆ, ಸವಲತ್ತುಗಳನ್ನು ಅವರ ಭಾಗಕ್ಕೆ ತೆಗೆದುಕೊಳ್ಳುತ್ತಾರೆ. ಈ ಸದನದಲ್ಲಿ ಜಾಸ್ತಿ ಅವರೇ ಇದ್ದಾರೆ. ಆದರೆ, ದಯಮಾಡಿ ಈ ರೀತಿ ಮಾಡಬೇಡಿ. ಇನ್ನು ಮುಂದೆ ಎಂದಿಗೂ ಕೂಡ ಆ ರೀತಿ ಹೇಳಬೇಡಿ. ಕಲ್ಯಾಣ ಕರ್ನಾಟಕ ಬಿಟ್ಟು ಬೇರೆ ಏನಾದರೂ ಹೇಳಿ. ಕಿತ್ತೂರು ಕರ್ನಾಟಕ ಎಂದು ಹೇಳುವುದರ ಹೊರತಾಗಿ, ಅದನ್ನು ಮಿಕ್ಸ್ ಮಾಡಿ, ನಾವು ಉತ್ತರ ಕರ್ನಾಟಕದವರು ನಮಗೆ ಈ ಸವಲತ್ತುಗಳನ್ನು ಕೊಡಿ, ಆ ಸವಲತ್ತುಗಳನ್ನು ಕೊಡಿ, ಯಾರು ಕೂಡ ನಮ್ಮ ಭಾಗವನ್ನು ತೆಗೆದುಕೊಂಡು ಹೋಗಬೇಡಿ. ಒಂದು ವೇಳೆ ಯಾರಾದರೂ ಆ ರೀತಿ ತೆಗೆದುಕೊಂಡು ಹೋಗುವುದಕ್ಕೆ ಬಂದರೆ, ಅದಕ್ಕೆ ಮಾನ್ಯ ಸಚಿವರಾದ ಶಿವರಾಜ್ ತಂಗಡಗಿಯವರೇ ತಾವು ಬಿಡಬೇಡಿ. ಅಲ್ಲದೇ, ದಯಮಾಡಿ ತಾವು ಈ ತಿದ್ದುಪಡಿಯನ್ನು ಮಾಡಬೇಕು. ಅದಕ್ಕಾಗಿ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ಆ ಪದ ಬಳಕೆ ಮಾಡಬೇಡಿ ಎಂದು ತಮ್ಮೆಲ್ಲರಲ್ಲಿ ವಿನಂತಿ ಮಾಡುತ್ತೇನೆ. ನಾನು ಇನ್ನು ಬಹಳಷ್ಟು ವಿಷಯ ಹೇಳಬೇಕಾಗಿತ್ತು, ಆದರೆ, ಏತಕ್ಕೋ ಮಾನ್ಯ ಉಪ ಸಭಾಪತಿಯವರು ಅನುಕೂಲ ಮಾಡಿಕೊಡುತ್ತಿಲ್ಲ. ಆದಾಗ್ಯೂ, ತಾವು ಯಾವಾಗಲೂ ನನ್ನ ಬಗ್ಗೆ ಸ್ವಲ್ಪ ಕರುಣೆ ತೋರಿಸುತ್ತಿದ್ದರು. ಆದರೆ, ಈ ದಿನ ಏತಕ್ಕೆ ನನ್ನ ಮೇಲೆ ಕರುಣೆ ತೋರಿಸುತ್ತಿಲ್ಲ. ಆದರೂ ಸಹ ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಉಪ ಸಭಾಪತಿಯವರು:-** ತಮ್ಮ ಮೇಲೆ ಕರುಣೆ ತೋರಿಸಿದ್ದಕ್ಕಾಗಿಯೇ ತಾವು ಮಾತನಾಡಲು 35 ನಿಮಿಷ ಕಾಲಾವಕಾಶ ನೀಡಿರುತ್ತೇವೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಎರಡು-ಮೂರು ವಿಷಯಗಳ ಬಗ್ಗೆ ಮಾತ್ರ ಬೆಳಕು ಚೆಲ್ಲುವುದಕ್ಕೆ ಇಷ್ಟಪಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪಿ.ಹೆಚ್. ಪೂಜಾರ್‌ರವರೇ, ನಾವು ಹೇಳಿದಾಗ ತಾವು ಕುಳಿತುಕೊಳ್ಳಬೇಕು. ಏಕೆಂದರೆ, ಇನ್ನು 23 ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರಿದ್ದಾರೆ. ದಯವಿಟ್ಟು ಸಹಕರಿಸಬೇಕೆಂದು ಮೊದಲೇ ತಮಗೆ ಹೇಳುತ್ತಿದ್ದೇನೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಭಾಷಣದ 9ನೇ ಪ್ಯಾರಾದಲ್ಲಿ, "ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ದೃಷ್ಟಿಯಿಂದ 2002ರಲ್ಲಿ ಡಾ|| ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿದ್ದು, ಆ ಸಮಿತಿ ವರದಿ ಕೊಟ್ಟ ಬಗ್ಗೆ ಮಾನ್ಯ ಶಶೀಲ್ ಜಿ. ನಮೋಶಿಯವರು ವಿಶದವಾಗಿ ವಿವರಣೆ ಕೊಟ್ಟಿರುತ್ತಾರೆ. ಅವರು ಹೇಳಿರುವಂಥದ್ದಕ್ಕೆ ನಾನು ಕೂಡ ಧ್ವನಿಗೂಡಿಸುತ್ತೇನೆ. ಅದೇನೆಂದರೆ, ಉತ್ತರ ಕರ್ನಾಟಕ ಎಂದರೆ, ಕೆಲವೊಂದು ವಿಚಾರದಲ್ಲಿ ಅವರು ಹೇಳಿರುವಂಥದ್ದಕ್ಕೆ ನನ್ನ ಸಹಮತಿ ಕೂಡ ಇದೆ. ಧಾರವಾಡ-ಹುಬ್ಬಳ್ಳಿ ಎನ್ನುವಂಥದ್ದು ಇರಬಹುದು. ಅಸೆಟ್ ಕ್ರಿಯೇಟ್ ಮಾಡುವಂತಹ ದಿಸೆಯಲ್ಲಿ ಸರ್ಕಾರ ಮೇಲಿಂದ ಮೇಲೆ ಎಡವುತ್ತಾ ಬರುತ್ತಿದೆ. ಡಾ|| ಡಿ.ಎಂ.

ನಂಜುಂಡಪ್ಪನವರ ವರದಿ ಪ್ರಾಮುಖ್ಯವಾಗಿ ಆ ಭಾಗದಲ್ಲಿ ಹಿಂದುಳಿದಿರುವಂತಹ ಪ್ರದೇಶಗಳಲ್ಲಿ ರೈತರ ಜಮೀನುಗಳಿಗೆ ನೀರು ಕೊಡುವಂಥದ್ದು; ಶೈಕ್ಷಣಿಕ ವ್ಯವಸ್ಥೆಯಲ್ಲಿ ಅನುಕೂಲತೆಗಳನ್ನು ಬಡಮಕ್ಕಳಿಗೆ ಕಲ್ಪಿಸುವಂಥದ್ದು; ಹಿಂದುಳಿದ ದಲಿತ ಸಮುದಾಯಗಳಿಗೆ ಅನುಕೂಲತೆಗಳನ್ನು ಅಂದರೆ, ಅವರು ಗೌರವದಿಂದ ಬದುಕುವುದಕ್ಕೆ ಈ ಎಲ್ಲಾ ವಿಷಯಗಳ ಬಗ್ಗೆ ವಿಶದವಾಗಿ ಹೇಳಿದ್ದಾರೆ. ಬಹು ಮುಖ್ಯವಾಗಿ ಆ ಭಾಗ ಹಿಂದುಳಿದಿರುವುದಕ್ಕೆ ಕಾರಣ ಏನೆಂದರೆ, ರೈತಾಪಿ ಜನರ ಬಗ್ಗೆ ನಿಷ್ಕಾಳಜಿ ತೋರುತ್ತಾ ಬಂದಂತಹ ಸರ್ಕಾರಗಳ ವೈಖರಿ ಎಂದು ಹೇಳಲೇಬೇಕಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ನೀರಾವರಿಗೆ ವಿಫಲವಾದಂತಹ ಅವಕಾಶ ಇದೆ. ನಮ್ಮ ರಾಜ್ಯದಲ್ಲಿ ಒಂದು ವಿಶೇಷವನ್ನು ಹೇಳಬೇಕೆಂದರೆ..., ರಾಜಸ್ಥಾನದಲ್ಲಿ ಏನು ಒಣಭೂಮಿ ಇದೆ, ಪದೇ ಪದೇ ಅನಾವೃಷ್ಟಿ ಎದುರಿಸುವಂತಹ ಪ್ರದೇಶ ನಮ್ಮ ದೇಶದಲ್ಲಿ ವರ್ಣನೆ ಮಾಡುತ್ತಿರುವಂಥ ಮಾಹಿತಿ ಜನರಿಗೆ ಸಿಗುವಂಥದ್ದಾಗಿದೆ. ಅದನ್ನು ಬಿಟ್ಟರೆ ಎರಡನೆ ರಾಜ್ಯ ನಮ್ಮ ಕರ್ನಾಟಕ ರಾಜ್ಯ. ಹಾಗಾದರೆ, ಇಲ್ಲಿ ಏನು ಅವಕಾಶಗಳು ಇಲ್ಲವೇ? ವಿಫಲವಾದ ನೈಸರ್ಗಿಕ ನೀರಿನ ಸಂಪತ್ತು ನಮ್ಮಲ್ಲಿದೆ. ಅದನ್ನು ನಾವು ಉಪಯೋಗ ಮಾಡಿಕೊಳ್ಳಬೇಕು, ಬರಡಾದ ನೆಲಕ್ಕೆ ನೀರು ಕೊಡಬೇಕು, ರೈತರು ಸಮೃದ್ಧವಾಗಿ ಬೆಳೆ ತೆಗೆದು ಸಂಪದ್ಭರಿತರಾಗಿ ಗೌರವದಿಂದ ಜೀವನ ನಡೆಸುವಂಥದ್ದು ಆಗಬೇಕು ಚಿಂತನೆ ಏತಕ್ಕೆ ಮಾಡಲಿಲ್ಲವೋ ಅದು ನನಗೆ ಗೊತ್ತಿಲ್ಲ. ಹಳೆಯ ಮೈಸೂರು ಭಾಗದಲ್ಲಿ ಅಭಿವೃದ್ಧಿ ಆದಂತಹ ಒಂದು ವ್ಯವಸ್ಥೆ. ನೀರಾವರಿ ಬಗ್ಗೆ ಒಂದು ಯೋಚನೆ ಮಾಡಿದಾಗ, ಒಟ್ಟಾರೆಯಾಗಿ ರಾಜ್ಯದ ಒಟ್ಟು ಜನಸಂಪನ್ಮೂಲದಲ್ಲಿ ಶೇಕಡ 68 ರಷ್ಟು ಜಲಸಂಪನ್ಮೂಲ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿದೆ. ಉದಾಹರಣೆಗೆ, ಬೆಳಗಾವಿ ಜಿಲ್ಲೆಯಲ್ಲಿ ಘಟಪ್ರಭಾ, ಕೃಷ್ಣಾ, ದೂದ್‌ಗಂಗಾ, ವೇದಗಂಗಾ, ಮಹದಾಯಿ, ಮಾರ್ಖಂಡೇಯ, ಹಿರಣ್ಯಕೇಶಿ ನದಿಗಳು ಇವೆ. ಅದೇ ರೀತಿ, ಧಾರವಾಡ ಜಿಲ್ಲೆಯಲ್ಲಿ ಬೆಣ್ಣೆಹಳ್ಳ, ಬೇಡ್ತಿ, ಶಾಲ್ಮಲಾ ನದಿಗಳು ಇವೆ. ಬಾಗಲಕೋಟೆ ಜಿಲ್ಲೆ ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳು ಇವೆ. ವಿಜಯಪುರ ಜಿಲ್ಲೆಯಲ್ಲಿ ಕೃಷ್ಣಾ, ಭೀಮ, ಡೋಣಿ ನದಿಗಳು ಇವೆ. ಕಲಬುರಗಿ ಜಿಲ್ಲೆಯಲ್ಲಿ ಕೃಷ್ಣ, ವರಜಾ, ಬೆಣ್ಣೆತೊರಾ, ಕೂಗ್ನಾ, ಮುಲ್ಲಾಮಾರಿ, ಭೀಮಾ ನದಿಗಳು ಇವೆ. ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ, ಕೃಷ್ಣಾ ನದಿಗಳು ಹರಿಯುತ್ತವೆ.

(ಮುಂದು)

(118) 06.03.2025 1.10 ವೈಎಲ್-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಪಿ.ಹೆಚ್.ಪೂಜಾರ್ (ಮುಂದು):-

ಯಾದಗಿರಿ ಜಿಲ್ಲೆಯ ಕೃಷ್ಣಾ ಮತ್ತು ಭೀಮಾ ನದಿಗಳ ಪಾತ್ರ. ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿ ಮತ್ತು ಕಾರಂಜಾ ನದಿಗಳು, ಕೊಪ್ಪಳ ಜಿಲ್ಲೆಯಲ್ಲಿ ತುಂಗಾಭದ್ರ ನದಿ, ಹಾವೇರಿ ಜಿಲ್ಲೆಯಲ್ಲಿ ವರದಾ ನದಿ, ಕುಮುದ್ವತಿ ನದಿ, ತುಂಗಭದ್ರಾ ನದಿ ಮತ್ತು ಧರ್ಮ ನದಿ, ಬಳ್ಳಾರಿ ಜಿಲ್ಲೆಯ ವೇದಾವತಿ ನದಿ, ಗದಗ ಜಿಲ್ಲೆಯಲ್ಲಿ ಬೆಣ್ಣೆಹಳ್ಳದಲ್ಲಿ ಹರಿದಂಥದ್ದು. ಇಷ್ಟೊಂದು ಅಪಾರ ಪ್ರಮಾಣದ ಜಲಸಂಪನ್ಮೂಲವನ್ನು ಹೊಂದಿದ್ದರೂ

ಸಮರ್ಪಕವಾಗಿ ನೀರನ್ನು ಬಳಸಿಕೊಳ್ಳದೇ ಇರುವುದರಿಂದ ಉತ್ತರ ಕರ್ನಾಟಕ ಸಂವೃದ್ಧಿಯಿಂದ ವಂಚಿತವಾಗಿದೆ. ವಿಶೇಷವಾಗಿ ಇದೇ ಭಾಗದಲ್ಲಿಯೇ ಪ್ರಾದೇಶಿಕ ಅಸಮಾನತೆ ಕಂಡಿದ್ದು, ವಿಫುಲವಾಗಿ ನೀರಿನ ಬಳಕೆಗೆ ಅವಕಾಶ ಇದ್ದರೂ ಕೂಡಾ ಸರ್ಕಾರ ಅಸಡ್ಡೆ ತೋರಿಸಿದ್ದು, ಸದ್ಬಳಕೆ ಮಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಇದೊಂದು ನಮ್ಮ ರಾಜ್ಯದ ದುರಾದೃಷ್ಟವೆಂದು ಹೇಳಬಹುದು. ಅದೊಂದು ವಿಸ್ಮಯ, ಇದೊಂದು ವಿಸ್ಮಯ ಎಂದು ವಿಸ್ಮಯಗಳ ಬಗ್ಗೆ ಮಾತನಾಡುವ ಹಾಗೆ ಇದೊಂದು 8ನೇ ವಿಸ್ಮಯ ಎಂದು ಹೇಳಬೇಕಾಗುತ್ತದೆ. ಎಲ್ಲರೂ ಬುದ್ಧಿವಂತರು, ಚಾಣಾಕ್ಷಮತಿಗಳು, ತಜ್ಞರು, ನೀರಾವರಿ ತಜ್ಞರು; ಒಂದೇ, ಎರಡೇ? ಇಷ್ಟೆಲ್ಲಾ ವಿಫುಲವಾದ ಜ್ಞಾನ ಸಂಪತ್ತು ಇದ್ದರೂ ಕೂಡಾ ಮಾನವೀಯ ಅಂತಃಕರಣದ ಕಳಕಳಿಯ ಜನ ನಮ್ಮ ರಾಜ್ಯದಲ್ಲಿ ಕಡಿಮೆಯಾಗಿಲ್ಲ, ತುಂಬಾ ಜನ ಇದ್ದಾರೆ. ಇವರು ಇದ್ದರೂ ಕೂಡಾ ಸರ್ಕಾರವು ಏತಕ್ಕೆ ಎಡವುತ್ತಾ ಬಂದಿದೆ? ತಮ್ಮಲ್ಲಿಯೇ ಪ್ರಾದೇಶಿಕ ಭಾಷೆಯ ಸ್ವಾರ್ಥದ ಭಾವನೆ ಇರುವುದರಿಂದ ಇಡೀ ರಾಜ್ಯವನ್ನು 'ಚೆಲುವ ಕನ್ನಡ ನಾಡು' ಎಂದು ನಮ್ಮ ಕವಿಗಳು ಹಾಡಿದ್ದಾರೆ. ಅದಕ್ಕೆ ವ್ಯತಿರಿಕ್ತವಾಗಿ ಸರ್ಕಾರವು ನಡೆದುಕೊಂಡು ಬಂದಿದ್ದು, ನಮ್ಮ ದುರಾದೃಷ್ಟವೆಂದು ಹೇಳಲೇಬೇಕಾಗಿದೆ.

ಕಳೆದ 12 ವರ್ಷಗಳ ಹಿಂದೆ ಕೃಷ್ಣಾ ನದಿಯ ವಿಚಾರವಾಗಿ '130 ಟಿ.ಎಂ.ಸಿ. ನೀರು ನಮ್ಮ ಪಾಲಿನದು' ಎಂದು ಆಯೋಗವು ತೀರ್ಪು ನೀಡುತ್ತದೆ. ಸುಮಾರು 12 ವರ್ಷಗಳಿಂದ ಇವತ್ತಿನವರೆಗೂ ಆ ನೀರು ಸಮುದ್ರಕ್ಕೆ ಸೇರುತ್ತಾ ಬಂದಿದೆ. ಆಗೊಮ್ಮೆ, ಈಗೊಮ್ಮೆ ನಮ್ಮ ಬಾಗಲಕೋಟೆ ಪ್ರದೇಶದ ಕಡೆ ಮತ್ತು ಬೀದರ್ ಕಡೆ ಕುಡಿಯುವ ನೀರಿಗಾಗಿ ಭೀಮಾ ನದಿ ನೀರು ಬಿಡಬೇಕಾಗಿದ್ದು, 1 ಟಿ.ಎಂ.ಸಿ. ನೀರು ಬಿಡಿ, ಅರ್ಧ ಟಿ.ಎಂ.ಸಿ. ನೀರು ಕೊಡಿ ಎಂದು ಪರಿತಪಿಸುವಂಥ ಸ್ಥಿತಿ ಇದೆ. ಇನ್ನು ನೀರಾವರಿ ಎಂಬುದು ದೂರದ ಮಾತು. ಮಾನ್ಯ ಸಚಿವರಾದ ತಿಮ್ಮಾಪುರರವರು ಈ ಸದನದಲ್ಲಿಯೇ ಇದ್ದು, ಬಾಗಲಕೋಟೆಯಲ್ಲಿ ಒಮ್ಮೊಮ್ಮೆ ನೀರಿನ ಅಭಾವ ಆದಾಗ ಕೃಷ್ಣಾ ನದಿಗೆ 1 ಟಿ.ಎಂ.ಸಿ. ಕೊಯ್ನಾ ನದಿ ನೀರಿನ್ನು ಬಿಡಿ ಎಂದು ಮಹಾರಾಷ್ಟ್ರ ಮಂತ್ರಿಗಳನ್ನು ಮತ್ತು ಅಧಿಕಾರಿಗಳನ್ನು ಭೇಟಿಯಾಗಿ ಸಮಸ್ಯೆ ಬಗ್ಗೆ ತಿಳಿಸಿ, ಕುಡಿಯುವ ನೀರಿನ ವ್ಯವಸ್ಥೆಯನ್ನು ಪೂರೈಸಿಕೊಳ್ಳುವುದಕ್ಕೆ ಮಾಡುವಂಥ ಕೆಲಸವನ್ನು ಆಗಾಗ ನೋಡುತ್ತಿದ್ದೇವೆ. ಹಾಗೆಯೇ ಬಿ.ಎಂ. ಗೋರ್ಕೆ ಎಂಬ ತಜ್ಞರು, ಮಾನವೀಯ ಅಂತಃಕರಣವುಳ್ಳವರಾಗಿದ್ದು, ಮಹದಾಯಿ ನದಿ ವಿಚಾರವಾಗಿ ಅವರು ಅಭ್ಯಾಸ ಮಾಡಿ ಪಶ್ಚಿಮ ಮುಖವಾಗಿ ಹರಿದು ಗೋವಾದ ಸಮುದ್ರಕ್ಕೆ ಸೇರಿ ವ್ಯರ್ಥವಾಗಿ ಹೋಗುವಂಥ ನೀರನ್ನು ಈ ಕಡೆ ತಿರುಗಿಸಿ ಇಚ್ಛಾಶಕ್ತಿಯನ್ನು ಪ್ರಕಟಣೆ ಮಾಡಿಕೊಂಡು ತೆಗೆದುಕೊಂಡರೆ ಗದಗ್, ಧಾರವಾಡ ಮೂರ್ನಾಲ್ಕು ಜಿಲ್ಲೆಗಳಲ್ಲಿ ವಿಫುಲವಾದ ಅನುಕೂಲತೆಗಳಿಗೆ ನೀರಿನ ಸಂಪತ್ತು ಸಿಕ್ಕಿದರೆ ಯಾವುದೇ ಸಮಸ್ಯೆ ಇರುವುದಿಲ್ಲ. ಅದು ಸಹ ಆಗಲಿಲ್ಲ.

ನಿನ್ನೆ ದಿವಸ ಮಾನ್ಯ ಹೆಚ್.ವಿಶ್ವನಾಥ್‌ರವರು ಸದನದೊಳಗೆ ಮಾತನಾಡುತ್ತಿದ್ದು, ನಾನು ಸಹ ಧ್ವನಿಗೂಡಿಸಿದ್ದೆನು. ರಾಜ್ಯಪಾಲರ ಭಾಷಣ ಎಂದರೆ, ಔಪಚಾರಿಕ ಭಾಷಣ. ಈ ಪುಸ್ತಕದಲ್ಲಿ ಇರುವುದೆಲ್ಲಾ ಖಾಲಿ

ಇದ್ದು, ಮಾತನಾಡುತ್ತಾ ಹೋಗಿಬಿಡುವುದು. ಸರ್ಕಾರಕ್ಕೆ ಕಿವಿ, ಕಣ್ಣು, ಹೃದಯವೂ ಇಲ್ಲ ಎಂಬ ಸ್ಥಿತಿಯೊಳಗೆ ಸರ್ಕಾರ ನಡೆದುಕೊಂಡು ಬಂದಿದೆ. ರಾಜ್ಯಪಾಲರ ಭಾಷಣ ಎಂದಾಕ್ಷಣ ಭಾಷಣ ಮಾಡಿಸಿದರೆ ಮುಗಿದು ಹೋಯಿತು. ಏನಾದರೂ ಒಂದು ಸುಳ್ಳು ಹೇಳಿ ಔಪಚಾರಿಕವಾಗಿ ಒಂದು ಕಾರ್ಯಕ್ರಮವನ್ನು ನಡೆಸುವುದು. ಪ್ರತಿ ವರ್ಷವು ಪ್ರತಿ ಬಜೆಟ್‌ನಲ್ಲಿ ಈ ರೀತಿ ಆಗುತ್ತದೆ. ಎಲ್ಲಿ ಕೊರತೆಯಾಗಿದೆ, ಏನು ಹಿನ್ನಡೆಯಾಗಿದೆ, ಯಾವ ವಿಭಾಗದಲ್ಲಿ ನಾವು ಈ ರಾಜ್ಯವನ್ನು ಮೇಲಕ್ಕೆ ಎತ್ತಬೇಕು, ಕೊರತೆಗಳೇನು ಎಂಬುದನ್ನು ತಿಳಿದುಕೊಂಡು, ಆ ದಿಸೆಯಲ್ಲಿ ಕೆಲಸ ಮಾಡಬೇಕು. ಪ್ರತಿಯೊಂದು ಇಲಾಖೆ ಜೊತೆಗೂ ಮಾತನಾಡಬೇಕು ಎಂಬುದೇನಿಲ್ಲ. ರಾಜ್ಯಪಾಲರ ಮೂಲಕ ಸರ್ಕಾರವು ಜಾಣಾಕ್ಷತನದಿಂದ ಜಾಣ ಕುರುಡು ಪ್ರದರ್ಶನ ಮಾಡಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಸಲುವಾಗಿ ಕಳೆದ ಡಿಸೆಂಬರ್ ತಿಂಗಳಿನಲ್ಲಿ ಬಾಗಲಕೋಟೆ, ಬಿಜಾಪುರದ ಹಲವಾರು ಮಂದಿ ಅಹೋರಾತ್ರಿ ಪ್ರತಿಭಟನೆ ಮಾಡಿದರು. ಅದಕ್ಕೆ ಸರ್ಕಾರ ಎಚ್ಚೆತ್ತುಕೊಂಡು ಪ್ರತಿಭಟನಾಕಾರರನ್ನು ಬನ್ನಿ ಎಂದು ಕರೆದು, ಅವರ ಅಹವಾಲನ್ನು ಕೇಳಿದರು. ಜಮೀನಿಗೆ ನೀರು ಕೊಡುವಂಥ ದಿಸೆಯಲ್ಲಿ ರೈತರ ಭೂಮಿಗಳಿಗೆ ಪರಿಹಾರ ಕೊಡುವ ದಿಸೆಯಲ್ಲಿ ಚರ್ಚೆ ನಡೆಸಿ, ಸರ್ಕಾರವು ನೀರಾವರಿಗಾಗಿ ಸುಮಾರು ರೂ.24,00,000 ಕೊಡಬೇಕು ಹಾಗೂ ಒಣ ಬೇಸಾಯಕ್ಕೆ ರೂ.20,00,000 ಕೊಡಬೇಕೆಂದು ತೀರ್ಮಾನವಾಯಿತು. ಆದರೆ, ಈ ಸಲ ಕೂಡ ಅದರ ಪರಿಸ್ಥಿತಿ ಸರಿಯಿಲ್ಲ. ಮಾನ್ಯ ಮುಖ್ಯಮಂತ್ರಿಗಳು, ನೀರಾವರಿ ಸಚಿವರು, ನಮ್ಮ ಜಿಲ್ಲೆಯ ಶ್ರೀ ಆರ್.ಬಿ.ತಿಮ್ಮಾಪುರರವರು, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಎಲ್ಲರೂ ಸಹ 'ಹೆಚ್ಚಿನ ದುಡ್ಡು ಕೊಡಬೇಕೆಂಬ ರೈತರ ಅಹವಾಲನ್ನು' ಸಮಾಧಾನದಿಂದ ಕೇಳಿದರು. ಈ ಸಂಬಂಧ ನಾನು ಹಾಗೂ ಮಾನ್ಯ ಹಣಮಂತ ರುದ್ರಪ್ಪ ನಿರಾಣಿಯವರು ಸೇರಿ ಪ್ರಶ್ನೆ ಹಾಕಿದ್ದೆವು. ನನಗೆ ತಿಳಿದಿರುವ ಮಟ್ಟಿಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಉದ್ದೇಶಪೂರ್ವಕವಾಗಿಯೇ ಸದನಕ್ಕೆ ಬಂದಿಲ್ಲ. ನಾವು ಸಹ ಆ ಪ್ರಶ್ನೆಯಲ್ಲಿ ಏನೂ ಕೇಳಿಲ್ಲ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಉದ್ದೇಶಪೂರ್ವಕವಾಗಿಯೇ ಮಾನ್ಯ ಉಪ ಮುಖ್ಯಮಂತ್ರಿಯವರು ಸದನಕ್ಕೆ ಬಂದಿಲ್ಲ ಎಂದು ಹೇಳುವುದು ಸರಿಯಿಲ್ಲ. ಏಕೆಂದರೆ, ಅವರು ಪೀಠದ ಅನುಮತಿ ತೆಗೆದುಕೊಂಡು ಹೋಗಿದ್ದಾರೆ.

**ಶ್ರೀ ಪಿ.ಹೆಚ್.ಪೂಜಾರ್:-** ನಿನ್ನೆ ದಿವಸ ನಾನು ಕೇಳಿರುವಂಥ ಪ್ರಶ್ನೆಗೆ ಸರ್ಕಾರವು ಜಾಣ ಕುರುಡು, ಜಾಣ ಕಿವುಡುತನದಿಂದ ನಡೆಯುತ್ತಿದೆ ಎಂದು ಹೇಳುತ್ತಿದ್ದೇನೆ. ಸರ್ಕಾರವು ಹೃದಯಹೀನವಾಗಿದೆ ಎಂದು ಹೇಳುತ್ತಿದ್ದೇನೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಒಂದೇ ಒಂದು ಸಾಲು ಬರೆದಿಲ್ಲ. ಬೇಕಾದರೆ ಆಡಳಿತ ಪಕ್ಷದವರೆ ಪುಸ್ತಕವನ್ನು ತೆಗೆದು ನೋಡಲಿ. ಕೇವಲ 2-3 ತಿಂಗಳ ಹಿಂದೆ 8 ಜಿಲ್ಲೆಗಳಿಗೆ ವಿಪುಲ ನೀರು ಕೊಡುವ ಕುರಿತು ಪ್ರತಿಭಟನೆ ನಡೆದಿದ್ದು, ಸರ್ಕಾರವೇ ಎರಡು ತಾಸು ಚರ್ಚೆ ಮಾಡಿ, ಪರಿಹಾರ ಕೊಡುತ್ತೇವೆ ಎಂದು ಉತ್ತರ ನೀಡಿದ್ದು,

ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ 'ಪರಿಹಾರ ಕೊಡುತ್ತಿದ್ದೇವೆ' ಎಂಬುದನ್ನು ಓದಿಸಬಹುದಾಗಿತ್ತಲ್ಲವೇ? ಈಗಾಗಲೇ ಸತ್ಯಕ್ಕೆ ದೂರವಾದ ಅನೇಕ ವಿಚಾರಗಳನ್ನು ರಾಜ್ಯಪಾಲರ ಮುಖಾಂತರ ಹೇಳಿಸಿದ್ದು, ಇದರ ಬಗ್ಗೆ ಸಹ ಒಂದು ಶಬ್ದವಾದರೂ ಹೇಳಿಸಬಹುದಾಗಿತ್ತಲ್ಲವೇ? ಅದರ ಬಗ್ಗೆ ಬದ್ಧತೆ ಪ್ರಕಟಿಸುತ್ತಿದ್ದು, ಈ ಬಜೆಟ್‌ನಲ್ಲಿ ಹಣ ಮೀಸಲಿರಿಸುತ್ತಿದ್ದೇವೆ, ಮುಂದಿನ ಎರಡು-ಮೂರು ವರ್ಷಗಳಲ್ಲಿ ನಿಶ್ಚಿತವಾಗಿ ಪರಿಹರಿಸುತ್ತೇವೆ ಎಂದು ಹೇಳಬಹುದಾಗಿತ್ತಲ್ಲವೇ? ಆ ಶಬ್ದ ಕೂಡಾ ಇದರಲ್ಲಿ ಕಾಣುತ್ತಿಲ್ಲವೆಂದರೆ, ಇದರ ಉದ್ದೇಶವೇನು? ಶುಕ್ರವಾರದಂದು ಬಜೆಟ್ ಮಂಡನೆಯಾಗುತ್ತಿದ್ದು, ಈ ವಿಚಾರವಾಗಿ ನಾನು ಮಾನ್ಯ ಉಪ ಮುಖ್ಯಮಂತ್ರಿಯವರೊಂದಿಗೆ ಇವತ್ತು ಮಾತನಾಡಬೇಕಾಗಿತ್ತು. ಆದರೆ, ಏನೂ ಕೇಳಿಲ್ಲ. ಮೂರು ತಿಂಗಳಿಂದೀಚೆಗೆ ಸರ್ಕಾರದವರು, ನಾವು ಅಂದರೆ, ಜನಪ್ರತಿನಿಧಿಗಳು, ಸಂತ್ರಸ್ಥರು ಎಲ್ಲರೂ ಸೇರಿಕೊಂಡು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಚರ್ಚಿಸಲಾಗಿದೆ. ಈ ದಿಸೆಯಲ್ಲಿ ಚರ್ಚಿಸಿದ ಮೇಲೆ ಇಲ್ಲಿಯವರೆಗೂ ಏನೇನು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ ಎಂಬುದಷ್ಟೆ ನನ್ನ ಹಾಗೂ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರ ಪ್ರಶ್ನೆಯಾಗಿದ್ದು, ಬೇರೆ ಏನು ಇರಲಿಲ್ಲ. ಅದಕ್ಕಷ್ಟೇ ನನಗೆ ಉತ್ತರ ಬೇಕಾಗಿತ್ತು. ಚರ್ಚೆ ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದು step ಮುಂದೆ ಹೋಗಿದ್ದೇವೆ, ಎರಡು step ಮುಂದೆ ಹೋಗಿದ್ದೇವೆ ಈ ರೀತಿಯಾಗಿದೆ ಎಂದು ಹೇಳಬಹುದಾಗಿತ್ತು. 522 ಮೀಟರ್‌ವರೆಗೆ acquisition ಮಾಡಲು bifurcation ಆಗಿದ್ದು, 524.256 ಮೀಟರ್‌ಗೆ ಏರಿಸುವಂತೆ ಹೇಳಿದ್ದೇವೆ. ಈ ವಿಚಾರವು ನಡವಳಿಯಲ್ಲಿ ಸಹ ದಾಖಲಾಗಿದೆ.

ಈಗಾಗಲೇ ಸುಮಾರು 29,000 ಎಕರೆಗೆ ಪರಿಹಾರ ಕೊಡುವಂಥ ಕೆಲಸವಾಗಬೇಕಾಗಿದ್ದು, ಅದು ಆಗಿಲ್ಲ. ಹಾಗೆಯೇ ಹಿಡಿದಿಟ್ಟಿದ್ದಾರೆ. ಈ ರೀತಿ ಮುಂದೂಡಲು ಏನಾದರೂ ಒಂದು ಕಾರಣ ಬೇಕು. ಉತ್ತರ ಕರ್ನಾಟಕದ ಬಗ್ಗೆ ಏತಕ್ಕೆ ಈ ರೀತಿಯ ತಾತ್ಸಾರ? ಸಂಪದ್ಭರಿತವಾದ ಒಳ್ಳೆಯ ಪ್ರದೇಶಕ್ಕೆ ನೀರು ಕೊಟ್ಟರೆ ಮುಂದೆ ಒಂದು ದಿನ ರೈತರೇ ಸಾಲ ಕೊಡುತ್ತಾರೆ. ಯಾವ ರೈತನು ಸರ್ಕಾರದ ಮುಂದೆ ಭಿಕ್ಷೆ ಬೇಡಬೇಕಾಗಿಲ್ಲ. ಒಂದು ಎಕರೆಯಲ್ಲಿ ಒಂದು ಲಕ್ಷ, ಎರಡು ಲಕ್ಷ, ನಾಲ್ಕು ಲಕ್ಷಗಳಷ್ಟು ಉತ್ಪನ್ನ ತೆಗೆದರೆ, ರೈತರೇ ಸಾಲ ನೀಡುವ ಮಟ್ಟಕ್ಕೆ ಬೆಳೆಯುತ್ತಾರೆ. ನಿಶ್ಚಿತವಾಗಿ ಸರ್ಕಾರದ ಮುಂದೆ ಯಾವುದೇ ರೀತಿಯಲ್ಲಿ ಅಂಗಲಾಚುವಂಥ ಪರಿಸ್ಥಿತಿ ಬರುವುದಿಲ್ಲ. ಇಂತಹ ಸ್ಥಿತಿಯಲ್ಲಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತೋರಿದೆ. ಅಧಿಕೃತವಾಗಿ ಒಟ್ಟಾರೆಯಾಗಿ ಅದರ ಅಂಕಿಸಂಖ್ಯೆಯನ್ನು ಹೇಳುವುದಾದರೆ, ಉತ್ತರ ಕರ್ನಾಟಕದಲ್ಲಿ ನೀರಾವರಿಗೊಳಪಟ್ಟ ಕ್ಷೇತ್ರ ಎಷ್ಟೆಂದರೆ, ಕೇವಲ ಶೇಕಡ 4.67 ರಷ್ಟು ಆಗಿದೆ. ಆದರೆ, ಹಳೆಯ ಮೈಸೂರು ಭಾಗದಲ್ಲಿ ನೀರಾವರಿಗೊಳಪಟ್ಟ ಕ್ಷೇತ್ರ ಎಷ್ಟೆಂದರೆ, ಶೇಕಡ 11.5 ರಷ್ಟು ಅಂದರೆ, ಎರಡರಷ್ಟು ಇದೆ. ಶೇಕಡ 70 ರಷ್ಟು ವಿಫುಲವಾದ ಅವಕಾಶವು ನಮ್ಮ ಭಾಗದಲ್ಲಿದೆ. ಮೈಸೂರು ಭಾಗದಲ್ಲಿ ಕೇವಲ ನೀರಾವರಿಗೆ ಶೇಕಡ 25 ರಷ್ಟು, ಶೇಕಡ 30 ರಷ್ಟು ವಿಫುಲ ನೀರಾವರಿ ಪ್ರದೇಶಕ್ಕೆ ಈಗಾಗಲೇ ಶೇಕಡ 11.5 ರಷ್ಟು ನೀರಾವರಿಗೆ ಅವಕಾಶ ಕಲ್ಪಿಸಲಾಗಿದೆ. ಎಲ್ಲಿಯವರೆಗೂ ದಡ್ಡತನದಿಂದ ಇದೇ ರೀತಿ ಸರ್ಕಾರ ಮುಂದುವರೆಯುತ್ತಾ ಹೋಗುತ್ತದೆ?

ಏತಕ್ಕಾಗಿ ಸರ್ಕಾರವು ಇಂತಹ ಒಂದು ತಾರತಮ್ಯವನ್ನು ಅನುಸರಿಸಲಾಗುತ್ತಿದೆ? ರಾಜ್ಯಪಾಲರ ಬಾಯಲಿ ನಮ್ಮ ಕ್ಷೇತ್ರದ ಬಗ್ಗೆ ಒಂದೆರಡು ಶಬ್ದವನ್ನು ಹೇಳಿಸಿದರೆ ಖುಷಿಯಾದರೂ ಪಡುತ್ತಿದ್ದೆವು. ನಾಳೆಯೇ ಬಜೆಟ್ ಎಂಬುದು ನನಗೆ ಗೊತ್ತಿಲ್ಲ. ಈಗಾಗಲೇ ನನಗೆ ಗ್ರಾಸವಾಗಿದೆ. ತಪ್ಪಿಸಿಕೊಂಡು, ನುಣುಚಿಕೊಂಡು ಮುಂದೆ ಹಾಕುತ್ತಾ ಹೋಗಲಾಗುತ್ತಿದೆ. ನಾಳೆ ಸಹ ಬಜೆಟ್ ಭಾಷಣದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು ಎಳ್ಳು-ನೀರು ಬಿಡುತ್ತಿದ್ದಾರೆ ಎಂದು ಅನಿಸುತ್ತಿದೆ. ಅದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಕೆಲವು ಸಚಿವರೊಂದಿಗೆ ಔಪಚಾರಿಕವಾಗಿ ನಾನು ಮಾತನಾಡಿದ್ದೆನು. ಈ ಸಂಬಂಧ ಬೆಳಗಾವಿ ಅಧಿವೇಶನದಲ್ಲಿ ಚರ್ಚೆಯಾದ ನಂತರ ಉತ್ತರ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದ ಕುರಿತು ಸಚಿವರ ಮಟ್ಟದಲ್ಲಿ ಅಥವಾ ಅಧಿಕಾರಿ ವರ್ಗದಲ್ಲಿ ಚರ್ಚೆಯಾಗಿದೆಯೇ ಎಂದು ಕೇಳಿದರೆ ಎಲ್ಲರೂ ಮೌನವಾಗಿರುತ್ತಾರೆ.

(ಮುಂದು)

(119) 06.03.2025/1.20/ಎಸ್‌ಕೆ-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್ ಪೂಜಾರ್ (ಮುಂದು)**

ಇದಕ್ಕೆ ಉತ್ತರ ಕೊಡುವಂತಹ ಸ್ಥಿತಿಯಲ್ಲಿ ಯಾವ ಸಚಿವರೂ ಇಲ್ಲ. ಕಳೆದ ಬಾರಿ ಒಂದೂವರೆ ತಿಂಗಳಿನಿಂದ ಇದರ ಬಗ್ಗೆ ಮಾತನಾಡುತ್ತಲೇ ಬಂದಿದ್ದೇನೆ. ಆ ಭಾಗ ಮತ್ತೊಮ್ಮೆ ಹೊತ್ತಿ ಉರಿಯುವಂತಹ ಸ್ಥಿತಿ ಬಂದರೂ ಬರಬಹುದು. ಇದು ಸರ್ಕಾರಕ್ಕೆ ಗೊತ್ತಿರಲಿ. ಸರ್ಕಾರ ನೀರಾವರಿ ಮಾಡುವುದಿಲ್ಲ ಎಂದು ಹೇಳುವುದಾದರೆ, ಅದಕ್ಕಾದರೂ ಒಂದು ತೀರ್ಮಾನಕ್ಕೆ ಬನ್ನಿ. ಈ ಹಿಂದೆ ದಿವಂಗತರಾದ ಶ್ರೀ ಉಮೇಶ್ ಕತ್ತಿಯವರು ಉತ್ತರ ಕರ್ನಾಟಕವನ್ನು ಬೇರೆ ರಾಜ್ಯವನ್ನಾಗಿ ಮಾಡಿಕೊಡಿ ಎಂದು ಪದೇ ಪದೇ ಹೇಳುತ್ತಿದ್ದರು. ಅದು ನಮಗೆ ನೆನಪಾಗುತ್ತದೆ. ಅದನ್ನು ನ್ಯಾವ್ಯಾರೂ ಇವತ್ತಿನವರೆವಿಗೂ ಒಪ್ಪಿಕೊಂಡಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಏನಾಗುತ್ತದೆ ಎಂಬುದರ ಬಗ್ಗೆ ಯೋಚನೆ ಮಾಡಿ. ಈ ಪ್ರದೇಶವು ಸಂಪತ್ಭರಿತವಾದ ಪ್ರದೇಶವಾಗಿದ್ದು, ಸರ್ಕಾರ ಇದೇ ರೀತಿ ನಿರ್ಲಕ್ಷ್ಯ ಮಾಡುತ್ತಾ ಹೋದರೆ, ಈ ರಾಜ್ಯದ ಒಂದು ಭಾಗ ಕೈಬಿಟ್ಟರೆ ಏನಾಗಬಹುದು? ಇದರ ಬಗ್ಗೆ ಯಾವ ಸರ್ಕಾರಕ್ಕೆ ಯೋಚನೆ ಬರುವುದಿಲ್ಲವೇ? ಇದೇ ಮಾತನ್ನು ಮಾನ್ಯ ಹೆಚ್.ಸಿ. ಮಹದೇವಪ್ಪನವರಿಗೂ ಹೇಳುತ್ತಿದ್ದೇನೆ. ತಾವು ಆ ಭಾಗದ ಪ್ರವಾಸಕ್ಕೆ ಒಮ್ಮೊಮ್ಮೆ ಭೇಟಿ ಮಾಡುತ್ತೀರಿ. ಈ ಭಾಗದಲ್ಲಿರುವ ಪ್ರಾದೇಶಿಕ ಅಸಮಾನತೆಯ ದೃಷ್ಟಿಯಿಂದ ದಲಿತರಿಗೆ ಎಷ್ಟೊಂದು ಧನ ಸಹಾವನ್ನು ನೀಡುತ್ತಿದ್ದೀರಿ. ದಲಿತರ ಸಣ್ಣ ಸಣ್ಣ ಸಮಸ್ಯೆಗಳು ಹಪಹಪಿಸುತ್ತಿದೆ. ಅವರಿಗೆ ಬದುಕುವ ಸ್ಥಿತಿಯ ಸಲುವಾಗಿ ಅನುಕೂಲತೆಗಳನ್ನು ಕಲ್ಪಿಸುತ್ತಿಲ್ಲ. SCP-TSP (Special Component Plan and Tribal Sub Plan) ಯೋಜನೆಗೆ ಎಳ್ಳುನೀರು ಬಿಟ್ಟಿದ್ದೀರಿ. ಅದಕ್ಕೆ ಏನೂ ಹೇಳುವುದೇ ಬೇಡ. ಯಾವುದಾದರೊಂದು ನೆಪ ಹೇಳಿ ಗ್ಯಾರಂಟಿ ಯೋಜನೆಗಳಲ್ಲಿ ಅದನ್ನು merge ಮಾಡಿದ್ದೇವೆ. ಅದೇ ಲಾಭ ಎನ್ನುವ ರೀತಿಯಲ್ಲಿ ನಿಮ್ಮ ಮಾತನ್ನು ಸಲ್ಲಿಸಿದಂತಹ ವಿಚಾರವಿದೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣವನ್ನು ದೀರ್ಘ ಸಮಯದಿಂದ ಕೇಳಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆಯು ಬಹಳ ಒಂದು ದೊಡ್ಡ ಯೋಜನೆಯಾಗಿದೆ. ಇಡೀ ಕರ್ನಾಟಕ ರಾಜ್ಯದಾದ್ಯಂತ ರೈತರಿಗೆ ಹೆಚ್ಚು ನೀರಾವರಿಯನ್ನು ಕೊಟ್ಟು, ಅವರ ಬದುಕನ್ನು ಹಸಿರು ಮಾಡಿದಂತಹ ಯಾವುದಾದರೊಂದು ಡ್ಯಾಮ್ ಇದ್ದರೆ ಅದು ಕೃಷ್ಣಾ ಮೇಲ್ದಂಡೆ ಯೋಜನೆ. ಈ ವಿಷಯದ ಕುರಿತಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವೇ ಇಲ್ಲ. ಕಳೆದ ಬಾರಿ ಬಜೆಟ್‌ನಲ್ಲಿಯೂ ಕೂಡ ಈ ಯೋಜನೆಗೆ ಒಂದು ರೂಪಾಯಿ ಕೂಡ ತೆಗೆದಿಟ್ಟಿರಲಿಲ್ಲ. ಮೊನ್ನೆ ರಾಜ್ಯಪಾಲರು ಭಾಷಣ ಮಾಡುವಾಗ ಈ ವಿಷಯದ ಕುರಿತಾಗಿ ಪ್ರಸ್ತಾಪವೇ ಇಲ್ಲ. ಈ ಪ್ರಾಜೆಕ್ಟ್‌ಗಳು ಬಹಳ ದುಬಾರಿಯಾದ ಪ್ರಾಜೆಕ್ಟ್‌ಗಳು. ವರ್ಷದಿಂದ ವರ್ಷಕ್ಕೆ ಇದನ್ನು ಪೂರ್ಣಗೊಳಿಸದೇ ಹೋದರೆ, ಏನಾಗುತ್ತದೆ? ಇಡೀ ದೇಶದಲ್ಲಿ ಡ್ಯಾಮ್ ಕಟ್ಟುವುದು ಬಿಡಿ. ಈಗಂತೂ ಕಥೆ ಮುಗಿದು ಹೋಯಿತು. ಕೃಷ್ಣಾ ಮೇಲ್ದಂಡೆ ಯೋಜನೆ ಲಕ್ಷಾಂತರ ರೈತರಿಗೆ ಬಾಳು ಕೊಟ್ಟಂತಹ ಯೋಜನೆಯಗಿದ್ದು, ಇದರ ಬಗ್ಗೆ ಒಂದೂ ಮಾತಿಲ್ಲ. ಅದರಲ್ಲಿಯೂ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿರುವಾಗ, ಅವರಿಗೆ ಇಡೀ ರಾಜ್ಯದ ಜನರ ಕಷ್ಟ ಗೊತ್ತಿದೆ. ರೈತರು, ಶಿಕ್ಷಣ, ಅರ್ಥಶಾಸ್ತ್ರ, ಕೈಗಾರಿಕೆ ಎಲ್ಲವೂ ಅವರಿಗೆ ಗೊತ್ತು. ಕರ್ನಾಟಕಕ್ಕೆ ಇವರಿಗಿಂತ ಮುಖ್ಯಮಂತ್ರಿ ಬೇಕೆ? ಆದರೆ ಅವರು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಆಯವ್ಯಯದಲ್ಲಿ ಒಂದು ಶಬ್ಧವನ್ನು ಸಹ ಉಲ್ಲೇಖಿಸಿಲ್ಲವೆಂದರೆ, ಇದು ಅತ್ಯಂತ pathetic ಅನಿಸುತ್ತದೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ರವಿಕುಮಾರ್‌ರವರೇ, ನಮ್ಮ ರಾಜ್ಯದ ಮುಖ್ಯಮಂತ್ರಿ ಯಾರು ಎಂದು ತಮಗೆ ಕ್ಲಿಯರ್ ಆಗಿ ಗೊತ್ತಾಯಿತಲ್ಲವೇ?

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ರವಿಕುಮಾರ್‌ರವರೇ, ನಮ್ಮ ರಾಜ್ಯದ ಮುಖ್ಯಮಂತ್ರಿಯವರ ಹೆಸರನ್ನು ಹೇಳಿದ್ದಕ್ಕೆ ತಮಗೆ ಅಭಿನಂದಿಸುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ರವಿಕುಮಾರ್‌ರವರೇ, ತಾವು ಇವತ್ತು ಸತ್ಯವನ್ನು ಹೇಳಿ ಒಪ್ಪಿಕೊಂಡಿರಿ.

**ಶ್ರೀ ಎನ್ ರವಿಕುಮಾರ್:-** ನಾನು ಸತ್ಯವನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ರವಿಕುಮಾರ್‌ರವರೇ, ನಮ್ಮ ಪಕ್ಷದ ಪರವಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಎನ್ ರವಿಕುಮಾರ್:-** ಮಾನ್ಯ ಮಂಜುನಾಥ್ ಭಂಡಾರಿಯವರೇ, ಒಂದು ನಿಮಿಷ. ನೋಡಿ ನನಗೆ ಗೊತ್ತು. ಅದರ ಬಗ್ಗೆ ವಿವಾದ ಮಾಡುವುದಕ್ಕೆ ಹೋಗುವುದಿಲ್ಲ. ಇಂತಹ ಮುಖ್ಯಮಂತ್ರಿಯಿದ್ದಾಗಲೂ ಕೂಡ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಏತಕ್ಕೆ ಮಾತನಾಡುವುದಿಲ್ಲ? ಕೃಷ್ಣಾ ಮೇಲ್ದಂಡೆ ಯೋಜನೆಗೆ ಏತಕ್ಕೆ ಒಂದು ಪೈಸೆ ತೆಗೆದಿಡಲಿಲ್ಲ? ಈ ವಿಷಯದ ಕುರಿತಾಗಿ ಒಂದು ಚಕಾರ ಮಾತಿಲ್ಲ. ಭೀಮಾ ನದಿಯ

ಬಗ್ಗೆಯಾಗಲಿ, ಕಲ್ಯಾಣ ಕರ್ನಾಟಕದ ಬಗ್ಗೆಯಾಗಲಿ ಮಾತನಾಡಲಿಲ್ಲ. ಭೀಮಾ ನದಿ ಯೋಜನೆ ಅನೇಕ ದಶಕಗಳ ಯೋಜನೆಯಾಗಿದೆ.

**ಶ್ರೀ ಎಂ. ನಾಗರಾಜು:-** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ. ತಾವು ಒಳ್ಳೆಯ ಮಾತನ್ನು ಹೇಳುತ್ತಿದ್ದೀರಿ. ಮಾನ್ಯ ಸಭಾಪತಿಯವರೇ, ಅವರಿಗೆ ಮಾತನಾಡುವುದಕ್ಕೆ ಪೀಠವು ಕೂಡ ಸಹಕಾರ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎನ್ ರವಿಕುಮಾರ್:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅದು ನನಗೆ ಅನಿಸುವುದೇನೆಂದರೆ, ಈ ಕೃಷ್ಣಾ ಮೇಲ್ದಂಡೆ ಬಗ್ಗೆ ಒಂದು ಚಕಾರವಿಲ್ಲ.

**ಶ್ರೀ ವಸಂತ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ರವಿಕುಮಾರ್‌ರವರೇ, ಕಲ್ಯಾಣ ಕರ್ನಾಟಕದ ಬಗ್ಗೆ ಚಕಾರವಿಲ್ಲ ಎಂದು ತಾವು ಹೇಳುತ್ತಿದ್ದೀರಿ.

**ಶ್ರೀ ಎನ್ ರವಿಕುಮಾರ್:-** ಬೆಳಗಾವಿ ಅಧಿವೇಶನ ನಡೆಯುತ್ತಿರುವಾಗ, ಮಾನ್ಯ ಮುಖ್ಯಮಂತ್ರಿಗಳು ಬಂದು ಹೋಗಬೇಕೆಂದು ಒಂದು ತಿಂಗಳು ಮುಷ್ಕರ ಮಾಡಿದರು. ಮುಷ್ಕರ ಮಾಡುತ್ತಿರುವಂತಹ ಸಂದರ್ಭದಲ್ಲಿ ಎಲ್ಲಾ ಎಂ.ಎಲ್.ಎ.,ಗಳನ್ನು ಕರೆದು ಬೆಳಗಾವಿಯಲ್ಲಿ ಒಂದು ಸಭೆ ಮಾಡಿದರು. ಆದಾದ ನಂತರವೂ ಕೂಡ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಚಕಾರವಿಲ್ಲ. ಒಂದು ಸಭೆ ಮಾಡಿಸುವುದು, ಕಣ್ಣೀರು ಒರೆಸುವುದು, ಮುಖ್ಯಮಂತ್ರಿಗಳವರಿಗೆ convince ಮಾಡಿ ಮುಷ್ಕರವನ್ನು ಬಂದ್ ಮಾಡಿಸಿದರು. ಇದಕ್ಕೆ ಪ್ರತಿಫಲ ಏನು ಸಿಕ್ಕಿತು? "ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ" ಎಂದು ಪಾದಯಾತ್ರೆ ಹಮ್ಮಿಕೊಂಡು ಜನರಿಗೆ ಭರವಸೆಗಳ ಮಹಾಪೂರವನ್ನೇ ಹರಿಸಿದ್ದರು.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

**ಉಪ ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಇನ್ನೂ ಒಂದೂವರೆ ಗಂಟೆಗೆ ತಾವು conclude ಮಾಡಿ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಐವತ್ತು ನಿಮಿಷದಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ತಮಗೆ ಮಾತನಾಡಲು ಇಪ್ಪತ್ತೈದು -ಮೂವತ್ತು ನಿಮಿಷ ಸಮಯ ನೀಡುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ನಿರ್ಲಕ್ಷ್ಯ ಧೋರಣೆಯ ಬಗ್ಗೆ comparison ಮಾಡುವಾಗ ಅನಿಸುತ್ತದೆ. ಅಕ್ಕಪಕ್ಕದ ರಾಜ್ಯದವರು ಅದೇ ರೀತಿ ನಡೆದುಕೊಳ್ಳುತ್ತಿದ್ದಾರೆಯೇ? ನೆರೆ ರಾಜ್ಯದವರು ನಮಗೆ ಇವತ್ತಿನ ದಿವಸ ಮೇಲ್ಪಂಕ್ತಿಯಾಗಿದ್ದಾರೆ. ರಾಜ್ಯಕ್ಕೆ ಹಂಚಿಕೆಯಾದ ನೀರಿನ ಸಂಗ್ರಹ

ಬಳಕೆಯ ಯುದ್ಧೋಪಾದಿ ಅನುಷ್ಠಾನದಲ್ಲಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳು ಇವತ್ತು ನಮಗೆ ಮಾದರಿಯಾಗಿ ಕಾಣುತ್ತಿದೆ.

ಮಾನ್ಯ ಸಭಾಪತಿಯವರೇ, ತೆಲಂಗಾಣದಲ್ಲಿ ಯಾವ ರೀತಿ ಮಾಡಿದ್ದಾರೆಂದರೆ, ಈ ಹಿಂದೆ ಎನ್.ಟಿ. ರಾಮರಾವ್‌ರವರು ಇದ್ದಂತಹ ಸಂದರ್ಭದಲ್ಲಿ ಬಜೆಟ್‌ನಲ್ಲಿ ಬೇರೆ ಬೇರೆ ಯೋಜನೆಗಳನ್ನು ಕಡಿತಗೊಳಿಸಿದರು. ಆದರೆ ತಾವು ಏನು ಗ್ಯಾರಂಟಿ ಯೋಜನೆಗಳಿಗೆ ಹಾಕಿಕೊಂಡಿದ್ದೀರಿ ಬಹಳ ಸಂತೋಷ. ಇದರಲ್ಲಿ ನಮ್ಮದೇನೂ ತಕರಾರು ಇಲ್ಲ. Asset creation ಗೆ ದುಡ್ಡು ಇಡಬೇಕಲ್ಲ. ಗ್ಯಾರಂಟಿ ಯೋಜನೆಯೂ ಅರ್ಧಂಬರ್ಧ ಮಾಡುವಂತಹ ಕೆಲಸವಾಗಿದ್ದು, ಅದು ಕೂಡ ಸಮರ್ಪಕವಾಗಿ ಸಿಗುತ್ತಿಲ್ಲ. ಮಾನ್ಯ ಸಚಿವರು ನನಗೆ ಹುಷಾರಿರಲಿಲ್ಲ. ಮುಂದಿನ ತಿಂಗಳು ಖಾತೆ ಹಣ ಜಮಾ ಮಾಡುತ್ತೇವೆಂದು ಹೇಳಿದರು. ಇನ್ನೂ ಎರಡು-ಮೂರು ತಿಂಗಳು ಹೋಗುತ್ತದೆ.

**ಶ್ರೀ ಎನ್. ರವಿಕುಮಾರ್:-** ಯಾವ asset creation?

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, Asset ಅನ್ನು ಇನ್ಯಾವುದೂ ತೆಲಂಗಾಣ ರಾಜ್ಯ ಮತ್ತು ಬೇರೆ ರಾಜ್ಯಕ್ಕೆ ಮಾಡುತ್ತಿರಬಹುದು. ಎನ್.ಟಿ. ರಾಮರಾವ್‌ರವರು ಬಜೆಟ್‌ನಲ್ಲಿ ಬೇರೆ ಯೋಜನೆಗಳಿಗೆ ಅನುದಾನ ಕಡಿತಗೊಳಿಸಿ ನೀರಾವರಿಗೆ ಸಂಪೂರ್ಣವಾಗಿ ಸಿಂಹಪಾಲನ್ನು ಒದಗಿಸಿದ್ದರು. ಆಗ ಮಾನ್ಯ ಎನ್.ಟಿ. ರಾಮರಾವ್‌ರವರು ಮಹಾನಾಯಕರು. ತೆಲಂಗಾಣದಲ್ಲಿ ಮಾನ್ಯ ಚಂದ್ರಶೇಖರ ರಾವ್ ನೇತೃತ್ವದ ಸರ್ಕಾರ ಎರಡು ವರ್ಷಗಳಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಕಾಳೇಶ್ವರಂ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿದರು. ಕಾವೇರಿ ಕಣಿವೆಯ 45 ಟಿ.ಎಂ.ಸಿ. ಅಡಿ ಹೆಚ್ಚುವರಿ ನೀರು ಬಳಕೆಗೆ ತಮಿಳುನಾಡು ಕೈಗೆತ್ತಿಕೊಂಡಿರುವ ಕಾವೇರಿ-ವೆಲ್ಲಾರ್ ಗುಂಡಾರ್ ನದಿ ಜೋಡಣೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯವು ತಕರಾರು ಎತ್ತಿ ಇವತ್ತಿನ ದಿವಸ ನ್ಯಾಯಕ್ಕಾಗಿ objection - ಸಲ್ಲಿಸಿದೆ. ಆದರೂ ಕೂಡ ಈ ವ್ಯಾಜ್ಯ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿದ್ದರೂ ಕೂಡ 262 ಕಿಲೋ ಮೀಟರ್‌ಗಳಷ್ಟು ಉದ್ದದ ಕಾಲುವೆಗಳನ್ನು ತಮಿಳುನಾಡು ರಾಜ್ಯ ನಿರ್ಮಾಣ ಮಾಡಿದೆ. ನಮ್ಮ ರಾಜ್ಯಕ್ಕೆ ಏನಾಗಿದೆ? ಮೇಲಿಂದ ಮೇಲೆ ಅಧಿಸೂಚನೆಗಳ ಬಗ್ಗೆ ಹೇಳುತ್ತಿದ್ದೇನೆ. ನಿಮ್ಮದೇ ಸರ್ಕಾರ ಕೇಂದ್ರ ಸರ್ಕಾರ ಎಂದು ಅಧಿಸೂಚನೆ ಹೊರಡಿಸಿ ಬಿಡಿ. ಅಧಿಸೂಚನೆಯಾಗುವಂತಹದ್ದೆ. ಡಿಸೆಂಬರ್, ಜೂನ್ ತಿಂಗಳಿನಲ್ಲಿ ಅಧಿಸೂಚನೆಯಾಯಿತು. ಆದಾದ ನಂತರ ಮುಂದೆ ಇನ್ನೂ ಹತ್ತು ವರ್ಷ ಹೋಗುತ್ತೀರಾ? ಅದಕ್ಕೆ ಪೂರಕ ಕಾರ್ಯಕ್ರಮಗಳಾದ ಭೂಸ್ವಾಧೀನ, rehabilitation ಇವೆಲ್ಲವನ್ನು ಮಾಡುವುದಕ್ಕೆ ನಿಮ್ಮ ಸರ್ಕಾರಕ್ಕೆ freedom ಇದೆ. ನಿಮ್ಮ ಕೈಗೆ ಯಾರೂ ಹಗ್ಗ ಕಟ್ಟಿಲ್ಲ. ಇದನ್ನು ಮಾಡುವುದಕ್ಕೆ ಅವಕಾಶವಿದೆ. ಅಧಿಸೂಚನೆ ಪ್ರಕಟ ಮಾಡಿದರೆ, ನಾವು ಮತ್ತೆ ಪ್ರಾರಂಭ ಮಾಡುವುದಕ್ಕೆ ಮತ್ತೊಂದು ಐದು ಹತ್ತು ವರ್ಷ ಮುಂದಕ್ಕೆ ಹೋಗಬಹುದು.

**ಶ್ರೀ ಆರ್.ಬಿ. ತಿಮ್ಮಾಪೂರ (ಅಬಕಾರಿ ಸಚಿವರು):-** ಮಾನ್ಯ ಸದಸ್ಯರೇ, ಯಾವಾಗ ಮಾಡುತ್ತೀರಾ ಅದೊಂದು ಹೇಳಿ. ನಿಮ್ಮ ಪಕ್ಷದಿಂದ ನಿಮ್ಮ ಜಿಲ್ಲೆಯವರಿಗೆ ನೀರಾವರಿ ಮಂತ್ರಿ ಕೊಟ್ಟಿದ್ದೀರಲ್ಲ. ಅದಕ್ಕೆ ಏನೇನು ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಅದಕ್ಕೊಂದು list ಹೇಳಿಬಿಡಿ. ಎಲ್ಲಾ ಪಕ್ಷದವರು ಇದಕ್ಕೆ ನಿರ್ಲಕ್ಷ್ಯ ತೋರಿದೆ ಎಂಬ ಮಾತನ್ನು ಒಪ್ಪಿಕೊಳ್ಳೋಣ. ಆದರೆ ತಾವು ಯಾವುದೇ ಒಂದು ಪಕ್ಷಕ್ಕೆ ಮಾತ್ರ ಬೊಟ್ಟು ಮಾಡಿ ಮಾತಾಡುತ್ತಿರಲ್ಲ, ಅದು ಎಷ್ಟರ ಮಟ್ಟಿಗೆ ಸರಿ? ನಮ್ಮ ಜಿಲ್ಲೆಗೆ ನಿಮ್ಮ ಪಕ್ಷದಿಂದ ನೀರಾವರಿ ಮಂತ್ರಿ ಇದ್ದರಲ್ಲವೇ? ಕೃಷ್ಣಾ ಮೇಲ್ದಂಡೆ ಯೋಜನೆಗೆ ಎಷ್ಟು ಅನುದಾನ ಕೊಟ್ಟಿದ್ದೀರಿ?

**ಶ್ರೀ ಪಿ. ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಬಹುಪಾಲು ಆಡಳಿತ ನಡೆಸಿದಂತಹವರು ಕಾಂಗ್ರೆಸ್ ಪಕ್ಷದವರು ಎನ್ನುವಂತಹ ಆ ಅಪವಾದದ ಹೆಚ್ಚಿನ percentage ನೀವೇ ಇರಬೇಕು. ನಾವು ಶೇಕಡಾ 5-10 ರಷ್ಟು ತೆಗೆದುಕೊಳ್ಳುವುದಕ್ಕೆ ನಾವು ಪ್ರಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ನಿಮ್ಮ ಸರ್ಕಾರನೇ ಬಹುಪಾಲು ನಿರ್ಲಕ್ಷ್ಯ ಮಾಡಿದೆ. 1964 ರಲ್ಲಿ ದಿ॥ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರು ಶಂಕು ಸ್ಥಾಪನೆ ಮಾಡಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲು ಹಾಕಿದಂತಹವರು. ಈಗಾಗಲೇ 60-70 ವರ್ಷಗಳಾದರೂ ಇವತ್ತಿನವರೆವಿಗೂ ಆಗಿಲ್ಲ. ಅದು ನಮ್ಮ ಹಣೆಬರಹ. ನೀವೇ ಆಡಳಿತ ಮಾಡಿದ್ದೀರಿ. ನೀವೇ ಪ್ರಭುಗಳು. ಕೇಂದ್ರ ಮತ್ತು ರಾಜ್ಯದಲ್ಲಿಯೂ ನಿಮ್ಮ ಸರ್ಕಾರವಿತ್ತು. ಮಾನ್ಯ ಸಭಾಪತಿಯವರೇ, ತಮಿಳುನಾಡು ರಾಜ್ಯ 262 ಕಿಲೋ ಮೀಟರ್‌ಗಳಷ್ಟು ಉದ್ದದ ಕಾಲುವೆಗಳನ್ನು ಮಾಡಿದೆ ಎಂದು ತಮಗೆ ಹೇಳುತ್ತಿದ್ದೆ.

**ಉಪ ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ತಮ್ಮ ಮಾತನ್ನು ಎರಡ್ಮೂರು ನಿಮಿಷಗಳಲ್ಲಿ conclude ಮಾಡಬೇಕು.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ತಮಿಳು ನಾಡು, ತೆಲಂಗಾಣ ಸರ್ಕಾರಗಳ ಮಾದರಿಯಲ್ಲಿಯೇ ಕರ್ನಾಟಕ ಸರ್ಕಾರ ದಿಟ್ಟತನ ಪ್ರದರ್ಶನ ಮಾಡಿ, ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಲೇಬೇಕು. ಇನ್ಯಾವುದೇ ಯೋಜನೆಗಳನ್ನು ಬದಿಗಿಟ್ಟು, ರೈತರ ಕಲ್ಯಾಣ ಮತ್ತು ರಾಜ್ಯದ ಅಭಿವೃದ್ಧಿ ಇದರ ಉದಾತ್ತವಾದ ಕಲ್ಪನೆಯನ್ನು ಇಡೀ ಕರ್ನಾಟಕ ಒಂದೇ ಎನ್ನುವ ಭಾವನೆಯನ್ನಿಟ್ಟುಕೊಂಡು, ಈ ಭಾಗದ ಎಲ್ಲಾ ಮಂತ್ರಿಗಳು ಮತ್ತು ಶಾಸಕರು ಇದಕ್ಕೆ ಸಹಕಾರ ಕೊಟ್ಟು, ಸರ್ಕಾರದ ನೇತೃತ್ವವನ್ನು ವಹಿಸಿಕೊಂಡಿರುವವರ ಕಿವಿಯನ್ನು ಹಿಂಡುವಂತಹ ಕೆಲಸ ಮಾಡಬೇಕು. ಇನ್ಯಾವ ಯೋಜನೆಗಳ ಕೆಲಸವಿದೆಯೋ ಅದನ್ನು ಮುಗಿಸಿ. ನಾವು ಸ್ವಲ್ಪ ತಡೆದುಕೊಳ್ಳುತ್ತೇವೆ. ಆ ಉತ್ತರ ಕರ್ನಾಟಕ ಬೇರೆಯಲ್ಲ, ನಾವು ಬೇರೆಯಲ್ಲ ಎನ್ನುವಂತಹ ಉದಾರ ಭಾವನೆಯನ್ನು ಕೂಡ ವ್ಯಕ್ತ ಮಾಡಬೇಕು. ಮಲತಾಯಿ ಧೋರಣೆಯ ತಾರತಮ್ಯವನ್ನು ವ್ಯವಸ್ಥಿತವಾಗಿ ತೋರಿಸಿರುವಂತಹದ್ದು, ಇಲ್ಲಿಯವರೆವಿಗೂ ನಡೆದುಕೊಂಡು ಬಂದಿರುವುದು ದೌರ್ಭಾಗ್ಯ ಎಂದು ನನಗೂ ಕೂಡ ಇವತ್ತು ಅನಿಸುತ್ತಿದೆ.

(ಮುಂದು)

(120) 06.03.2025/1.30/ಟಿಸಿಹೆಚ್-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು)**

ಮಾನ್ಯ ಸಭಾಪತಿಯವರೇ, ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ. ನಾಳೆ ಮಂಡನೆಯಾಗುವ ಬಜೆಟ್‌ನಲ್ಲೂ ಕೂಡ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಏನಾದರೂ ಪ್ರತಿಬಿಂಭ ಸಿಗುತ್ತದೋ, ಇಲ್ಲವೋ ಎನ್ನುವಂತಹ ಸಂಶಯ ನನಗೆ ಕಾಣುತ್ತಿದೆ. Asset creation ಮಾಡುವಂತಹ ಒಂದು ದೊಡ್ಡ ಯೋಜನೆ ಮಾಡಬೇಕು. ನಿಗಮಗಳ ಬಗ್ಗೆ ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ವಿಷದವಾಗಿ ಬಹಳಷ್ಟು ಚೆನ್ನಾಗಿ ಹೇಳಿದ್ದಾರೆ. ಯಾವ ನಿಗಮಕ್ಕೂ ಕೂಡ ರೂ.10ಗಳು ಕೊಡುವುದಿಲ್ಲ. Establishment ಮಾಡುವಂತಹ ಅಧಿಕಾರಿಗಳ ಪಗಾರಕ್ಕೆ ಮತ್ತು ಕಾರಿಗೆ ಕೊಡುತ್ತಿದ್ದಾರೆ. ಇಷ್ಟು ಬಿಟ್ಟರೆ ಯಾವ ನಿಗಮಕ್ಕೂ ಕೂಡ ರೂ.10ಗಳು ಕೊಡುವಂತಹ ಕೆಲಸ ಮಾಡಲೇ ಇಲ್ಲ. ಈ ಸರ್ಕಾರದ ವೈಖರಿ, mismanagement... ರಾಜ್ಯದ ಮುಖ್ಯಮಂತ್ರಿಗಳು ಕಿರೀಟ ಹಾಕಿಕೊಂಡಿದ್ದಾರೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ನಮಗೆ ಅವರ ಮೇಲೆ ಅಭಿಮಾನ ಇದೆ. ಅವರು ಸಾಕಷ್ಟು ಬಾರಿ ಬಜೆಟ್ ಮಂಡನೆ ಮಾಡಿದವರು. ಕನಿಷ್ಟ ಉತ್ತರ ಕರ್ನಾಟಕದ ಬಗ್ಗೆ ತಿಳವಳಿಕೆ ಇಲ್ಲವೆಂದು ಹೇಳಬಹುದು ಅಥವಾ ಉದ್ದೇಶಪೂರ್ವಕವಾಗಿ ಅವರೇನೋ ಯಾವುದಾದರೊಂದರಲ್ಲಿ ಬದುಕಲಿ ಎನ್ನುವಂತಹ ಉದ್ದೇಶ ಇಟ್ಟುಕೊಂಡು ಈ ರೀತಿ ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಅದಕ್ಕೆ ದಯಮಾಡಿ ಸರ್ಕಾರ ವಿಶೇಷವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ, ನೀರಾವರಿ ಯೋಜನೆಗಳ ಬಗ್ಗೆ ಕಳಕಳ ತೋರಿಸಿ ಬದ್ಧತೆ ಪ್ರದರ್ಶನ ಮಾಡಬೇಕು. ಇತ್ತೀಚೆಗೆ ಬೆಳಗಾವಿಯಲ್ಲಿ ಒಂದು strike ಆಗಿತ್ತು. ಅದಾದನಂತರ next meeting ನಲ್ಲೇ ನಾವು acquisition ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದರು. 522 ಮೀಟರ್‌ರವರೆಗೆ ಕಲಂ 4(1), 6(1), 9(1) ಅಡಿಯಲ್ಲಿ ಏನು proceedings ಆಗಿವೆ, ಅದನ್ನು ಪೂರ್ಣಗೊಳಿಸುವಂತಹ ಕೆಲಸ ಮಾಡಬೇಕು. ತಕ್ಷಣ ಪರಿಹಾರ ಕೊಡುವಂಥದ್ದು ಆಗಬೇಕು. ಕಾಲುವೆಗಳಲ್ಲಿ ನೀರು ಹರಿಸುವಂತಹ ಕೆಲಸ ಆಗಬೇಕೆಂದು ತಮ್ಮೂಲಕ ಒತ್ತಾಯ ಮಾಡಿ ನನ್ನ ಮಾತು ಮುಗಿಸುತ್ತಿದ್ದೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ನಮಸ್ಕಾರ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಈ ತಿಂಗಳು 20 ಮತ್ತು 21ನೇ ತಾರೀಖಿನಂದು ಕರ್ನಾಟಕ ಸರ್ಕಾರದಿಂದ ಆಂಧ್ರಪ್ರದೇಶಕ್ಕೆ 1.2 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದಾರೆ. ಇದು ಬಹಳ ಆಘಾತಕಾರಿಯಾಗಿರತಕ್ಕಂಥ ವಿಷಯ. ಅವರು 5 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಆಂಧ್ರಪ್ರದೇಶ ಮತ್ತು ತೆಲಂಗಾಣದವರು ಕರ್ನಾಟಕ ಸರ್ಕಾರವನ್ನು ಕೇಳಿಕೊಂಡಿದ್ದರು. ಈಗಾಗಲೇ 1.2 ಟಿ.ಎಂ.ಸಿ. ನೀರನ್ನು ಈಗಾಗಲೇ ಬಿಟ್ಟಿದ್ದಾರೆ. ಈ ರೀತಿ ನೀರನ್ನು ಬಿಡುವ ಪದ್ಧತಿಯನ್ನು Upper Krishna Project ನಲ್ಲಿ ತಂದರೆ, ಮುಂದೊಂದು ದಿವಸ ಆ ಭಾಗದ ರೈತರಿಗೆ ಬಹಳಷ್ಟು ನೋವಾಗುತ್ತದೆ. ದಯವಿಟ್ಟು ಅದನ್ನು ನಿಲ್ಲಿಸಬೇಕು. ಕಳೆದ 2017-18ರಲ್ಲಿಯೂ ಕೂಡ ಇದೇ ರೀತಿ ನೀರು ಬಿಟ್ಟಿರತಕ್ಕಂಥ ಸಂದರ್ಭದಲ್ಲಿ Upper Krishna Project ನಲ್ಲಿರತಕ್ಕಂಥ ನದಿಯ ಹಿನ್ನೀರಿನಲ್ಲಿ ಮನುಷ್ಯರಿಗೆ ಕುಡಿಯುವುದಕ್ಕೆ ನೀರು ಸಿಗಲಿಲ್ಲ. ಬಿಜಾಪುರ ನಗರಕ್ಕೆ ನೀರು ಸಿಗಲಿಲ್ಲ. ದನ-

ಕರುಗಳಿಗೆ ನೀರು ಸಿಗಲಿಲ್ಲ. ಅಷ್ಟೇ ಅಲ್ಲದೇ ಜಲಚರ ಪ್ರಾಣಿ ಪಕ್ಷಿಗಳಿಗೆ ನದಿಯಲ್ಲಿ ಇರತಕ್ಕಂಥ ಮೀನು ಮತ್ತು ಮೊಸಳೆಯು ಸತ್ತು ಹೋಗತಕ್ಕಂಥ ಪ್ರಸಂಗ ಬಂದಿತ್ತು. ಅಂತಹ ಪ್ರಸಂಗ ಮತ್ತೆ ಬರಬಾರದು ಎನ್ನತಕ್ಕಂಥ ಹಿನ್ನೆಲೆಯಲ್ಲಿ, ನಾನು ಸರ್ಕಾರದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಯಾವ ಕಾರಣಕ್ಕೂ Upper Krishna Project ನೀರನ್ನು ಕೆಳಗಿನ ರಾಜ್ಯಗಳಿಗೆ ಬಿಡಬಾರದು ಎಂದು ನಾನು ಆಗ್ರಹವನ್ನು ಮಾಡುತ್ತಿದ್ದೇನೆ.

**ಉಪ ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ ೩ ಗಂಟೆಯವರೆಗೆ ಮುಂದೂಡಲಾಗಿದೆ.

**(ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 1 ಗಂಟೆ ೩೩ ನಿಮಿಷದಿಂದ ಮಧ್ಯಹ್ನ ೩ ಗಂಟೆಯವರೆಗೆ ಮುಂದೂಡಲಾಯಿತು)**

(121) 06.03.2025/3.20/ ಪಿಕೆ-ಆರ್‌ಎನ್

**(ಸದನವು ಭೋಜನ ವಿರಾಮದ ನಂತರ ಪುನಃ 3 ಗಂಟೆ 24 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.**

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳು. ಇದರಲ್ಲಿ ಮೊದಲು ಮಾನ್ಯ ಮಂಜುನಾಥ್ ಭಂಡಾರಿ ಮತ್ತು ಮಾನ್ಯ ಐವನ್ ಡಿ'ಸೋಜಾ ಅವರುಗಳ ವಿಷಯ ಇದೆ. ಪ್ರಸ್ತುತ ಅವರು ಸದನದಲ್ಲಿ ಉಪಸ್ಥಿತರಿಲ್ಲ. ಮುಂದಿನದು ಡಾ: ಧನಂಜಯ ಸರ್ಜಿ ಅವರದ್ದು.

**6) ಗಮನ ಸೆಳೆಯುವ ಸೂಚನೆಗಳು**

**ಅ) ವಿಷಯ: ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರದ ನೀತಿ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು.**

**ಡಾ: ಧನಂಜಯ ಸರ್ಜಿ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರದ ನೀತಿ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು):-** ಮಾನ್ಯ ಸಭಾಪತಿಗಳೆ, ನಾನು ಈ ವಿಷಯವಾಗಿ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಬೇರೆ ಕ್ಲ್ಯಾರಿಫಿಕೇಷನ್ ಕೇಳುವುದಿದ್ದರೆ ಕೇಳಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

155-72-8

(8)

(೨೧)

06/03/2025

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ. ಧನಂಜಯ ಸರ್ಜಿ ರವರ ನಿಯಮ 72 ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಗಮನ ಸೆಳೆಯುವ ಸೂಚನೆ:**

**ಹಲವಾರು ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಆತಂಕಕಾರಿಯಾಗಿರುವ ವಿಷಯದ ಕುರಿತು ಸರ್ಕಾರದ ನೀತಿ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.**

**ಉತ್ತರ:**

ASER (Annual Status Of Education Report) ಸಮೀಕ್ಷೆಯು ಮಕ್ಕಳ ದಾಖಲಾತಿ ಸ್ಥಿತಿ ಮತ್ತು ಅವರ ಮೂಲಭೂತ ಓದುವಿಕೆ ಮತ್ತು ಅಂಕಗಣಿತದ ಕೌಶಲ್ಯಗಳ ಕುರಿತು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಅಂದಾಜುಗಳನ್ನು ರಚಿಸಿದೆ. 3-16 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗಾಗಿ ಶಾಲೆ ಅಥವಾ ಪೂರ್ವ ಪ್ರಾಥಮಿಕ ಶಾಲೆ (Pre School) ಗಳಿಗೆ ದಾಖಲಾತಿ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದೆ ಹಾಗೂ 5-16 ವರ್ಷ ವಯಸ್ಸಿನ ಮಕ್ಕಳನ್ನು ಅವರ ಓದುವಿಕೆ ಮತ್ತು ಅಂಕಗಣಿತದ ಮಟ್ಟವನ್ನು ಅರ್ಥ ಮಾಡಿಕೊಳ್ಳಲು ಪರೀಕ್ಷಿಸಲಾಗಿರುತ್ತದೆ. ಮುಂದುವರೆದು, 14-16 ವರ್ಷ ವಯಸ್ಸಿನ ಹಿರಿಯ ಮಕ್ಕಳ ಡಿಜಿಟಲ್ ಸಾಮರ್ಥ್ಯಗಳನ್ನು ಅಳೆಯಲು ಸ್ಮಾರ್ಟ್ ಫೋನ್ ಆಧಾರಿತ ಕಾರ್ಯಗಳ ಗುಂಪನ್ನು ರಚಿಸಿ, ಪರೀಕ್ಷಿಸಲಾಗಿದ್ದು, 2024ನೇ ಸಾಲಿನಲ್ಲಿ ಸಮೀಕ್ಷೆ ನಡೆಸಿ 2025ನೇ ಸಾಲಿನ ಜನವರಿ ಮಾಹೆಯಲ್ಲಿ ಡ್ರಾಫ್ಟ್ ವರದಿಯನ್ನು ಬಿಡುಗಡೆ ಮಾಡಿದೆ.

ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಕಲಿಕೆಯನ್ನು ಉತ್ತಮಪಡಿಸಲು ಇಲಾಖೆಯಿಂದ ಕೈಗೊಂಡಿರುವ ಮತ್ತು ಮುಂದಿನ ದಿನಗಳಲ್ಲಿ ಕೈಗೊಳ್ಳುವ ಕ್ರಮಗಳು ಈ ಕೆಳಗಿನಂತಿವೆ:

1. ವಿದ್ಯಾರ್ಥಿಗಳಲ್ಲಿ ಭಾಷೆ ಮತ್ತು ಗಣಿತದ ಮೂಲಭೂತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು Fundamental Literacy & Numeracy (FLN) ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2. 4 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಿಗೆ ಬುನಾದಿ ಭಾಷಾ ಮತ್ತು ಗಣಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು "ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಬೋಧನೆ" ಎಂಬ ಬೋಧನಾ ವಿಧಾನವನ್ನು ಬಳಸಿಕೊಂಡು ಸರಳ ಮೌಲ್ಯಮಾಪನದ ಮೂಲಕ ಮಕ್ಕಳ ಕಲಿಕಾ ಮಟ್ಟ ಗುರುತಿಸಿಕೊಂಡು ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಮಕ್ಕಳ ಗುಂಪುಗಳನ್ನು ಮಾಡಿ ಸೂಕ್ತ ಕಲಿಕಾ ಸಾಮಗ್ರಿಗಳನ್ನು ನೀಡಿ ಚಟುವಟಿಕೆಗಳನ್ನು ನಡೆಸಿ ಕಲಿಸಲು ಕ್ರಮ ಕೈಗೊಳ್ಳಲಾಗುವುದು.

3. ನಿಪುಣ್ ಭಾರತ್ ಅಡಿಯಲ್ಲಿ ಮಾರ್ಪಾಡು ಮಾಡಿರುವ FLNನ 17 ಕಲಿಕಾಫಲಗಳ ಬಗ್ಗೆ ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಿ ಜಿಲ್ಲಾ ಅನುಷ್ಠಾನ ಅಧಿಕಾರಿಗಳ ಮೂಲಕ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ FLN ಕಲಿಕಾಫಲಗಳನ್ನು ಅನುಷ್ಠಾನ ಮಾಡುವುದು ಹಾಗೂ ಅನುಪಾಲನೆ ಮಾಡುವುದು.

4. ಜುಲೈ 2025 ರ ಮಾಹೆಯಿಂದ ಸರ್ಕಾರಿ ಶಾಲೆಗಳ 4 ಮತ್ತು 5 ನೇ ತರಗತಿಯ ಶಿಕ್ಷಕರಿಗೆ ತರಬೇತಿಯನ್ನು ನೀಡಿ ಶಾಲಾ ವೇಳೆಯಲ್ಲಿ ಪೂರಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ಕಲಿಕೆ ಮಟ್ಟವನ್ನು (ಅಕ್ಷರ, ಪದ, ವಾಕ್ಯಗಳನ್ನು ನಿರರ್ಗಳವಾಗಿ ಓದುವ ) ಉತ್ತಮಗೊಳಿಸಲು ಕ್ರಮ ವಹಿಸಲಾಗುವುದು.

5. ಮಕ್ಕಳ ಪ್ರಗತಿ ಸಾಧನೆಯನ್ನು ಪ್ರತಿ ತಿಂಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (ಡಯಟ್) ಮೂಲಕ ಪಡೆದು ಪರಿಶೀಲಿಸಿ ಮುಂದಿನ ತಿಂಗಳಲ್ಲಿ FLN ಸಾಧಿಸದ ಮಕ್ಕಳಿಗೆ ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಡಯಟ್‌ನ ನೋಡಲ್ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು.

6. FLN ಸಾಧನೆ ಮಾಡಿದ ಶಾಲೆಗಳು, ಕ್ಲಸ್ಟರ್ ಗಳು ಮತ್ತು ಬ್ಲಾಕ್ ಗಳನ್ನು ಗುರುತಿಸಿ ಉತ್ತೇಜಿಸುವುದು.

7. ಕಲಿಕಾ ಹಬ್ಬ, ಮೆಟ್ರಿಕ್ ಮೇಳ, FLN ಪೂರ್ಣಪ್ರಮಾಣದಲ್ಲಿ ಜಾರಿಗೆ ತರುವುದು ಸ್ಪರ್ಧೆಗಳನ್ನು ಏರ್ಪಡಿಸುವುದು, ವಿದ್ಯಾ ಪ್ರವೇಶವನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಮಾಸಾಚರಣೆಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಈ ಎಲ್ಲಾ ಅಂಶಗಳ ಕುರಿತು 2025-26 ರ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು, ನಿಯಮಿತ ಅನುಪಾಲನೆಗೆ ಕ್ರಮ ವಹಿಸುವುದು.

8. ಓದು ಕರ್ನಾಟಕ ಕಾರ್ಯಕ್ರಮದಡಿ ರಾಜ್ಯದ 42 ಸಾವಿರ ಶಿಕ್ಷಕರಿಗೆ ತರಬೇತಿ ನೀಡಿ ಪ್ರತಿ ದಿನ ಭಾಷಾ ಮತ್ತು ಗಣಿತ ಕಲಿಕೆಗೆ ತಲಾ 1 ಅವಧಿಯನ್ನು ನಿಗದಿಪಡಿಸಿ 60 ದಿನಗಳ ಕಾಲ ಶಾಲಾ ವೇಳೆಯಲ್ಲಿ ಅನುಷ್ಠಾನಗೊಳಿಸಲಾಗುವುದು.

9. ಕಾರ್ಯಕ್ರಮದ ಪ್ರಾರಂಭದಲ್ಲಿ Base line ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಗುರುತಿಸಿಕೊಂಡು 60 ದಿನಗಳ ನಂತರ Endline ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಪ್ರಗತಿಯನ್ನು ತಂತ್ರಜ್ಞಾನವನ್ನು ಬಳಸಿ ವಿಶ್ಲೇಷಿಸಲಾಗುವುದು.

10. ಗಣಿತ ಗಣಕ :- ಈ ವಿನೂತನ ಕಾರ್ಯಕ್ರಮವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿಯೂ ಮುಂದುವರೆಸಲು ಉದ್ದೇಶಿಸಲಾಗಿದೆ.

11. 2025-26 ನೇ ಸಾಲಿಗೆ PAB ಚಟುವಟಿಕೆಗಳಡಿ 6 ರಿಂದ 8 ನೇ ತರಗತಿ ಬೋಧಿಸುವ ಶಿಕ್ಷಕರಿಗೆ ತರಬೇತಿ ನೀಡಲಾಗುವುದು.

12. 2025-26ನೇ ಸಾಲಿನಲ್ಲಿ ಗಣಿತ ಕಲಿಕಾ ಆಂದೋಲನಾ ಕಿಟ್-2.0 ಬಳಕೆಯನ್ನು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಅನುಪಾಲನಾ ಅಧಿಕಾರಿಗಳಿಂದ ಅನುಪಾಲನೆ ಮಾಡಲಾಗುವುದು.

13. 2024-25ನೇ ಸಾಲಿನಲ್ಲಿ 6ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ತರಗತಿಗಳು ನಡೆಯುತ್ತಿರುವ 1001 ಶಾಲೆಗಳಲ್ಲಿ 2025-26ನೇ ಸಾಲಿನಲ್ಲಿ 7ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ಪ್ರಾರಂಭಿಸಲಾಗುವುದು.

14. ಆಲೂರು ವೆಂಕಟ ರಾವ್ ಭಾಷಾ ಕೌಶಲ್ಯ ಕೇಂದ್ರಗಳ ಮೂಲಕ ಕಥೆಗಳ ಮೂಲಕ ಭಾಷಾ ಬೆಳವಣಿಗೆ (Story based pedagogy) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

15. ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಮೂಲಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಉಳಿಯುವಿಕೆಯನ್ನು ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡುವುದು ಹಾಗೂ ಶಾಲೆಯಿಂದ ಹೊರಗುಳಿಯುವ ಮತ್ತು ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದು.

16. ಮಕ್ಕಳ ಕಲಿಕೆಯ ಗುಣ ಮಟ್ಟವನ್ನು ಹೆಚ್ಚಿಸಲು ಈ ಕೆಳಕಂಡ 10 ಅಂಶದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:

   i. ಚಟುವಟಿಕೆ (೧) - ಸೇತುಬಂಧ.
   ii. ಚಟುವಟಿಕೆ (೨) - ಶಾಲಾ ಶೈಕ್ಷಣಿಕ ಯೋಜನೆ.
   iii. ಚಟುವಟಿಕೆ (೩) - ಭಾಷಾ ಮಾಸಾಚರಣೆ.
   iv. ಚಟುವಟಿಕೆ (೪) - ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ.
   v. ಚಟುವಟಿಕೆ (೫) – ವಿಷಯ ವೇದಿಕೆ
   vi. ಚಟುವಟಿಕೆ (೬) - ವಾರದ ವಿಜ್ಞಾನ ಪ್ರಯೋಗ.
   vii. ಚಟುವಟಿಕೆ (೭)-ವಿಶೇಷ ಅವಧಿ ಹಾಗೂ ಸತತ ಪರಿಶ್ರಮ.
   viii. ಚಟುವಟಿಕ (೮) - ಸಹೋದ್ಯೋಗಿಗಳ ಅವಲೋಕನ ಪಾಠ.
   ix. ಚಟುವಟಿಕೆ (೯) ಪುಸ್ತಕದ ಪರಿಚಯ
   x. ಚಟುವಟಿಕೆ (೧೦) ರಸ ಪ್ರಶ್ನೆ ಕಾರ್ಯಕ್ರಮ

17. 1ನೇ ತರಗತಿಗೆ ಹೊಸದಾಗಿ ದಾಖಲಾಗುವ ಮಕ್ಕಳಿಗೆ ಅನುಕೂಲವಾಗುವಂತೆ ವಿದ್ಯಾಪ್ರವೇಶ ಚಟುವಟಿಕೆಗಳ ಹಾಳೆಗಳನ್ನು ಕಲಿ-ನಲಿ ಪಠ್ಯ ಪುಸ್ತಕದಲ್ಲಿ (ಆಂಗ್ಲ ಮರಾಠಿ, ತಮಿಳು, ತೆಲುಗು, ಮಾಧ್ಯಮ) ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.

18. ಸೇತುಬಂಧ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಮಾರ್ಗದರ್ಶನ ನೀಡಲಾಗುವುದು.

19. ಕಲಿಕಾ ಚೇತರಿಕೆ, ಕಲಿಕಾ ಬಲವರ್ಧನ ಉಪಕ್ರಮಗಳಡಿಯಲ್ಲಿ ಸಿದ್ಧಪಡಿಸಿರುವ ಚಟುವಟಿಕೆ ಪುಸ್ತಕಗಳು, ಕಲಿಕಾ ಫಲಾಧಾರಿತ ಪ್ರಶ್ನೆ ಕೋಠಿ, ಅಭ್ಯಾಸ ಪುಸ್ತಕಗಳ ನಿರಂತರ ಬಳಕೆಗೆ ಪೂರಕವಾಗಿದ್ದು, ಇವುಗಳ ಬಳಕೆಯ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು.

20. 2025-26 ನೇ ಸಾಲಿನಿಂದ TALP ಸೌಲಭ್ಯ ಹೊಂದಿರುವ 2000 ಶಾಲೆಗಳಲ್ಲಿ 4ನೇ ತರಗತಿಯಿಂದ 10ನೇ ತರಗತಿಗಳ ಅಂದಾಜು 2 ಲಕ್ಷ ವಿದ್ಯಾರ್ಥಿಗಳಿಗೆ "ಕಲಿಕಾ ದೀಪ" ಹಮ್ಮಿಕೊಳ್ಳಲಾಗುವುದು.

21. ಖಾನ್ ಅಕಾಡೆಮಿ ಸಹಯೋಗದೊಂದಿಗೆ ರಾಜ್ಯದ 6 ರಿಂದ 10ನೇ ತರಗತಿಯ ಸರ್ಕಾರಿ ಶಾಲೆಗಳಲ್ಲಿ "ಜ್ಞಾನ ಸೇತು" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

22. ರಾಜ್ಯದ 6 ರಿಂದ 10 ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ನಾವೀನ್ಯತೆ ಅಳವಡಿಸಿಕೊಳ್ಳಲು, ಕೃತಕ ಬುದ್ಧಿಮತ್ತೆ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

23. ಕಂಪ್ಯೂಟರ್ ಸೌಲಭ್ಯವನ್ನು ಹೊಂದಿರುವ ರಾಜ್ಯದ 5000 ಸರ್ಕಾರಿ ಶಾಲೆಗಳಲ್ಲಿ 6 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನದ ಬಳಕೆಯಿಂದ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಯಲು ಅವಕಾಶ ಕಲ್ಪಿಸಲಾಗುವುದು.

ಸಂಖ್ಯೆ: ಇಪಿ 20 ಪಿಎಂಎ 2025

(ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಗಳೆ, ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 23,000 ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದರು. 7000 ಮಕ್ಕಳಿಗೆ ಓದು ಬರಹ ಬರುವುದಿಲ್ಲ ಎಂದು ಒಂದು ವಾರ್ತಾ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿದೆ. ಆ ನಿಟ್ಟಿನಲ್ಲಿ ಡಿಡಿಪಿಐಯವರು, ಪ್ರಾಥಮಿಕ ಶಿಕ್ಷಣ ಇಂಪ್ರೂವ್ ಆಗಬೇಕೆಂದು ನೋಟಿಸ್ ಕೊಟ್ಟಿದ್ದೇನೆ ಎಂಬ ಮಾತನ್ನು ಹೇಳುತ್ತಾರೆ. ಪ್ರಾಥಮಿಕ ಶಿಕ್ಷಣ ಇಲಾಖೆಯವರು, ಕಷ್ಟ ಇದ್ದರೆ ಪಾಸ್ ಮಾಡಿ ಕಳುಹಿಸಿ ಎಂಬ ಆರ್ಡರ್ ಇದೆ ಎಂದು ಹೇಳುತ್ತಾರೆ. ಇದು ಕೇವಲ ಕೊಪ್ಪಳ ಜಿಲ್ಲೆಗೆ ಸಂಬಂಧಪಟ್ಟಿದ್ದು ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಇಂತಹ ಒಂದು ತೊಂದರೆಯನ್ನು ಅನುಭವಿಸುತ್ತಿದ್ದಾರೆ. 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕುಳಿತವರ ಸಂಖ್ಯೆ 8,50,000. ಅದರಲ್ಲಿ 1,22,000 ವಿದ್ಯಾರ್ಥಿಗಳು ಅನುತ್ತೀರ್ಣರಾದರು. 2023-24ನೇ ಸಾಲಿನಲ್ಲಿ 2,28,763 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರೆ. ಈ ಸಮಯದಲ್ಲಿ ನಾನು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿ ಪರೀಕ್ಷೆ ನಡೆಸಿದ್ದರಿಂದ ಕಲಿಕೆಯಲ್ಲಿ ಹಿಂದುಳಿದವರು ಎಷ್ಟು ಎನ್ನುವ ಅಂಕಿ-ಅಂಶಗಳು ಗೊತ್ತಾಯಿತು. ಇಡೀ ರಾಜ್ಯದಲ್ಲಿ ಶೇಕಡಾ 25-30 ರಷ್ಟು ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಆದ್ದರಿಂದ ಎಸ್‌ಎಸ್‌ಎಲ್‌ಸಿಯ ಫಲಿತಾಂಶ ಕಡಿಮೆ ಬರುತ್ತಿದ್ದು, ಶೇಕಡಾ 25-30 ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಇದರ ಸಮಸ್ಯೆ ಎಲ್ಲಿದೆ ಎಂದು ನೋಡಿದರೆ, ಅಲ್ಲಿ generation problem ಇದೆ ಎನ್ನುವುದು ಗೊತ್ತಾಗುತ್ತದೆ. X, Y, Z, Alpha, Beta and Theta ಎಂದು Generation ನಲ್ಲಿ ವರ್ಗೀಕರಿಸಲಾಗಿದೆ. X-Generation ಎಂದರೆ, 1960-1980ರ ತನಕ, 20 ವರ್ಷ, Y-Generation ಎಂದರೆ 1980-1997ರ ತನಕ, Z-Generation ಎಂದರೆ 1997-2010ರ ತನಕ, Alpha Generation ಎಂದರೆ 2010-2024ರ ತನಕ, Beta Generation ಎಂದರೆ 2025 ಆದಮೇಲೆ, ಮುಂಬರುವಂತಹ ಮಕ್ಕಳು. ಈ ಕಾಲಘಟ್ಟಗಳಲ್ಲಿ ಹುಟ್ಟಿದ ಮಕ್ಕಳಲ್ಲಿ ಬಹಳಷ್ಟು ವ್ಯತ್ಯಾಸ ಇದೆ. ಹಿಂದೆ ನಮಗೆ letter ನಲ್ಲಿ correspondence ಇತ್ತು. ನಂತರ, ಮೆಸೇಜನ್ನು ಟೆಲಿಗ್ರಾಂನ ಮುಖಾಂತರ ಕಳುಹಿಸುವುದಕ್ಕೆ ಪ್ರಾರಂಭ ಮಾಡಿದೆವು.

(ಮುಂದು)

(122) 6-3-2025 3.30 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಡಾ॥ ಧನಂಜಯ ಸರ್ಜಿಯವರೇ, ತಾವು ಕ್ಲಾರಿಫಿಕೇಶನ್ ಕೇಳಿ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಏಕೆ ಈ ರೀತಿ ಆಗುತ್ತಿದೆ ಎಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈಗ writing skill totally nil ಆಗಿದೆ. ಏಕೆಂದರೆ, ಇವತ್ತಿನ ಜಮಾನದಲ್ಲಿ ನಮಗೆ ಬೇಕಾಗಿರುವ writing skill ಇಲ್ಲ. ನಾವು ಮುಂಚೆ ಬರೆಯುತ್ತಿದ್ದಷ್ಟು ಈಗ

ಬರೆಯುತ್ತಿಲ್ಲ. ಈಗಿನ ಜನರೇಶನ್‌ಗೆ ಇನ್ನೂ ಕಡಿಮೆಯಾಗಿದೆ. ಆ ನಿಟ್ಟಿನಲ್ಲಿ writing skill ಮಕ್ಕಳಿಗೆ ಇಲ್ಲ. ಮಕ್ಕಳಲ್ಲಿ writing skill ನಶಿಸಿ ಹೋಗುತ್ತಿರುವುದರಿಂದ 'theory of evolution' ಪ್ರಕಾರ ಯಾರು ತಮ್ಮ writing skill ಅನ್ನು ಕಡಿಮೆ ಮಾಡಿಕೊಳ್ಳುತ್ತಾರೆಯೋ automatically ನಮಗೆ ಅವಶ್ಯಕತೆ ಇಲ್ಲವೆಂದರೆ ಅದನ್ನು ಬಿಡುವಂತಹ ಚಾನ್ಸಸ್ ಇದೆ. ಒಟ್ಟಿನಲ್ಲಿ ಬರೆಯುವಂತಹ ಕೌಶಲ್ಯದ ಕೊರತೆಯಿಂದಾಗಿ ಸಮಸ್ಯೆ ತುಂಬಾ ಹೆಚ್ಚಾಗಿದೆ. Dyslexia problem ಜಾಸ್ತಿಯಾಗಿದೆ. ಸುಮಾರು ಸರ್ವೆ ಹೇಳುತ್ತವೆ, ಶೇಕಡ 6.1 ರಷ್ಟು ಮಕ್ಕಳು slow learners ಇದ್ದಾರೆ. ಆ ನಿಟ್ಟಿನಲ್ಲಿ ಮಕ್ಕಳನ್ನು improvement ಮಾಡುವುದಕ್ಕೆ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಧನಂಜಯ ಸರ್ಜಿಯವರು ಕೇಳುತ್ತಿರುವುದು ಸರಿಯಾಗಿದೆ. ಕಳೆದ ಸಲ webcasting ಮಾಡಿದ ಮೇಲೆ ಮಕ್ಕಳ ಸಂಖ್ಯೆ exactly ಎಷ್ಟು ಪಾಸ್ ಆಗುತ್ತಿದ್ದಾರೆ ಎಂಬುದು ಗೊತ್ತಾಯಿತು. 1ನೇ ತರಗತಿಯಿಂದ 9ನೇ ತರಗತಿಯವರೆವಿಗೂ ಯಾರನ್ನು ಫೇಲ್ ಮಾಡುವುದಿಲ್ಲ. ಎಲ್ಲರನ್ನೂ ಪಾಸ್ ಮಾಡುತ್ತೇವೆ. ಆ ಸಂದರ್ಭದಲ್ಲಿ ಗುಣಮಟ್ಟದ ಕಲಿಕೆಯನ್ನು ಕೊಡದಿದ್ದರೆ ಈಗ 10ನೇ ತರಗತಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಈಗೇನು ಆಗಿದೆ ಎಂದರೆ, ಅವರು ಗಣಿತವನ್ನು ಚೆನ್ನಾಗಿ ಮಾಡಬೇಕೆಂದರೆ 'ಗಣಿತ-ಗಣಕ' ಎಂದು ಮಾಡಿದ್ದೇವೆ. ಓದುವುದು ಮತ್ತು ಬರೆಯುವುದು ಸರಿಯಾಗಿದೆ. ಏಕೆಂದರೆ, ಎಷ್ಟೋ ಮಕ್ಕಳಿಗೆ ಓದುವುದು, ಬರೆಯುವುದು ಬರುವುದಿಲ್ಲ. 10ನೇ ತರಗತಿಯಲ್ಲಿ webcasting ಮಾಡುವುದಕ್ಕಿಂತ ಮುಂಚೆ ಹೇಗೋ copy ಮಾಡಿ ಪಾಸ್ ಆಗಿರುವುದು ಉಂಟು, ಇಲ್ಲ ಎಂದು ಹೇಳುವುದಿಲ್ಲ. ಆಮೇಲೆ ಸಿಕ್ಕಿಹಾಕಿಕೊಂಡಿದ್ದಾರೆ. ಈ ಸಲ ಶಾಲೆಯಲ್ಲಿ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಕಾರ್ಯಕ್ರಮವನ್ನು ತರುತ್ತಿದ್ದೇವೆ. ಅದು ಒಳ್ಳೆಯ ರೀತಿಯಲ್ಲಿ ಅನುಷ್ಠಾನವಾಗುತ್ತದೆ. ಅದರ ಜೊತೆಗೆ ಇಂಗ್ಲಿಷ್, ಕನ್ನಡವನ್ನು ಒಳ್ಳೆಯ ರೀತಿಯಲ್ಲಿ ಕಲಿಯುವುದಕ್ಕೆ ಕೆಲವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. 1ನೇ ತರಗತಿಯಿಂದ 3ನೇ ತರಗತಿಯವರೆಗೆ, 4ನೇ ತರಗತಿಯಿಂದ 6ನೇ ತರಗತಿಯವರೆಗೆ ವಿಭಿನ್ನವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಅದರ ವಿವರಗಳನ್ನು ನಾನು ಉತ್ತರದಲ್ಲಿ ಕೊಟ್ಟಿದ್ದೇನೆ. ಎಲ್ಲವೂ ಕೂಡ ಅನುಷ್ಠಾನವಾಗಿದೆ. ಹೆಚ್ಚಿನ ಒತ್ತನ್ನು ಕೊಟ್ಟು ಅವರಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಒಳ್ಳೆಯ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ನಮಗೆ 10ನೇ ತರಗತಿಯ ಫಲಿತಾಂಶ ಬಂದ ಮೇಲೆ ಗೊತ್ತಾಗಿದೆ. ಏಕೆಂದರೆ, ಅಲ್ಲಿಯವರೆಗೆ ಏನಾಗುತ್ತಿತ್ತು ಎಂದರೆ, ಪಾಸ್ ಆಗುತ್ತಾರೆ ಎನ್ನುವುದು ಇತ್ತು. ಮುಂಚೆ ರೆಗ್ಯುಲರ್‌ಗಿಂತ ಕಳೆದ ಸಲ ಶೇಕಡ 10 ರಷ್ಟು drop ಆಯಿತು. ಶೇಕಡ ನೂರರಷ್ಟು ಗುಣಮಟ್ಟದ ಶಿಕ್ಷಣವನ್ನು ಕೊಡಬೇಕು. ಅದಕ್ಕಾಗಿ ಹೆಚ್ಚು ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ. ಕಲ್ಯಾಣ ಕರ್ನಾಟಕದ ಭಾಗದಲ್ಲಿ ಶಿಕ್ಷಕರ ಸಂಖ್ಯೆ ಬಹಳ ಕಡಿಮೆ ಇದೆ ಎನ್ನುವ ಮಾತು ಬಂದಿದೆ. ಈಗ ಶೇಕಡ 80 ರಷ್ಟು ಶಿಕ್ಷಕರನ್ನು ನೇಮಕ ಮಾಡಬೇಕೆಂದು ಈಗಾಗಲೇ ಆದೇಶವು ಬಂದಿದೆ. ಆ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ.

ನಮ್ಮ internal ಮೀಸಲಾತಿ ಬಗ್ಗೆ ಮಾತ್ರ ಸ್ವಲ್ಪ ತಡೆಯಾಗಿರುವಂಥದ್ದು. ಅದು ಆಗಿಬಿಟ್ಟರೆ ಸರಿಯಾಗುತ್ತದೆ. ನಾವು ಕಲಿಕೆಗೆ ಒತ್ತು ಕೊಡುವುದನ್ನು subject and language wise ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನಾನು ತಮಗೆ ಸಲಹೆ ಕೊಡುವುದೇನೆಂದರೆ, ಪ್ರಾಥಮಿಕ ಶಾಲೆಗಳಿಂದ ಮೊದಲು ಸರಿಯಾದ ವ್ಯವಸ್ಥೆ ಮಾಡಿ. ಅವರಿಗೆ ತತ್ತಿ ಕೊಟ್ಟಿದ್ದೇವೆ, ಅದು- ಇದು ಕೊಟ್ಟಿದ್ದೇವೆಂದರೆ ಅವರು ಅದರ ಲೆಕ್ಕದಲ್ಲಿ ಹೋಗುತ್ತಾರೆ. ಪ್ರಾಥಮಿಕ ಶಾಲೆಯಲ್ಲಿ ಗಟ್ಟಿ ಅಡಿಪಾಯ ಹಾಕಿದರೆ ಅವರು ಪ್ರೌಢಶಾಲೆಗೆ ಬರುತ್ತಾರೆ. ನೀವು ಪ್ರೌಢಶಾಲೆಯಲ್ಲಿ ಸರಿಯಾಗಿ ಬೋಧನೆ ಮಾಡಿದರೆ ಅವರು ಮುಂದೆ 10ನೇ ತರಗತಿಗೆ ಹೋಗುತ್ತಾರೆ. ಕಳೆದ ಸಲ ನೀವು ಗ್ರೇಸ್ ಮಾರ್ಕ್ಸ್ ಕೊಟ್ಟಿರುವುದರಿಂದ 12 ಅಂಕ ಗಳಿಸುವವರು ಪಾಸ್ ಆಗಿದ್ದಾರೆ. ಪಾಸ್ ಆಗುವವರು ಪಾಸ್ ಆಗುತ್ತಾರೆ, ಫೇಲ್ ಆಗುವವರು ಫೇಲ್ ಆಗುತ್ತಾರೆ. ಪ್ರಾಥಮಿಕ ಹಂತದಿಂದಲೇ ನೀವು ಶಿಕ್ಷಣದ ಗುಣಮಟ್ಟ ಸುಧಾರಣೆ ಮಾಡಬೇಕು. ಎಲ್ಲಾ ಇಲಾಖೆಗಳಿಂದಲೂ ಶೇಕಡಾವಾರು ಇಷ್ಟು ಎಂದು ಜನಗಣತಿ, ಚುನಾವಣೆ ಕೆಲಸಗಳಿಗೆ ಹಾಕಿಕೊಳ್ಳಿ. ಜನಗಣತಿ, ಚುನಾವಣೆ ಕೆಲಸಗಳಿಗೆ ಶಿಕ್ಷಕರುಗಳನ್ನು ಹಾಕಿಕೊಂಡರೆ ಅವರು ಮಕ್ಕಳಿಗೆ ಹೇಗೆ ಕಲಿಸುತ್ತಾರೆ? ಮೂರು ಜನ ಶಿಕ್ಷಕರಿದ್ದರೆ ಮೂರು ಜನ ಶಿಕ್ಷಕರುಗಳನ್ನು ಚುನಾವಣೆಗೆ ಹಾಕಿಕೊಳ್ಳುತ್ತೀರಿ. ಆ ರೀತಿ ಆಗಬಾರದು.

**ಡಾ|| ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಅವರಿಗೆ ಒತ್ತಿ ಹೇಳುವುದೇನೆಂದರೆ, ಸರ್ಕಾರಿ ಶಾಲೆಗಳಲ್ಲಿ ಮತ್ತು ಖಾಸಗಿ ಶಾಲೆಗಳಲ್ಲಿ ಸರ್ವೆಯಾಗಬೇಕು. ಸರ್ಕಾರಿ ಶಾಲೆಗಳಲ್ಲಿ ಎಷ್ಟು ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಎಂದು ಅಂಕಿ-ಅಂಶಗಳು ಸಿಗುತ್ತವೆ. ಅದೇ ರೀತಿ ಖಾಸಗಿ ಶಾಲೆಗಳಲ್ಲೂ ಕೂಡ ಖಂಡಿತವಾಗಿಯೂ assessment ಆಗಬೇಕು. ಬಹಳ ಮುಖ್ಯವಾಗಿ ಕಲಿಕೆಯ ವಿಧಾನವನ್ನು ಹೊಸದಾಗಿ ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದಾರೆ. ಅದರ ಜೊತೆಗೆ ಪರೀಕ್ಷೆಯ ವಿಧಾನವನ್ನು ಬದಲಾವಣೆ ಮಾಡಬೇಕಾಗುತ್ತದೆ. ನಾವು NEP and SEP ಬಗ್ಗೆ ಮಾತನಾಡುತ್ತಿದ್ದೇವೆ. ಈ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅದನ್ನು implement ಮಾಡುವುದು ಬಹಳ ಮುಖ್ಯ. Psychology evaluation ಆಗಲೇಬೇಕು. ಏಕೆಂದರೆ, psychiatrist ಬಳಿ ಮಕ್ಕಳು slow learners ಎಂದು ಬಂತು ಎಂದರೆ ಅವರಿಗೆ ದಯವಿಟ್ಟು scribe ಅನ್ನು ಕೊಟ್ಟು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ, ಅವರಿಗೆ writing skill ಇರುವುದಿಲ್ಲ, ಆದರೆ speaking skill ಇರುತ್ತದೆ. ಸುಮಾರು ಶೇಕಡ 6 ರಷ್ಟು ಮಕ್ಕಳು ಈ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಆ ನಿಟ್ಟಿನಲ್ಲಿ ಖಂಡಿತವಾಗಿಯೂ ಅವರು ಪರೀಕ್ಷೆಯನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ. But scribe ಕೊಟ್ಟರೆ ಆ ಮಕ್ಕಳು ಪಾಸ್ ಆಗುತ್ತಾರೆ. ಆದ್ದರಿಂದ ದಯವಿಟ್ಟು psychology evaluation ಮಾಡಿ ಅವರನ್ನು slow learners ಎಂದು label ಮಾಡಿದರೆ ಖಂಡಿತವಾಗಿಯೂ with permission, scribe ಅನ್ನು ಕೊಟ್ಟು ಅವರಿಗೆ ಪರೀಕ್ಷೆಯನ್ನು ಬರೆಸುವಂಥದ್ದಾಗುತ್ತದೆ. Examination pattern memory based ಗಿಂತ

intellectual based ನಲ್ಲಿ ಇದ್ದರೆ ಬಹಳ ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ನಾವೇನು initiative ತೆಗೆದುಕೊಂಡಿದ್ದೇವೆ ಅದರ ಜೊತೆಗೆ ಮಾನ್ಯ ಸದಸ್ಯರು ಏನು ಹೇಳುತ್ತಾರೆಯೋ ಅದನ್ನು ಕ್ರೋಢೀಕರಿಸಿ ಅದನ್ನು ಅನುಷ್ಠಾನಕ್ಕೆ ತರುವ ರೀತಿಯಲ್ಲಿ ಮಾಡುತ್ತೇವೆ. ತಾವೇನು ಹೇಳಿದ್ದೀರಿ ಅದು ಸರಿಯಾಗಿದೆ. ಏಕೆಂದರೆ, ಪ್ರಾಥಮಿಕ ಶಾಲೆಯಲ್ಲಿ ಅಡಿಪಾಯ ಸರಿಯಾಗಿ ಇಲ್ಲದಿರುವುದರಿಂದ ತೊಂದರೆ ಇದೆ.

**ಸಭಾಪತಿಯವರು:-** ಶಾಲೆಯಲ್ಲಿ ಮೊಟ್ಟೆ, ಇತ್ಯಾದಿ ಕೊಡುತ್ತೀರಲ್ಲಾ ಅದನ್ನು ಕೊಡುವುದಕ್ಕೆ ಬೇರೆ ಸಿಬ್ಬಂದಿಯನ್ನು ನೇಮಿಸಬೇಕು. ಆ ಕೆಲಸವನ್ನು ಶಿಕ್ಷಕರಿಗೆ ವಹಿಸಬೇಡಿ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಮಾಡುತ್ತೇವೆ.

**ಆ) ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬ ಧೋರಣೆ ಕುರಿತಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ ಎನ್ನುವ ವಿಷಯ ಕುರಿತು.**

-------

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬ ಧೋರಣೆ ಕುರಿತಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ ಎನ್ನುವ ವಿಷಯ ಕುರಿತಂತೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಶಿವಾನಂದ ಎಸ್ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ,

5/03/2025

## ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ನಿಯಮ-72ರಡಿಯಲ್ಲಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ

**ವಿಷಯ:-** ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬದೋರಣೆ ಕುರಿತಂತೆ ಉಡು ಜಿಲ್ಲಾ ರೈತ ಸಂಘದವರು ಹಾಗೂ ಅನೇಕ ಸಂಘಟನೆಗಳು ಅಹೋರಾತ್ರಿ ಧರ ನಡೆಸುತ್ತಿದ್ದಾರೆ. ಆಡಳಿತ ಮಂಡಳಿಯ ಅವ್ಯವಹಾರ ಹಾಗೂ ತಪ್ಪಿತಸ್ಥರ ವಿರುದ್ಧ ಸೂ ಕಾನೂನು ಕ್ರಮಗಳನ್ನು ಕೈಗೊಳ್ಳುವ ವಿಷಯದ ಕುರಿತು ಚರ್ಚಿಸುವ ಅನಿವಾರ್ಯತೆಯ ಬ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

**ಸರ್ಕಾರದ ಉತ್ತರ:-**

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಇ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ರೂ.14.00 ಕೋಟಿಗಳಿಗೂ ಹೆಚ್ಚಿನ ವಂಚನೆಯನು ಎಸಗಲಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದವರ ಮೇಲೆ ಮತ್ತು ಸರ್ಕಾರ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ಕುರಿತು ಸೂ ತನಿಖೆಯನ್ನು ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಶ್ರೀ ವಿನಯ್‌ಕುಮಾರ್ ಸೊರಕೆ, ಮಾ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿ, ಉಡುಪಿ ಜಿಲ್ಲಾ ರೈತ ಸಂಘ, ಉಡುಪಿ ಜಿಲ್ಲೆ ಮತ್ತು ಶ್ರ ಮಂಜುನಾಥ ಭಂಡಾರಿ, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು ಇವರು ದಿನಾಂಕ:25.09.02 ಮತ್ತು 09.11.2023ರಂದು ಸರ್ಕಾರಕ್ಕೆ ಮನವಿ ಮತ್ತು ದೂರುಗಳನ್ನು ಸಲ್ಲಿಸಿದ್ದರು.

ಮೇಲ್ಕಂಡ ದೂರು ಮತ್ತು ಮನವಿಗಳಲ್ಲಿ ಪ್ರಮುಖವಾಗಿ ಈ ಕೆಳಕಂಡ ಆರೋಪಗಳನು ಮಾಡಲಾಗಿತ್ತು.

A) ಕಾರ್ಖಾನೆಯು ಹಳೆಯ ಯಂತ್ರೋಪಕರಣ ಸ್ಕ್ರ್ಯಾಪ್ ಮಾರಾಟ ಮಾಡಿದಾಗ ನಿಯಮಾನುಸಾರ ಕಾರ್ಖಾನೆಯಿಂದ ಇ-ವೇ-ಬಿಲ್ಲುಗಳನ್ನು ಜನರೇಟ್ ಮಾಡಲಾಗಿರುವುದಿಲ್ಲ ಹಾಗೂ ಕಾರ್ಖಾನೆಯಿಂದ ಗೇಟ್ ಪಾಸ್ ಗಳನ್ನು ಸಹ ವಿತರಣೆ ಮಾಡಿರುವುದಿಲ್ಲ.

B) ಯಾವ ಯಾವ ಯಂತ್ರೋಪಕರಣ ಸ್ಕ್ರ್ಯಾಪ್ ಮಾರಾಟ ಮಾಡಲಾಗಿದೆ ಎಂಬ ಬಗ್ಗೆ, ಅವುಗಳ ಪರಿಮಾಣ, ತೂಕದ ವಿವರ, ದಾಸ್ತಾನುಗಳ ಪಟ್ಟಿಯು ದಾಸ್ತಾನು ವಹಿಯಲ್ಲಿ ಲಭ್ಯವಿರುವುದಿಲ್ಲ.

C) ಪ್ರತಿ ಲೋಡ್ ತೆಗೆದುಕೊಂಡು ಹೋದ ಬಗ್ಗೆ ಖರೀದಿದಾರರೇ ಇ-ವೇ ಬಿಲ್ಲು ಮಾಡಿರುವುದು ಕಂಡು ಬಂದಿರುತ್ತದೆ.

D) ಕಾರ್ಖಾನೆಯಿಂದ ತೆಗೆದುಕೊಂಡು ಹೋದ ತೂಕದ ಪರಿಮಾಣದ ವೇಯಿಂಗ್ ಸ್ಲಿಪ್ ಸಹ ಕಾರ್ಖಾನೆಯಲ್ಲಿ ಲಭ್ಯವಿರುವುದಿಲ್ಲ.

E) ಟೆಂಡರ್ ಕರಾರಿನಂತೆ ಖರೀದಿದಾರರಿಂದ ಬ್ಯಾಂಕ್ ಗ್ಯಾರಂಟಿ ಪಡೆದಿರುವುದಿಲ್ಲ.

F) ಖರೀದಿದಾರರಿಂದ ನಿಯಮಾನುಸಾರ ಜಿ.ಎಸ್.ಟಿ ಕಟಾಯಿಸಿರುವುದಿಲ್ಲ.

G) ಸಂಘದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವುದಿಲ್ಲ.

H) ಸಂಘದ ಆಡಳಿತ ಮಂಡಳಿಯು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಪೂರ್ಣಗೊಳಿಸದೇ 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಲು ವಿಫಲರಾಗಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 29 ಸಿ ರೀತ್ಯಾ ಆಡಳಿತ ಮಂಡಳಿ ಕರ್ತವ್ಯ ಲೋಪವೆಸಗಿರುತ್ತದೆ.

i) ಕಾರ್ಖಾನೆಯ ಯಂತ್ರೋಪಕರಣಗಳ ಹಾಗೂ ಕಟ್ಟಡ ಮಾರಾಟದಲ್ಲಿ ಅವ್ಯವಹಾರ ನಡೆದಿದ್ದು, ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ಪಾರದರ್ಶಕ ಅಧಿನಿಯಮ ಅನುಸರಿಸಿರುವುದಿಲ್ಲವೆಂದು ಹಾಗೂ ಹಳೆಯ ಯಂತ್ರೋಪಕರಣಗಳ ಮಾರಾಟದ ನಂತರ ಅಗತ್ಯಕ್ಕಿಂತ ಹೆಚ್ಚಾಗಿ ಇ-ವೇಬಿಲ್ ಗೇಟ್ ಪಾಸ್ ನೀಡಿ. ಅಕ್ರಮ ನಡೆಸಲಾಗಿರುತ್ತದೆ ಎಂದು ಹಾಗೂ ಟೆಂಡರ್ ದಾರರಿಂದ ನಿಯಮಾನುಸಾರ ಗ್ಯಾರಂಟಿ ಹಣ ಪಡೆದಿರುವುದಿಲ್ಲವೆಂದು ಹಾಗೂ ಮಾರಾಟ ಮಾಡಲಾದ ವಸ್ತುಗಳ ಬಾಬು ಜಿ.ಎಸ್.ಟಿ. ಪಡೆದಿರುವುದಿಲ್ಲವೆಂದು ತೀವ್ರವಾಗಿ ಆಕ್ಷೇಪಿಸಿ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ದಿನಾಂಕ:25.09.2023 ರಂದು ನಡೆದ ಸಕ್ಕರೆ ಕಾರ್ಖಾನೆಯ ವಾರ್ಷಿಕ ಮಹಾಸಭೆ ಕೋರಲಾಗಿರುತ್ತದೆ.

ಕಾರ್ಖಾನೆಯ ಸ್ಕ್ರ್ಯಾಪ್ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ನಿಯಮ ಬಾಹಿರವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಕಾರ್ಖಾನೆಗೆ ಆಡಳಿತಾಧಿಕಾರಿ / ವಿಶೇಷಾಧಿಕಾರಿಗಳನ್ನು ನೇಮಿಸುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿ ಶಾಸನಬದ್ಧ ವಿಚಾರಣೆಗೆ ಕ್ರಮ ಕೈಗೊಳ್ಳುವಂತೆ ಸಹಕಾರ ಸಂಘಗಳ ಉಪ ನಿಬಂಧಕರು (ಪ್ರ), ಉಡುಪಿ ಜಿಲ್ಲೆ ಉಡುಪಿ ಇವರು ದಿನಾಂಕ:21.11.2023 ರಂದು ಕೋರಿದ್ದರು.

ಈ ಮಧ್ಯೆ, ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು ದಿನಾಂಕ:11.06.2024 ರ ಪತ್ರದಲ್ಲಿ ವಿಸ್ತೃತವಾದ ವರದಿಯನ್ನು ಸಲ್ಲಿಸಿದ್ದು, ಕಾರ್ಖಾನೆಯ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸತ್ಯಾಸತ್ಯತೆ ಪರಿಶೀಲನೆ ನಡೆಸಲು ಸಮಿತಿಯನ್ನು ರಚಿಸಿ ಜಂಟಿಯಾಗಿ ಪರಿಶೀಲಿಸಿ ತನಿಖಾ ವರದಿಯನ್ನು ಪಡೆಯಲಾಗಿದ್ದು, ಸದರಿ ಸಮಿತಿಯು ನೀಡಿರುವ ವರದಿಯಂತೆ ಕಾರ್ಖಾನೆಯ ಕಟ್ಟಡ ಮತ್ತು ಯಂತ್ರೋಪಕರಣಗಳ ಟೆಂಡರ್ ಪ್ರಕ್ರಿಯೆಯಲ್ಲಿ ಲೋಪದೋಷಗಳು ಉಂಟಾಗಿರುವುದು ತನಿಖಾ ಹಂತದಲ್ಲಿ ಕಂಡು ಬಂದಿರುತ್ತದೆ ಎಂದು, ಆದ್ದರಿಂದ ಈ ಬಗ್ಗೆ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ತನಿಖಾ ವರದಿಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸಿದ್ದರು.

ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬ್ರಹ್ಮಾವರ, ಉಡುಪಿ ಜಿಲ್ಲೆ ಇವರ ದಿನಾಂಕ:19.03.2024 ಮತ್ತು 22.08.2024 ರ ಪತ್ರಗಳಲ್ಲಿ, 3 ಜನ ನಿರ್ದೇಶಕರ ರಾಜೀನಾಮೆಯ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯ ಸಭೆಯನ್ನು ನಡೆಸಲು ಕನಿಷ್ಟ ಕೋರಂ ಇಲ್ಲದಿರುವುದರಿಂದ ಕಾರ್ಖಾನೆಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಲು ಕೋರಲಾಗಿತ್ತು.

ಆದ್ದರಿಂದ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ:ಡಿಎಸ್‌ಕೆ/ ಸಿಓಎಫ್/82/2023-24 ದಿನಾಂಕ:05.09.2024ರಲ್ಲಿ, ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಉಡುಪಿ ಇವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ ಹಾಗೂ ಆಡಳಿತ ಮಂಡಳಿಯ

ಸದಸ್ಯರುಗಳು ಎಸಗಿರಬಹುದಾದ ಯಾವುದೇ ಲೋಪದೋಷಗಳ ಸಂಬಂಧ ಮುಂದೆ ಅವರುಗಳ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮಗಳಿಗೆ ಬದ್ಧರಾಗತಕ್ಕದ್ದೆಂದು ಸಹ ಆದೇಶಿಸಲಾಗಿದೆ.

ಮುಂದುವರಿದು, ಸರ್ಕಾರದ ಆದೇಶ ಸಂಖ್ಯೆ: ಸಿಐ 313 ಸಿಓಎಫ್ 2023, ದಿನಾಂಕ:20.11.2024 ರಲ್ಲಿ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಶ್ರೀ ರಾಧಾಕೃಷ್ಣ ಹೊಳ್ಳ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಈ ಮಧ್ಯೆ, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ರೂ.14.00 ಕೋಟಿಗಳಿಗೂ ಹೆಚ್ಚಿನ ವಂಚನೆಯನ್ನು ಎಸಗಲಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದವರ ಮೇಲೆ ಮತ್ತು ಸರ್ಕಾರದ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ವಿರುದ್ಧ ಸೂಕ್ತ ತನಿಖೆಯನ್ನು ನಡೆಸಲು ಕೋರಿ ಪ್ರಧಾನ ಕಾರ್ಯದರ್ಶಿ, ಉಡುಪಿ ಜಿಲ್ಲಾ ರೈತ ಸಂಘ, ಉಡುಪಿ ಜಿಲ್ಲೆ ಇವರು ದಿನಾಂಕ:25.10.2023ರಂದು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಅ.ಕ್ರ 203/2023 ಅನ್ನು ದಾಖಲಿಸಿರುತ್ತಾರೆ.

ಸದರಿ ದೂರಿನ ಕುರಿತು ವಿಚಾರಣೆಯನ್ನು ನಡೆಸಲಾಗಿದೆಯೆಂದು ಐ.ಪಿ.ಸಿ ಕಲಂ 420, 405, 415, 418, 463, 464, 465,468, 474, 120(ಬಿ) ಜೊತೆಗೆ 34 ಐ.ಪಿ.ಸಿ & ಕಲಂ 23 Karnataka Transparency in Public procurements Act 1999 ರ ಪ್ರಕರಣದಲ್ಲಿ, ಆಪಾದಿತರುಗಳು ಕಲಂ 120(ಬಿ), 403, 409 ಜೊತೆಗೆ 34, 37 ಐಪಿಸಿ ಹಾಗೂ ಕಲಂ 23 Karnataka Transparency in Public procurements Act 1999 ರಂತೆ ಅಪರಾಧವೆಸಗಿರುವುದು ತನಿಖೆಯಿಂದ ದೃಢಪಟ್ಟಿದ್ದು, ಆಪಾದಿತ ಸರಕಾರಿ ನೌಕರ ಪ್ರವೀಣ್ ಬಿ ನಾಯಕ್ ಹಾಗೂ 10 ಮಂದಿ ನಿರ್ದೇಶಕರನ್ನು ನ್ಯಾಯಾಲಯದ ಅಭಿಯೋಜನೆಗೆ ಒಳಪಡಿಸಲು ದೋಷಾರೋಪಣಾ ಪಟ್ಟಿ ಸಲ್ಲಿಸಲು ಸರ್ಕಾರದ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ದೊರಕಿಸಿಕೊಡುವಂತೆ ಮಹಾನಿರ್ದೇಶಕರು ಮತ್ತು ಪೋಲೀಸ್ ಮಹಾನಿರೀಕ್ಷಕರು ಕರ್ನಾಟಕ ರಾಜ್ಯ ಬೆಂಗಳೂರು ಇವರ ದಿನಾಂಕ:14.08.2024ರ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು (ಪಿಸಿ.ಎ.ಎಸ್) ಒಳಾಡಳಿತ ಇಲಾಖೆ ಇವರನ್ನು ಕೋರಲಾಗಿರುತ್ತದೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು) ಇವರ ದಿನಾಂಕ:23.10.2024ರ ಅನಧಿಕೃತ ಟಿಪ್ಪಣಿಯಲ್ಲಿ, ಅಭಿಯೋಜನಾ ಮಂಜೂರಾತಿಯನ್ನು ನೀಡಲು ಕೋರಿ ಸಲ್ಲಿಸಿದ ಪ್ರಸ್ತಾವನೆಯ ಕುರಿತು ನಿಯಮಾನುಸಾರ ಸೂಕ್ತ ಕ್ರಮವಹಿಸುವಂತೆ ತಿಳಿಸಿ ಸಹಕಾರ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ 11 ಆರೋಪಿಗಳ ಪೈಕಿ ಆರೋಪಿ-01 ಆದ ಶ್ರೀ ಪ್ರವೀಣ್ ಬಿ ನಾಯಕ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರು ಸಹಕಾರ ಇಲಾಖೆ ಅಧಿಕಾರಿಯಾಗಿರುವುದರಿಂದ ಇವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಓ 60 ಇಸಿಎ 2025, ದಿನಾಂಕ:27.02.2025ರಲ್ಲಿ ಸಹಕಾರ ಇಲಾಖೆಯಿಂದ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ. ಉಳಿದಂತೆ, ಇನ್ನುಳಿದ 10 ಮಂದಿ ಆರೋಪಿತರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರುಗಳಾಗಿರುವುದರಿಂದ ಸದರಿಯವರುಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ ಸಕ್ಷಮ ಪ್ರಾಧಿಕಾರವಾದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಮುಂದಿನ ಕ್ರಮ ಕೈಗೊಳ್ಳಲು ಕೋರಿ ದಿನಾಂಕ:28.02.2025ರಂದು ಪ್ರಸ್ತಾವನೆಯನ್ನು ಸಹಕಾರ ಇಲಾಖೆಯಿಂದ ವರ್ಗಾಯಿಸಲಾಗಿರುತ್ತದೆ. ಪ್ರಸ್ತುತ ಸದರಿ 10 ನಿರ್ದೇಶಕರುಗಳ ಮೇಲೆ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988ರನ್ವಯ ಈ ಇಲಾಖೆಯಿಂದ ಅಭಿಯೋಜನಾ ಮಂಜೂರಾತಿ ನೀಡಲು ಇರುವ ಅವಕಾಶಗಳ ಕುರಿತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು ಸದರಿ ಅಭಿಪ್ರಾಯದನ್ವಯ ಮುಂದಿನ ಕ್ರಮವಹಿಸಲಾಗುವುದು.

---

ಸಂಖ್ಯೆ: ಸಿಐ 78 ಸಿಓಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಮಾನ್ಯ ಸಭಾಪತಿಯವರೇ, ಈ ಕಾರ್ಖಾನೆ ಹಳೆಯ ಕಾರ್ಖಾನೆಯಾಗಿದೆ. 1965 ರಲ್ಲಿ ಪ್ರಾರಂಭವಾಗಿ 2003 ರವರೆಗೆ ಕಬ್ಬು ನುರಿಸಿದಂತಹ ಕಾರ್ಖಾನೆ. ದುರ್ದೈವವಶಾತ್ 18 ವರ್ಷಗಳ ಹಿಂದೆ ಈ ಕಾರ್ಖಾನೆ ಬಂದ್ ಆಗುತ್ತದೆ. ಅದನ್ನು revive ಮಾಡುವಂತಹ ಯಾವುದೇ ಪ್ರಯತ್ನ ಆಗುವುದಿಲ್ಲ. ಆದರೆ ಅದನ್ನು revive ಮಾಡುವುದು ಬಿಟ್ಟು ಆ ಕಾರ್ಖಾನೆಯನ್ನು scrap ಮಾಡಿ ಮಾರಾಟ ಮಾಡಿದ್ದಾರೆ. ಆ scrap ಮಾಡಿ ಮಾರಾಟ ಮಾಡುವಂಥದ್ದರಲ್ಲೂ ಕೂಡ undervaluation ಆಗಿದೆ ಎನ್ನುವಂತಹ ಆಪಾದನೆ ರೈತ ಸಂಘದಿಂದ ಇದೆ. ವಿಶೇಷವಾಗಿ ಹಿಂದಿನ ಸಭಾಪತಿಗಳಾದಂತಹ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರು, ಶ್ರೀ ಮಂಜುನಾಥ ಭಂಡಾರಿಯವರು, ಶ್ರೀ ಐವನ್ ಡಿ'ಸೋಜಾರವರು ಇದರ ಬಗ್ಗೆ ಅನೇಕ ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಇದನ್ನು ಸಹಕಾರ ಇಲಾಖೆಯಿಂದ ಕಲಂ 64 ರಲ್ಲಿ ವಿಚಾರಣೆ ಪ್ರಾರಂಭ ಮಾಡಲಾಗಿತ್ತು. ಆದರೆ ಸೂಕ್ತ ತನಿಖೆಯಾಗುವುದಿಲ್ಲವೆಂದು ಶ್ರೀ ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದೇವೆ. ಅವರು ಈಗಾಗಲೇ ಎರಡು ಸಲ ಮಂಗಳೂರಿಗೆ ಹೋಗಿದ್ದಾರೆ. ಆದರೆ ಅವರಿಗೆ ದುರ್ದೈವವಶಾತ್ ಅಲ್ಲಿನ ಜಿಲ್ಲಾಧಿಕಾರಿಗಳು ಸಹಕಾರ ಕೊಟ್ಟಿಲ್ಲ ಎನ್ನುವ ಮಾಹಿತಿ ನನಗೂ ಬಂದಿದೆ. ಅದರ ಬಗ್ಗೆಯೂ ನಾನು ನಿನ್ನೆ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಅವರಿಗೆ

ಏನೇನು ಸಹಕಾರ ಬೇಕು ಅವೆಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟು ಸೂಕ್ತ ತನಿಖೆ ಮಾಡಿ ಇದರಲ್ಲಿ ಯಾರು ಕ್ರಿಮಿನಲ್ ಆಪಾದನೆಯಲ್ಲಿ ಭಾಗಿಯಾಗಿದ್ದಾರೆ, ಜಂಟಿ ನಿಬಂಧಕರು ಕೂಡ ಭಾಗಿಯಾಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಅವರ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆದರೆ ಇನ್ನು ಉಳಿದಂತಹ ನಿರ್ದೇಶಕರು ಏನಿದ್ದಾರೆ, ಅವರೂ ಭಾಗಿಗಳಾಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆ ಹಿನ್ನೆಲೆಯಲ್ಲಿ ತನಿಖೆಯಾಗಿ ಸಂಪೂರ್ಣ ತನಿಖಾ ವರದಿ ಬಂದ ಮೇಲೆ ಯಾರು ಇದರಲ್ಲಿ ವಾಸ್ತವಿಕವಾಗಿ ಅವ್ಯವಹಾರ ಮಾಡಿದ್ದಾರೆಯೋ ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಂಡು ಕ್ರಿಮಿನಲ್ ಮೊಕ್ಕದ್ದಮೆಯನ್ನು ನಾವು ಹೂಡುತ್ತೇವೆಂದು ಭರವಸೆಯನ್ನು ಕೊಡುತ್ತೇನೆ. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಈಗಾಗಲೇ ಆ ಕಾರ್ಖಾನೆಯ ಹೊರ ಆವರಣದಲ್ಲಿ ಅನೇಕ ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸೂಕ್ತ ತನಿಖೆ ಮಾಡಿ ಯಾರು ತಪ್ಪಿತಸ್ಥರಿದ್ದಾರೆಯೋ ಅವರ ಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ನಿರಶನವನ್ನು ಕೈಬಿಟ್ಟರೆ ಒಳ್ಳೆಯದು ಎಂದು ನಾನು ಈ ವೇದಿಕೆ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಶ್ರೀ ಮಂಜುನಾಥ ಭಂಡಾರಿಯವರಿಗೆ ಹಾಗೂ ಶ್ರೀ ಐವನ್ ಡಿ'ಸೋಜಾರವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ. ಈಗಾಗಲೇ ಮಾನ್ಯ ಸಚಿವರು ಹೇಳಿದ ಹಾಗೆ 1984ರಲ್ಲಿ ಆ ಕಾರ್ಖಾನೆ ಪ್ರಾರಂಭವಾಗುತ್ತದೆ. 2004ರಲ್ಲಿ ಆ ಸಕ್ಕರೆ ಕಾರ್ಖಾನೆಯನ್ನು ಬಂದ್ ಮಾಡುತ್ತಾರೆ. ಸುಮಾರು 20 ವರ್ಷಗಳ ಕಾಲ ಆ ಸಕ್ಕರೆ ಕಾರ್ಖಾನೆ ನಡೆದಿರುತ್ತದೆ. ಆಮೇಲೆ ಅದನ್ನು ಪುನಶ್ಚೇತನ ಮಾಡುವುದಕ್ಕಾಗುವುದಿಲ್ಲ. ಬಹಳ ವಿಶೇಷವೇನೆಂದರೆ, 1982 ರಲ್ಲಿ ಹಿಂದಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರ ಅವಧಿಯಲ್ಲಿ ವಾರಾಹಿ ಪ್ರಾಜೆಕ್ಟ್ ಮತ್ತು ಸಕ್ಕರೆ ಕಾರ್ಖಾನೆ ಇವೆರಡಕ್ಕೂ ಅಡಿಗಲ್ಲನ್ನು ಹಾಕುತ್ತಾರೆ. ಬಹುಶಃ ಯಾರಿಗಾದರೂ ಆಸಕ್ತಿ ಇದ್ದರೆ ಇದರ ಮೇಲೆ ಪಿಹೆಚ್‌ಡಿ ಮಾಡಬಹುದು. ಯಾವ ರೀತಿ ಸರ್ಕಾರದ ಹಣವನ್ನು ದುರುಪಯೋಗ ಮಾಡುತ್ತೇವೆ ಎನ್ನುವುದಕ್ಕೆ ನಮ್ಮ ರಾಜ್ಯ ಸರ್ಕಾರದಲ್ಲಿ ಯಾವ ರೀತಿ ಅವ್ಯವಹಾರಗಳು ನಡೆಯುತ್ತವೆ ಎನ್ನುವುದಕ್ಕೆ ಈ ಎರಡು ಉದಾಹರಣೆಗಳಾಗಿವೆ. ಏಕೆಂದರೆ, ವಾರಾಹಿ ಪ್ರಾಜೆಕ್ಟ್‌ನ್ನು ಮಾಡಿದ ಮೇಲೆ ಅದರ ನೀರಿನ ಪ್ರಮಾಣದ ಪ್ರಕಾರ ಅಲ್ಲಿ ಕಬ್ಬನ್ನು ಬೆಳೆಸಬೇಕು, ಕಬ್ಬನ್ನು ಬೆಳಸಿದ ಮೇಲೆ ಅದನ್ನು ರೈತರು ತೆಗೆದುಕೊಂಡು ಅದನ್ನು ಕಾರ್ಖಾನೆಗೆ ಕೊಡಬೇಕು ಎನ್ನುವ ಯೋಜನೆ ಪ್ರಕಾರ ಕಬ್ಬನ್ನು ಬೆಳೆಯುತ್ತಾರೆ. ಆದರೆ ವಾರಾಹಿ ಪ್ರಾಜೆಕ್ಟ್ 40 ವರ್ಷಗಳಾದರೂ ಇವತ್ತಿನವರೆವಿಗೂ ಪೂರ್ಣವಾಗಿರುವುದಿಲ್ಲ.

(ಮುಂದು)

(123) 06/03/2025 3:40 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಂಜುನಾಥ್ ಭಂಡಾರಿ (ಮುಂದು)**

ಆದರೆ, ಅಲ್ಲಿ ಯಾವುದೇ ಲೆಕ್ಕಗಳಿಲ್ಲದೇ, ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸುತ್ತಾರೆ. ಇವುಗಳಿಗೆ ಸರಿಯಾದ ಪ್ರಮಾಣದಲ್ಲಿ ಕಬ್ಬನ್ನು ಪೂರೈಸುವುದಕ್ಕೆ ಆಗಿನ ಅಧ್ಯಕ್ಷರುಗಳು ಬಹಳ ಕಷ್ಟಪಟ್ಟಿದ್ದಾರೆ. ಎಲ್ಲಿಂದಲೋ ಕಬ್ಬನ್ನು ತರಿಸಿ, ಸಕ್ಕರೆ ಕಾರ್ಖಾನೆಯನ್ನು ನಡೆಸಿದ್ದಾರೆ. 2004 ರಲ್ಲಿ ಈ ಕಾರ್ಖಾನೆಯು ಸ್ಥಗಿತಗೊಳ್ಳುತ್ತದೆ. ಕಾರ್ಖಾನೆ ಸ್ಥಗಿತಗೊಂಡ ನಂತರವೂ ಸಹ ಇದಕ್ಕೆ ಅಧ್ಯಕ್ಷರನ್ನು, ಆಡಳಿತ ಮಂಡಳಿಯ ನಿರ್ದೇಶಕರುಗಳನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ನೇಮಕ ಮಾಡುತ್ತಾರೆ. ಈಗ್ಗೆ ಕಳೆದ ಸ್ವಲ್ಪ ವರ್ಷಗಳ ಹಿಂದೆ, ಅಂದರೆ 2020 ನೇ ಇಸ್ವಿಯಲ್ಲಿ ಈ ಕಾರ್ಖಾನೆಯನ್ನು ಗುಜರಿಗೆ ಹಾಕಬೇಕೆಂಬ ತೀರ್ಮಾನವನ್ನು ಮಾಡುತ್ತಾರೆ. ಇದನ್ನು ಜಾರಿಗೊಳಿಸುವ ಸಂದರ್ಭದಲ್ಲಿ ನಿಯಮಾನುಸಾರ ಟೆಂಡರ್‌ನ್ನೂ ಸಹ ಕರೆದಿರುವುದಿಲ್ಲ. ಟೆಂಡರ್‌ನ ಷರತ್ತುಗಳನ್ವಯ ಅದನ್ನು ಮಾರಾಟ ಮಾಡಬೇಕೆಂದರೆ, ಅದು "ಜಿ.ಎಸ್.ಟಿ. ಸಹಿತ" ಎಂಬುದಾಗಿ ಇರುತ್ತದೆ. ಆದರೆ ಅದನ್ನು ಕೊಡಬೇಕಾದರೆ "ಜಿ.ಎಸ್.ಟಿ. ರಹಿತ" ಎಂಬುದಾಗಿ ಮಾಡುತ್ತಾರೆ. ಇಲ್ಲಿ ರಹಿತ ಮತ್ತು ಸಹಿತ ಗಳಲ್ಲಿನ ರ ಮತ್ತು ಸ ಗಳಲ್ಲಿನ ಎಂಬ ಒಂದು ಸಣ್ಣ ಅಕ್ಷರವನ್ನು ವ್ಯತ್ಯಾಸ ಮಾಡಿ ಸುಮಾರು 14 ಕೋಟಿ ರೂಪಾಯಿಗಳಷ್ಟು ಹಣ ಅವ್ಯವಹಾರ ಮಾಡುತ್ತಾರೆ. ಮಾಜಿ ಸಭಾಪತಿಯಗಳು, ಹಿರಿಯ ನಾಯಕರು ಮತ್ತು ರೈತ ಮುಖಂಡರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರ ನೇತೃತ್ವದಲ್ಲಿ ಕಳೆದ ಸುಮಾರು 15 ದಿನಗಳಲ್ಲಿ ಅಲ್ಲಿ ನಿರಶನ ಸತ್ಯಾಗ್ರಹ ನಡೆಯುತ್ತಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಏನು ಅವ್ಯವಹಾರವಾಗಿದೆ ಅದರ ಬಗ್ಗೆ ಸೂಕ್ತ ತನಿಖೆಯಾಗಬೇಕೆಂದು ಅವರು ಕೇಳಿಕೊಳ್ಳುತ್ತಿದ್ದಾರೆ. ಕಾರ್ಖಾನೆಯ ಅಧಿಕಾರದಲ್ಲಿದ್ದ ಅಧಿಕಾರಿಗಳು ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಿಸುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದಾಗಿಯೂ ಸಹ ಅವರು ಕೇಳುತ್ತಿದ್ದಾರೆ. ಆದರೆ ಇಲ್ಲಿ ಕೇವಲ ಒಬ್ಬ ಅಧಿಕಾರಿಯ ಮೇಲೆ ಮಾತ್ರವೇ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದಾರೆ. ಆದರೆ, ಅದೇ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಮತ್ತೊಬ್ಬ ಅಧಿಕಾರಿಯನ್ನು ಕೈಬಿಟ್ಟಿದ್ದು, ಇವರನ್ನೂ ಸಹ ಸೇರಿಸಿಕೊಳ್ಳಬೇಕೆಂದು ಕೇಳುತ್ತಿದ್ದಾರೆ. ಕೇವಲ ಇದಷ್ಟೇ ಮಾತ್ರವಲ್ಲದೇ, ಅಲ್ಲಿದ್ದ ಕಲ್ಲು, ಕಬ್ಬಿಣ ಹಾಗೂ ಮತ್ತಿತರೆ ಗುಜರಿ ವಸ್ತುಗಳನ್ನು ಮಾರಾಟ ಮಾಡಿದರು. ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದರೆ, ಪೊಲೀಸರು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಿರಶನ ನಿರತವರು ಒತ್ತಾಯಿಸುತ್ತಿದ್ದಾರೆ. ಅಲ್ಲಿ ಯಾವ ರೀತಿಯ ಅವ್ಯವಹಾರವಾಗಿದೆ ಎಂದರೆ, ಅದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ತಮ್ಮ ಮೂಲಕ ಸಚಿವರಿಗೆ ಹೇಳುವುದೇನೆಂದರೆ, ಅವರೇ ಸ್ಕ್ರ್ಯಾಪ್ ಮಾಡಿರುವ ದರವನ್ನು ತಿಳಿಸಿದ್ದಾರೆ. ಎಷ್ಟು ಲೋಡ್ ಹೋಗಿದೆ ಎನ್ನುವ ಮಾಹಿತಿಯನ್ನೂ ಸಹ ಅವರೇ ನೀಡಿದ್ದಾರೆ. ಅದೇ ರೀತಿಯಾಗಿ ಮಾಹಿತಿ ಹಕ್ಕು ಕಾಯ್ದೆಯಡಿ ಕೆಲವು ಮಾಹಿತಿಗಳನ್ನೂ ಸಹ ಅವರೇ ನೀಡಿದ್ದಾರೆ. ಇಲ್ಲಿ ಬೇರೆ

ಬೇರೆ ವಿಧದಲ್ಲಿ ಸುಮಾರು ಮೂರು ರೀತಿಯ ಮಾಹಿತಿಗಳನ್ನು ನೀಡಿದ್ದಾರೆ. ಒಂದು ಬಾರಿ 46 ಲೋಡ್ ಎಂಬ ಮಾಹಿತಿಯನ್ನು ನೀಡುತ್ತಾರೆ. ಸ್ಕ್ರ್ಯಾಪ್‌ನಲ್ಲಿ 60 ಲೋಡ್ ಎಂದು ತಿಳಿಸುತ್ತಾರೆ. ಒಟ್ಟು ಲೆಕ್ಕ ಹಾಕಿದಾಗ 85 ಲೋಡ್ ಗುಜರಿಗೆ ಹೋಗಿದೆ ಎಂದು ಹೇಳುತ್ತಾರೆ. ಆದರೆ ಇವತ್ತಿನ ದಿವಸ ಇದರ ಲೆಕ್ಕ ಸಿಕ್ಕಿರುವುದು ಸುಮಾರು…, ಇವತ್ತಿನ ದಿವಸ ಸುಮಾರು ನೂರಾರು ಎಕರೆ ಪ್ರದೇಶದಲ್ಲಿರುವ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಜಾಗ ಅದಾಗಿದೆ. ತಮ್ಮ ಮೂಲಕ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಹಿರಿಯ ನಾಯಕರು ಮತ್ತು ಮಾಜಿ ಸಭಾಪತಿಗಳಾದ ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿಯವರು ಇವತ್ತಿನ ದಿವಸ ಅಲ್ಲಿ ನಿರಶನ ಸತ್ಯಾಗ್ರಹ ಮಾಡುತ್ತಿದ್ದಾರೆ. ಹೀಗಾಗಿ ಸರ್ಕಾರವು ಅವರಿಗೆ ಭರವಸೆಯನ್ನು ನೀಡಬೇಕು. ಯಾವ ಅಧಿಕಾರಿಗಳು ತಪ್ಪಿತಸ್ಥರಾಗಿದ್ದಾರೆಯೋ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ದೂರಿನಲ್ಲಿ ಅವರ ಹೆಸರು ನಮೂದಾಗಿದ್ದರೂ ಸಹ ಪ್ರಥಮ ವರ್ತಮಾನ ವರದಿಯಲ್ಲಿ ಅವರ ಹೆಸರನ್ನು ನಮೂದಿಸಿಲ್ಲ. ಸರ್ಕಾರದಿಂದ ನೀಡಬೇಕಾದ ವರದಿಯಲ್ಲಿ ಅವರ ಹೆಸರನ್ನು ಕೈಬಿಟ್ಟಿದ್ದಾರೆ. ಹೀಗಾಗಿ ಕೈಬಿಟ್ಟ ಹೆಸರುಗಳನ್ನೂ ಸಹ ಸೇರಿಸಿಕೊಳ್ಳಬೇಕು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳೂ ಸಹ ಸರಿಯಾದ ಕ್ರಮಗಳನ್ನು ತೆಗೆದುಕೊಂಡಿಲ್ಲ. ಹೀಗಾಗಿ ಅವರುಗಳ ವಿರುದ್ಧವೂ ಸಹ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ನಿಷ್ಪಕ್ಷಪಾತವಾದ ತನಿಖೆಯಾಗಬೇಕು. ಏಕೆಂದರೆ ಸರ್ಕಾರದ ಕಂಪೆನಿಗಳು ಈ ರೀತಿಯಾಗಿ ಸರ್ಕಾರದ ಹಣದ ಅವ್ಯವಹಾರದಲ್ಲಿ ಇಳಿಯಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರತಿಷ್ಠಿತ ಕಾರ್ಖಾನೆಯಾಗಿದೆ. ನಾವು ಚಿಕ್ಕವರಾಗಿದ್ದಾಗ, ಬ್ರಹ್ಮಾವರದ ಸಕ್ಕರೆ ಕಾರ್ಖಾನೆ ಎಂದು ಹೇಳಿದರೆ, ಅದು ಅತ್ಯಂತ ಪ್ರಮುಖವಾದ ಕಾರ್ಖಾನೆ ಆಗಿತ್ತು. ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿಯವರು ಪ್ರಸ್ತಾಪಿಸಿದ ಎಲ್ಲಾ ಅಂಶಗಳನ್ನು ನಾನು ಬೆಂಬಲಿಸುತ್ತೇನೆ. ಇವರು ಈ ವಿಷಯದಲ್ಲಿ ಸರಿಯಾದ ವಿವರಣೆಯನ್ನು ಮಾಡಿದ್ದಾರೆ. ಜಿ.ಎಸ್.ಟಿ. ಮತ್ತು ಸಿ.ಎಸ್.ಟಿ. ಸಹಿತ ಮತ್ತು ರಹಿತ ಎಂಬ ರ ಮತ್ತು ಸ ಎಂಬ ಒಂದು ಅಕ್ಷರದ ಅಡಿಯಲ್ಲಿ 14 ಕೋಟಿ ರೂಪಾಯಿಗಳ ಅವ್ಯವಹಾರವನ್ನು ಮಾಡುತ್ತಾರೆ ಎಂದು ಹೇಳಿದರೆ…, ಇವತ್ತಿನ ದಿವಸ ಅದರ ಆಡಳಿತ ಮಂಡಳಿಯವರು ಅಧಿಕಾರದಲ್ಲಿ ಇಲ್ಲ ಎನ್ನುವ ಕಾರಣಕ್ಕಾಗಿ ಮಂಡಳಿಯನ್ನೇ ರದ್ದು ಮಾಡಿದ ಕಾರಣಕ್ಕಾಗಿ ಅವರಗಳನ್ನು ಕಾನೂನಿನಡಿ ತರುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಎಲ್ಲಿಯೋ ಒಂದು ಕಡೆ ವಾರಾಹಿ ಯೋಜನೆ ಮತ್ತು ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡಿರುವ ಉದ್ದೇಶವೇನೆಂದರೆ, ವಾರಾಹಿ ನೀರಾವರಿ ಯೋಜನೆಯನ್ನು ಜಾರಿಗೆ ತಂದದ್ದು ಆ ಭಾಗದಲ್ಲಿ ಕಬ್ಬನ್ನು ಬೆಳೆಸಬೇಕು ಮತ್ತು ಕಬ್ಬು ಬೆಳೆಗಾರರಿಗೆ ಒಂದು ಕಾರ್ಖಾನೆಯ ಅವಶ್ಯಕತೆ ಇದೆ ಎನ್ನುವ ಕಾರಣಕ್ಕಾಗಿ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ನಡೆಯುತ್ತಿವೆಯೋ ಅಲ್ಲಿನ ಪ್ರತಿಯೊಂದು ಕಾರ್ಖಾನೆಗಳೂ ಸಹ ಒಂದಿಲ್ಲೊಂದು ರೀತಿಯಲ್ಲಿ ವೃದ್ಧಿಯಾಗುತ್ತಲೇ ಇದೆ. ಆದರೆ, ಸರ್ಕಾರಿ ಸಕ್ಕರೆ ಕಾರ್ಖಾನೆಗಳಿಗೆ ಮಾತ್ರ ಕೋಟ್ಯಂತರ ಸರ್ಕಾರಿ ಹಣವನ್ನು ಹಾಕುತ್ತಾರೆ. ಈ ಹಿಂದೆ ದಿವಂಗತ ಆಸ್ಕರ್

ಫರ್ನಾಂಡಿಸ್ ರವರು ಸಂಸದರಾಗಿದ್ದ ಸಂದರ್ಭದಲ್ಲಿ ಸದರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿದ್ದರು. ಮಾಜಿ ಸಂಸದರು ಮತ್ತು ಮಾಜಿ ಮಂತ್ರಿಗಳಾದ ಕೆ.ಜಯಪ್ರಕಾಶ್ ಹೆಗ್ಡೆಯವರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಯಾರೇ ಇದ್ದರೂ ಸಹ ಈ ಕಾರ್ಖಾನೆಯನ್ನು ದೊಡ್ಡ ಮಟ್ಟಕ್ಕೆ ಬೆಳೆಸುವುದಕ್ಕೆ ಸಾಧ್ಯವಾಗಲಿಲ್ಲ. ಹೀಗಾಗಿ ಪುನಃ ಚುನಾಯಿತ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದಿತು. ಸರ್ಕಾರದ ಹತ್ತಿರ ಎಷ್ಟು ಹಣವಿತ್ತೋ, ಅದೆಲ್ಲವನ್ನೂ ಈ ಕಾರ್ಖಾನೆಗೆ ಕೊಟ್ಟಿದೆ. ಆದರೆ, ಇವತ್ತಿನ ದಿಸವ ಅದನ್ನು ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳುವುದು ನೋವಿನ ಸಂಗತಿಯಾಗಿದೆ. ಇದರ ಜೊತೆಗೆ, ಮತ್ತೊಂದು ನೋವಿನ ಸಂಗತಿ ಏನೆಂದರೆ, ಇದರಲ್ಲಿ ಬಹಳ ದೊಡ್ಡ ಅವ್ಯವಹಾರವಾಯಿತು. ಕಾರ್ಖಾನೆಯ ಅಡಿಗಲ್ಲನೂ ಸಹ ತೆಗೆದು ಮಾರಾಟ ಮಾಡಿದರು. ಅಲ್ಲಿನ ಸ್ಕ್ರ್ಯಾಪ್‌ನ್ನೂ ಸಹ ತೆಗೆದು ಮಾರಿದರು. ಒಂದು ಕಾರ್ಖಾನೆಯು ಎಷ್ಟು ಬೇಗ ನೆಲಸಮವಾಗುತ್ತದೆ ಎಂದು ಹೇಳುವುದಕ್ಕೆ ಇದು ನಿದರ್ಶನವಾಗಿದೆ. ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ಪ್ರಸ್ತಾಪಿಸಿದಂತೆ, ಆಸಕ್ತಿವುಳ್ಳವರು ಯಾರಾದರೂ ಇದ್ದರೆ, ಅವರು ಸರ್ಕಾರದ ದುಡ್ಡನ್ನು ಬಂಡವಾಳವಾಗಿ ಹೂಡುವುದು ಹೇಗೆ, ಅದನ್ನು ಮುಳುಗಿಸುವುದು ಹೇಗೆ ಮತ್ತು ಸ್ಕ್ರ್ಯಾಪ್ ಆಗಿ ಅದನ್ನು ಮುಚ್ಚುವುದು ಹೇಗೆ ಎಂಬ ವಿಷಯದಲ್ಲಿ ತಮ್ಮ ಪಿ.ಹೆಚ್.ಡಿ.ಯನ್ನು ಮಾಡಬಹುದು. ಇದು ಇಂತಹ ಒಳ್ಳೆಯ ವಿಷಯವಾಗಿದೆ. ಇದರಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ಮಾಜಿ ಸಭಾಪತಿಗಳಾದ ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ ರವರ ನೇತೃತ್ವದಲ್ಲಿ ಹಗಲಿರುಳು ಅಲ್ಲಿ ಪ್ರತಿಭಟನೆಯಾಗುತ್ತಿದೆ. ತಮ್ಮ ಮೂಲಕ ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರಿಗೆ ಆಶ್ವಾಸನೆಯನ್ನು ನೀಡಬೇಕು ಮತ್ತು ಅವರ ಪ್ರತಿಭಟನೆಯನ್ನು ಸರ್ಕಾರವು ಹಿಂಪಡೆಯಬೇಕು ಎಂದು ಹೇಳಲುಬಯಸುತ್ತೇನೆ.

**ಶ್ರೀ ಶಿವಾನಂದ ಎಸ್.ಪಾಟೀಲ(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ಈ ವಿಷಯದ ಬಗ್ಗೆ ಸವಿಸ್ತಾರವಾದ ಉತ್ತರವನ್ನು ನೀಡಿದ್ದೇನೆ. ಸದಸ್ಯರುಗಳಾದ ಶ್ರೀ ಮಂಜುನಾಥ ಭಂಡಾರಿ ಮತ್ತು ಶ್ರೀ ಐವನ್ ಡಿ'ಸೋಜಾ ರವರುಗಳು ಪ್ರಸ್ತಾಪಿಸಿದ ಅಂಶಗಳು ಸತ್ಯಕ್ಕೆ ಸಮೀಪವಾಗಿವೆ. ಆಡಳಿತ ಮಂಡಳಿಯವರು ಎಷ್ಟರಮಟ್ಟಿಗೆ ಚಾಣಾಕ್ಷರಿದ್ದಾರೆ ಎಂದರೆ, ಅವರ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಸಬಾರದು ಎಂದು ಹೇಳಿ, ಸ್ವಯಂಪ್ರೇರಣೆಯಿಂದ ರಾಜಿನಾಮೆಯನ್ನು ನೀಡಿ, ಸದರಿ ಆಡಳಿತ ಮಂಡಳಿಯನ್ನೇ ರದ್ದುಗೊಳಿಸಿದ್ದಾರೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ – 1959 ರ ಕಲಂ 64 ರಡಿ ಶಾಸನಬದ್ಧ ವಿಚಾರಣೆಯನ್ನು ಸಹಕಾರ ಇಲಾಖೆಗೆ ವಹಿಸಿದ್ದನ್ನು ಹಿಂಪಡೆದು, ನ್ಯಾಯಾಂಗ ವಿಚಾರಣೆಯನ್ನು ಮಾಡಿಸುತ್ತಿದ್ದೇವೆ. ಈ ವಿಷಯದಲ್ಲಿ ನಿವೃತ್ತ ನ್ಯಾಯಾಧೀಶರು ಈಗಾಗಲೇ ಸ್ಥಳಕ್ಕೆ ಭೇಟಿ ನೀಡಿ ಒಂದು ಸುತ್ತಿನ ವಿಚಾರಣೆಯನ್ನು ನಡೆಸಿದ್ದಾರೆ. ಅವರಿಗೆ ಅವಶ್ಯವಾದ ಸಹಕಾರವನ್ನು ನಮ್ಮ ಇಲಾಖೆಯಿಂದ ನೀಡಿ ವಿಚಾರಣೆಯನ್ನು ಮಾಡಿಸುವ ಪ್ರಯತ್ನಗಳನ್ನೂ ಸಹ ಮಾಡುತ್ತಿದ್ದೇವೆ. ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿಯೇ ಬಹುತೇಕವಾಗಿ ಬಹಳ ಅವ್ಯವಹಾರಗಳಾಗಿವೆ.

ಈಗ 11 ಸಕ್ಕರೆ ಕಾರ್ಖಾನೆಗಳಲ್ಲಿ ಈ ರೀತಿಯ ಅವ್ಯವಹಾರಗಳು ಮೇಲ್ನೋಟಕ್ಕೆ ಕಂಡು ಬಂದಿವೆ. ಹೀಗಾಗಿ ನಾವು ಒಂದೊಂದಾಗಿ ಕಾರ್ಖಾನೆಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಅದರಲ್ಲೂ ವಿಶೇಷವಾಗಿ ಆಡಳಿತ ಮಂಡಳಿಯ 10 ನಿರ್ದೇಶಕ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಬೇಕೆಂದು ಈಗಾಗಲೇ ದೂರನ್ನು ಸಲ್ಲಿಸಲಾಗಿದ್ದು, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ಅನುಮತಿಯನ್ನೂ ಸಹ ಈಗಾಗಲೇ ನೀಡಿದ್ದಾರೆ. ಇದನ್ನು ಪರಿಶೀಲನೆಗಾಗಿ ಕಾನೂನು ಇಲಾಖೆಗೂ ಸಹ ನಾನು ಕಳುಹಿಸಿಕೊಟ್ಟಿದ್ದೇನೆ. ಅವರಿಂದ ಅಭಿಪ್ರಾಯ ಸ್ವೀಕೃತಗೊಂಡ ನಂತರ ತಪ್ಪಿತಸ್ಥರ ವಿರುದ್ಧ ಕಾನೂನಿನನ್ವಯ ಕ್ರಮ ತೆಗೆದುಕೊಂಡು ಅವರುಗಳನ್ನು ಶಿಕ್ಷೆಗೊಳಪಡಿಸುವ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಅಲ್ಲಿಯವರೆಗೆ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ತಾವು ನಡೆಸುತ್ತಿರುವ ನಿರಶನವನ್ನು ಹಿಂಪಡೆಯಬೇಕು ಎನ್ನುವ ಪ್ರಯತ್ನಗಳನ್ನು ಅವರುಗಳು ಮಾಡಸಲಿ ಎಂದು ನಾನು ವಿನಂತಿಸುತ್ತೇನೆ. ಇದರಲ್ಲಿ ಯಾರನ್ನೂ ಸಹ ಬಿಡುವುದಿಲ್ಲ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಯವರೆ, ಯಾರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿತ್ತೋ, ಅವರುಗಳನ್ನು ದೋಷಾರೋಪಣ ಪಟ್ಟಿಯಲ್ಲಿ ಕೈಬಿಟ್ಟಿದ್ದಾರೆ.

**ಶ್ರೀ ಶಿವಾನಂದ ಎಸ್.ಪಾಟೀಲ:-** ಮಾನ್ಯ ಸಭಾಪತಿಯವರೆ, ನ್ಯಾಯಾಂಗ ವಿಚಾರಣೆಯಲ್ಲಿ ನೀವು ಒಂದು ಅರ್ಜಿಯನ್ನು ನೀಡಿ; ಅವರ ವಿರುದ್ಧವೂ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**7) ನಿಯಮ 330ರ ಮೇರೆಗೆ ಚರ್ಚೆ**

**ವಿಷಯ:- ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪಿಸುವ ಕುರಿತು**

* * *

**ಶ್ರೀ ತಿಪ್ಪಣ್ಣಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ಸ್ಥಾಪಿಸುವ ಬಗ್ಗೆ 25ಕ್ಕೂ ಹೆಚ್ಚು ಶಾಸಕರು ಸರ್ಕಾರವನ್ನು ಒತ್ತಾಯಿಸಿದ್ದು ಈ ಬಗ್ಗೆ ಸದನದಲ್ಲೂ ಚರ್ಚೆಯಾಗಿದ್ದರೂ ಸಹ, ಸಭಾಪತಿಯವರೂ ಸಹ ಸರ್ಕಾರಕ್ಕೆ ಪತ್ರ ಬರೆದು ಪ್ರತಿಮೆ ಸ್ಥಾಪನೆ ಬಗ್ಗೆ ಒತ್ತಾಯಿಸಿದ್ದರೂ ಸರ್ಕಾರವು ತನ್ನ ಸುತ್ತೋಲೆಯ ಕೆಲವು ನೆಪಗಳನ್ನು ಮುಂದಿಟ್ಟು ಪರಿಶೀಲಿಸಲಾಗುವುದೆಂದು ತಿಳಿಸಿ, ತುಳಿತಕ್ಕೆ ಒಳಪಟ್ಟ ಈ ಸಮಾಜವನ್ನು ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರಿಗೂ ಅವಮಾನಿಸುತ್ತಿರುವಂತೆ ಸಮಾಜದವರು ಸಂಶಯವನ್ನು ವ್ಯಕ್ತಪಡಿಸುತ್ತಿದ್ದು ವಿಧಾನ ಸೌಧದ ಮುಂದೆ ಚಾಮುಂಡೇಶ್ವರಿ ತಾಯಿಯ ಪ್ರತಿಮೆ ಸ್ಥಾಪನೆ ಮಾಡಿರುವ ರೀತಿಯಲ್ಲೇ ಸಮರೋಪಾದಿಯಲ್ಲಿ ತಾರತಮ್ಯ ನೀತಿಯನ್ನು ಅನುಸರಿಸದೆ ಈ ಕೂಡಲೇ ವಿಧಾನ ಸೌಧದ ಮುಂದೆ ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆ ಸ್ಥಾಪಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಕರು):-** ಮಾನ್ಯ ಸಭಾಪತಿಯವರೆ, ಈ ವಿಷಯದ ಬಗ್ಗೆ ಕಳೆದ ಅಧಿವೇಶನದಲ್ಲಿ ಚರ್ಚೆಯಾಗಿದೆ. ಅದಕ್ಕೆ ಸಚಿವರೂ ಸಹ ಒಪ್ಪಿಕೊಂಡಿದ್ದರು. ಅದಕ್ಕೆ ತಾವೂ ಸಹ ತಮ್ಮ ಬೆಂಬಲವನ್ನು ಸೂಚಿಸಿದ್ದಿರಿ. ಹಿಂದಿನ ಮಹಾಪುರುಷರುಗಳು ಸಮಾಜಕ್ಕಾಗಿ ಹೋರಾಟ ಮಾಡಿ, ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದರು. ಆದರೆ, ದುರದೃಷ್ಟವಶಾತ್ ಇವತ್ತಿನ ದಿವಸ ಅಂತಹ ಸಮಾಜದ ಮಹಾಪುರುಷರಿಗೆ ಸಾಮಾಜಿಕ ನ್ಯಾಯ ದೊರೆಯುತ್ತಿಲ್ಲ. ಅವರಲ್ಲಿಯೂ ತಾರತಮ್ಯವುಂಟಾಗುತ್ತಿದೆ ಎಂದರೆ ಇದು ಬಹಳ ದುರದುಷ್ಟಕರವಾದ ಸಂಗತಿಯಾಗಿದೆ. ಏಕೆಂದರೆ, ಇವರು ಇವತ್ತಿನ ದಿವಸ ಹಿಂದುಳಿದ ಸಮುದಾಯದ ಕೋಲಿ ಕಬ್ಬಲಿಗ ಅಂಬಿಗ ಸಮುದಾಯದ ಮಹಾಪುರುಷರಾಗಿದ್ದಾರೆ. ನಿಜಶರಣ ಅಂಬಿಗರ ಚೌಡಯ್ಯರವರ ಬಗ್ಗೆ ತಮಗೂ ಸಹ ತಿಳಿದೇ ಇದೆ. ಇದೇ ವಿಚಾರವನ್ನು ತಾವು ಬೆಂಬಲಿಸಿ, ಸುದೀರ್ಘವಾದ ಪತ್ರವನ್ನೂ ಸಹ ಬರೆದಿದ್ದೀರಿ. ಇವತ್ತಿನ ಮಹಾಪುರುಷರಿಗೆ ನ್ಯಾಯ ಕೊಡಬೇಕಾಗಿದೆ. ಏಕಂದರೆ, ಇವತ್ತಿನ ದಿವಸ ಸಮಾಜದಲ್ಲಿ ರಾಜಕೀಯವಾಗಿ ಇಚ್ಛಾ ಶಕ್ತಿ ಯಾರಿಗೆ ಇರುತ್ತದೆಯೋ, ರಾಜಕೀಯವಾಗಿ ಬಲವಿರುವ ಸಮುದಾಯಗಳಿಗೆ ಆ ಸಮುದಾಯಗಳ ಮಹಾಪುರುಷರಿಗೆ ನ್ಯಾಯ ಸಿಗುತ್ತದೆ.

(ಮುಂದು)

**(124)06-03-2025 (3-50) bkp-bns** **(ಸಭಾಪತಿಯವರ ಉಪಸ್ಥಿತಿ)**

**ಡಾ॥ತಳವಾರ ಸಾಬಣ್ಣ (ಮುಂದು):-**

ಅಂದರೆ, ಇನ್ನೂ ಹಿಂದುಳಿದ ಸಮುದಾಯಗಳಲ್ಲಿ ಯಾರಿಗೆ ರಾಜಕೀಯ ಬೆಂಬಲ ಇಲ್ಲ. ಅವರನ್ನು ಯಾರೂ ಕೇಳುವವರು ಮತ್ತು ಹೇಳುವವರು ಇಲ್ಲ. ಅಂತಹ ಸಮುದಾಯಗಳ ಮಹಾಪುರುಷರಿಗೆ ಗೌರವವನ್ನು ಸೂಚಿಸಬಾರದು ಎಂದು ಇದೆಯೇ? ಅವರಿಗೆ ನ್ಯಾಯ ಸಿಗಬೇಕಲ್ಲವೇ? ಅದರಲ್ಲೂ ವಿಶೇಷವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯದ ಪರವಾಗಿ ಮಾತನಾಡುತ್ತಾರೆ. ಮತ್ತೆ ಅವರು ಹಿಂದುಳಿದ ವರ್ಗಗಳ ನಾಯಕರೆನಿಸಿಕೊಂಡಿದ್ದಾರೆ. ಇನ್ನು ಕೋಲಿ ಸಮಾಜದ ಕಬ್ಬಲಿಗರ ಅಂಬಿಗರ ಸಮುದಾಯದ ನಿಜ ಶರಣ ಅಂಬಿಗರ ಚೌಡಯ್ಯನವರ ವಿಚಾರದಲ್ಲಿ ನಾವು ಏನನ್ನು ಸಹ ಕೇಳುತ್ತಿಲ್ಲ. ನಾವು ಸುಮಾರು 36 ಜನ ಶಾಸಕರು ಅವರ ಒಂದು ಮೂರ್ತಿ ಸ್ಥಾಪನೆ ಮಾಡಿ ಎಂದು ಕೇಳುತ್ತಿದ್ದೇವೆ. ಪಕ್ಷಭೇದ ಮರೆತು ಎಲ್ಲರೂ ಸಹಿ ಮಾಡಿ, ಅದಕ್ಕೆ ಬೆಂಬಲ ಸೂಚಿಸಿದ್ದಾರೆ.

ಹೀಗಾಗಿ, ನಾನು ತಮ್ಮನ್ನು ಕೋರಿಕೊಳ್ಳುವುದು ಇಷ್ಟೆ. ನಾವು ನಿಜ ಶರಣ ಅಂಬಿಗರ ಚೌಡಯ್ಯನವರಿಗೆ ನ್ಯಾಯ ಕೊಡಬೇಕಾಗಿದೆ. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ವೀರಭದ್ರ ವೇಷ ಹಾಕುವಂತಹವರು ತಮಗೆ ರೋಷ ಬರಬೇಕಾದಾಗ ನಿಜ ಶರಣ ಅಂಬಿಗರ ಚೌಡಯ್ಯನವರ ವಚನಗಳನ್ನು ಹೇಳುತ್ತಾ, ಅವರು ತಮ್ಮ ನಾಲಿಗೆಗೆ ಈ ಒಂದು ತಂತಿಯನ್ನು ಸಿಕ್ಕಿಸಿಕೊಳ್ಳುವುದು ಬಹಳ ಸಾಮಾನ್ಯವಾಗಿರುವಂತಹ ರೂಢಿಯಾಗಿದೆ ಎಂಬುದು ತಮಗೆ ಗೊತ್ತಿದೆ. ಅಂದರೆ, ಅಷ್ಟು ಕಠೋರವಾಗಿರತಕ್ಕಂತಹ ವಚನಗಳನ್ನು ಹೇಳಿರತಕ್ಕಂತಹ ನಿಜ ಶರಣ ಅಂಬಿಗರ ಚೌಡಯ್ಯನವರಿಗೆ ನಾವು ನ್ಯಾಯ ಕೊಡಲು ಸಾಧ್ಯವಿಲ್ಲವೆಂದರೆ, ಈ ಸರ್ಕಾರ ಚುನಾವಣೆ ಬಂದ ತಕ್ಷಣ ಕೋಲಿ ಸಮಾಜ ಮತ್ತು ಕಬ್ಬಲಿಗರು ಎಂದ ತಕ್ಷಣ ಕಲಬುರಗಿ, ಯಾದಗಿರಿ ಮತ್ತು ಉತ್ತರ ಕರ್ನಾಟಕದ ನೆನಪು ಬರುತ್ತದೆ. ಅದೇ ಭಾಗದಲ್ಲಿರುವಂತಹ ನಿಜ ಶರಣ ಅಂಬಿಗರ ಚೌಡಯ್ಯನವರ ಒಂದು ಮೂರ್ತಿ ಕೇಳುತ್ತಿದ್ದೇವೆ. ನಾವು ಮತ್ತೇನೂ ಕೇಳುತ್ತಿಲ್ಲ. ಸನ್ಮಾನ್ಯ ಸಚಿವರು ಸಹ ಅದೇ ಭಾಗದವರಾಗಿದ್ದಾರೆ. ಮಾನ್ಯ ಸಚಿವರು ಬಹಳ ಸಹೃದಯಿಗಳು. ಅವರು ತಮ್ಮ ಮನಸ್ಸಿನಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ, ಎಲ್ಲೋ ಒಂದು ಕಡೆ ಮೌಖಿಕವಾದ ಹಿನ್ನೆಡೆಯಾಗುತ್ತಿದೆ. ಆ ದೃಷ್ಟಿಯಲ್ಲಿ ದಯವಿಟ್ಟು ಒತ್ತಾಯ ಮಾಡುತ್ತೇನೆ. ನಾನು ನಿಜ ಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ವಿಧಾನ ಸೌಧದ ಎದುರುಗಡೆ ಅಥವಾ ಅಕ್ಕಪಕ್ಕದಲ್ಲಿ ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಾಮಾಜಿಕ ನ್ಯಾಯದಲ್ಲಿ ಯಾರು ರಾಜಕೀಯವಾಗಿ ಬಲಿಷ್ಠರಾಗಿದ್ದಾರೆ, ಅವರ ಪರವಾಗಿ ಇಲ್ಲ ಎಂಬುದನ್ನು ಸರ್ಕಾರ ತೋರಿಸಬೇಕೆಂದು ಹೇಳುತ್ತಾ, ಮಾನ್ಯ ಸಚಿವರು ದಿನಾಂಕವನ್ನು ಮತ್ತು ತಿಂಗಳನ್ನು declare ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಶಿವರಾಜ ತಂಗಡಗಿ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಸುಮಾರು 12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಾದಂತಹ ನಿಜ ಶರಣ ಅಂಬಿಗರ ಚೌಡಯ್ಯನವರ ಒಂದು ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಎಲ್ಲರ ಒತ್ತಾಯವಿದೆ. ನಿಜ ಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವುದಕ್ಕೆ ತಾವು ಸಹ ಪತ್ರ ಬರೆದಿದ್ದೀರಿ. ತಮ್ಮ ಪತ್ರದ ಜೊತೆಗೆ ನಾನು ಸಹ ಡಿ.ಪಿ.ಎ.ಆರ್.ಗೆ ಪತ್ರ ಕಳುಹಿಸಿದ್ದೇನೆ. ಆದರೆ, ಡಿ.ಪಿ.ಎ.ಆರ್.ನಲ್ಲಿ ಒಂದು ಸಮಸ್ಯೆ ಏನಾಗಿದೆ ಎಂದರೆ, ಈಗಾಗಲೇ ವಿಧಾನ ಸೌಧದ ಸುತ್ತಮುತ್ತ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಈಗ ಎಲ್ಲೂ ಒಂದು ಕಡೆಯೂ ಜಾಗವಿಲ್ಲದಂತಹ ಪರಿಸ್ಥಿತಿ ಬಂದಿದೆ. ಅದಕ್ಕೆ ನಾನು ಹೋದ ಬಾರಿಯೂ ಸಹ ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರ ಬಳಿ ಮಾತನಾಡಿದೆ. ಮತ್ತೆ ಡಾ: ತಳವಾರ್ ಸಾಬಣ್ಣನವರು ಈ ವಿಚಾರವನ್ನು ಮಾತನಾಡಿದ್ದಾರೆ. ಡಾ: ತಳವಾರ್ ಸಾಬಣ್ಣನವರು ಮಾತನಾಡುತ್ತಾ ಏನು ಹೇಳಿದರು ಎಂದರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ನಿಶ್ಚಿತವಾಗಿ ತುಳಿತಕ್ಕೆ ಒಳಗಾದಂತಹವರಿಗೆ ಮತ್ತು ಸಾಮಾನ್ಯ ಜನರ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಪೂರ್ಣಪ್ರಮಾಣದ ಅರಿವು ಇದ್ದು, ಅವರು ಎಲ್ಲಾ ರೀತಿಯ ತುಳಿತಕ್ಕೆ ಒಳಗಾದಂತಹ ಸಮಾಜಕ್ಕೆ ನ್ಯಾಯ ಕೊಡುವಂತಹ ಕೆಲಸ ಈ ರಾಜ್ಯದಲ್ಲಿ ದಿವಂಗತ ಡಿ.ದೇವರಾಜ ಅರಸುರವರನ್ನು ಬಿಟ್ಟರೆ, ಮತ್ತೆ ಅದನ್ನು ಮಾಡಿದಂತಹವರು ಯಾರಾದರೂ ಇದ್ದರೆ, ಅದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಎಂದು ನಾವು ಮತ್ತು ಈ ರಾಜ್ಯದ ಜನರು ಸಹ ಒಪ್ಪಿಕೊಳ್ಳುತ್ತಿದ್ದಾರೆ. ಆದರೆ, ಮೂರ್ತಿ ಪ್ರತಿಷ್ಠಾಪನೆಯು ನಮಗೆ ಒಂದು ಕಷ್ಟದ ಕೆಲಸ ಏನಾಗಿದೆ ಎಂದರೆ, ವಿಧಾನ ಸೌಧದ ಸುತ್ತುಮುತ್ತ ಮೂರ್ತಿ ಸ್ಥಾಪನೆ ಮಾಡುವುದಕ್ಕೆ ಜಾಗದ ಸಮಸ್ಯೆ ಇದೆ. ಈಗಾಗಲೇ ಡಿ.ಪಿ.ಎ.ಆರ್. ನವರ ಜೊತೆ ಮಾತನಾಡಿದಾಗ, ಅದಕ್ಕೆ ಅವರು ಇಲ್ಲಿ ಯಾವುದೂ ಜಾಗವಿಲ್ಲ ಮತ್ತೆ ಜಾಗದ ಕೊರತೆ ಇದೆ ಎಂದು ಹೇಳಿದರು. ನಾನು ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರ ಬಳಿ ಕೆಲವೊಂದು ವಿಚಾರಗಳನ್ನು ಮಾತನಾಡುತ್ತಾ, ಬೇರೆ ಯಾವುದಾದರೂ ಜಾಗ ಇದ್ದರೆ ಹೇಳಿ, ಅಲ್ಲಿ ಅನುಮತಿ ತೆಗೆದುಕೊಂಡು ಮೂರ್ತಿಯನ್ನು ಸ್ಥಾಪನೆ ಮಾಡುತ್ತೇವೆ ಎಂಬ ಮಾತನ್ನು ಅವರಿಗೆ ಈಗಾಗಲೇ ಹೇಳಿದ್ದೇನೆ. ಅದು ಬಿಟ್ಟು ಬೇರೆ ಜಾಗವಿದ್ದರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುತ್ತೇನೆ. ಅದನ್ನು ಸಂಬಂಧಪಟ್ಟಂತಹ ಇಲಾಖೆಯ ಗಮನಕ್ಕೂ ತಂದು, ನಮಗೆ ನಿಜ ಶರಣ ಅಂಬಿಗರ ಚೌಡಯ್ಯನವರ ಬಗ್ಗೆ ವಿಶೇಷವಾದಂತಹ ಆಸಕ್ತಿ ಮತ್ತು ಗೌರವವಿದೆ. ಮತ್ತೆ ಆ ಸಮಾಜದ ಬಂಧುಗಳು ಯಾವಾಗಲೂ ನಮ್ಮನ್ನು ಬೆಂಬಲಿಸುವಂತಹ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅವರ ಮೂರ್ತಿ ಸ್ಥಾಪನೆ ಮಾಡಿದರೆ ರಾಜಕೀಯ ಇಚ್ಛಾಶಕ್ತಿ ಎನ್ನುವುದಕ್ಕಿಂತ ಸಮಾಜಕ್ಕೆ ವಿಶೇಷವಾದಂತಹ ಅನುದಾನವನ್ನು ಕೊಡುವುದರ ಮುಖಾಂತರ ಆ ಸಮಾಜವನ್ನು ಮೇಲೆ ಎತ್ತುವಂತಹ ಕೆಲಸ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ಆದರೂ ಮಾನ್ಯ ಸದಸ್ಯರ ಒತ್ತಾಯವಿದೆ. ಅದರಲ್ಲಿ ನನ್ನ ಆಸಕ್ತಿಯೂ ಸಹ ಇದೆ.

ತಮ್ಮ ಆಸಕ್ತಿಯೂ ಸಹ ಇದೆ. ತಾವೂ ಸಹ ನನಗೆ ಪತ್ರ ಬರೆದಿದ್ದೀರಿ. ನಿಮ್ಮ ಪತ್ರದ ಆಧಾರದ ಮೇಲೆ ನಾನು ಸಹ ಡಿ.ಪಿ.ಎ.ಆರ್.ನವರಿಗೆ ಪತ್ರ ಬರೆದಿದ್ದೇನೆ. ಇದಕ್ಕೆ ಮಾನ್ಯ ಸಭಾಪತಿಯವರ ಒತ್ತಾಯವಿದೆ ಎಂದು, ಮಾನ್ಯ ಮುಖ್ಯಮಂತ್ರಿಗಳಿಗೂ ಪತ್ರ ಬರೆಯುವ ಕೆಲಸವನ್ನು ಮಾಡಿದ್ದೇನೆ. ವಿಧಾನ ಸೌಧದ ಸುತ್ತಮುತ್ತ ಮೂರ್ತಿ ಸ್ಥಾಪನೆ ಮಾಡುವುದಕ್ಕೆ ಕಷ್ಟವಿದೆ. ಮೂರ್ತಿಯನ್ನು ವಿಧಾನ ಸೌಧದ ಸುತ್ತಮುತ್ತ ಸ್ಥಾಪನೆ ಮಾಡುವುದಕ್ಕೆ ಕಷ್ಟವಿರುವುದರಿಂದ, ಬೇರೆ ಯಾವುದಾದರೂ ಜಾಗವನ್ನು ಆಯ್ಕೆ ಮಾಡಿ, ತಾವೇ ಹೇಳಿ ಎಂದು ಅವರಿಗೆ ತಿಳಿಸಿದ್ದೇನೆ. ನಾನು ಡಿ.ಪಿ.ಎ.ಆರ್.ನವರ ಬಳಿ ಅನುಮತಿ ತೆಗೆದುಕೊಳ್ಳಬೇಕು. ಮತ್ತೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುವಂತಹ ಕೆಲಸವನ್ನು ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಇಬ್ಬರು ಸದಸ್ಯರ ಒತ್ತಯವೇನು ಇದೆ, ಅದಕ್ಕೆ ನಿಶ್ಚಿತವಾಗಿ ನನ್ನ ಆಸೆಯೂ ಸಹ ಇದೆ. ಇಲ್ಲಿ ವಿಧಾನ ಸೌಧದಲ್ಲಿ ಜಾಗವಿಲ್ಲ. ನಿಜ ಶರಣ ಅಂಬಿಗರ ಚೌಡಯ್ಯನವರ ಮೂರ್ತಿಯ ಜೊತೆಗೆ 160ಕ್ಕೂ ಹೆಚ್ಚಿನ ಶಿವಶರಣರ ಹೆಸರು one by one ಪ್ರಾರಂಭವಾಗುತ್ತದೆ. ಇದು ಜಾತಿಗೆ ಚಾಲು ಆಗುತ್ತದೆ. ನಿಜ ಶರಣ ಅಂಬಿಗರ ಚೌಡಯ್ಯ, ಶ್ರೀ ಅಲ್ಲಮ್ಮಪ್ರಭು, ಸಿದ್ಧರಾಮೇಶ್ವರ ಮತ್ತು ಶ್ರೀ ಚೆನ್ನಬಸವರವರ ಮೂರ್ತಿಗಳನ್ನು ಕೂರಿಸಬೇಕೆಂದು ಹೇಳುತ್ತಾರೆ. ಈಗಾಗಲೇ ಅವರೇ ಮಾದಾರ ಚೆನ್ನಯ್ಯನವರ ಮೂರ್ತಿಯನ್ನು ಪ್ರತಿಷ್ಠಾನೆ ಮಾಡಬೇಕೆಂದು ಕೇಳಿದ್ದಾರೆ. ಹಾಗಾಗಿ, ಕನಿಷ್ಟ 160 ಮಂದಿ ಶಿವಶರಣರ ಮೂರ್ತಿ ಪ್ರತಿಷ್ಠಾಪನೆ ಮಾಡುವುದಕ್ಕೆ ಹೋದರೆ, ಪರಿಸ್ಥಿತಿ ಏನು ಆಗುತ್ತದೆಂದು ತಮ್ಮ ಮೂಲಕ ಅವರಿಗೆ ತಿಳಿಸುವಂತಹ ಕೆಲಸವನ್ನು ಮಾಡುತ್ತೇನೆ. ನನ್ನ ವಿಚಾರ ಇರಲಿ. ಇವರೆಲ್ಲರೂ ಮತ್ತು ತಾವು ಒಪ್ಪಿಗೆ ಕೊಟ್ಟರೆ, ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರಬೇಕು ಎನ್ನುವಂತಹ ಕೆಲಸವನ್ನು ಮಾಡಬೇಕೆಂದುಕೊಂಡಿದ್ದೇನೆ. ಈ ಎಲ್ಲಾ 160ಕ್ಕಿಂತ ಹೆಚ್ಚು ಶಿವಶರಣರು ಏನು ಇದ್ದಾರೆ, ಅವರ ಪ್ರತಿಮೆಯನ್ನು ಸ್ಥಾಪನೆ ಮಾಡುವುದರ ಜೊತೆಗೆ ಈ ಎಲ್ಲಾ 160 ಮಂದಿ ಶಿವಶರಣರ ಶಿಲೆಯನ್ನು ಕೆತ್ತಿಸಿ, ಅದನ್ನು ಎಲ್ಲಾದರೂ ಒಂದು ಕಡೆ ಮಾಡೋಣವೆಂದು ಅವುಗಳಿಗೆ ಸಣ್ಣಸಣ್ಣ ಹೆಸರನ್ನು ಬರೆದು, ಅದರ ಜೊತೆಗೆ ಇಡೀ ರಾಜ್ಯದಲ್ಲಿ ಏನು 160 ಮಹಾ ಶಿವಶರಣರು ಇದ್ದಾರೆ, ಅದರ ಚಿಂತನೆಯನ್ನು ನಮ್ಮ ಇಲಾಖೆಯಲ್ಲಿ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಹಾತ್ಮಗಾಂಧಿಯವರು ದಂಡಿಯಾತ್ರೆ ಮಾಡಿದಂತೆ ನವದೆಹಲಿಯಲ್ಲಿ ಮಾಡಿದ್ದಾರಲ್ಲ, ಆ ರೀತಿ ಮಾಡಿ.

**ಶ್ರೀ ಶಿವರಾಜ ತಂಗಡಗಿ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಅದೇ ಒಂದು ರೀತಿಯ ಚಿಂತನೆಯನ್ನು ನಮ್ಮ ಇಲಾಖೆಯಲ್ಲಿ ಮಾಡುತ್ತೇವೆ. ನಿಜ ಶರಣ ಅಂಬಿಗರ ಚೌಡಯ್ಯನವರ ಬಗ್ಗೆ ನಮಗೆ ಬಹಳ ಅಪಾರವಾದ ಗೌರವವಿದೆ. ಅವರದು ಆದತಕ್ಷಣ ಇವರೆಲ್ಲರದ್ದು ಪ್ರಾರಂಭವಾಗುತ್ತದೆ. ಮಾನ್ಯ ಸದಸ್ಯರು ಎರಡರಿಂದ ಮೂರನೆ ಬಾರಿಗೆ ಪ್ರಶ್ನೆ ಕೇಳುತ್ತಿದ್ದಾರೆ. ನಮಗೂ ಸಹ ಅದರ ಬಗ್ಗೆ ಪೂರ್ಣಪ್ರಮಾಣದ ಅರಿವು ಇದೆ. ಅದರೆ, ಪರಿಸ್ಥಿತಿಗೆ ಅನುಗುಣವಾಗಿ ತಾವೆಲ್ಲರೂ ಹೇಳಿದರೆ, 160 ಮಂದಿ ಶಿವಶರಣರ ಬಗ್ಗೆ ಚಿಂತನೆ ಮಾಡುತ್ತೇನೆ. ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಎಲ್ಲಾದರೂ ಒಂದು ಕಡೆ ವಿಧಾನ ಸೌಧದಲ್ಲಿ ಕೇಳುತ್ತೇನೆ.

ಇಲ್ಲಿ ಆಗಲಿಲ್ಲವೆಂದರೆ, ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಸ್ಥಾಪಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

**ಶ್ರೀ ಡಿ.ಟಿ. ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಬ್ಬನ್ ಪಾರ್ಕ್‌ನಲ್ಲಿ ಒಂದು ಕಡೆ ಜಾಗವನ್ನು ಗುರುತು ಮಾಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಆಯಿತು ನೋಡೋಣ. ಸಚಿವರ ಮಾತನ್ನು ಕೇಳಿ.

**ಶ್ರಿ ಶಿವರಾಜ ತಂಗಡಗಿ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಈಗ ಅದನ್ನು ಒಂದು ಕಡೆ ಮಾಡುವುದಕ್ಕೆ ಮಾನ್ಯ ಸುಪ್ರೀಂ ಕೋರ್ಟ್‌ನ ಸಮಸ್ಯೆ ಇದೆ. ಅದನ್ನು ಎಲ್ಲೆಲ್ಲಿ ಇಡಬೇಕೆಂದು ಮಾನ್ಯ ಸುಪ್ರೀಂ ಕೋರ್ಟ್‌ನ Guidelines ಇದೆ. ಮಾನ್ಯ ಸುಪ್ರಿಂ ಕೋರ್ಟ್ 2013ರಲ್ಲಿ ಎಲ್ಲಿ ಸ್ಥಾಪನೆ ಮಾಡಬಾರದು ಎಂಬುದರ ಕುರಿತು ತೀರ್ಪು ನೀಡಿದೆ. ಆದರೆ, ಕೆಲವೊಂದು ಜಾಗಗಳನ್ನು identify ಮಾಡುವ ಪರಿಸ್ಥಿತಿ ನೋಡಿಕೊಂಡು ಮಾಡೋಣವೆಂದು ನಮ್ಮ ಇಲಾಖೆಯಲ್ಲಿ ಚಿಂತನೆಯನ್ನು ಮಾಡುತ್ತಿದ್ದೇವೆ.

**ಡಾ।ತಳವಾರ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ವಿಧಾನ ಸೌಧದಲ್ಲಿ ಜಾಗವಿಲ್ಲವೆಂದ ಹೇಳಿದರು. ಇಲ್ಲಿ ಸಾಕಷ್ಟು ಜಾಗವಿದೆ. ಅವರು ಜಾಗವಿದ್ದರೆ ಸ್ಥಾಪನೆ ಮಾಡುವುದಕ್ಕೆ ಸಿದ್ಧರಿದ್ದಾರೆಂದು ಅರ್ಥವಾಗುತ್ತದೆ. ಮಾನ್ಯ ಸಚಿವರು ಮನಸ್ಸು ಮಾಡಿದರೆ, ಜಾಗ ಹುಡುಕುವುದು ದೊಡ್ಡ ಕೆಲಸವಲ್ಲ. ಎರಡನೆಯದು 160 ಶರಣರಿಗೆ ನಾವು ಯಾವುದೇ ರೀತಿಯ ಅಗೌರವ ತೋರಿಸುತ್ತಿಲ್ಲ. ನಮಗೆ ಅವರ ಬಗ್ಗೆ ಅಪಾರವಾದ ಗೌರವವಿದೆ. ಆದರೆ, 160 ಶರಣರಲ್ಲಿ ನಿಜ ಶರಣ ಎಂದು ಬಸವಣ್ಣರವರಿಂದ ಕರೆಯಿಸಿಕೊಂಡಿದ್ದು ಕೇವಲ ಅಂಬಿಗರ ಚೌಡಯ್ಯನವರು ಮಾತ್ರ. ಮಾನ್ಯ ಸಚಿವರು ಹೇಳಿದ ಪ್ರಕಾರ ಅವರು ಮನಸ್ಸು ಮಾಡಿದರೆ, ಇಲ್ಲಿ ಆಗದಿದ್ದರೆ ಉತ್ತರ ಕರ್ನಾಟಕದ ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿಯಾದರೂ ಸ್ಥಾಪನೆ ಮಾಡಲಿ. ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಏನೂ ತೊಂದರೆ ಇಲ್ಲವಲ್ಲ. ಮಾನ್ಯ ಮುಖ್ಯಮಂತ್ರಿಗಳ ಮನಸ್ಸು ಒಪ್ಪಿಕೊಂಡು ಅವರು ಮನಸ್ಸು ಮಾಡಿದರೆ, ಇದು ಬಹಳ ಕಷ್ಟದ ಕೆಲಸವಲ್ಲವೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಎರಡು ಅಧಿವೇಶನದಲ್ಲಿ ಸತ್ಯವಾದ ಮಾತನ್ನು ಹೇಳಿದ್ದರು. ಆದರೆ, ಮಾನ್ಯ ಸಚಿವರು ಈ ಬಾರಿ ಸುಳ್ಳು ಹೇಳುತ್ತಿದ್ದಾರೆ.

**ಶ್ರಿ ಶಿವರಾಜ ತಂಗಡಗಿ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸುಳ್ಳು ಹೇಳುವುದಕ್ಕೆ ಏನು ಇದೆ?

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸ್ಥಳದ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಆದರೆ, ಈ ಬಾರಿ ಪೂರ್ಣಪ್ರಮಾಣದ ಸುಳ್ಳು ಹೇಳುತ್ತಿದ್ದಾರೆ. ತಮ್ಮ ನಡವಳಿಯ ಪತ್ರ ಕಳುಹಿಸಿರುವುದು ಸಾಮಾನ್ಯವಾದ ಮಾತು ಅಲ್ಲ. ನಾನು ತಮಗೆ ಹಾರ್ದಿಕವಾದಂತಹ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾವು ಯಾರೂ ಕೇಳಿರಲಿಲ್ಲ. ಈಗ ತುಳಿತಕ್ಕೆ ಒಳಗಾದ ಸಮಾಜದವರ ಪ್ರತಿಮೆ ಸ್ಥಾಪನೆ

ಮಾಡಬೇಕೆಂದು ತಾವು ಪತ್ರ ಕಳುಹಿಸಿದ್ದೀರಿ. ವಿಧಾನ ಸೌಧದ ಮುಂದೆ ನಿಜ ಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಸ್ಥಾಪನೆ ಕುರಿತಂತೆ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ಸೇರಿದಂತೆ, ಸುಮಾರು 60ಕ್ಕೂ ಹೆಚ್ಚು ಶಾಸಕರು ಸಹಿ ಮಾಡಿರುವ ಮನವಿಯನ್ನು ನನಗೆ ಸಲ್ಲಿಸಿದ್ದು, ಸದರಿ ಮನವಿಯನ್ನು ಈ ಪತ್ರದ ಜೊತೆಗೆ ಲಗತ್ತಿಸಿದೆ. ಬೆಳಗಾವಿಯ ಅಧಿವೇಶನದಲ್ಲಿ ಮಹರ್ಷಿ ವಾಲ್ಮೀಕಿ, ಭಕ್ತ ಕನಕದಾಸರು, ಕೆಂಪೇಗೌಡರು ಮತ್ತು ಜಗಜ್ಯೋತಿ ಬಸವೇಶ್ವರರಂತಹ ಮಹಾನ್ ನಾಯಕರ ಮೂರ್ತಿಗಳನ್ನು ಈಗಾಗಲೇ ಶಾಸಕರ ಭವನ ಮತ್ತು ವಿಧಾನ ಸೌಧದ ಆವರಣದಲ್ಲಿ ಸ್ಥಾಪಿಸಲಾಗಿದ್ದು, ಅದೇ ರೀತಿ 12ನೇ ಶತಮಾನದಲ್ಲಿ ಇದ್ದುದ್ದನ್ನು ಇದ್ದ ಹಾಗೆ ಹೇಳಿದ ಶರಣರಲ್ಲಿ ನಿಜ ಶರಣ ಅಂಬಿಗರ ಚೌಡಯ್ಯನವರು ಒಬ್ಬರು. ಈ ಮಹಾನ್ ಶರಣರ ಮೂರ್ತಿಯನ್ನು ವಿಧಾನ ಸೌಧದ ಮುಂದೆ ಪ್ರತಿಷ್ಠಾಪನೆ ಮಾಡಲು ಬೆಳಗಾವಿಯ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿ, ಸಂಬಂಧಪಟ್ಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಮೂರ್ತಿಯನ್ನು ಸ್ಥಾಪಿಸಲು ಆಶ್ವಾಸನೆ ನೀಡಿದ್ದರು. ಇದನ್ನು ನಾನು ಬರೆದಿದ್ದು ಅಲ್ಲ. ಮಾನ್ಯ ಸಭಾಪತಿಯವರು ಬರೆದಿರುವುದು.

**(ಮುಂದು.)**

(125) 06.03.2025 04.00 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ಮುಂದು):-**

ಇದರಿಂದ ರಾಜ್ಯಾದ್ಯಂತ ಇರುವ ಕೋಲಿ, ಬೆಸ್ತ ಮತ್ತು ಕಬ್ಬಲಿಗ ಸಮಾಜದ ಬಾಂಧವರು ಅತ್ಯಂತ ಸಂತೋಷವನ್ನು ವ್ಯಕ್ತ ಪಡಿಸಿರುತ್ತಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಸದರಿ ಮಾನ್ಯ ಶಾಸಕರ ಮನವಿಯಂತೆ ಕೂಡಲೇ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಪ್ರತಿಷ್ಠಾಪನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದವರಿಗೆ ಸೂಚಿಸಲು ಈ ಮೂಲಕ ಕೋರುತ್ತೇನೆ.

ಮಾನ್ಯ ಸಭಾಪತಿಯವರೆ, ತಮಗೆ ಕೈ ಮುಗಿಯುತ್ತೇನೆ. ನನಗೆ 5-10 ನಿಮಿಷ ಟೈಮ್ ಕೊಡಿ. ಬೇಕಾದರೆ ಮುಂದೆ ನಾನು ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. "ಬೆಂಗಳೂರಿನಲ್ಲಿ ಅಂಬಿಗರ ಚೌಡಯ್ಯ ಮೂರ್ತಿ ಸ್ಥಾಪನೆ – ಸಚಿವ ತಂಗಡಗಿ" ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಬೆಂಗಳೂರಿನ ಪ್ರತಿಷ್ಠಿತ ಸ್ಥಳಗಳಲ್ಲಿ ಸ್ಥಾಪಿಸಲು ಶೀಘ್ರ ಕ್ರಮ ಕೈಗೊಳ್ಳುವೆ ಎಂದು ಹೇಳಿದ್ದರು. ಇಷ್ಟೆಲ್ಲಾ ಆದರೂ ಭಕ್ತ ಕನಕದಾಸ ಇತರರ ಮೂರ್ತಿಗಳನ್ನು ಕೂರಿಸುವ ಮೊದಲು ಇವರಿಗೆ ಯಾವುದೇ ಕಾನೂನು – ಕಾಯಿದೆ ಇರಲಿಲ್ಲ. ತುಳಿತಕ್ಕೆ ಒಳಗಾದ ಸಮಾಜಗಳಿಗೆ...

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ತಿಪ್ಪಣ್ಣಪ್ಪ ಕಮಕನೂರ ಅವರಿಗೆ ನಾವೆಲ್ಲರೂ ಗೌರವವನ್ನು ಕೊಡಬೇಕು. ಅಭಿನಂದನೆಯನ್ನೂ ಸಲ್ಲಿಸಬೇಕು. ಅವರು ಸರ್ಕಾರದ ಪರವಾದ ಸದಸ್ಯರು. ಸರ್ಕಾರ ಸುಳ್ಳು ಹೇಳುತ್ತದೆ ಎಂದು ಸತ್ಯವನ್ನು ಹೇಳಿ

ಸಾಬೀತು ಮಾಡಿದ್ದಾರೆ. ಅದರಿಂದ ನಾವು ಅವರಿಗೆ ಗೌರವವನ್ನೂ ಕೊಡಬೇಕು, ಸನ್ಮಾನವನ್ನೂ ಮಾಡಬೇಕು. ಮೊದಲನೆಯದಾಗಿ ನಾನು ತಮ್ಮ ಮೂಲಕ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ನನ್ನ ಆತ್ಮೀಯರು. ನನ್ನ ಸರ್ಕಾರದ ಬಗ್ಗೆ ನನಗೆ ಗೌರವ ಇದೆ. ನನ್ನ ಸರ್ಕಾರದ ಬಗ್ಗೆ ನಾನು ಚಕಾರ ಎತ್ತುವುದಿಲ್ಲ.

ಮಾನ್ಯ ಸಚಿವರೆ, ಒಂದು ಮಾತನ್ನು ಹೇಳುತ್ತೇನೆ. ನೀವು 60 ಲಕ್ಷ ಜನ ಕೋಲಿ ಸಮಾಜದವರನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ. ಇದು ನಮ್ಮ ಧರ್ಮದ ಕೆಲಸ. ನಮ್ಮ ಧರ್ಮಗುರುವಿನ ಬಗ್ಗೆ ನೀವು ಒಂದೊಂದು ಸಲ ಒಂದೊಂದು statement ಕೊಟ್ಟರಿ ಎಂದರೆ ಇದು ಬಹಳ ವಿಕೋಪಕ್ಕೆ ಹೋಗುತ್ತದೆ. ನನಗೆ ಅಧಿಕಾರದ ಆಸೆ ಇಲ್ಲ. ನನ್ನ ಸಮಾಜದ ಕುರಿತಂತೆ ನೀವು ನಿರ್ಣಯ ತೆಗೆದುಕೊಳ್ಳಲಿಕ್ಕೆ ಸಹಾಯ ಮಾಡಲಿಲ್ಲ ಎಂದರೆ ಒಂದೊಂದು ಜಾತಿಯ ಗುರುಗಳ ಮೂರ್ತಿಗಳನ್ನು 3-4 ಕಡೆ ಕೂರಿಸಲಾಗಿದೆ. ಅದಕ್ಕೆ ನಿಮಗೆ ಯಾವುದೇ ಸ್ಥಳದ ಅಲಭ್ಯತೆಯ ತೊಂದರೆಯಿರುವುದಿಲ್ಲ. ಇದೊಂದಕ್ಕೆ ಎಲ್ಲಾ ಕಾನೂನು ಮಾತನಾಡುತ್ತೀರಿ. ಇದು ಯಾವ ನ್ಯಾಯ?

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಅವರೆ, ಮಾನ್ಯ ಸಚಿವರು ಮಾಡುತ್ತಾರೆ. ಅವರಿಗೆ ಕಳಕಳಿ ಇದೆ. ಜಾಗ ಹುಡುಕುತ್ತಾರೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅರಸರಾಗಿದ್ದಾಗ ಒಂದು ಪ್ರಕರಣ ಬರುತ್ತದೆ. ತಾವು ಕೂಡ ಬೆಳಗಾವಿ ಭಾಗದಲ್ಲಿ 7 ಎಕರೆ ಜಮೀನು ಸುಮಾರು ರೂ.2 ಕೋಟಿ ಮೊತ್ತದ ಆಸ್ತಿಯನ್ನು ಬಡ ಮಕ್ಕಳಿಗೆ ಕೊಟ್ಟು ಶಾಲೆ ಕೊಡಿಸಿದ್ದೀರಿ. ಈಗಿನ ಕಾಲಕ್ಕೆ ನಿಮ್ಮಂಥವರು ಬೇಕು. ನಿಮ್ಮನ್ನು ನೋಡಿದರೆ ಕೊಲ್ಲೂರು ಮಲ್ಲಪ್ಪನ ಹೆಸರು ನೆನಪಿಗೆ ಬರುತ್ತದೆ. ನಿಮ್ಮನ್ನು ನೋಡಿದರೆ ದೇವರಾಜ ಅರಸುರವರ ಹೆಸರು ನೆನಪಿಗೆ ಬರುತ್ತದೆ. ನಿಮ್ಮನ್ನು ನೋಡಿದರೆ ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರು ನೆನಪಿಗೆ ಬರುತ್ತದೆ. ನನ್ನದೇನು, ನಾನೇನು ಬಂಗಾರ ಕೇಳಿದ್ದೇನೆಯೇ? ನಿಮಗೆ transfer ಸಲುವಾಗಿ ಅರ್ಜಿ ಕೊಟ್ಟಿದ್ದೀನಾ? ನಿಮ್ಮ ಕಛೇರಿಗೇನಾದರೂ ಬಂದಿದ್ದೀನಾ? ನನ್ನ ಧರ್ಮದ ಬಗ್ಗೆ ನನ್ನ ಜನಾಂಗದ ಬಗ್ಗೆ ಸರ್ಕಾರ ಇಂತಹ ಧೋರಣೆ ತೋರುವುದು ಸರಿಯಲ್ಲ. ಮಾನ್ಯ ಸಭಾನಾಯಕರಿಗೆ ಗೊತ್ತಿದೆ. ರಾಯಚೂರಿನ ಪ್ರತಿಷ್ಠಿತ ಸ್ಥಳದಲ್ಲಿ ನಮ್ಮ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಪಾದಯಾತ್ರೆ ಸಂದರ್ಭದಲ್ಲಿ ಮಾನ್ಯ ರಾಹುಲ್ ಗಾಂಧಿಯವರನ್ನು ಕರೆದುಕೊಂಡು ಬಂದು ಮಾನ್ಯ ಸಿದ್ಧರಾಮಯ್ಯನವರಿಂದ ಪ್ರತಿಮೆಗೆ ಹಾರ ಹಾಕಿಸಿ, ಅಲ್ಲಿಂದ ಪಾದಯಾತ್ರೆ ಪ್ರಾರಂಭಿಸಿದರು. ಶಹಾಪುರದಲ್ಲಿ ರೂ.25 ಲಕ್ಷ ವೆಚ್ಚದಲ್ಲಿ ಮಾನ್ಯ ದರ್ಶನಾಪುರ ಅವರು ಮೂರ್ತಿ ಸ್ಥಾಪನೆ ಮಾಡಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಸ್ಥಳದಲ್ಲಿ ಮಾಡಬೇಕೆಂಬುದು ನಮ್ಮ ಜನರ ಬೇಡಿಕೆಯಾಗಿದೆ. "ಏನಾಯ್ತ್ರೀ, ನಿಮ್ಮ ಮಂತ್ರಿಗಳು ತಂಗಡಗಿ ಅವರು ಮಾತು ಕೊಟ್ಟಿದ್ರಲ್ಲಾ, ಯಾಕೆ ಮಾಡ್ತಿಲ್ಲ? ನೀವು ರಾಜೀನಾಮೆ ಕೊಟ್ಟು ಹೊರಗೆ ಬರ್ರಿ" ಎಂದು

ಹೇಳುತ್ತಿದ್ದಾರೆ. ಅದಕ್ಕೆ ನಾನೇನು ಮಾಡಬೇಕೆಂದು ನೀವೇ ಹೇಳಿ. ಮಾಡು ಅಥವಾ ಮಡಿ ಎನ್ನುವ ಸ್ಥಿತಿಯಲ್ಲಿ ನಾನಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗಾಗಲೇ ಅವರ ಪರಿಸ್ಥಿತಿ ಏನೆಂದು ಹೇಳಿದ್ದಾರೆ. ಬೇರೆ ಕಡೆ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡುತ್ತಾರೆ. ಮಾನ್ಯ ತಳವಾರ್ ಸಾಬಣ್ಣ ಅವರು ಹೇಳಿದಂತೆ ಬೆಳಗಾವಿಯ ಸುವರ್ಣ ಸೌಧದಲ್ಲಿ ಆಗಲೀ, ಇಲ್ಲಿ ಆಗಲೀ ಮಾಡುವಂತಹ ಕೆಲಸ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೆ, ತಾವು ಕಳೆದ ವರ್ಷ ಅನುಭವ ಮಂಟಪದ ಬಗ್ಗೆ ಎಲ್ಲರಿಗೂ ಒಂದೊಂದು ಫೋಟೊ ಕೊಟ್ಟಿದ್ದೀರಿ. ಬಹಳ ಚೆನ್ನಾಗಿದೆ, ನಮ್ಮ ರೂಮ್‌ನಲ್ಲಿ ಹಾಕಿದ್ದೇನೆ. ನೋಡಿದವರೆಲ್ಲರೂ ಮಾನ್ಯ ಸಭಾಪತಿಯವರು ಎಂತಹ ಒಳ್ಳೆ ಕೆಲಸ ಮಾಡುತ್ತಿದ್ದಾರೆ ಎಂದು ಅಭಿಮಾನ ಪಡುತ್ತಿದ್ದಾರೆ. ಅವರು ಕೇಳುತ್ತಿರುವಂಥದ್ದು ಬಹಳ ಸೂಕ್ತವಾದುದು. ದಯಮಾಡಿ ಒಂದಿಷ್ಟು ಅವಕಾಶ ಕೊಡಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ನಮ್ಮ ಭಾಗದವರಿದ್ದೀರಿ. ದೆಹಲಿಯಲ್ಲಿ ತೀನ್‌ಮೂರ್ತಿ ಭವನ್ ನಲ್ಲಿ ಗ್ಯಾರಹ್ ಮೂರ್ತಿ ಇರುವುದು... ಅಂಥ ಬಹಳಷ್ಟು ಉದಾಹರಣೆಗಳಿವೆ. ನಮ್ಮ ರಾಜ್ಯದಲ್ಲಿಯೂ ಅಂಥದ್ದೊಂದು ಪ್ರಾರಂಭ ಮಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:-** ನೀವಿಬ್ಬರೂ ರವಿಗಳು ಇದ್ದೀರಲ್ಲ ನಿಮ್ಮಂತಹ danger ಮಂದಿ ಯಾರೂ ಇಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಸರ್ಕಾರಕ್ಕೆ ನನ್ನ ಕಳಕಳಿಯ ಪ್ರಾರ್ಥನೆಯೇನೆಂದರೆ ಮಾನ್ಯ ತಿಪ್ಪಣ್ಣಪ್ಪ ಕಮಕನೂರ ಅವರು ಬಹಳ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸಮಾಜದವರು ಬಸವಣ್ಣನವರ ಕಾಲದಲ್ಲಿ ಅನುಭವ ಮಂಟಪದಲ್ಲಿದ್ದರು ಎನ್ನುವುದೇ ನಮಗೊಂದು ಹೆಮ್ಮೆಯ ಸಂಗತಿ. ಸಣ್ಣ ಸಣ್ಣ community ಗಳವರು ಬಹಳ ಹೆಮ್ಮೆ ಪಡುತ್ತಾರೆ. ಎಲ್ಲರಿಗೂ ಕೂಡ ಗೊತ್ತಿದೆ. ನಿಜಶರಣ ಅಂಬಿಗರ ಚೌಡಯ್ಯ, ಉಪ್ಪಾರ ಜನಾಂಗದಿಂದ ಭಗೀರಥ ಈ ರೀತಿಯ ಮಹಾಪುರುಷರನ್ನು ವಿಧಾನಸೌಧದ ಆವರಣದಲ್ಲಿಯೋ ಅಥವಾ ಬೆಳಗಾವಿಯಲ್ಲಿಯೋ ಅಥವಾ ಇನ್ಯಾವುದೇ ಪ್ರಮುಖವಾಗಿರುವ ಸ್ಥಳದಲ್ಲಿ ಸ್ಥಾಪನೆ ಮಾಡದಿದ್ದರೆ ಒಂದು ರೀತಿಯ wrong message ರಾಜ್ಯಕ್ಕೆ ಹೋಗುತ್ತದೆ. ನಿಜಶರಣ ಅಂಬಿಗರ ಚೌಡಯ್ಯ, ಒಬ್ಬ ಮಹಾನ್ ಕ್ರಾಂತಿಕಾರಕ ವಚನಕಾರರು. ಬೆಳಗಾವಿಯಲ್ಲಾದರೂ ಮಾಡಿ, ಇಲ್ಲಾದರೂ ಮಾಡಿ. ಬೆಂಗಳೂರಿನಲ್ಲಿ ಮಾಡುವುದು ನಮಗೆ ಸೂಕ್ತ ಎನಿಸುತ್ತದೆ. ಬಹಳಷ್ಟು ಮಹಾಪುರುಷರ statues ಇಲ್ಲಿದೆ ಎನ್ನುವುದಾದರೆ ಬೆಳಗಾವಿಯಲ್ಲಿ ಮಾಡಿ. ಸರ್ಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಗಂಭೀರವಾಗಿ ತೆಗೆದುಕೊಳ್ಳಬೇಕು. ನಮ್ಮ ನೆಲದ ಸಂಸ್ಕೃತಿ ಸರ್ವಧರ್ಮಗಳನ್ನೊಳಗೊಂಡ ಸಂಸ್ಕೃತಿ. ಬಸವಣ್ಣನವರ ನಾಡಿನಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ statue ಇಲ್ಲದೆ ಹೋಗಿಬಿಟ್ಟರೆ ಬಹಳ wrong message ಹೋಗುತ್ತದೆ. ಬಸವಣ್ಣನವರ ಮೂರ್ತಿ

ಬೇಕೇಬೇಕು. ಡಾ:ಬಿ.ಆರ್.ಅಂಬೇಡ್ಕರ್ ಅವರ ಮೂರ್ತಿ ಬೇಕೇಬೇಕು. ಕನಕದಾಸರ ಮೂರ್ತಿ ಬೇಕೇಬೇಕು. ಹಾಗಾದರೆ ಬೇರೆ ಸಮಾಜದವರು ಬೇಡವೇ? ಬೇಕು. ಹಾಗಾಗಿ ಸರ್ಕಾರದ ನೇತೃತ್ವವನ್ನು ವಹಿಸಿರುವವರು ಸರ್ವಜನಾಂಗದ ಶಾಂತಿಯ ತೋಟವನ್ನು ಕಟ್ಟಬೇಕೆನ್ನುವ ಸಂದೇಶವನ್ನು ಕೊಡುವ ಸರ್ಕಾರ ಈ ಪ್ರತಿಮೆಯನ್ನು ಮಾಡಬೇಕೆಂದು ಮಾನ್ಯ ತಿಪ್ಪಣ್ಣಪ್ಪ ಅವರು ಹೇಳಿದ್ದು, ನಮ್ಮೆಲ್ಲರ ಬೆಂಬಲವಿದೆ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ನಮ್ಮೆಲ್ಲರ ಬೆಂಬಲವಿದೆ. ಏಕೆಂದರೆ ನಾವೆಲ್ಲರೂ ಮಾನ್ಯ ತಿಪ್ಪಣ್ಣಪ್ಪ ಕಮಕನೂರ ಅವರ ಮನವಿಗೆ ಸಹಿ ಹಾಕಿ ಕೊಟ್ಟಿದ್ದೇವೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:–** ಅದನ್ನು ಕಡತದಿಂದ ತೆಗೆಯುತ್ತೇನೆ ಬೇಕಾದರೆ Unparliamentary ಆದರೆ. ಆಮೇಲೆ ನೋಡೋಣ.

**ಶ್ರೀ ಸಿ.ಟಿ.ರವಿ:–** ನೀವು ಕಡತದಿಂದ ತೆಗೆಯುವುದಾದರೆ ತೆಗೆಯಿರಿ. ಆದೇಶ ಮಾಡಿಸಿ.

**ಸಭಾಪತಿಯವರು:–** ತೆಗೆಯುವುದಿಲ್ಲ. ನೋಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ಮಾಡುವುದಕ್ಕೆ ನಮ್ಮೆಲ್ಲರ ಸಹಮತ ಇದೆ. ಅದೇ ರೀತಿ ಅವರ ಸಮಸ್ಯೆಗೂ ನನ್ನ ಸಹಮತ ಇದೆ. ನನಗೆ ಒಂದು ಅರ್ಥವಾಗುತ್ತಿಲ್ಲ. ನೀವು ಎಲ್ಲರೂ ಪುರುಷ ಸಮಾಜವನ್ನು ಪ್ರತಿನಿಧಿಸುವಂತೆ ಕನಕದಾಸರು, ಅಂಬಿಗರ ಚೌಡಯ್ಯ ಈ ರೀತಿ ಹೇಳುತ್ತೀರಿ. ಅಕ್ಕಮಹಾದೇವಿಯ ಪ್ರತಿಮೆ ಇಲ್ಲ. ಮಂಗಳೂರಿನಲ್ಲಿ ಹೋರಾಟ ಮಾಡಿದ ರಾಣಿ ಅಬ್ಬಕ್ಕದೇವಿ ಪ್ರತಿಮೆ ಇಲ್ಲ ಎಂದು ನಾನು ಎಷ್ಟೋ ಬಾರಿ ಹೇಳಿದ್ದೇನೆ. ಇದೆಲ್ಲಾ ನಿಮಗೆ ಅನ್ನಿಸುವುದೇ ಇಲ್ಲ. ಯಾವಾಗ ನೋಡಿದರೂ ಕನಕದಾಸರು, ಪುರಂದರದಾಸರು... ನಾನು ತಪ್ಪು ಎಂದು ಹೇಳುತ್ತಿಲ್ಲ. ಜೊತೆ ಜೊತೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ತಿಂಗಳಿನಲ್ಲಿ ನಾವಿದ್ದೇವೆ, ಸಮಾನತೆಯನ್ನು ತಾವು ಬಿಂಬಿಸಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿಸುತ್ತೇನೆ. 160 ಜನ ಶರಣರಲ್ಲಿ ಅದರಲ್ಲಿ ಮಹಿಳೆಯರನ್ನೂ ಸೇರಿಸಬೇಕು. ಒನಕೆ ಓಬವ್ವ, ಕೆಳದಿ ಚೆನ್ನಮ್ಮ...

**ಸಭಾಪತಿಯವರು:–** ಮಾನ್ಯ ಭಾರತಿ ಅವರೆ, ಹೆಂಗಳೆಯರ ಬಗ್ಗೆ ನಾಳೆ ನೀವು ಬೇರೆ ಒಂದು ನೋಟಿಸ್ ಕೊಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:–** ಮಾನ್ಯ ಸಭಾಪತಿಯವರೆ, ನೀವು ಕೊಟ್ಟಂತಹ ಪತ್ರ ಸುಳ್ಳಾಗಬಾರದು.

**(ಮುಂದು)**

**(126) 06-03-2025/4.10/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೆ ತಾವು ನಾನು ಹೇಳುವುದನ್ನು ಸ್ವಲ್ಪ ಕೇಳಿ. ಮಾನ್ಯ ಸಚಿವರೆ ನಮ್ಮ ರಾಜ್ಯದ ಯಾವುದಾದರೂ ಪ್ರಸಿದ್ಧ ಸ್ಥಳಗಳು ಅಥವಾ ಸರ್ಕಲ್‌ಗಳು ಈ ರೀತಿ ಎಲ್ಲಾದರೂ ಒಂದು ಕಡೆ ಪ್ರತಿಮೆ ಸ್ಥಾಪನೆ ಮಾಡುವಂತಹ ವಿಚಾರವನ್ನು ಮಾಡಿ. ಮಾನ್ಯ ಸದಸ್ಯರ ಬೇಡಿಕೆ ಯೋಗ್ಯವಾಗಿದೆ. ಅದು ಇಲ್ಲಿ ಆಗದಿದ್ದರೆ, ಬೇರೆ ಕಡೆಯಲ್ಲಿ ಅದನ್ನು ಬಹಳಷ್ಟು ಜನರು ನೋಡಬೇಕು. ಈಗ ಕಿತ್ತೂರುರಾಣಿ ಚೆನ್ನಮ್ಮ ಮೂರ್ತಿಯನ್ನು ಕಿತ್ತೂರಿಗೆ ಹೋದಾಗ ನೋಡುತ್ತೇವೆ. ಈಗ ಹುಬ್ಬಳ್ಳಿ-ಧಾರವಾಡ ಅಥವಾ ಮುಖ್ಯವಾದ ಸ್ಥಳದಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಮಾನ್ಯ ಸಚಿವರು ಅದನ್ನು ನೋಡಿ ವಿಚಾರ ಮಾಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನಗೆ ಎಲ್ಲಿಯಾದರೂ ಸ್ಥಳ ನೋಡಿ ಎಂದು ಹೇಳಿದರು. ನನಗೆ ಬೆಂಗಳೂರಿನಲ್ಲಿ ಏನು ಗೊತ್ತಿದೆ; ನನಗೆ ಕೇವಲ ವಿಧಾನ ಸೌಧ ಮತ್ತು ಶಾಸಕರ ಭವನ ಮಾತ್ರ ಗೊತ್ತಿದೆ. ನಾನು ಎಲ್ಲಿಗೂ ಸಹ ಹೋಗಿಯೇ ಇಲ್ಲ. ಮಾನ್ಯ ಸಚಿವರು ಹತ್ತಾರು ಬಾರಿ ಎಂ.ಎಲ್.ಎ. ಆಗಿದ್ದಾರೆ. ಮಾನ್ಯ ಮಂತ್ರಿಗಳು ಬಡತನದಿಂದ ಬಂದಂತಹವರು. ಅವರು ಈ ರೀತಿ ಮಾಡಬಾರದು.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೆ, ಮಾನ್ಯ ಸಚಿವರು ಹೇಳುತ್ತಾರೆ. ತಾವು ಆಮೇಲೆ ಮಾತನಾಡಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಹೇಳುತ್ತಾರೆಂದು ನೋಡೋಣ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಅವರಿಗೆ ಮಾತು ಕೊಟ್ಟಿದ್ದಾರೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೇ, No, no....

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಪೇಪರ್‌ನಲ್ಲಿ ಆ ನಮೂನೆಯಲ್ಲಿ ದೊಡ್ಡ ದೊಡ್ಡ ಅಕ್ಷರದಲ್ಲಿ ಬಂದಿದೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ನಾವು ಪರಿಶೀಲಿಸುತ್ತೇವೆಂದು ಹೇಳಿದ್ದೇವೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಬದ್ಧತೆ ಇದೆಯೋ ಇಲ್ಲವೋ?

**ಸಭಾಪತಿಯವರು:-** ಮಾನ್ಯ ತಂಗಡಗಿ ಶಿವರಾಜ ಸಂಗಪ್ಪನವರೆ, ಒಂದು ನಿಮಿಷ. ಈಗ ಪಾರ್ಲಿಮೆಂಟ್ ಮತ್ತು ಬೇರೆ ಬೇರೆ ಕಡೆಗಳಲ್ಲಿ ಯಾವುದಾದರೂ ಸರ್ಕಾರದಲ್ಲಿ ಮಂತ್ರಿಗಳು ಸ್ಪಷ್ಟವಾಗಿ

ಹೀಗೆಯೇ ಎಂದು ಹೇಳುತ್ತಾರೆಯೇ? ಅವರು ಪರಿಶೀಲಿಸಲಾಗುವುದು ಎಂದು ಮತ್ತೆ ಮುಂದೆ ನೋಡೋಣವೆಂದು ಹೇಳುತ್ತಾರೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು, ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ಮತ್ತು ಇತರರು ಹೇಳಿದ್ದಾರೆ. ನಮಗೆ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಆಸೆ ಇದೆ. ನಾನು ಒಂದು ಸಣ್ಣ ಸಮಾಜದಿಂದ ಬಂದಂತಹವನು. ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರಿಗೆ ಇರುವುದಕ್ಕಿಂತ ಒಂದು ಹೆಜ್ಜೆ ಆಸೆ ಜಾಸ್ತಿ ಇದೆ. ತಮಗೆ ಗೊತ್ತಿರುವಂತೆ ವಾಸ್ತವ ಸತ್ಯವನ್ನು ತಮ್ಮ ಮುಂದೆ ಹೇಳಿದ್ದೇನೆ.

**ಸಭಾಪತಿಯವರು:–** ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರು ಸಮಾಜದ ಆಸ್ತಿ. ದಯವಿಟ್ಟು ಮಾಡಿ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:–** ಮಾನ್ಯ ಸಭಾಪತಿಯವರೇ, ಎಲ್ಲಾ ಸಮಾಜದ ಆಸ್ತಿ. ಈಗ ನಾನು ಹೇಳುತ್ತಿರುವುದು ಪ್ರತಿಯೊಬ್ಬರೂ ಸಮಾಜದ ಆಸ್ತಿ. ಅಂದರೆ, ಶ್ರೀ ಅಲ್ಲಮ್ಮಪ್ರಭು, ಶಿವಶರಣೆ ಅಕ್ಕಮಹದೇವಿ, ಜಗಜ್ಯೋತಿ ಬಸವಣ್ಣ, ಶ್ರೀ ಚೆನ್ನಬಸವರು, ಶ್ರೀ ಸಿದ್ಧರಾಮೇಶ್ವರರು, ಶ್ರೀ ಉರಿಲಿಂಗಪೆದ್ದಿ, ಶ್ರೀ ಮಾದಾರ ಚೆನ್ನಯ್ಯ, ಶ್ರೀ ಜೇಡರ ದಾಸೀಮಯ್ಯ, ಶ್ರೀ ಡೋಹರ ಕಕ್ಕಯ್ಯ ಮತ್ತು ಶ್ರೀ ಸಮಗಾರ ಹರಳಯ್ಯ ಈ ಶರಣರು ಸಮಾಜಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಂತಹವರು. ಇವರ ಬಗ್ಗೆ ಸಮಾಜದ ಬಂಧುಗಳೆಲ್ಲರೂ ಒಬ್ಬೊಬ್ಬರು ಒಂದೊಂದು ಮೂರ್ತಿ ಕೂರಿಸಿ ಎಂದರೆ, ನಾವು 163 ಮೂರ್ತಿಗಳನ್ನು ಎಲ್ಲಿ ಕೂರಿಸುವುದು? ಎಲ್ಲಾ ಸಮಾಜದವರು ಒಂದೊಂದು ಮೂರ್ತಿಯನ್ನು ಕೇಳಿದರೆ. ಈಗ ಅವರು ಏನು ಹೇಳಿದರು ಎಂದರೆ, ಕೆಲವೊಂದು ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿರುವುದು ಸತ್ಯ. 2013ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ತೀರ್ಪು ಬಂದಿದೆ. ಅಂದರೆ, ಯಾವುದೇ ಕಾರಣಕ್ಕೂ ಸಾರ್ವಜನಿಕ ಪಾರ್ಕ್ ಒಳಗೆ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬಾರದು ಎಂದು. ಮಾನ್ಯ ಸರ್ವೋಚ್ಚ ನ್ಯಾಯಾಲಯ ತೀರ್ಪು ಕೊಟ್ಟಮೇಲೆ ಕೆಲವೊಂದು ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುವುದಕ್ಕೆ ಆಗಿಲ್ಲ. ಆದರೂ ವಾಸ್ತವ ಸತ್ಯ ತಮಗೆಲ್ಲರಿಗೂ ಸಹ ಗೊತ್ತಿದೆ. ಆದರೆ, ಅವಕಾಶ ಸಿಕ್ಕಿದೆ ಎಂದು ಎಲ್ಲರೂ ಮಾತನಾಡುವುದು, ಮೂರ್ತಿಯ ಬಗ್ಗೆ. ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರಿಗೆ ಹೇಳುವುದೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಸತ್ಯ ಹೇಳಿದರು. ನಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇವೆ. ಇಂತಹ ಜಾಗದಲ್ಲಿಯೇ ಕೂರಿಸುತ್ತೇವೆಂದು ಅವೊತ್ತು ಸಹ ಹೇಳಿಲ್ಲ. ನಾನು ಹೇಳಿರುವುದು ಅವರು ಬೇಕಾದರೆ ಕಡತ ತೆಗೆದು ನೋಡಲಿ. ನಮಗೆ ಆಸೆ ಇದೆ. ಒಂದೊಂದು ಬಾರಿ ಆಸೆ ಇದ್ದರೂ ಸಹ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಿ.ಟಿ.ರವಿಯವರೆ, ಕಲಬುರಗಿಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಏನಾದರೂ ಜಾಗ ಇದ್ದರೆ ಹೇಳಿ ಎಂದು ಅವರ ಹತ್ತಿರ ಹೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಜಾಗವನ್ನು ಹುಡುಕುವುದು ಸರ್ಕಾರದ ಜವಾಬ್ದಾರಿ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ನಾನು ನಿಶ್ಚಿತವಾಗಿಯೂ ಡಿ.ಪಿ.ಎ.ಆರ್.ನವರಿಗೆ ಪತ್ರ ಬರೆದಿದ್ದೇನೆ. ನಿಮ್ಮ ಪತ್ರದ ಜೊತೆಗೆ ನನ್ನ ಪತ್ರ ಸಹ ಹೋಗಿದೆ. ಇದರ ಬಗ್ಗೆ ಡಿ.ಪಿ.ಎ.ಆರ್.ನವರ ಬಳಿ ಮಾತನಾಡುತ್ತೇನೆ. ಈಗ ಎಷ್ಟು ಸಾಧ್ಯವಾಗುತ್ತದೆ ಮತ್ತು ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರ ಏನು ಆಸೆ ಇದೆ, ಅವರಿಗೆ ಮತ್ತೆ ಏನೂ ಬೇಡ. ಅವರಿಗೆ ಮೂರ್ತಿ ಒಂದು ಬೇಕು. ನಿಶ್ಚಿತವಾಗಿ ಮೂರ್ತಿ ಕೂರಿಸುವುದಕ್ಕೆ ಶತಾಯಗತಾಯ ನಾನು ನೂರಕ್ಕೆ ನೂರರಷ್ಟು ಪರಿಶೀಲನೆ ಮಾಡುತ್ತೇನೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಈ ಮೂರ್ತಿ ಸ್ಥಾಪನೆಗೆ ಸಂಬಂಧಪಟ್ಟಂತೆ ಬೆಳಗಾವಿ ಅಧಿವೇಶನದಲ್ಲಿ ಮಾತನಾಡುವ ಸಂದರ್ಭದಲ್ಲಿ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ, ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ರವರು ಇದ್ದರು. ಅವರು ಎಲ್ಲರೂ ಕೂಡಿ ಒಪ್ಪಿಗೆ ಕೊಟ್ಟಿದ್ದಾರೆ. ಅಂದರೆ, ನಾವು ಬೆಂಗಳೂರಿನಲ್ಲಿ ಮೂರ್ತಿ ಸ್ಥಾಪನೆ ಮಾಡುತ್ತೇವೆ. ಮತ್ತೆ ನಾವೆಲ್ಲರೂ ಸಹ support ಮಾಡುತ್ತೇವೆಂದು ಹೇಳಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಏನೆಂದರೆ, ಅವರು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಪ್ರಿಯಾಂಕ್ ಖರ್ಗೆ ಯವರನ್ನು ಭೇಟಿ ಮಾಡಲಿ. ಅವರೆಲ್ಲರನ್ನು ಕರೆದುಕೊಂಡು ಹೋಗಿ, ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಿ. ಈಗ ನಾಲ್ವಡಿ ಕೃಷರಾಜ ಒಡೆಯರು ರಾಜರಾಗಿದ್ದಾಗ, ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟು ಕಟ್ಟಬೇಕೆಂದು ಮಹಾರಾಜರನ್ನು ಕೇಳುವುದಕ್ಕೆ ಹೋಗಿದ್ದರಂತೆ. ಅವರು ಮಹಾರಾಜರ ಮುಂದೆ ಹೋಗುವುದಕ್ಕಿಂತ ಮುಂಚೆ ಒಬ್ಬ ಮನುಷ್ಯ ಅವರನ್ನು ಏನು ಕೇಳಿದನಂತೆ ಎಂದರೆ, ಯಾರೂ ಸಹ ಮಹಾರಾಜರ ಮುಂದೆ ಹೋಗುವಂತಹ ಧೈರ್ಯವನ್ನೇ ಮಾಡುವುದಿಲ್ಲ. ನೀವು ಹೇಗೆ ಇಷ್ಟು ಧೈರ್ಯವಾಗಿ ರಾಜರನ್ನು ಕೇಳುತ್ತಿದ್ದೀರಿ ಎಂದು ಕೇಳಿದಾಗ, ಅದಕ್ಕೆ ಅವರು ನಾನು ಒಂದು ಕಡೆ ಕೆಲಸ ಆಗಬೇಕು. ಇಲ್ಲವಾದರೆ ರಾಜೀನಾಮೆ ಪತ್ರ ತೆಗೆದುಕೊಂಡು ಹೋಗುತ್ತೇನೆ. ಆಗ ಅವರು ಏನಾದರೂ ಹೇಳಿದರೆ ರಾಜೀನಾಮೆ ಕೊಟ್ಟುಬರುತ್ತೇನೆಂದು ಹೇಳಿದರಂತೆ. ಮಾನ್ಯ ಸಚಿವರು ಅಂತಹ ಧೈರ್ಯವನ್ನು ತೋರಿಸಿ, ಮಾನ್ಯ ತಂಗಡಗಿ ಶಿವರಾಜ ಸಂಗಪ್ಪನವರು ಹಿಂದುಳಿದ ವರ್ಗದಿಂದ ಬಂದಿರುವಂತಹವರು.

**ಶ್ರೀ ಶರವಣ.ಟಿ.ಎ.(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಸೆ ಇದೆ ಎಂದು ಮಾನ್ಯ ಸಚಿವರನ್ನು ದುಃಖಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ.

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮ ರಾಜೀನಾಮೆಗೆ ರೆಡಿಯಾಗಲಿ.

**ಶ್ರೀ ಸಿ.ಟಿ.ರವಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾನ್ಯ ಸಚಿವರಿಗೆ ಸರಿಯಾದ ಖೆಡ್ಡವನ್ನು ಹಾಕಿದ್ದಾರೆ. ಮಾನ್ಯ ಸಚಿವರು ಹುಷಾರಾಗಿರಲಿ.

**(ಗೊಂದಲ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಇದು ಧರ್ಮದ ವಿಷಯ. ದಯವಿಟ್ಟು ರಾಜಕೀಯ ಮಾಡದೇ ತಾವೆಲ್ಲರೂ ಇದಕ್ಕೆ ಬೆಂಬಲ ಕೊಡಬೇಕು. ಇಡೀ ಸದನಕ್ಕೆ ನಾನು ಕೈ ಮುಗಿಯುತ್ತೇನೆ. ನನಗೆ ಬೆಂಬಲ ನೀಡಿ. ಯಾರೂ ರಾಜಕೀಯ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಮಾಡಬೇಕು. ಇಲ್ಲವೇ ರಾಜೀನಾಮೆ ಕೊಡಬೇಕು. ಮಾನ್ಯ ಸಚಿವರಿಗೆ ಈ ಎರಡೇ ದಾರಿಗಳು ಉಳಿದಿರುವುದು. ಅದನ್ನು ಸರಿಪಡಿಸಿಕೊಳ್ಳಲಿ.

**(ಗೊಂದಲ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಆ ಶರಣರು ಈ ಶರಣರು ಎಂದು 63 ಜನರ ಹೆಸರು ಹೇಳಿ. ನಮ್ಮ ಶರಣರಲ್ಲಿಯೇ ಜಗಳ ಹತ್ತಿಸುವಂತಹ ಕೆಲಸ ಮಾಡುವುದು ಬೇಡ. ಅದು ಒಬ್ಬರೇ ಒಬ್ಬ ಶರಣರು ಅದು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಸ್ಥಾಪನೆಯ ಬಗ್ಗೆ ನಾವು ಕೇಳಿದ್ದೇವೆ. ಮಾನ್ಯ ಸಚಿವರು ಮೂರ್ತಿ ಸ್ಥಾಪಿಸುವಂತಹ ಕೆಲಸ ಮಾಡಬೇಕು.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ ರವರಿಗೆ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರ ಗಾಳಿ ಬೀಸಿರಬಹುದು. ನಾನು ವಿರೋಧ ಪಕ್ಷದವರದು ಎಂದು ಹೇಳಿದೆ. ಈಗ ನಾವು ಜಾಗವನ್ನು identify ಮಾಡುತ್ತೇವೆ. ಮತ್ತೆ ಇದನ್ನು ಪರಿಶೀಲನೆ ಮಾಡುತ್ತೇವೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮುಂಚೆ ಹೇಳಿದ್ದನ್ನೇ ಹೇಳಿದರೆ ಹೇಗೆ ಆಗುತ್ತದೆಂದು ತಾವು ಹೇಳಿ. ಮಾನ್ಯ ಸಚಿವರು ಹಿಂದುಳಿದ ವರ್ಗದ ಅತ್ಯಂತ ಪ್ರಭಾವಿ ಮಂತ್ರಿಗಳು. ಈಗ ಒಂದು ಮೂರ್ತಿ ಸ್ಥಾಪನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿಲ್ಲವೆಂದರೆ ಹೇಗೆ ಎಂದು ಹೇಳಿ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರರವರೆ, ಸಾಕು ಬಿಡಿ. ನಾನು ಹೇಳುತ್ತೇನೆ. ಈಗ ತಾವು ಕುಳಿತುಕೊಳ್ಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಆಗಲೇ ಹೇಳಿದ್ದರೆ ನಾನು ಬಂದು ಕುಳಿತುಕೊಳ್ಳುತ್ತಿದ್ದೆ. ಅದನ್ನು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಸ್ಥಾಪಿಸುವಂತೆ ತಿಳಿಸಿ. ಅಲ್ಲಿ ಜಾಗವಿದೆ.

**ಸಭಾಪತಿಯವರು:-** ಆಯಿತು ಹೇಳುತ್ತೇನೆ. ಆಮೇಲೆ ನಾನು ಕರೆಯುತ್ತೇನೆ. ಈಗ ತಾವು ಕುಳಿತುಕೊಳ್ಳಿ.

**೮) ಗಮನ ಸೆಳೆಯುವ ಸೂಚನೆಗಳು**

**ಇ) ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿಗೋಶನ್ ಆಸ್ಪತ್ರೆಗಳನ್ನು ವಿಭಾಗೀಯ ಅಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸುಮಾರು ೮ ಜಿಲ್ಲೆಗಳಿಗೆ ಕೇಂದ್ರವನ್ನಾಗಿ ಮಾರ್ಪಡಿಸಬೇಕು ಎನ್ನುವ ಕುರಿತು.**

---

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿಗೋಶನ್ ಆಸ್ಪತ್ರೆಗಳನ್ನು ವಿಭಾಗೀಯ ಅಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸುಮಾರು ೮ ಜಿಲ್ಲೆಗಳಿಗೆ ಕೇಂದ್ರವನ್ನಾಗಿ ಮಾರ್ಪಡಿಸಬೇಕು ಎನ್ನುವ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,..

ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ IPHS ಮಾನದಂಡಗಳಂತೆ ಹಾಗೂ ಅಗತ್ಯಕ್ಕೆ ತಕ್ಕಂತೆ ಸರ್ಕಾರವು ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಹಾಗೂ ಮಾನವ ಸಂಪನ್ಮೂಲಗಳನ್ನು ಒದಗಿಸುತ್ತಾ ಬಂದಿದೆ.

ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯು 905 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು ಹಾಗೂ ಲೇಡಿಗೋಶನ್ ಆಸ್ಪತ್ರೆಯು 272 ಹಾಸಿಗೆಗಳ ಸಾಮರ್ಥ್ಯ ಹೊಂದಿದೆ. ಮುಂದುವರೆದು 50 ಬೆಡ್‌ಗಳ Critical care block ಮಂಜೂರಾಗಿದ್ದು, ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಲೇಡಿಗೋಶನ್ ಆಸ್ಪತ್ರೆ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯಾಗಿ ಸ್ವತಂತ್ರವಾಗಿ ಕಾರ್ಯಾಚರಿಸುತ್ತಿದೆ.

ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯು ಖಾಸಗಿ ಸಹಭಾಗಿತ್ವದಲ್ಲಿ ಕೆ.ಎಂ.ಸಿ ವೈದ್ಯಕೀಯ ಕಾಲೇಜು ಆಸ್ಪತ್ರೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಸಾರ್ವಜನಿಕರಿಗೆ ಸೇವೆಯನ್ನು ನೀಡಲಾಗುತ್ತಿದೆ. ಪ್ರಸ್ತುತ ಆಸ್ಪತ್ರೆಯಲ್ಲಿ ಸುಮಾರು 700 ಸಿಬ್ಬಂದಿಗಳು (ವೈದ್ಯಕೀಯ, ಅರೆವೈದ್ಯಕೀಯ, ಕಚೇರಿ ಸಿಬ್ಬಂದಿಗಳು ಖಾಯಂ, ಗುತ್ತಿಗೆ ಮತ್ತು ಹೊರಗುತ್ತಿಗೆ ಒಳಗೊಂಡಂತೆ) ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.

ಮಂಗಳೂರು ಸ್ಮಾರ್ಟ್‌ಸಿಟಿ ವತಿಯಿಂದ ನಿರ್ಮಾಣಗೊಂಡ ಹೊಸ ಸರ್ಜಿಕಲ್ ಬ್ಲಾಕ್ ಕಟ್ಟಡದಲ್ಲಿ 10Modular OT ಗಳು ಮತ್ತು 180 ಬೆಡ್‌ಗಳಿರುವ ಹೊಸ ಸರ್ಜಿಕಲ್ ಬ್ಲಾಕ್ ಕಟ್ಟಡ ನಿರ್ಮಾಣಗೊಂಡಿದ್ದು. ಈ ಆಸ್ಪತ್ರೆಯಲ್ಲಿ ಡಯಾಲಿಸಿಸ್ ವಿಭಾಗವು ನೆಫ್ರೊಪ್ಲಸ್ ಸಂಸ್ಥೆಯ ವತಿಯಿಂದ ಕಾರ್ಯ ನಿರ್ವಹಿಸುತ್ತಿದ್ದು, 235 ರೋಗಿಗಳು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದಾರೆ.

ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯು ರಿಜನಲ್ ಬ್ಲಡ್ ಟ್ರಾನ್ಸ್‌ಫ್ಯೂಷನ್ ಕೇಂದ್ರವನ್ನು ಹೊಂದಿರುತ್ತದೆ. ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ DRTB Centre ಹಾಗೂ ಸಿಬಿನ್ಯಾಟ್ ವಿಭಾಗವು ಯಶಸ್ವಿಯಾಗಿ ಕಾರ್ಯಾಚರಿಸುತ್ತಿದೆ.ಹೊಸ ಸರ್ಜಿಕಲ್ ಬ್ಲಾಕ್‌ನ ತಳ ಅಂತಸ್ತಿನಲ್ಲಿ ಕೆಎಂಸಿ ವತಿಯಿಂದ ಕ್ಯಾಥ್‌ಲ್ಯಾಬ್ ನಿರ್ಮಾಣ ಪ್ರಗತಿಯಲ್ಲಿದೆ.

ಮುಂದುವರೆದು ಇನ್‌ಫೋಸಿಸ್ ಫೌಂಡೇಶನ್ ವತಿಯಿಂದ 200 ಹಾಸಿಗೆಗಳ ಸಾಮರ್ಥ್ಯದ ರೀಜನಲ್ ಅಡ್ವಾನ್ಸ್ಡ್ ಪೀಡಿಯಾಟ್ರಿಕ್ ಕೇರ್ ಸೆಂಟರ್ (ಆರ್‌ಎಪಿಸಿಸಿ) ಕಾರ್ಯ ನಿರ್ವಹಿಸುತ್ತಿದ್ದು, ಮಕ್ಕಳಿಗೆ ಉನ್ನತ ಮಟ್ಟದ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಆರೋಗ್ಯ ಇಲಾಖೆಯಲ್ಲಿ ಜಿಲ್ಲಾ ಆಸ್ಪತ್ರೆಯನ್ನು ವಿಭಾಗೀಯ ಮಟ್ಟದ ಆಸ್ಪತ್ರೆಯನ್ನಾಗಿ ಘೋಷಿಸುವ ಯಾವುದೇ ರೀತಿಯ ಕಾರ್ಯಕ್ರಮಗಳಾಗಲಿ ಅಥವಾ ಮಾರ್ಗಸೂಚಿಗಳಾಗಲಿ ಇರುವುದಿಲ್ಲ. ಆದುದರಿಂದ, ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯನ್ನು ಈ ರೀತಿ ವಿಭಾಗೀಯ ಮಟ್ಟದ ಆಸ್ಪತ್ರೆ ಘೋಷಿಸಲು ಬರುವುದಿಲ್ಲ. ಮುಂದುವರೆದು, ಈಗಾಗಲೇ ಅಗತ್ಯಕ್ಕೆ ತಕ್ಕಂತೆ ಎಲ್ಲಾ ಸೌಕರ್ಯಗಳನ್ನು ಒದಗಿಸುತ್ತಾ ಇರುವುದರಿಂದ ಈ ರೀತಿ ವಿಭಾಗೀಯ ಮಟ್ಟದ ಆಸ್ಪತ್ರೆ ಘೋಷಿಸುವ ಪ್ರಯೋಜನೆ ಕಾಣುವುದಿಲ್ಲ.

ಸಂಖ್ಯೆ: ಆಕುಕ 08 ಎಸ್‌ಬಿವಿ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಮಂಗಳೂರಿನ ಪ್ರತಿಷ್ಠಿತ ವೆನ್‌ಲಾಕ್ ಮತ್ತು ಲೇಡಿಗೋಶನ್ ಆಸ್ಪತ್ರೆಗಳನ್ನು ವಿಭಾಗೀಯ ಆಸ್ಪತ್ರೆಗಳನ್ನಾಗಿ ಘೋಷಣೆ ಮಾಡಿ ಎಂದು ಕೇಳಿಕೊಂಡಿದ್ದಾರೆ. ಅವರ ಉದ್ದೇಶ ಇದನ್ನು ಇನ್ನಷ್ಟು ಮೇಲ್ದರ್ಜೆಗೆ ಏರಿಸುವುದರಿಂದ ಅದಕ್ಕೆ ಇನ್ನೂ ಹೆಚ್ಚಿನ ಬಿರುದು ಬರಲಿ ಎಂಬ ಉದ್ದೇಶದಿಂದ ಹೇಳುತ್ತಿದ್ದಾರೆಂದು ನಾನು ಅಂದುಕೊಂ

ಡಿದ್ದೇನೆ. ಈಗಾಗಲೇ ಆ ಆಸ್ಪತ್ರೆ ಸುಮಾರು 905 ಹಾಸಿಗೆಗಳಿರುವಂತಹ ಆಸ್ಪತ್ರೆಯಾಗಿದೆ. ಮತ್ತೆ ನಾವು ಇತ್ತೀಚಿನ ದಿನಗಳಲ್ಲಿ 50 ಹಾಸಿಗೆಗಳ Critical Care Block ನ ಕಾಮಗಾರಿಯನ್ನು ಪ್ರಾರಂಭ ಮಾಡಿಸಿದ್ದೇವೆ. ಅಲ್ಲಿ ಹೊಸ Surgical Block ಕಟ್ಟಡಕ್ಕೆ ಏನು ಹಣಕಾಸಿನ ಕೊರತೆ ಇತ್ತು, ಅದನ್ನು ಸಹ ನೀಗಿಸಿ ಅದನ್ನು Smart Cities Mission ಅಡಿಯಲ್ಲಿ ತೆಗೆದುಕೊಂಡು, ಅದೂ ಕೂಡ ಉದ್ಘಾಟನೆಯಾಗಿದೆ. ಈಗ Surgical Block ನಲ್ಲಿ Cath Lab (Catheterization Laboratory) ಅನ್ನು ಮಾಡತಕ್ಕಂಥದ್ದು ಕೂಡ ಆಗುತ್ತಿದೆ. ಸಾಮಾನ್ಯವಾಗಿ ಜಿಲ್ಲಾಸ್ಪತ್ರೆಯಲ್ಲಿ ಇಷ್ಟೆಲ್ಲಾ ಇರುವುದಿಲ್ಲ. ಆದರೆ, ಇದು ವಿಶೇಷವಾದಂತಹ ಸೌಲಭ್ಯಗಳಿರುವಂತಹ ಒಂದು ಆಸ್ಪತ್ರೆ. ಬಹುಶಃ ಇಡೀ ರಾಜ್ಯದಲ್ಲಿಯೇ ಇಷ್ಟೊಂದು ಸೇವೆಗಳನ್ನು ನೀಡತಕ್ಕಂತಹ ಸರ್ಕಾರಿ ಜಿಲ್ಲಾಸ್ಪತ್ರೆ ಯಾವುದೂ ಇಲ್ಲ. ಈ ಆಸ್ಪತ್ರೆಗೆ ಎಲ್ಲಾ ಕಡೆಗಳಿಂದ ಜನರು ಬರುತ್ತಾರೆ. ಅಂದರೆ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಿಂದ ಈ ವೆನ್‌ಲಾಕ್ ಮತ್ತು ಲೇಡಿಗೋಶನ್ ಆಸ್ಪತ್ರೆಗೆ ಬರುತ್ತಾರೆ. ಏಕೆಂದರೆ, ಇಲ್ಲಿ ಒಳ್ಳೆಯ ಸೇವೆ ಸಿಗುತ್ತದೆ ಎಂದು. ಅಲ್ಲಿ ಎಲ್ಲಾ ರೀತಿ ವೈದ್ಯರು ಇದ್ದಾರೆ.

ಕೆ.ಎಂ.ಸಿ. (Karnataka Medical Council) ಜೊತೆಗೆ tie-up ಇರುವುದರಿಂದ, ಪಿ.ಪಿ.ಪಿ. (Public-Private Partnership) ಮಾದರಿಯಲ್ಲಿ ಅಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಸಿಗುತ್ತದೆಂದು ಬರುತ್ತಾರೆ. ಮಾನ್ಯ ಸದಸ್ಯರ ಉದ್ದೇಶ ಇದನ್ನು ಇನ್ನೂ ಮೇಲ್ದರ್ಜೆಗೇರಿಸಿ ಎಂದು. ನಾವು ಈಗಾಗಲೇ ಈ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಮ್ಮಲ್ಲಿ ಎಲ್ಲೂ ಕೂಡ ವಿಭಾಗೀಯ ಆಸ್ಪತ್ರೆ ಎಂದು ಯಾವುದೇ ರೀತಿಯ ಹೆಸರು ಇಲ್ಲ.

(ಮುಂದು)

(127) 06.03.2025 04.20 LL-KS **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ದಿನೇಶ್ ಗುಂಡುರಾವ್(ಮುಂದು):-**

ಜಿಲ್ಲಾ ಆಸ್ಪತ್ರೆ ಅಥವಾ ಸಬ್ ಡಿವಿಷನಲ್ ಆಸ್ಪತ್ರೆ ಎಂದು ಹೇಳುತ್ತಾರೆ ಅಥವಾ ತಾಲ್ಲೂಕು ಆಸ್ಪತ್ರೆ ಎಂದು ಇರುವಂಥದ್ದು. ಆದುದರಿಂದ, ಇದೊಂದು ಅತ್ಯಂತ ದೊಡ್ಡ ವ್ಯಾಪ್ತಿ ಹೊಂದಿದಂತಹ ಆಸ್ಪತ್ರೆಯಾಗಿದೆ. ಹಾಗಾಗಿ, ಈ ಆಸ್ಪತ್ರೆಗಳಲ್ಲಿ ಸೇವೆಗಳನ್ನು ಇನ್ನು ಉತ್ತಮ ಮಟ್ಟಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸ ಮಾಡುತ್ತಿದ್ದೇವೆ. ಅಲ್ಲಿ ಹೊಸದಾಗಿ ಓಪಿಡಿ ಬ್ಲಾಕ್ ಅನ್ನು ನಿರ್ಮಾಣ ಮಾಡುವುದಕ್ಕೆ ನಾವು propose ಮಾಡುತ್ತಿದ್ದೇವೆ. ಜೊತೆಗೆ, ಅಲ್ಲಿ ಡೇ ಕೇರ್ ಕಿಮೋಥೆರಪಿ ಕೇಂದ್ರವನ್ನು ಕೇಂದ್ರ ಸರ್ಕಾರ ಕಳೆದ ಆಯವ್ಯಯದಲ್ಲಿ ಏನು ಘೋಷಣೆ ಮಾಡಿದ್ದಾರೆ, ಕಳೆದ 6 ತಿಂಗಳ ಹಿಂದೆಯೇ ನಮ್ಮ ರಾಜ್ಯದಲ್ಲಿ ಈ ಪ್ರಕ್ರಿಯೆ ಶುರು ಮಾಡಿರುತ್ತೇವೆ. ಈಗ ಆ ಡೇ ಕೇರ್ ಕಿಮೋಥೆರಪಿಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಈ ರೀತಿಯ ವಿಭಿನ್ನ ಸೇವೆಗಳು ಉನ್ನತ ಮಟ್ಟದಲ್ಲಿ ಸೂಪರ್ ಸ್ಪೆಷಾಲಿಟಿಯನ್ನು ಒದಗಿಸುವಂತಹ ಆಸ್ಪತ್ರೆಯಾಗಿದೆ. ಆದರೆ, ನಾವು ಆ ಆಸ್ಪತ್ರೆಯನ್ನು ಸೂಪರ್ ಸ್ಪೆಷಾಲಿಟಿ ಎಂದು ಕರೆಯುವುದಕ್ಕೆ ಹೋದರೆ, ಅದು ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಇದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಸ್ಪತ್ರೆಯಾಗಿದೆ. ಆದುದರಿಂದ, ಹೆಸರಿನಲ್ಲಿ ಬಹುಶಃ ಏನೂ ಇಲ್ಲ. ಹಾಗಾಗಿ, ಆಸ್ಪತ್ರೆಯನ್ನು ಇನ್ನೂ ಮೇಲ್ದರ್ಜೆಗೆ ತೆಗೆದುಕೊಂಡು ಹೋಗೋಣ. ಜೊತೆಗೆ, ಈ ವರ್ಷದ ಆಯವ್ಯಯದಲ್ಲಿ ವೆನ್‌ಲಾಕ್ ಆಸ್ಪತ್ರೆಗೆ ಹೆಚ್ಚಿನ ಅನುದಾನ ಕೊಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಅದರಂತೆ, ಈ ಆಸ್ಪತ್ರೆಯನ್ನು ಇನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗೋಣ. ಬಹುಶಃ ಹೆಸರಿನಲ್ಲಿ ಬದಲಾವಣೆ ಮಾಡಿದ ತಕ್ಷಣ ಏನೂ ಬದಲಾವಣೆ ಆಗುವುದಿಲ್ಲ. ಅಲ್ಲದೇ, ಆ ರೀತಿ ಹೆಸರನ್ನು ನಾವು ಎಲ್ಲಿಯೂ ಕೂಡ ಕೊಡುವಂಥದ್ದು ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂಥದ್ದರಲ್ಲಿ ಸತ್ಯ ಇದೆ ಮತ್ತು ಅವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಹೌದು. ಹಾಗಾಗಿ, ಅವರ ಸದರಿ ಆಸ್ಪತ್ರೆ ಬಗ್ಗೆ ಎಲ್ಲಾ ವಿಷಯಗಳು ಗೊತ್ತಿದೆ. ನಾನು ಏತಕ್ಕೆ ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇನೆಂದರೆ, ಆ ಆಸ್ಪತ್ರೆಯಲ್ಲಿ ಪ್ರಸ್ತುತ 905 ಹಾಸಿಗೆ ಸಾಮರ್ಥ್ಯ ಇದೆ. ಲೇಡಿಗೋಶನ್ ಆಸ್ಪತ್ರೆ ಸೇರಿಸಿದರೆ, ಒಟ್ಟಾರೆಯಾಗಿ

1,215 ಹಾಸಿಗೆಗಳು ಸಾಮರ್ಥ್ಯ ಆಗುತ್ತದೆ. ಆದರೆ, ಅಲ್ಲಿರುವಂತಹ ಮೂಲಭೂತ ಸೌಕರ್ಯಗಳು ಅಂದರೆ, ಅಧಿಕೃತ ಸಿಬ್ಬಂದಿಗಳು ಇರುವಂಥದ್ದು ಕೇವಲ 450 ಹಾಸಿಗೆ ಸಾಮರ್ಥ್ಯಕ್ಕೆ ಇರುವಂತಹ ಸಿಬ್ಬಂದಿಗಳು ಆಗಿರುತ್ತಾರೆ. ಪ್ರಸ್ತುತ ಆ ಆಸ್ಪತ್ರೆಯಲ್ಲಿ ಆಡಳಿತಾಧಿಕಾರಿ ಇಲ್ಲ; ಆರ್ಥಿಕ ಅಧಿಕಾರಿಗಳು ಇಲ್ಲ; ಸರ್ಕಾರದಿಂದ ಕೆ.ಎ.ಎಸ್. ಮಟ್ಟದ ಒಬ್ಬ ಅಧಿಕಾರಿ ಕೂಡ ಅಲ್ಲಿ ಇಲ್ಲ. ಸದರಿ ಆಸ್ಪತ್ರೆಯಲ್ಲಿ ಪ್ರತಿ ವರ್ಷ ಸುಮಾರು 25 ರಿಂದ 30 ಕೋಟಿ ವ್ಯವಹಾರ ಆಗುತ್ತಿದೆ. ಆದರೆ, ಆ ಆಸ್ಪತ್ರೆಗೆ ಅಗತ್ಯವಿರುವ ಯಾವುದೇ ಖರೀದಿ ಮಾಡುವುದಕ್ಕೆ ಆಗುತ್ತಿಲ್ಲ. ಪ್ರಸ್ತುತ ಆ ಆಸ್ಪತ್ರೆಗೆ ಗರಿಷ್ಠ 2 ಕೋಟಿ ರೂಪಾಯಿವರೆಗೆ ವ್ಯವಹಾರ ಮಾಡಬಹುದಾಗಿರುತ್ತದೆ. ಅದಕ್ಕಿಂತಲೂ ಜಾಸ್ತಿ ವ್ಯವಹಾರ ಮಾಡುವುದಕ್ಕೆ ಇಲ್ಲ. ಒಂದು ವೇಳೆ ಅದಕ್ಕಿಂತಲೂ ಜಾಸ್ತಿ ವ್ಯವಹಾರ ಮಾಡಬೇಕಾದರೆ ರಾಜ್ಯ ಮಟ್ಟಕ್ಕೆ ಬರಬೇಕು. ಆ ಆಸ್ಪತ್ರೆಗೆ ಸುಮಾರು 15 ಜಿಲ್ಲೆಗಳಿಂದ ರೋಗಿಗಳು ಬರುತ್ತಿದ್ದು, ಪ್ರತಿ ದಿನಕ್ಕೆ 1,500 ರಿಂದ 2,000 ಹೊರರೋಗಿಗಳು ಬರುತ್ತಾರೆ ಮತ್ತು 200 ರಿಂದ 300 ಒಳರೋಗಿಗಳು ದಾಖಲಾಗುತ್ತಾರೆ. ಮಾನ್ಯ ಸಚಿವರು ಸೂಪರ್ ಸ್ಪೆಷಾಲಿಟಿ ಇಲ್ಲವೆಂದು ಹೇಳಿದ್ದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ, ಜಿಲ್ಲಾಧಿಕಾರಿಗಳು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರಿಗೆ ದಿನಾಂಕ: 23.07.2024 ರಂದು ಪತ್ರ ಬರೆದು, "ಈ ಆಸ್ಪತ್ರೆಯಲ್ಲಿ 90 ರಿಂದ 100 ಒಳರೋಗಿಗಳಾಗಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಆಸ್ಪತ್ರೆಯ ತಜ್ಞತೆಯ ಸೇವೆಯು ವಿಶೇಷ ತಜ್ಞವುಳ್ಳ ಸೇವೆಗಳಾದ ನೆಫ್ರೋಲಜಿ, ಪಲ್ಮಾನೋಲಜಿ, ಪೀಡಿಯಾಟ್ರಿಕ್ ಸರ್ಜರಿ ಮುಂತಾದ ಸೇವೆಗಳನ್ನು ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ಇವೊತ್ತಿನ ದಿವಸ ಕೇವಲ 400 ಮಂದಿಯ ಸಿಬ್ಬಂದಿಯನ್ನು ಇಟ್ಟುಕೊಂಡು 1,215 ರೋಗಿಗಳಿಗೆ ಚಿಕಿತ್ಸೆ ಕೊಡಿ ಎಂದರೆ, what does it mean? ಅಲ್ಲಿ ಎಷ್ಟು ಸಿಬ್ಬಂದಿಗಳನ್ನು ಕೊಟ್ಟಿದ್ದಾರೆ? ಅದಕ್ಕೆ ನಾನು ಹೇಳುವುದೇನೆಂದರೆ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಎಂದು ಹೇಳುತ್ತಿದ್ದೇನೆ. ಬೇರೆ ಜಿಲ್ಲಾ ಆಸ್ಪತ್ರೆಗಳಲ್ಲಿ 200 ರಿಂದ 250 ಹಾಸಿಗೆ ಸಾಮರ್ಥ್ಯಕ್ಕಿಂತಲೂ ಜಾಸ್ತಿ ಇರುವುದಿಲ್ಲ. ಆದರೆ, ಈ ಆಸ್ಪತ್ರೆಯಲ್ಲಿ 1,215 ಹಾಸಿಗೆ ಸಾಮರ್ಥ್ಯ ಇದ್ದು, 300 ರಿಂದ 400 ಸಿಬ್ಬಂದಿಗಳು ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗಾಗಿ, ಈ ಆಸ್ಪತ್ರೆಯನ್ನು ಸರಿಯಾಗಿ ರನ್ ಮಾಡುವುದಕ್ಕೆ ಆಗುತ್ತಿಲ್ಲ. ಅಲ್ಲದೇ, ಈ ಆಸ್ಪತ್ರೆಯಲ್ಲಿ B.Sc. (Bachelor of Science) Nursing course, GNM (General Nursing and Midwifery) Nursing course ಹಾಗೂ ಪ್ಯಾರಾಮೆಡಿಕಲ್ ಕೋರ್ಸ್ ಇದೆ, ಇದೆಲ್ಲದಕ್ಕೂ ಒಳ್ಳೆಯ ಅವಕಾಶ ಇದೆ.

**ಸಭಾಪತಿಯವರು:–** ಏನು ಮಾಡಬೇಕೆಂಬುದನ್ನು ಹೇಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನನ್ನ ಸಲಹೆ ಏನೆಂದರೆ ಈ ಆಸ್ಪತ್ರೆ ಬಗ್ಗೆ ಹೇಳುವುದಲ್ಲ. ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರಿಗೆ ಪತ್ರ ಬರೆದು ಅದರಲ್ಲಿ, "ಈ ಆಸ್ಪತ್ರೆಯ ಸೇವೆಯನ್ನು ಪ್ರಾದೇಶಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿದ್ದಲ್ಲಿ, ರಾಜ್ಯದ 15 ಜಿಲ್ಲೆಯ ರೋಗಿಗಳಿಗೆ ಅನುಕೂಲವಾಗುವುದರ ಜೊತೆಗೆ, ಆಸ್ಪತ್ರೆಯಲ್ಲಿ ಹೆಚ್ಚಿನ ಗುಣಮಟ್ಟದ ಸೇವೆಯನ್ನು ನೀಡಬಹುದಾಗಿದೆ." ಎಂದು ಹೇಳಿರುತ್ತಾರೆ. ಇದು ನಾನು

ಹೇಳಿರುವುದಲ್ಲ. ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸಹಾಯಕ ಆಡಳಿತಾಧಿಕಾರಿಯ ಹುದ್ದೆ ಮಾತ್ರ ಮಂಜೂರಾಗಿದ್ದು...

**ಸಭಾಪತಿಯವರು:–** ಆ ಪತ್ರವನ್ನು ತಾವು ಓದಬೇಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಜಿಲ್ಲಾ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸಹಾಯಕ ಆಡಳಿತಾಧಿಕಾರಿಯ ಹುದ್ದೆ ಮಾತ್ರ ಮಂಜೂರಾಗಿದ್ದು, ಈ ಸೇವೆಗೆ ಹೆಚ್ಚುವರಿಯಾಗಿ ಮುಖ್ಯ ಆಡಳಿತಾಧಿಕಾರಿಯಾಗಿ ಓರ್ವ ಕೆ.ಎಸ್.ಎಸ್. ಅಧಿಕಾರಿ ಮತ್ತು ಓರ್ವ ಮುಖ್ಯ ಆರ್ಥಿಕ ಸಲಹೆಗಾರರ ಹುದ್ದೆಯನ್ನು ಒದಗಿಸಿದ್ದಲ್ಲಿ, ಸಾರ್ವಜನಿಕರ ಸೇವೆಗಾಗಿ ಖರೀದಿಸಲ್ಪಡುವ ವಿವಿಧ ಸಾಮಗ್ರಿಗಳ ಪ್ರಕ್ರಿಯೆಯಲ್ಲಿ ಪಾರದರ್ಶಕವಾಗಿ ಮತ್ತು ಸಕಾಲವಾಗಿ ಖರೀದಿಸಿ, ಪ್ರಕ್ರಿಯೆಯನ್ನು ಸುಲಭವಾಗಿ ಮಾಡಲು ಸಾಧ್ಯವಾಗುತ್ತದೆ" ಎಂದು ಹೇಳಿರುತ್ತಾರೆ. ಹಾಗಾಗಿ, ಓರ್ವ ಕೆಎಎಸ್ ಅಧಿಕಾರಿ, ಓರ್ವ ಮುಖ್ಯ ಆಡಳಿತಾಧಿಕಾರಿ ಮತ್ತು ಓರ್ವ ಆರ್ಥಿಕ ಸಲಹೆಗಾರರನ್ನು ನೇಮಕ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ಸಾಕು. ಸಚಿವರು ಉತ್ತರ ಹೇಳುತ್ತಾರೆ ಬಿಡಿ.

**ಶ್ರೀ ದಿನೇಶ್ ಗುಂಡುರಾವ್:–** ಮಾನ್ಯ ಸಭಾಪತಿಯವರೇ, ಐವನ್ ಡಿ'ಸೋಜಾರವರ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಉದ್ದೇಶದ ಪ್ರಕಾರ ಆಸ್ಪತ್ರೆಯ ಹೆಸರು ಬದಲಾಯಿಸಿದ ನಂತರ, ಇದೆಲ್ಲವೂ ಬಂದುಬಿಡುತ್ತದೆ ಎಂದೇನಿಲ್ಲಾ. ಏಕೆಂದರೆ, ಒಂದು ತಾಲ್ಲೂಕು ಆಸ್ಪತ್ರೆಯನ್ನು ಜಿಲ್ಲಾ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿದಾಗ, ಆ ಆಸ್ಪತ್ರೆಗೆ additional sanctioned posts, equipment's and infrastructure ಎಲ್ಲವೂ ಬರುತ್ತದೆ. ನಾನು ಇದನ್ನು ಪ್ರಾದೇಶಿಕ ಆಸ್ಪತ್ರೆ ಎಂದು ಘೋಷಣೆ ಮಾಡಿದ ತಕ್ಷಣ ಯಾವುದೇ ಒಂದು ಕಾನೂನಿನಡಿಯಲ್ಲಿ ಬರುವುದಿಲ್ಲ ಅಥವಾ ಇದರಿಂದಲೇ ಎಲ್ಲಾ ಅನುಕೂಲತೆಗಳು ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ, ಮಾನ್ಯ ಸದಸ್ಯರು ಹೇಳುತ್ತಿರುವ ಉದ್ದೇಶ ಏನೆಂದರೆ, ಈ ರೀತಿ ಘೋಷಣೆ ಮಾಡಿದರೆ, ಈ ಆಸ್ಪತ್ರೆಗೆ ಹೆಚ್ಚಿನ ಅನುದಾನ ಬರುತ್ತದೆ ಎಂದು ಅಂದುಕೊಂಡಿರಬಹುದು. ಆ ರೀತಿ ಏನೂ ಇರುವುದಿಲ್ಲ. ಪ್ರಸ್ತುತ ಇರುವಂಥ ಆಸ್ಪತ್ರೆಗೆ ನಾವು ಹೆಚ್ಚಿನ ಅನುದಾನ ಕೊಡಿಸುತ್ತಿದ್ದೇವೆ. ಜೊತೆಗೆ, ಈ ವರ್ಷದ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಕೊಡಬೇಕೆಂದು ಪ್ರಸ್ತಾವನೆ ಸಲ್ಲಿಸಿರುತ್ತೇನೆ ಮತ್ತು ಆ ಆಸ್ಪತ್ರೆಯಲ್ಲಿ ಮೆಡಿಕಲ್ ಕಾಲೇಜು ಇಲ್ಲದೇ ಇದ್ದರೂ ಸಹ, ಕೆ.ಎಂ.ಸಿ. (Karnataka Medical Council) ಜೊತೆ tie-up ಆಗಿರುವುದರಿಂದ, ಅವರ ಕಡೆಯಿಂದಲೂ ಸಾಕಷ್ಟು ಸಿಬ್ಬಂದಿ ಇದೆ. ಸಿಬ್ಬಂದಿಗಳು ಇರುವುದರಿಂದಲೇ ಈ ಆಸ್ಪತ್ರೆಗಳು ಚೆನ್ನಾಗಿ ನಡೆಯುತ್ತಿರುವುದು. ಆದರೂ ಕೂಡ ಇದು ಒಂದು ರೀತಿಯಲ್ಲಿ ಹೆಸರು ಬದಲಾವಣೆ ಮಾಡಿದರೆ, ಆ ಆಸ್ಪತ್ರೆ ಒಂದು ದೊಡ್ಡ ಮಟ್ಟದಲ್ಲಿರುವುದರಿಂದ ಅದಕ್ಕೆ ಒಂದು ವಿಶೇಷತೆ ದೊರಕುತ್ತದೆ ಎಂದು ಅವರ ಭಾವನೆ ಇದೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನಮ್ಮ ಅನೇಕ ಮುಖಂಡರುಗಳ ಭಾವನೆ ಇದೆ. ಹಾಗಾಗಿ, ವೆನ್‌ಲಾಕ್ ಆಸ್ಪತ್ರೆಯನ್ನು ಪ್ರಾದೇಶಿಕ ಆಸ್ಪತ್ರೆಯಾಗಿ ಘೋಷಣೆ ಮಾಡುವುದರಲ್ಲಿ ನಮ್ಮ ಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಘೋಷಣೆ ಮಾಡಿ ಎಂದು ಹೇಳಿರುತ್ತಾರೆ.

ಹಾಗಾಗಿ, ವೆನ್‌ಲಾಕ್ ಆಸ್ಪತ್ರೆಯನ್ನು ಪ್ರಾದೇಶಿಕ ಆಸ್ಪತ್ರೆ ಎಂದು ಘೋಷಣೆ ಮಾಡೋಣ. ಆದರೆ, ಅದರಿಂದಲೇ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಇಲ್ಲ. ಆದರೆ, ಹೆಸರು ಮಾತ್ರ ಬದಲಾವಣೆ ಮಾಡಿ, ಅದನ್ನು ಮೇಲ್ದರ್ಜೆಗೇರಿಸುತಕ್ಕಂತಹ ಅಥವಾ ಅಲ್ಲಿ ಇನ್ನು ಹೆಚ್ಚಿನ ಸೇವೆಗಳನ್ನು ನೀಡುವುದಕ್ಕೆ ನಮ್ಮ ಪ್ರಕ್ರಿಯೆ ಜಾರಿಯಲ್ಲಿದೆ. ಅದನ್ನು ನಾವು ಮುಂದುವರೆಸುತ್ತೇನೆಂದು ಹೇಳಿ, ಮಾನ್ಯ ಸದಸ್ಯರು ತಂದಿರುವಂತಹ ಪ್ರಸ್ತಾವನೆಯನ್ನು ನಾನು ಒಪ್ಪುತ್ತೇನೆಂದು ಸದನದ ಎಲ್ಲಾ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. **(ಗೊಂದಲ)** ಮಾನ್ಯ ಸದಸ್ಯರು ಹೇಳಿದ ಹಾಗೆ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ. **(ಗೊಂದಲ)** ಈ ವಿಷಯದಲ್ಲಿ ನನ್ನ ಒಂದು ನೈತಿಕತೆಯ ಜವಾಬ್ದಾರಿ ಕೂಡ ಇದೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಉಸ್ತುವಾರಿ ಸಚಿವರಿಗೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಚಾರದಲ್ಲಿ ನಾನು ಒಂದು ಸಲಹೆ ನೀಡುವುದೇನೆಂದರೆ, ಸುಮಾರು 15 ಜಿಲ್ಲೆಗಳಿಂದ ವೆನ್‌ಲಾಕ್ ಆಸ್ಪತ್ರೆಗೆ ರೋಗಿಗಳು ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಆದರೆ, ಮೂಲಭೂತ ಸೌಕರ್ಯಗಳಿಗಾಗಿ ಅಲ್ಲಿ ಹತ್ತಿರದಲ್ಲಿರುವ ಪಿಲಿಕುಳದಲ್ಲಿ ಒಂದು TB (Tuberculosis) Hospital ಗೆ ಸಂಬಂಧಪಟ್ಟಂತೆ, ಸುಮಾರು 8 ಎಕರೆ ಖಾಲಿ ಜಾಗ ಇದೆ. ನಾನು ಉಸ್ತುವಾರಿ ಸಚಿವರಿಗೆ ಈ ವಿಷಯವನ್ನು ಈಗಾಗಲೇ ಹೇಳಿರುತ್ತೇನೆ. ಅದರಂತೆ, ಆ TB Hospital ಇರುವಂತಹ ಜಾಗದಲ್ಲಿ ಯಾವುದಾದರೂ ಒಂದು ಯೂನಿಟ್ ಅನ್ನು ಪ್ರತ್ಯೇಕವಾಗಿ ಕ್ರಿಯೇಟ್ ಮಾಡಿದರೆ ಒಳ್ಳೆಯದು ಆಗುತ್ತದೆ ಎಂದು ಹೇಳುತ್ತೇನೆ. ಅದನ್ನು ಪರಿಗಣಿಸಬೇಕೆಂದು ಹೇಳುತ್ತೇನೆ. ಏಕೆಂದರೆ, ಈಗಿರುವಂತಹ ವೆನ್‌ಲಾಕ್ ಆಸ್ಪತ್ರೆಯ ಜಾಗ congested ಆಗಿದೆ. ಆದುದರಿಂದ, TB hospital ಜಾಗದಲ್ಲಿ ಯಾವುದಾದರೂ ಸ್ಪೆಷಾಲಿಟಿ ಅಂದರೆ, ಚೈಲ್ಡ್ ಕೇರ್, ಹೆಲ್ತ್‌ಕೇರ್, ಹಾರ್ಟ್‌ಕೇರ್ ನಂತಹ ಸ್ಪೆಷಾಲಿಟಿಯನ್ನು ಅಲ್ಲಿ ತೆರೆಯಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**9) ನಿಯಮ 330 ರ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:- ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆ ಅಡಿ ಕಳೆದ 19 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಲ್ಯಾಬ್ ಟೆಕ್ನಿಷಿಯನ್, ಸ್ಟಾಫ್ ನರ್ಸ್ ಹಾಗೂ ಆಯುಷ್ ವೈದ್ಯರುಗಳನ್ನು ಖಾಯಂಗೊಳಸುವ ಬಗ್ಗೆ**

- - -

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಆಡಳಿತ ಪಕ್ಷದವರು 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆ ಅಡಿ ಕಳೆದ 19 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಲ್ಯಾಬ್ ಟೆಕ್ನಿಷಿಯನ್, ಸ್ಟಾಫ್ ನರ್ಸ್ ಹಾಗೂ ಆಯುಷ್ ವೈದ್ಯರುಗಳನ್ನು ಖಾಯಂಗೊಳಸುವ ಬಗ್ಗೆ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ದಿನೇಶ್ ಗುಂಡುರಾವ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,

ಹನ್ನೆರಡನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರು ಒಬ್ಬರು. ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವದ ಅಂಬಿಗರ ಚೌಡಯ್ಯನವರು ನೇರ ನಿರ್ಭೀತ ನುಡಿಗಳಿಗೆ ಪ್ರಸಿದ್ಧರು. ಅಂಬಿಗರ ಚೌಡಯ್ಯ ಎಂಬ ಅಂಕಿತನಾಮದಿಂದಲೇ ವಚನಗಳನ್ನು ರಚಿಸಿರುತ್ತಾರೆ.

ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ, 50 ವರ್ಷ ತುಂಬಿದ ಸವಿನೆನಪಿಗಾಗಿ ಕರ್ನಾಟಕ ಸಂಭ್ರಮ-50ರ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಅಭಿಯಾನದಡಿ ವರ್ಷಪೂರ್ತಿ ಕಾರ್ಯಕ್ರಮವನ್ನು ಆಚರಿಸಲಾಗಿದ್ದು, ಅದರ ಭಾಗವಾಗಿ ನಾಡದೇವಿ ಭುವನೇಶ್ವರಿ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲಾಗಿದೆ.

12ನೇ ಶತಮಾನದಲ್ಲಿ ಸಮಾಜ ಸುಧಾರಣೆಗಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು ಸೇವೆ ಸಲ್ಲಿಸಿದ ಬಸವಾದಿ ಶಿವಶರಣರು ಮತ್ತು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರನ್ನು ಒಳಗೊಂಡಂತೆ 160 ಕ್ಕಿಂತ ಹೆಚ್ಚು ಶಿವಶರಣರು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸುಧಾರಣೆಗೆ ಶ್ರಮಿಸಿರುತ್ತಾರೆ. ಶಿವಶರಣರ ವಿವರಗಳನ್ನು ಅನುಬಂಧದಲ್ಲಿರಿಸಿದೆ.

ಸದರಿ ಮನವಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಕಸಂವಾಪ್ರ 564 ಕಸಧ 2012, ದಿನಾಂಕ:11.06.2012ರಲ್ಲಿ ಸರ್ಕಾರದ / ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ / ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಯನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದ SLP (C) ಸಂಖ್ಯೆ 8519/2006ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:18.01.2013ರಂದು ನೀಡಿರುವ ತೀರ್ಪಿನಲ್ಲಿರುವ ಒಂದು ಅಂಶವು ಈ ಕೆಳಕಂಡಂತೆ ಇರುತ್ತದೆ.

".........State Government shall not grant any permission for installation of any statue or construction of any structure in public roads, pavements, sideways and other public utility places............"

ಸುಮಾರು 160 ಕ್ಕಿಂತ ಹೆಚ್ಚು ಶಿವಶರಣರು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸುಧಾರಣೆಗೆ ಶ್ರಮಿಸಿರುತ್ತಾರೆ. ಹಲವಾರು ಶಿವಶರಣರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ಬೇಡಿಕೆ ಇರುತ್ತದೆ. ಆದರೆ 160 ಕ್ಕಿಂತ ಹೆಚ್ಚು ಶಿವಶರಣರ ಪ್ರತಿಮೆಯನ್ನು ಸ್ಥಾಪಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಈ ಮಹಾನ್ ಚೇತನಗಳ ಶಿವಶರಣರ ಹೆಸರುಗಳನ್ನು ಒಂದೇ ಶಿಲೆಯಲ್ಲಿ ಕೆತ್ತಿಸಿ ಶಿಲಾಶಾಸನ ಮಾದರಿಯಲ್ಲಿ ಸ್ಥಾಪಿಸುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವತಿಯಿಂದ ಪರಿಶೀಲಿಸುವಂತೆ ತಿಳಿಸಲಾಗುತ್ತಿದೆ.

ಮಾನ್ಯ ಸಂಕನೂರರವರು ರಾಷ್ಟ್ರೀಯ ಆರೋಗ್ಯ ಅಭಿಯಾನ ಏನಿದೆ, ಅದರಡಿಯಲ್ಲಿ ಗುತ್ತಿಗೆ ನೌಕರರನ್ನು ನಾವು ಏನು ತೆಗೆದುಕೊಳ್ಳುತ್ತೇವೆ, ಅವರನ್ನು ಖಾಯಂಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಹೇಳಿರುತ್ತಾರೆ. ಏಕೆಂದರೆ, ಇದರಲ್ಲಿ ಬಹಳಷ್ಟು ಜನ ಸಿಬ್ಬಂದಿಗಳು ಇದ್ದಾರೆ. ಜೊತೆಗೆ, ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೂಡ ಕೊಟ್ಟಿರುತ್ತೇನೆ. ಅದೇನೆಂದರೆ, ಈ ಗುತ್ತಿಗೆ ನೌಕರರನ್ನು ಖಾಯಂಮಾತಿ ಮಾಡುವಂಥದ್ದಕ್ಕೆ ಸರ್ಕಾರ ತೀರ್ಮಾನ ಮಾಡಬೇಕಾಗಿರುತ್ತದೆ. ಇದು ನಮ್ಮ ಇಲಾಖೆಯ ಮಾತ್ರವಲ್ಲದೇ, ಎಲ್ಲಾ ಇಲಾಖೆಗಳಲ್ಲಿಯೂ ಸಮಸ್ಯೆ ಇರುತ್ತದೆ. ಒಂದು ಇಲಾಖೆಯಲ್ಲಿ ಖಾಯಂ ಮಾಡಿದರೆ, ಎಲ್ಲಾ ಇಲಾಖೆಗಳಲ್ಲಿಯೂ ಸಹ ಖಾಯಂಗೊಳಿಸಬೇಕಾದಂತಹ ಪರಿಸ್ಥಿತಿ ಬರುತ್ತದೆ. ಹಾಗಾಗಿ, ಇದನ್ನು ನಾನು ಪರಿಶೀಲನೆಗೆ ಇಟ್ಟುಕೊಂಡಿದ್ದೇವೆ. ಇದರಲ್ಲಿ ಇನ್ನೊಂದು ಸಮಸ್ಯೆ ಏನಿದೆಯೆಂದರೆ, ರಾಷ್ಟ್ರೀಯ ಅಭಿಯಾನ ಅಡಿಯಲ್ಲಿ ಬರುತ್ತದೆ. ಅಂದರೆ, ಎನ್‌ಹೆಚ್‌ಎಂ ಸ್ಕೀಮ್ ಇರುವವರೆಗೂ ಈ ಸಿಬ್ಬಂದಿಗಳು ಮುಂದುವರೆಯುತ್ತಾರೆ. ಒಂದು ವೇಳೆ ಕೇಂದ್ರದಲ್ಲಿ ಯಾವುದಾದರೂ ಎನ್‌ಹೆಚ್‌ಎಮ್ ಸ್ಕೀಮ್ ಅನ್ನು ನಿಲ್ಲಿಸಬೇಕು ಎಂದು ಹೇಳಿದರೆ, ಈ ಸ್ಕೀಮ್ ಸ್ಥಗಿತಗೊಳ್ಳುತ್ತದೆ. ಅದಕ್ಕೋಸ್ಕರ ನಾವು ಮುಂದಿನ ಹೆಜ್ಜೆ ಏನು ಇಡಬೇಕೆಂದು ನಾವು ಈಗ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಆದಾಗ್ಯೂ, ಈ ವಿಷಯದಲ್ಲಿ ಮುಂದೆ ಏನು ಮಾಡಬೇಕೆಂದು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇನೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಸಹ ನಾನು ಚರ್ಚೆ ಮಾಡುತ್ತೇನೆ.

(ಮುಂದು)

(128) 06.03.2025 4.30 ವೈಎಲ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದ ಉತ್ತರದಲ್ಲಿ 'ರಾಷ್ಟ್ರೀಯ ಆರೋಗ್ಯ ಅಭಿಯಾನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಈ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಅಭಿಯಾನದ ಅನುಷ್ಠಾನಕ್ಕೆ ಪಡೆದಿದ್ದು, ಅಭಿಯಾನ ಮುಕ್ತಾಯವಾದರೆ ಇವರ ನೇಮಕಾತಿಯು ಮುಕ್ತಾಯಗೊಳ್ಳುವ ಹಿನ್ನಲೆಯಲ್ಲಿ ಇವರುಗಳನ್ನು ರಾಜ್ಯ ಸರ್ಕಾರದಲ್ಲಿ ಜಾರಿಯಲ್ಲಿರುವ ಸೇವಾ

ನಿಯಮಗಳಂತೆ ಖಾಯಂಗೊಳಿಸಲು ಅವಕಾಶ ಇರುವುದಿಲ್ಲ' ಎಂದು ತಿಳಿಸಲಾಗಿದೆ. ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಆ ಯೋಜನೆಯು ಮುಕ್ತಾಯದ ಹಂತಕ್ಕೆ ಬಂದರೆ ರಾಜ್ಯ ಸರ್ಕಾರದೊಳಗೆ ಖಾಯಂಗೊಳಿಸಲು ಅವಕಾಶ ಇರುವುದಿಲ್ಲ ಎಂದು ಹೇಳಿದ್ದಾರೆ, ಒಪ್ಪಿಕೊಳ್ಳುತ್ತೇನೆ. ಆದರೆ, ಈ ವಿಚಾರವು ಮಾನ್ಯ ಸಚಿವರಿಗೆ ಗೊತ್ತಿದ್ದಾಗ್ಯೂ ಕೂಡಾ ಆ ನೌಕರರು ದೊಡ್ಡದಾಗಿ ಪ್ರತಿಭಟನೆ ನಡೆಸಿದಾಗ ಈಗಿನ ಮಾನ್ಯ ಸಚಿವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಯವರು ಇಬ್ಬರೂ ಹೋಗಿ 'ತಮ್ಮನ್ನು ಖಾಯಂಗೊಳಿಸುವುದು ನಮ್ಮ ಜವಾಬ್ದಾರಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಖಂಡಿತವಾಗಿ ಖಾಯಂಗೊಳಿಸುತ್ತೇವೆ' ಎಂದು ಹೇಳಿದ್ದಾರೆ. ಅದಲ್ಲದೇ ಅವರಿಬ್ಬರೂ ಮಾತನಾಡಿರುವ ವಿಡಿಯೋ ಇದ್ದು, ಆ ನೌಕರರು ಅವೆಲ್ಲವನ್ನೂ ಇಟ್ಟುಕೊಂಡಿದ್ದಾರೆ.

ಮಾನ್ಯ ಸಚಿವರು ಖಾಯಂಗೊಳಿಸುತ್ತಾರೆ ಎಂಬ ವಿಶ್ವಾಸ ಹೊಂದಿದ್ದು, ಖಾಯಂಗೊಳಿಸಿದರೆ ಅವರ ಭಾವಚಿತ್ರವನ್ನು ಮನೆಯೊಳಗೆ ಹಾಕಿಕೊಂಡು ಪೂಜೆ ಮಾಡುತ್ತಾರೆ. ಆಗ ಒಂದು ರೀತಿ ಹೇಳಿ, ಈಗ ಒಂದು ರೀತಿ ಹೇಳುವುದು ಸರಿಯಿಲ್ಲ. ಇಂತಹ ಒಂದು ದ್ವಂದ್ವ ನೀತಿ ಏತಕ್ಕೆ? ಆ ನೌಕರರಿಗೆ ಮೋಸ ಮಾಡಿದಂತಾಗುವುದಿಲ್ಲವೇ? ನೌಕರರ ಹತ್ತಿರ ಹೋಗಿ ಏನೆಂದು ಮಾತನಾಡಲಾಗಿದೆ? ಆ ನೌಕರರ ಹತ್ತಿರ ಹೋಗಿ 'ತಮ್ಮ ವಿಚಾರವನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಕಟಿಸುತ್ತೇವೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಖಾಯಂಗೊಳಿಸುತ್ತೇವೆ' ಎಂಬ ಭರವಸೆಯನ್ನು ಕೊಟ್ಟು ಬಂದಿದ್ದಾರೆ. ಮಾನ್ಯ ಸಚಿವರು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲವೆಂದರೆ, ವಚನ ಭ್ರಷ್ಟರಾಗುತ್ತಾರೆ. ಖಾಯಂಗೊಳಿಸಲು ಸಾಧ್ಯವಿಲ್ಲ ಎಂದು ಗೊತ್ತಿದ್ದರೆ ಮತ್ತೆ ಏತಕ್ಕೆ ಭರವಸೆ ನೀಡಬೇಕಾಗಿತ್ತು. ಆ ನೌಕರರು ಮಾನ್ಯ ಸಚಿವರ ಭರವಸೆಯ ಮೇಲೆ ವಿಶ್ವಾಸವನ್ನಿಟ್ಟುಕೊಂಡು ಮತ ಚಲಾಯಿಸಿದ್ದು, ಅದರಂತೆ ಅಧಿಕಾರಕ್ಕೆ ಬಂದಿದ್ದಾರೆ. ಅಧಿಕಾರಕ್ಕೆ ಬಂದು ಕುಳಿತುಕೊಂಡ ಮೇಲೆ ಖಾಯಂಗೊಳಿಸಲು ಆಗುವುದಿಲ್ಲ ಎಂದರೆ ಹೇಗೆ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಈ ರೀತಿ ಯಾರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ ಅಂಥವರು ಕರ್ನಾಟಕ ರಾಜ್ಯದಾದ್ಯಂತ ಸಾವಿರಗಟ್ಟಲೆ ಜನರು ಸ್ವಾತಂತ್ರ್ಯ ಉದ್ಯಾನವನಕ್ಕೆ ಬಂದು ಪ್ರತಿಭಟನೆ ನಡೆಸಿದ್ದು, ನಾವು ಸಹ ಅಲ್ಲಿಗೆ ಹೋಗಿ ನೋಡಿದ್ದೆವು. ನಾವು ಅಲ್ಲಿಗೆ ಹೋಗಿ ನೋಡಿದಾಗ ಆ ನೌಕರರು ಮಾತನಾಡುವಾಗ slogan ಮಾಡುತ್ತಿದ್ದರು. ನಮಗೆ ಅವರನ್ನು ನೋಡಿದಾಗ 'ಮೇಲೆ ಬಿಳಿ ಬಟ್ಟೆ, ಒಳಗೆ ಅರೆ ಹೊಟ್ಟೆ' ಇತ್ತು. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಸರ್ಕಾರವು ಖಾಯಂ ನೌಕರರಿಂದ ಏನೆಲ್ಲಾ ಕೆಲಸ ಮಾಡಿಸಿಕೊಳ್ಳುತ್ತದೆ, ಅಷ್ಟೇ ಕೆಲಸವನ್ನು ಆ ನೌಕರರು ಮಾಡುತ್ತಾರೆ. ಆದರೆ, ಖಾಯಂ ನೌಕರರಿಗೆ ಸಿಗುವಷ್ಟು ಸಂಬಳ ಆ ನೌಕರರಿಗೆ ಸಿಗುವುದಿಲ್ಲ. ಆ ನೌಕರರನ್ನು ನೇಮಕ ಮಾಡಿಕೊಂಡ ದಿವಸದಿಂದ ನೋಡಿದರೆ, ಈಗಾಗಲೇ ಕೆಲವರಿಗೆ ವಯಸ್ಸು ಮುಗಿಯುತ್ತಾ ಬಂದಿದೆ. ಯಾವಾಗ ಭಾರತೀಯ ಜನತಾ ಪಕ್ಷದ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರದಲ್ಲಿತ್ತು, ಆ ಸಂದರ್ಭದಲ್ಲಿ ಕೂಡ ಅದೇ ರೀತಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕುಳಿತು ಪ್ರತಿಭಟನೆಯನ್ನು ಮಾಡಿದರು. ಆಗ ತಾವೆಲ್ಲರೂ ಹೋಗಿ 'ಇನ್ನೇನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದೇ ಬಿಡುತ್ತದೆ, ತಾವೇನು ಚಿಂತನೆ ಮಾಡಬೇಕಾಗಿಲ್ಲ ಖಾಯಂಗೊಳಿಸುತ್ತೇವೆ' ಎಂದು ಆವೊತ್ತಿನ ದಿವಸ ಆಶ್ವಾಸನೆ ಕೊಟ್ಟಿದ್ದಾರೆ. ಈಗಲೂ ಕೂಡ ಅದರ ದಾಖಲೆ ಮತ್ತು ಅವರೊಂದಿಗೆ ಮಾತನಾಡಿರುವ ವಿಡಿಯೋ ಇದೆ. ಇಷ್ಟೆಲ್ಲಾ ಇದ್ದರೂ ಕೂಡ ಸರ್ಕಾರ ಅಧಿಕಾರಕ್ಕೆ ಬಂದು ಕುಳಿತುಕೊಂಡ ಮೇಲೆ ಆ ನೌಕರರ ಕಡೆ ನೋಡುವುದಿಲ್ಲ, ಕೇರ್ ಮಾಡುವುದಿಲ್ಲ. ಆ ನೌಕರರ ಪೈಕಿ ಹೆಚ್ಚು ಮಂದಿ ಹೆಣ್ಣು ಮಕ್ಕಳೇ ಆಗಿದ್ದು, ಅವರ ಜೊತೆ ಸಣ್ಣ ಮಕ್ಕಳನ್ನು ಕರೆದುಕೊಂಡು ಬಂದು ವಾರಗಟ್ಟಲೆ ಬೀದಿಯಲ್ಲಿ ಕುಳಿತು ಪ್ರತಿಭಟನೆ ನಡೆಸಿದರು. ನಾವು ಕೂಡ ಹೋಗಿ ಮಾತನಾಡಿದ್ದೇವೆ. ಮಾನ್ಯ ಸಚಿವರು ಪ್ರತಿಭಟನಾ ಸ್ಥಳಕ್ಕೆ ಹೋಗಿ ಮಾತನಾಡಿದ ಹಾಗೆ ನಾವು ಕೂಡ ಹೋಗಿ 'ಈ ವಿಚಾರವಾಗಿ ಸರ್ಕಾರದ ಗಮನಕ್ಕೆ ತರುತ್ತೇವೆ, ಏನು ಪರಿಹಾರಕೊಡಿಸಲಿಕ್ಕೆ ಆಗುತ್ತದೆ ಆ ಕೆಲಸವನ್ನು ಮಾಡುತ್ತೇವೆ' ಎಂದು ಹೇಳಿ ಬಂದಿದ್ದೇವೆ. ನಾವು ಸಮಯ ಗೆಲ್ಲುವ ಕೆಲಸ ಅಥವಾ ನಾವು ಮಾಡೇ ಮಾಡುತ್ತೇವೆ ಎಂಬ ಆಶ್ವಾಸನೆ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ, ಮಾನ್ಯ ಸಚಿವರೇ ಹೇಳಿರುವ ಹಾಗೆ it's a scheme. 'ಆ ಯೋಜನೆ ಏನಾದರೂ ಹೊರಟು ಹೋದರೆ ಆ ನೌಕರರನ್ನು ನಾವು ಸಹಜವಾಗಿ ತೆಗೆಯಬೇಕಾಗುತ್ತದೆ. ಆದ್ದರಿಂದ ಆಶ್ವಾಸನೆ ಕೊಡುವುದಕ್ಕೆ ಬರುವುದಿಲ್ಲ' ಎಂಬ ಮಾತನ್ನು ಮಾನ್ಯ ಸಚಿವರು ಈಗ ಹೇಳುತ್ತಿದ್ದಾರೆ, ಆವೊತ್ತಿನ ದಿವಸ ಏತಕ್ಕೆ ಹೇಳಲಿಲ್ಲ? ಆದ್ದರಿಂದ you are committed. ಈಗ ಏನೆಂದು ಆ ನೌಕರರಿಗೆ ಉತ್ತರ ನೀಡಬೇಕು? ಒಂದು ವೇಳೆ ಆ ನೌಕರರನ್ನು ಖಾಯಂಗೊಳಿಸಲು ಆಗಲಿಲ್ಲವೆಂದರೆ, ಅವರ ಕೆಲಸಕ್ಕೆ ತಕ್ಕಂತೆ ಸಂಬಳ ನೀಡಿ. ಬೇರೆ ನೌಕರರಿಗೆ ಯಾವ ರೀತಿ ಸಂಬಳ ನೀಡಲಾಗುತ್ತದೆ, ಅದೇ ರೀತಿ ಅವರಿಗೂ ಸಂಬಳ ನೀಡಿ. ಖಾಯಂಗೊಳಿಸುವುದು, ಖಾಯಂಗೊಳಿಸದೇ ಇರುವುದರ ಬಗ್ಗೆ ನಂತರ ತೀರ್ಮಾನ ಮಾಡಲಿ. ಏಕೆಂದರೆ, it comes under the scheme. ಮಾನ್ಯ ಸಚಿವರಿಂದ ಖಾಯಂಗೊಳಿಸಲು ಆಗಲಿಲ್ಲವೆಂದರೆ ಚಿಂತೆ ಇಲ್ಲ. ಕೊನೆಪಕ್ಷ ಹೆಚ್ಚಿನ ಸಂಬಳ ಕೊಟ್ಟು ಅವರನ್ನು ಸಂತೈಸುವ ಕೆಲಸವನ್ನು ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, NHM (National Health Mission) ಗುತ್ತಿಗೆ ನೌಕರರು ಏನಿದ್ದಾರೆ, ಅವರ ಸಮಸ್ಯೆಯ ಬಗ್ಗೆ ನಮ್ಮಗೆಲ್ಲಾ ಖಂಡಿತವಾಗಿ ಸಹಾನುಭೂತಿ ಇದೆ. ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿದ್ದಾಗ protest ಮಾಡಲು ಕುಳಿತ್ತಿದ್ದರೂ ಸರ್ಕಾರದಿಂದ ಯಾರೋಬ್ಬರು ಕೂಡ ಹೋಗಿ ಆ ನೌಕರರಿಗೆ ಸಮಾಧಾನಕರ ಉತ್ತರವನ್ನು ನೀಡಲಿಲ್ಲ. 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನ್ಯಾಯ ಕೊಡಿಸುವಂಥ ಕೆಲಸ' ಮಾಡುತ್ತೇವೆ ಎಂದು ಖಂಡಿತ ಹೇಳಿದ್ದೇವೆ, ಇಲ್ಲವೆಂದು ಹೇಳುವುದಿಲ್ಲ. ಆ ಸಂದರ್ಭದಲ್ಲಿ ನಾವು ವಿರೋಧ ಪಕ್ಷದ ಸ್ಥಾನದಲ್ಲಿದ್ದು ಅವರನ್ನು ಭೇಟಿ ಮಾಡಿದಾಗ 'ಹೌದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಖಾಯಂಗೊಳಿಸುತ್ತೇವೆ' ಎಂದು ಹೇಳಿದ್ದು, ನಮ್ಮ ಸರ್ಕಾರ ಅಧಿಕಾರದಲ್ಲಿ ಮುಂದುವರೆಯಲು ಇನ್ನು ಸಮಯ ಕೂಡ ಇದೆ. ಹಾಗೆಯೇ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ

ಅನೇಕ ಯೋಜನೆಗಳನ್ನು ಸಹ ಜಾರಿ ಮಾಡಿದ್ದೇವೆ. ಆಶಾಕಾರ್ಯಕರ್ತರು protest ಕುಳಿತುಕೊಂಡಾಗ ನಮ್ಮ ಸರ್ಕಾರವು ಕನಿಷ್ಠ ಪಕ್ಷ ರೂ.10,000 ಪ್ರತಿ ತಿಂಗಳು ಸಂಬಳ ನೀಡುವಂತೆ ಮಾಡುತ್ತೇವೆ ಎಂದು ಹೇಳಿದ್ದೇವೆ. ಬಿ.ಜೆ.ಪಿ. ಸರ್ಕಾರದ ಕಾಲದಲ್ಲಿ ಏನು ಮಾಡಲಿಲ್ಲ.

ನಮಗೆ commitment ಇಲ್ಲ ಎಂದು ಹೇಳುತ್ತಿಲ್ಲ. ಗ್ಯಾರಂಟಿ ಯೋಜನೆಯೂ commitment ಇರುವ ಸಲುವಾಗಿಯೇ ಮಾಡಿರುವುದು. Commitment ಇಲ್ಲದೇ ಹೋಗಿದ್ದರೆ ಈ ಯೋಜನೆಗಳನ್ನು ಯಾವ ಸರ್ಕಾರವಾದರೂ ಮಾಡಲು ಸಾಧ್ಯವಾಗುತ್ತಿತ್ತೇ? ಆಶಾಕಾರ್ಯಕರ್ತರಿಗೆ ಹೆಚ್ಚುವರಿ ಸಂಬಳ ನೀಡುವಂಥ ವ್ಯವಸ್ಥೆ ಮಾಡಲಾಗಿದೆ. Commitment ಇಲ್ಲದಿದ್ದರೆ ಸಾಧ್ಯವಾಗುತ್ತಿತ್ತೇ? ಅದರಂತೆ ಈ ವಿಚಾರವಾಗಿ ಕೂಡ ಹೇಗೆ ಮುಂದೆ ಮಾಡಬಹುದೆಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ Term Insurance and Accident Insurance ಮಾಡಿಸಿಕೊಡಲಾಗಿದೆ. ಜೊತೆಗೆ ಪ್ರತ್ಯೇಕವಾದ 'ಆರೋಗ್ಯ ವಿಮಾ ಯೋಜನೆ' ಯನ್ನು ಸಹ ಜಾರಿಗೆ ತರುತ್ತೇವೆ ಎಂದು ಹೇಳಿದ್ದೇವೆ. ಹಾಗೆಯೇ ನಾನೇ ಖುದ್ದಾಗಿ ಹೋಗಿ ಆ ನೌಕರರನ್ನು ಭೇಟಿ ಮಾಡಿದ್ದೇನೆ. ನಮ್ಮ ಅಧಿಕಾರಿಗಳು ಸಹ ಅವರನ್ನು ಭೇಟಿ ಮಾಡಿದ್ದು, ಅವರನ್ನು ಸಹ ಕರೆಸಿ ಮಾತನಾಡಿದ್ದಾರೆ. 10ನೇ ತಾರೀಖಿನಂದು ಬನ್ನಿ ನಾವೆಲ್ಲರೂ ಕುಳಿತುಕೊಂಡು ನಮ್ಮ ಇತಿ-ಮಿತಿಯೊಳಗೆ ಏನು ಮಾಡಬಹುದು ಮಾಡೋಣ ಎಂದು ಹೇಳಿದ್ದೇನೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು NHM ಗುತ್ತಿಗೆ ನೌಕರರು ಸಂಬಳವನ್ನು ಹೆಚ್ಚಿಸುವ ಪ್ರಕ್ರಿಯೆಯಾದರೂ ಮಾಡಿ' ಎಂದು ಹೇಳಿದ್ದು, ಆ ವಿಚಾರವಾಗಿ ಸಹ ಅವರ ಜೊತೆ ಮಾತನಾಡುತ್ತಿದ್ದೇನೆ. ಮಾತುಕತೆಯಾದ ನಂತರ ಅಂತಿಮ ತೀರ್ಮಾನ ಏನಾಗುತ್ತದೆ ಎಂಬುದರ ಬಗ್ಗೆ ನಾನು ಈಗಲೇ ಹೇಳುವುದಕ್ಕಾಗುವುದಿಲ್ಲ. ಈ ಸಲುವಾಗಿಯೇ 10ನೇ ತಾರೀಖಿನಂದು ಸಭೆಯನ್ನಿಟ್ಟುಕೊಂಡಿದ್ದೇನೆ. ಯಾರನ್ನು ಸಹ ನಾವು ದೂರ ಇಡುತ್ತಿಲ್ಲ, ಅವರೊಂದಿಗೆ ಸಮಾಲೋಚನೆಯಲ್ಲಿದ್ದೇವೆ. ಹಾಗಾಗಿ, ಅವರ ಪರವಾಗಿ ಏನು ಸಾಧ್ಯವೋ ಆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಮುಂದಿನ ದಿವಸಗಳಲ್ಲಿ ಅವರನ್ನು ಯಾವ ರೀತಿ ಖಾಯಂಗೊಳಿಸಲು ಸಾಧ್ಯ ಎಂಬುದರ ಬಗ್ಗೆ ಚರ್ಚೆ ಮಾಡುತ್ತಿದ್ದು, ಕಾಂಗ್ರೆಸ್ ಸರ್ಕಾರವು ಅಧಿಕಾರದಲ್ಲಿ ಮುಂದುವರೆಯಲು ಇನ್ನೂ 3 ವರ್ಷಗಳ ಕಾಲ ಸಮಯ ಇದೆ. ಅದಕೋಸ್ಕರ ನಾವು ಆ ನೌಕರರನ್ನು ಖಾಯಂಗೊಳಿಸಲು ಸಾಧ್ಯವೇ ಇಲ್ಲ ನಮ್ಮ ಗಮನದಲ್ಲಿ ಇಲ್ಲವೇ ಇಲ್ಲ ಎಂಬ ಮಾತನ್ನು ಎಲ್ಲಿಯೂ ಹೇಳುತ್ತಿಲ್ಲ. ಯಾವ ರೀತಿ ಖಾಯಂಗೊಳಿಸಲು ಸಾಧ್ಯ ಎಂಬುದನ್ನು ಸಹ ನೋಡುತ್ತಿದ್ದೇವೆ. NHM ಗುತ್ತಿಗೆ ನೌಕರರ ಪರವಾಗಿ ಖಂಡಿತ ಇದ್ದೇವೆ. ಹಾಗೆಯೇ ಏನೇನು ಮಾಡಲು ಸಾಧ್ಯವೋ ಆ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಹಾಗೆಯೇ ವರ್ಗಾವಣೆ ಸಹ ಕೇಳಿದ್ದು, one time transfer ಗೆ ಅವಕಾಶ ಕಲ್ಪಿಸುತ್ತೇವೆ, ಆರೋಗ್ಯ ವಿಮಾ ಯೋಜನೆಯನ್ನು ಕಲ್ಪಿಸುತ್ತೇವೆ ಎಂದು ಹೇಳಿದ್ದೇವೆ. ಪ್ರತಿ 5 ವರ್ಷಗಳಿಗೊಮ್ಮೆ ಶೇಕಡ 5 ರಷ್ಟು ಅವರ ಸಂಬಳವನ್ನು ಹೆಚ್ಚಳ

ಮಾಡುತ್ತಿದ್ದೇವೆ. ಇಂತಹ ಕ್ರಮಗಳನ್ನು ಕೈಗೊಂಡಿದ್ದು, ಅವರನ್ನು ಖಾಯಂಗೊಳಿಸುವ ಬಗ್ಗೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

ಸಭಾಪತಿಯವರು:- ಮಾನ್ಯ ಎಸ್.ವ್ಹಿ.ಸಂಕನೂರರವರೇ, ಮತ್ತೆಷ್ಟು ಮಾತನಾಡುತ್ತೀರಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಉಳಿದ ವಿಷಯದ ಮೇಲೆ ಪ್ರಸ್ತಾಪ ಮಾಡಲು ಅವಕಾಶ ಕಲ್ಪಿಸಿ ಕೊಡಿ. ಆ ನೌಕರರನ್ನು ನೇಮಕ ಮಾಡಬೇಕಾದರೆ, you have followed all the procedure. ಯಾವುದೇ ನೇಮಕಾತಿ ಮಾಡಿಕೊಳ್ಳುವ ಮೊದಲು ಅಧಿಸೂಚನೆ ಹೊರಡಿಸಬೇಕಾಗಿದ್ದು, ಅದರಂತೆ ಅಧಿಸೂಚನೆ ಹೊರಡಿಸಿ, interview ಮಾಡಲಾಗಿದೆ. Merit and roster ಪ್ರಕಾರ ನೇಮಕಾತಿಯಾಗಿದೆ. ಹೀಗಾಗಿ ಆ ನೌಕರರನ್ನು ಖಾಯಂಗೊಳಿಸಲು legal complications ಏನೂ ಬರುವುದಿಲ್ಲ. ವಿವಿಧ ಇಲಾಖೆಯಲ್ಲಿ ಯಾವ ರೀತಿ ಇದೆ, ಅದೇ ರೀತಿ ತಮ್ಮನ್ನು ಸಹ ಖಾಯಂಗೊಳಿಸುತ್ತೇವೆ ಎಂದು ಉತ್ತರ ಕೊಡುತ್ತಾರೆ. ವಿವಿಧ ಇಲಾಖೆಗೆ compare ಮಾಡುವುದು ಬೇಡ. ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, interview ಮಾಡಲಾಗಿದೆ. Merit and caste ಮೇಲೆ ಮಾಡಲಾಗಿದೆ ಎಂಬುದು ಮೊದಲು ವಿಚಾರ. ಮಣಿಪುರದಲ್ಲಿ ಇದೇ ರೀತಿ NHM ಗುತ್ತಿಗೆ ನೌಕರರು ನೇಮಕ ಮಾಡಿಕೊಂಡಿದ್ದು, ತದನಂತರ ಆ ನೌಕರರನ್ನು ಖಾಯಂಗೊಳಿಸಿದ್ದಾರೆ. ಹಾಗೆಯೇ ರಾಜಸ್ಥಾನದಲ್ಲಿ ಸಹ ಖಾಯಂಗೊಳಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಸಹ ಮೊನ್ನೆ ದಿವಸ ಅಧಿವೇಶನ ನಡೆದಾಗ 'ಖಾಯಂಗೊಳಿಸುತ್ತೇವೆ' ಎಂದು ಪ್ರಚಾರ ಮಾಡಿದ್ದಾರೆ. ಬೇರೆ ರಾಜ್ಯದಲ್ಲಿ ಖಾಯಂಗೊಳಿಸಿರುವಾಗ ನಮ್ಮ ರಾಜ್ಯದಲ್ಲಿ ಮಾಡುವುದಕ್ಕೆ ಇರುವ ಸಮಸ್ಯೆ ಏನು? ಬೇಕಾದರೆ ಆ ರಾಜ್ಯಗಳಲ್ಲಿನ ಪ್ರತಿಯನ್ನು ತಂದಿದ್ದು, ಅದನ್ನು ಸರ್ಕಾರಕ್ಕೆ ಸಲ್ಲಿಸುತ್ತೇನೆ. ಹಾಗಾಗಿ, ಬೇರೆ ರಾಜ್ಯಗಳಲ್ಲಿ ಖಾಯಂಗೊಳಿಸಿದ್ದು, ನಮ್ಮ ಸಚಿವರು ಸಹ ಖಾಯಂಗೊಳಿಸುತ್ತೇನೆ ಎಂದು promise ಮಾಡಿದ್ದು ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಕಟಿಸಿದ್ದಾರೆ, ಅದರಂತೆ ಆ ನೌಕರರು ಮಾನ್ಯ ಸಚಿವರನ್ನೇ ನಂಬಿಕೊಂಡಿದ್ದಾರೆ. ನಾನು ಕೂಡ ಕೈ ಮುಗಿದು ಪ್ರಾರ್ಥಿಸುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಉತ್ತರವನ್ನು ನೀಡಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಂಕನೂರರವರು ಮತ್ತೆ ಎದ್ದು ಮಾತನಾಡಲು ನಿಂತರೆ ನಾನು ಸಹ ಏನೆಂದು ಹೇಳಲಿ?

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರದಲ್ಲಿ ಮುಂದುವರೆಯಲು ಇನ್ನು ಸುಮಾರು 3 ವರ್ಷಗಳವರೆಗೂ ಸಮಯ ಇದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ ಹಾಗೆ ಬೇರೆ ರಾಜ್ಯಗಳಲ್ಲಿ NHM ಗುತ್ತಿಗೆ ನೌಕರರು ಖಾಯಂಗೊಳಿಸಿದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ ಮೇಲೆ ಒಂದೇ ವರ್ಷದಲ್ಲಿ, ಎರಡೇ ವರ್ಷದಲ್ಲಿ ಎಲ್ಲವನ್ನೂ ಕೂಡ ಮಾಡುತ್ತೇವೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಈ ಸಂಬಂಧ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ. ಈಗಾಗಲೇ ಮಾನ್ಯ ಸಂಕನೂರರವರು ರಾಜಸ್ಥಾನ, ಮಣಿಪುರ ರಾಜ್ಯಗಳ ಬಗ್ಗೆ ಹೇಳಿದ್ದು, ಮಹಾರಾಷ್ಟ್ರದಲ್ಲಿ ಸಹ ಮೊನ್ನೆ ನಡೆದಂಥ ಅಧಿವೇಶನದಲ್ಲಿ ಖಾಯಂಗೊಳಿಸುತ್ತೇವೆ ಎಂದು ಹೇಳಿಕೆ ನೀಡಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಣಿಪುರ, ರಾಜಸ್ಥಾನಗಳಲ್ಲಿ NHM ಗುತ್ತಿಗೆ ನೌಕರರನ್ನು ಖಾಯಂಗೊಳಿಸಿದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ 30 ರಾಜ್ಯಗಳಿವೆ. ಆದರೆ, ಮಾನ್ಯ ಎಸ್.ವ್ಹಿ.ಸಂಕನೂರರವರು 3 ರಾಜ್ಯಗಳಿಗೆ ಸೀಮಿತವಾಗಿ ಉದಾಹರಣೆಯನ್ನು ನೀಡಿದ್ದಾರೆ. ಸರ್ಕಾರ ಎಲ್ಲದರ ಬಗ್ಗೆ ಗಮನಹರಿಸಿ ತೀರ್ಮಾನ ತೆಗೆದುಕೊಳ್ಳುತ್ತದೆ.

**(ಮುಂದು)**

**(129) 06.03.2025/4.40/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ದಿನೇಶ್ ಗುಂಡೂರಾವ್ (ಮುಂದು):-**

ಆದರೆ ನಮ್ಮ ಸರ್ಕಾರಕ್ಕೆ commitment ಇದೆ. ತಾವು ಇಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ಎಲ್ಲವೂ ಈಗಲೇ ಆಗಬಿಡಬೇಕು ಎಂದು ಹೇಳಿದರೆ, ಅದು ಸಾಧ್ಯವಿಲ್ಲ. ಆದರೆ ಅವರ ಜೊತೆ ನಾನು ಮಾತುಕತೆಯಲ್ಲಿದ್ದೇನೆ ಮತ್ತು ಚರ್ಚೆಯೂ ಕೂಡ ಮಾಡಿದ್ದೇನೆ. ಈಗಾಗಲೇ ಅವರ ಮುಷ್ಕರವನ್ನು ಹಿಂಪಡೆದುಕೊಳ್ಳುವಂತೆ ಮಾಡಿದ್ದೇವೆ. ತಮ್ಮ ಸರ್ಕಾವಿದ್ದಾಗ, ಮೂವತ್ತು-ನಲವತ್ತು ದಿನಗಳ ಕಾಲ ಮುಷ್ಕರ ಮಾಡಿದ್ದರು.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಚಿವರೇ, ಈಗ ಆ ಸರ್ಕಾರ ಈ ಸರ್ಕಾರ ಎನ್ನುವುದು ಬೇಡ. ನೀವು commitment ಆಗಿದ್ದಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ..

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಅದರಿಂದ ನೀವು ಹೇಗಿದ್ದೀರಾ ನಾವು ಹೇಗಿದ್ದೇವೆ ಎನ್ನುವುದು ಅದು ಬೇರೆ ಪ್ರಶ್ನೆ. ನಾವು

ಅವರ ಪರವಾಗಿ ಇದ್ದೇವೆ. ಅವರಿಗೆ ಮಾಡುವುದಕ್ಕೆ ಏನೇನು ಸಾಧ್ಯವಾಗುತ್ತದೆಯೋ, ಅದನ್ನು ನಮ್ಮ ಸರ್ಕಾರ ಮಾಡುತ್ತದೆ. ಖಂಡಿತವಾಗಿಯೂ, ಖಾಯಂಮಾತಿ ಮಾಡುವ ಬಗ್ಗೆ ನಾನು ಖಂಡಿತವಾಗಿಯು ಕೂಡ ಪರಿಶೀಲನೆ ಮಾಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ಅವರ ವಯೋಮಿತಿ ಮೀರುವುದಕ್ಕೆ ಬರುತ್ತಿದೆ. ಅವರು ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಕೋವಿಡ್ ಸಮಯದಲ್ಲಿ ಅವರು ತಮ್ಮ ಜೀವದ ಅಂಗು ತೊರೆದು ಕೆಲಸ ಮಾಡಿದ್ದಾರೆ.

**ಶ್ರೀ ದಿನೇಶ್ ಗುಂಡೂರಾವ್:-** ತಮ್ಮ ಸರ್ಕಾರವಿದ್ದಾಗ, ತಮಗೆ ಏತಕ್ಕೆ commitment ಬರಲಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ನಮ್ಮದು ಬಿಡಿ. ತಾವು ಕಾಳಜಿ ವಹಿಸಿದ್ದರಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ತಮ್ಮ ಸರ್ಕಾರವಿದ್ದಾಗ, ಅದರ ಬಗ್ಗೆ ತಾವು ಏತಕ್ಕೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಲಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ನಾನು ತಮ್ಮ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ.

**ಶ್ರೀ ದಿನೇಶ್ ಗುಂಡೂರಾವ್:-** ಆಗ ನಿಮಗೆ ಜವಾಬ್ದಾರಿಯಿರಲಿಲ್ಲವೇ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ತಾವೆಲ್ಲಾ ಇದ್ದೀರಲ್ಲ. ನಾನೇನು ಟೀಕೆ ಮಾಡಿಲ್ಲ. ತಾವು promise ಮಾಡಿದ್ದೀರಿ, promise ಪ್ರಕಾರ ತಾವು ಕೊಡಬೇಕು ಎಂದು ನಾನು ಹೇಳಿದ್ದೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರವಿದ್ದಾಗ, ಅವರು ಅದರ ಕಡೆ ತಿರುಗಿಯೂ ನೋಡಲಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆದರೆ ತಾವು ಅದನ್ನು ಮಾಡಿದ್ದೀರಲ್ಲ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ನಿಮ್ಮ ಸರ್ಕಾರವಿದ್ದಾಗ, ಪೌರ ಕಾರ್ಮಿಕರನ್ನು ನೀವು ಏತಕ್ಕೆ ಖಾಯಂ ಮಾಡಲಿಲ್ಲ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಆಯಿತು ಬಿಡಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸರ್ಕಾರದವರು ಪೌರ ಕಾರ್ಮಿಕರನ್ನು ಖಾಯಂ ಮಾಡಿದ್ದಾರೆಯೇ? ಇವರ ಸರ್ಕಾರವಿದ್ದಾಗ commitment ಇರಲಿಲ್ಲವೇ? ಇವರ ಸರ್ಕಾರ commitment ಮಾಡಿ ಪೌರ ಕಾರ್ಮಿಕರನ್ನು ಏತಕ್ಕೆ ಖಾಯಂ ಮಾಡಲಿಲ್ಲ? **(ಗೊಂದಲ)** ಆ ಪೌರ ಕಾರ್ಮಿಕರನ್ನು ನೀವು ಖಾಯಂ ಮಾಡಿದ್ದಾರೆಯೇ?

**ಶ್ರೀ ದಿನೇಶ್ ಗುಂಡೂರಾವ್:-** ಎಲ್ಲವನ್ನು ಮಾಡಿದ್ದೇ ನಮ್ಮ ಸರ್ಕಾರ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಪೌರ ಕಾರ್ಮಿಕರನ್ನು ಖಾಯಂ ಮಾಡಿದ್ದು. ನಾವು ಸುಮಾರು 13,000 ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದೇವೆ. ಆದರೆ ನೀವು ಏಕೆ ಮಾಡಿಲ್ಲ?

**ಶ್ರೀ ದಿನೇಶ್ ಗುಂಡೂರಾವ್:-** ನೀವು ಎಲ್ಲಿದ್ದೀರಿ? **(ಗೊಂದಲ)** ಮಾಡಿದ್ದೇ ನಮ್ಮ ಸರ್ಕಾರ. **(ಗೊಂದಲ)** ನಿಗಮ ಮಾಡಿದ್ದೇ ನಮ್ಮ ಸರ್ಕಾರ.

**ಶ್ರೀ ಎನ್. ರವಿಕುಮಾರ್:-** ಸುಮಾರು ಒಂದೂವರೆ ಲಕ್ಷ ಹುದ್ದೆಗಳು ಖಾಲಿ ಇವೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಮಗೆ social justice, commitment ಬಗ್ಗೆ ಪ್ರಶ್ನೆ ಮಾಡಬೇಡಿ.

**(ಗೊಂದಲ)**

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, Basic ಪಗಾರ ಜಾಸ್ತಿ ಮಾಡಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ.ತಾವು 10 ನೇ ತಾರೀಖಿನಂದು ಸಭೆ ಕರೆದಿದ್ದೀರಿ. ದಯಮಾಡಿ ಅಲ್ಲಿಗೆ ಅವರನ್ನು ಕರೆದು ಚರ್ಚೆ ಮಾಡಿ ಅದನ್ನು ಮುಗಿಸಿ.

**ಶ್ರೀ ದಿನೇಶ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಇವರನ್ನಲ್ಲ, ಅವರನ್ನು ಸಭೆಗೆ ಕರೆದು ಮಾತುಕತೆ ಮಾಡಿದ ನಂತರ ಈ ಸದನಕ್ಕೆ ತಿಳಿಸುತ್ತೇನೆ.

**ಸಭಾಪತಿಯವರು:-** ಆಯಿತು.

**ಆ) ವಿಷಯ:- ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಯಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು.**

- - -

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಸೇವಾ ಆಯೋಗವು ಹಿಂದಿನಿಂದಲೂ ಸಂವಿಧಾನಿಕ ಅಶ್ಲೋತ್ತರಗಳನ್ನು ಈಡೇರಿಸುವ ಸಲುವಾಗಿ ಅನುಚ್ಛೇದ 309, 315 ಮತ್ತು 320 ಗಳನ್ನು ಸಹಕಾರಗೊಳಿಸುವುದಕ್ಕಾಗಿ ರಾಜ್ಯ ಮಟ್ಟದ ನಾಗರೀಕ ಸೇವೆಗಳಲ್ಲಿ ಪ್ರತಿಭಾವಂತರನ್ನು ಇತರೆ horizontal and vertical reservation ಹಾಗೇ ಪ್ರಾದೇಶಿಕ ಮೀಸಲಾತಿಗಳನ್ನು ಗಮನದಲ್ಲಿಟ್ಟುಕೊಂಡು, gazetted probationers "ಎ" ಮತ್ತು "ಬಿ" ವೃಂದದ ಅಧಿಕಾರಿಗಳನ್ನು ಆಯ್ಕೆ ಮಾಡುವ ಬಗ್ಗೆ ಬಹಳ ನಿರ್ಣಾಯಕವಾದ ಪಾತ್ರವನ್ನು ಕರ್ನಾಟಕ ಲೋಕಸೇವಾ ಆಯೋಗವು ವಹಿಸುತ್ತದೆ. ಈಗ ಕೆ.ಪಿ.ಎಸ್.ಸಿ. ಎಂದ ತಕ್ಷಣವೇ ಪ್ರಖ್ಯಾತಿಗಿಂತ ಅಪಖ್ಯಾತಿಯೇ ದೊಡ್ಡ ವಿಷಯವಾಗಿದೆ. ಅದಕ್ಕೆ ಆದ ಒಂದು ಒಳ್ಳೆಯ ಆಯಾಮವಿದೆ. ಇದು ಪ್ರಖ್ಯಾತಿ ಆಗಿರಬೇಕಾಗಿದ್ದು, ಈಗ ಅಪಖ್ಯಾತಿಗೆ ಗುರಿಯಾಗಿದೆ. ಕೆ.ಪಿ.ಎಸ್.ಸಿ., ಯಲ್ಲಿ ಪರೀಕ್ಷೆ ಬರೆಯುವಂತಹ ಅಭ್ಯರ್ಥಿಗಳಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಇದು ಈ ಹಿಂದೆ ಬಹಳಷ್ಟು ಉತ್ತಮವಾದ ಕೆಲಸವನ್ನು ಮಾಡಿದೆ. ಆಗ ಕೆ.ಪಿ.ಎಸ್.ಸಿ. ಇದೆ. ಮೊದಲು ಇದ್ದಿದ್ದು, Mysore Civil Services (MCS) ಇತ್ತು. ಆಗ ಬಹಳ meritorious ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅಧಿಕಾರಿಗಳನ್ನಾಗಿ ಸೃಷ್ಟಿ ಮಾಡಿ ಅವರನ್ನು ಆಡಳಿತ ವ್ಯವಸ್ಥೆಗೆ ಕೊಡುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಅದರ ಪರಿಸ್ಥಿತಿ ಏನಾಗಿದೆ ಎಂದರೆ, ಪ್ರತಿಭೆ ಪರಿಶ್ರಮಕ್ಕೆ ಬೆಲೆಯೇ ಇಲ್ಲದಂತಾಗಿದೆ. ಇದರಲ್ಲಿ ಪ್ರತಿಭೆ ಮತ್ತು ಪರಿಶ್ರಮಕ್ಕೆ ಬೆಲೆಯೂ ಇಲ್ಲ. ಇಂತಹ ಪರಿಸ್ಥಿತಿಗೆ ಅವರು ತಮ್ಮನ್ನು ತಾವು ದೂಡಿಕೊಂಡಿದ್ದಾರೆ. ಯಾವುದಾಗಲೀ, ಸಿವಿಲ್ ಸರ್ವಿಸ್ ಪರೀಕ್ಷೆ ನಡೆಸಿ, ಅದರಲ್ಲಿ ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. ನೀವು ಅದರಲ್ಲಿ ಕೆನೆಯನ್ನು ತೆಗೆದು ಆಡಳಿತಕ್ಕೆ ಅವರನ್ನು ಒಪ್ಪಿಸುವಂತಹದ್ದು. ಇಲ್ಲಿ ಕೆನೆ ತೆಗೆಯುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಕೆನೆ ತೆಗೆಯುವ ಬದಲಾಗಿ ಹಣ ತೆಗೆಯುವಂತಹದ್ದಾಗಿದೆ. ...ತೆನೆಯನ್ನು ತೆಗೆಯುತ್ತಾರೆ ಮತ್ತು ಹಣವನ್ನು ತೆಗೆಯುತ್ತಾರೆ. ಇದು ನೇರವಿದು. ಏಕೆಂದರೆ, it's the talk of the town. ಇದನ್ನು ನಾವು ಹೇಳುವುದಲ್ಲ. ಎಲ್ಲಿಯೂ ನೋಡಿದರೂ ಕೆ.ಪಿ.ಎಸ್.ಸಿ. ಬಗ್ಗೆ ಏನೆಂಬುದನ್ನು ಜನರೇ ಹೇಳುತ್ತಾರೆ. ಇಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಅದೇ ರೀತಿ ಯಾವಾತ್ತಿನಿಂದ ಆಗಿರುವುದು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಮಂಜುನಾಥ್ ಭಂಡಾರಿಯವರೇ, ಅದು ಯಾವಾತ್ತಿನಿಂದಾದರೂ ಆಗಿರಲಿ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ಅವರ ಮಾತನ್ನು ಕೇಳಬೇಡಿ. ಈಗ ತಾವು ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಯಾರ ಅವಧಿಯಲ್ಲಿಯಾದರೂ ಆಗಿರಲಿ. ಇದೊಂದು ಸಂಸ್ಥೆ. ಈ ಸಂಸ್ಥೆ ಹೇಗಿರಬೇಕು ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ. ಇದಕ್ಕೆ ಉತ್ತೇಜನ ಕೊಡುವವರು ಯಾರು? ವ್ಯಕ್ತಿ ಕೊಡುತ್ತಾರೆ, ಸರ್ಕಾರ ಕೊಡುತ್ತದೆಯೇ? ಅದರ ಹಿಂದೆ ಯಾರು ಇರುತ್ತಾರೆ? ಇದೆಲ್ಲಾ ಬೇಕಾಗಿಲ್ಲ. ಒಂದು ಸಂಸ್ಥೆ ಏನು ಮಾಡುತ್ತಿದೆ? ಇಂತಹ ವಿಚಾರ ಇರುವಾಗ, ಅದು ಯಾರ ಕಂಟ್ರೋಲ್‌ನಲ್ಲಿ ಇರುತ್ತದೆಯೋ, ಅದನ್ನು ಸರಿಯಾಗಿ ನಡೆಸಬೇಕೆಂಬುದನ್ನು ಕಲಿತುಕೊಳ್ಳಬೇಕು. ಈ ಹಿಂದೆ ಅಂದರೆ 1998-99ನೇ ಸಾಲಿನ ಕೆ.ಎ.ಎಸ್., ಅಧಿಕಾರಿಗಳ ನೇಮಕ ವಿಚಾರಕ್ಕೆ ಸಂಬಂಧಿಸಿದಂತೆ, ಲೋಕಸೇವಾ ಆಯೋಗದ 25 ಜನವರಿ 2019 ಹಾಗೂ ಆಗಸ್ಟ್ 22 ರಂದು ಪ್ರಕಟಿಸಿದ ಎರಡು ಆಯ್ಕೆ ಪಟ್ಟಿಗಳು ಅನೂರ್ಜಿತಗೊಳಿಸಿದೆ ಎಂದು ಕೆ.ಎ.ಟಿ.ಯಲ್ಲಿ ಈಗ ತೀರ್ಪು ಬಂದಿದೆ. ಇಲ್ಲಿನ ಪರಿಸ್ಥಿತಿ ವ್ಯತ್ಯಾಸವಾದರೆ, ಈಗಾಗಲೇ ಅಭ್ಯರ್ಥಿಗಳು ಹೋಗಿ ಕೆಲಸ ಮಾಡುತ್ತಿರುತ್ತಾರೆ. ನೀವು ಅನೂರ್ಜಿತಗೊಳಿಸಿದ ತಕ್ಷಣ ಈ ವ್ಯವಸ್ಥೆಯಲ್ಲಿ ಪರಿಸ್ಥಿತಿ ಏನಾಗುತ್ತದೆ? ಅವರಿಗೆ ಕೆಲಸವಿಲ್ಲ ನಿಲ್ಲಿಸಬೇಕು. ಆ ಜಾಗದಲ್ಲಿ ಯಾರು ಬಂದು ಕೆಲಸ ಮಾಡುವುದಿಲ್ಲ. ಸರ್ಕಾರಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಅವರಿಗೆ ಸಂಬಳ ಕೊಡುವುದನ್ನು ನಿಲ್ಲಿಸುವುದಕ್ಕಾಗುತ್ತದೆಯೇ? ಏಕೆಂದರೆ, ಈಗಾಗಲೇ ಅವರು ಕೆಲಸ ಮಾಡುತ್ತಿರುತ್ತಾರೆ. ಇದು ಅನೇಕ ರೀತಿಯ ತೊಂದರೆಗಳನ್ನು ಇವತ್ತು ಎದುರಿಸುತ್ತಿದೆ. ಇತ್ತೀಚೆಗೆ ಬಂದಿರುವಂತಹ ಸಮಸ್ಯೆಗಳೆಂದರೆ, ಒಂದೇ ಸಾಲಿನಲ್ಲಿ ಪರೀಕ್ಷೆಯನ್ನು ಮತ್ತೆ ಮತ್ತೆ ಮಾಡುತ್ತಿರುವುದು. ಒಂದು ಬಾರಿ ಪರೀಕ್ಷೆಯಾಗುತ್ತದೆ. ಅದರ ಫಲಿತಾಂಶ ಬರಬೇಕು. ಅರ್ಹತಾ ಪಟ್ಟಿ ಒಂದು ಸಾರಿಯಾದ ಮೇಲೆ ಅಭ್ಯರ್ಥಿಗಳು ಕೆಲಸಕ್ಕೆ ಹೋಗುತ್ತಾರೆ. ಇದು ಮೊದಲಿನಿಂದಲೂ ಬಂದಿರುವಂತಹ ಪದ್ಧತಿಯಾಗಿದೆ. ಈಗ ಏನಾಗುತ್ತಿದೆ ಎಂದರೆ, ಪರೀಕ್ಷೆ ಆಯಿತು, ದೋಷ ಆಗಿದೆ. ಮತ್ತೆ ಒಂದು ಪರೀಕ್ಷೆ ಮಾಡಿ. ಅದರಲ್ಲೂ ದೋಷವಾಗಿದೆ. ಮತ್ತೊಂದು ಪರೀಕ್ಷೆ ಮಾಡುವುದು ಎಂತಹದ್ದು ಇದು? ಇದು ಏತಕ್ಕೆ ದೋಷವಾಗುತ್ತಿದೆ? ಇದರ ದೋಷಕ್ಕೆ ಕಾರಣವೇನು? ಇದರ ಪರಿಶೀಲನೆ ಮಾಡುವವರು ಯಾರು? ಯಾವುದೇ ಸರ್ಕಾರವಿರಲಿ. ಅದಕ್ಕೆ ಗಂಭೀರತೆ ಇಲ್ಲ ಎನ್ನುವಂತಹದ್ದನ್ನು ಇದೇ ರೀತಿಯಲ್ಲಿ ತೋರಿಸುತ್ತದೆ. ಪ್ರಶ್ನೆ ಪತ್ರಿಕೆಯನ್ನು ಗೌಪ್ಯತೆಯನ್ನು ಕಾಪಾಡುವಲ್ಲಿ ಕೆ.ಪಿ.ಎಸ್.ಸಿ. ವಿಫಲವಾಗಿರುವಂತಹದ್ದು. ಅಲ್ಲಿ ಗೌಪ್ಯತೆಯೇ ಇಲ್ಲ. ಪ್ರಶ್ನೆ ಪತ್ರಿಕೆಗಳಲ್ಲಿ ಭಾಷಾಂತರದ ಅವಾಂತರವಾಗುತ್ತಿದೆ. ಇದು ಹೇಗೆಂದರೆ, ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿಕೊಳ್ಳುತ್ತಾರೆ. ಆಂಗ್ಲ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ತಯಾರು ಮಾಡುತ್ತಾರೆ. ಅದನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಬೇಕು. ಇದನ್ನು ತರ್ಜುಮೆ ಮಾಡಿದವರು ಯಾರೆಂದರೆ, ಗೂಗಲ್ ಅಪ್ಪ. ನಮ್ಮಲ್ಲಿ ಯಾರು ಪ್ರವೀಣರು ಇಲ್ಲವೇ? ತರ್ಜುಮೆ ಮಾಡುವುದಕ್ಕೆ ಗೂಗಲ್ ಬೇಕಾ. ತರ್ಜುಮೆಯನ್ನು ಗೂಗಲ್‌ನಲ್ಲಿ ಮಾಡುತ್ತೀರಿ. ಆಂಗ್ಲ ಭಾಷೆಗೂ ಮತ್ತು ಕನ್ನಡ ಭಾಷೆಗೂ ಬಹಳಷ್ಟು ವ್ಯತ್ಯಾಸ ಬಂದು ತಪ್ಪುಗಳು ಬರುತ್ತದೆ. ಕೊನೆ ಪಕ್ಷ ಅದನ್ನು ಸರಿಪಡಿಸಿ ಅರ್ಥ ತಾಳೆಯಾಗುವ

ರೀತಿಯಲ್ಲಿ ಮಾಡಬೇಕು. ಇಲ್ಲಿ ಅರ್ಥ ತಾಳೆಯಾಗುವುದಿಲ್ಲ. ಕಳೆದ ಬಾರಿ ಇದಕ್ಕೆ ಸಂಬಂಧಪಟ್ಟಂತೆ ಅಭ್ಯರ್ಥಿಗಳು ಮುಷ್ಕರ ಮಾಡುವಾಗ, ನಾನು ಕೂಡ ಅಲ್ಲಿಗೆ ಹೋಗಿದ್ದೆ. ಅಲ್ಲಿ ಏನಾಗಿದೆ ಎಂದರೆ, ಒಂದು ಪ್ರಶ್ನೆ ಪತ್ರಿಕೆಯಲ್ಲಿ 59 ತಪ್ಪುಗಳಿವೆ. ಆಂಗ್ಲ ಪ್ರಶ್ನೆ ಪತ್ರಿಕೆಗೂ ಮತ್ತು ಕನ್ನಡ ಪ್ರಶ್ನೆ ಪತ್ರಿಕೆಗೂ ಒಂದಕ್ಕೊಂದು ತಾಳೆ ಆಗುತ್ತಿಲ್ಲ ಹಾಗೂ ಅರ್ಥಗರ್ಭಿತವಾಗುವುದಿಲ್ಲ. ಇದರಿಂದ ಏನಾಗುತ್ತದೆ? ಅದರಲ್ಲೂ ಇನ್ನೂ ಒಂದು ಹಾಕಿದ್ದಾರೆ. ಕನ್ನಡ ಪ್ರಶ್ನೆ ಪತ್ರಿಕೆ ನಿಮಗೆ ಅರ್ಥವಾಗಲಿಲ್ಲವೆಂದರೆ, ಆಂಗ್ಲ ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥ ಮಾಡಿಕೊಳ್ಳಬೇಕು. ಅದು ಯಾರು? ಮಾನ್ಯ ಸಚಿವರೇ ಆಯಿತು. ತಾವು ಮಾತನಾಡಿ.

**ಶ್ರೀ ಎಚ್. ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡುವುದಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು ಕೂಡ ಮಾತನಾಡಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನೂ ಹೆಸರು ಕೊಟ್ಟಿರುವವರೆಲ್ಲಾ ಮಾತನಾಡುವವರು ಇದ್ದಾರೆ.

(ಮುಂದು)

(130) 06.03.2025/4.50/ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರು ಉತ್ತರ ಕೊಡಲಿ. ನಂತರ clarification ಕೇಳುವುದಕ್ಕೆ ಕೆಲವು ಸದಸ್ಯರಿಗೆ ಮಾನತಾಡಲು ಅನುಮತಿ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ತಂದಿದ್ದೆವು. ಆದರೆ ತಾವು ಅದನ್ನು ನಿಯಮ 330ಕ್ಕೆ convert ಮಾಡಿ ಕೊಟ್ಟಿದ್ದಿರಿ. ಈಗ ನಾವು ಮಾತನಾಡುವುದಕ್ಕೆ ಅವಕಾಶವಿಲ್ಲದಿದ್ದರೆ ಆ ನಿಯಮಗಳಿಗೆ . . .

**ಸಭಾಪತಿಯವರು:-** ಮಾನ್ಯ ಸಿ.ಟಿ. ರವಿಯವರೇ, ನಾನು ಒಪ್ಪುತ್ತೇನೆ. But ನಿಯಮಗಳಿವೆ. ಇಲ್ಲಿ ಎಲ್ಲವೂ ನಿಯಮಗಳ ಪ್ರಕಾರ ನಡೆಯುವುದಿಲ್ಲ. ಅವರೆಲ್ಲಾ ಮಾತನಾಡಿ ವಿಷಯ ಹೇಳಿದ್ದಾರೆ. ನೀವು ಏನೇನು

ಹೇಳಬೇಕು ಅಂದುಕೊಂಡಿದ್ದೀರೋ ಅದನ್ನು ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಹೇಳಿ. ನೀವು ಹೇಳಿರುವುದು ಏನಾದರೂ ಇದ್ದರೆ, ಅವರು clarification ಕೊಡುತ್ತಾರೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ನಾವು ಕೆಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲುವುದು ಇದೆ. ಅವರು ಒಟ್ಟಿಗೆ ಉತ್ತರ ಕೊಡಲಿ.

**ಸಭಾಪತಿಯವರು:–** ಮಾನ್ಯ ಸಿ.ಟಿ. ರವಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ, ನಾನು ನಿಮಗೆ ಮಾತನಾಡಲು ಅನುಮತಿ ಕೊಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಹೆಸರುಗಳು ಇದ್ದವರಿಗಾದರೂ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ಶ್ರೀ ಹೆಚ್.ಕೆ.ಪಾಟೀಲ್‌ರವರೇ, ತಾವು ಉತ್ತರ ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಚಿವರೇ, ನಾವು ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಂಡು ಬಂದಿದ್ದೆವು. ಮಾನ್ಯ ಸಭಾಪತಿಯವರು ಅದನ್ನು ನಿಯಮ ೩೩೦ ಕ್ಕೆ convert ಮಾಡಿದ್ದಾರೆ. ಆದರೆ ಇಷ್ಟೂ ಜನರು ಸಹಿ ಮಾಡಿ ಮಾತನಾಡಬೇಕೆಂದು ತಯಾರಿ ಕೂಡ ಮಾಡಿಕೊಂಡು ಬಂದಿದ್ದಾರೆ. ಅವರು ಕೆಲವು ವಿಚಾರಗಳನ್ನು ಎತ್ತಬೇಕಾಗುತ್ತದೆ. ಇದು ಬಹಳ ಗಂಭೀರವಾದ ಸಮಸ್ಯೆ ಇದೆ. ಇದರ ಬಗ್ಗೆ ಬೆಳಕು ಚೆಲ್ಲುವಂಥದ್ದು ಸಹಜವಾಗಿ ಇರುವುದರಿಂದ, ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಲು ಮಾನ್ಯ ಸಚಿವರು ಸ್ವಲ್ಪ ಸಮಯಾವಕಾಶ ಕೊಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಸಮಯಾವಕಾಶಕ್ಕೆ ಏನು ತೊಂದರೆ ಇಲ್ಲ. ಆದರೆ ಕೆಳಗಿನ ಮನೆಯಲ್ಲಿ ಒಂದು ಕರೆ ಇದೆ, ಅದರ ಸಲುವಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದೇನೆ ಅಷ್ಟೇ.

**ಸಭಾಪತಿಯವರು:–** ಹಾಗಾದರೆ ನಾವು ಒಂದು ಕೆಲಸ ಮಾಡೋಣ. ಕೆಳಮನೆಯಲ್ಲಿ ಮಾನ್ಯ ಸಚಿವರಿಗೆ ವಿಧೇಯಕ ಇದೆಯಂತೆ. ಆದ್ದರಿಂದ ಅವರು ಅಲ್ಲಿಂದ ವಾಪಸ್ ಬಂದ ನಂತರ ಈ ವಿಷಯವನ್ನು ತೆಗೆದುಕೊಳ್ಳೋಣವೇ?

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಅಲ್ಲಿ ಚರ್ಚೆ ನಡೆಯಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಆಯಿತು.

**ಸಭಾಪತಿಯವರು:–** ಆಯಿತು, ಸಭಾನಾಯಕರು ಇರುತ್ತಾರೆ ಅಲ್ಲವೇ?

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರು ಇರುತ್ತಾರೆ.

**ಸಭಾಪತಿಯವರು:-** ಆಯಿತು ಸಭಾನಾಯಕರೇ, ಸರ್ಕಾರ ಉತ್ತರ ಕೊಡಲಿ. ಅದಕ್ಕೆ ನಾನು ಹೇಳಿದ್ದು ನನ್ನ ಮಾತು ಯಾರು ಕೇಳುವುದಿಲ್ಲ, ಮಾನ್ಯ ಸಭಾನಾಯಕರೇ, ತಾವು ಕುಳಿತುಕೊಳ್ಳಿ. ಯಾರೋ ಒಬ್ಬರು ಸಚಿವರು ಇರುತ್ತಾರೆ.

**(ಈ ಹಂತದಲ್ಲಿ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ರವರು ಸದನದಿಂದ ನಿರ್ಗಮಿಸಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಗಸ್ಟ್ 27ನೇ ತಾರೀಖಿನಂದು ಪೂರ್ವಭಾವಿ ಪರೀಕ್ಷೆ ನಡೆಯಿತು. ಪ್ರಶ್ನೆ ಪತ್ರಿಕೆಯಲ್ಲಿನ ಸುಮಾರು 59 ಕ್ಕೂ ಹೆಚ್ಚು ಪ್ರಶ್ನೆಗಳು ತಪ್ಪಾಗಿದ್ದವು. ವಿದ್ಯಾರ್ಥಿಗಳ ಹೋರಾಟದಿಂದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಮರುಪರೀಕ್ಷೆ ಆದೇಶವನ್ನು ನೀಡಿದ್ದರು. ಲೋಪವೆಸಗಿದ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳುವುದರಲ್ಲಿ ಇವತ್ತಿನವರೆಗೂ ಏನೂ ಆಗಿಲ್ಲ. ಇಲ್ಲಿಯವರೆಗೆ ಪರೀಕ್ಷಾ ನಿಯಂತ್ರಕರ ಮೇಲೆ ಯಾವುದೇ ಶಿಸ್ತು ಕ್ರಮವನ್ನು ಕೈಗೊಂಡಿಲ್ಲ. ಡಿಸೆಂಬರ್ 29 ರಂದು ಕೆ.ಎ.ಎಸ್. ಪೂರ್ವಭಾವಿ ಪರೀಕ್ಷೆಯಲ್ಲಿ ಕನ್ನಡ ಅನುವಾದ ಸೇರಿದಂತೆ ವ್ಯಾಕರಣ ದೋಷ, ಅಸಮಂಜಸ ಪ್ರಶ್ನೆಗಳ ಕಾರಣದಿಂದಾಗಿ ಸುಮಾರು 79ಕ್ಕೂ ಅಧಿಕ ಪ್ರಶ್ನೆಗಳಲ್ಲಿ ಲೋಪಗಳನ್ನು ಎಸಗಲಾಗಿತ್ತು. 79 ಪ್ರಶ್ನೆಗಳಲ್ಲಿ ಲೋಪವಿದ್ದಲ್ಲಿ ಇದು ಕನ್ನಡ ಮಾಧ್ಯಮದವರಿಗೆ ಅರ್ಥ ಆಗದಿದ್ದರೆ, ಅಲ್ಲಿ ಆಗುವ ಅಂಕಗಳ ನಷ್ಟಕ್ಕೆ ಕಾರಣ ಯಾರು? ಅವರು ಫೇಲ್ ಆದರೆ ಅದಕ್ಕೆ ಪರಿಹಾರವನ್ನು ಕಟ್ಟಿಕೊಡುವವರು ಯಾರು? ಇದು ನನ್ನ ಪ್ರಶ್ನೆ. ಡಿಸೆಂಬರ್ 29 ರಂದು ಪರೀಕ್ಷೆ ದಿನ 3 ಕೇಂದ್ರಗಳಲ್ಲಿ ಅಂದರೆ ಕೋಲಾರ, ರಾಮನಗರ ಮತ್ತು ವಿಜಯಪುರ ಇಲ್ಲಿ O.M.R Sheets ಬದಲಾಗಿದ್ದವು. ಇದೆಲ್ಲಾ ಪತ್ರಿಕೆಗಳಲಿ ಬಂದಿದೆ. O.M.R Sheets ಬದಲಾಗಿಬಿಟ್ಟಿವೆ. ನಂತರ O.M.R Sheets ಅನ್ನು ತಿದ್ದಿಸಿ ಪರೀಕ್ಷೆಯನ್ನು ಬರೆಸಲಾಯಿತು. ಪೂರ್ವಭಾವಿ ಪರೀಕ್ಷೆ ನಡೆದ ದಿನದಂದೇ ಶ್ರೀ ಗೋವಿಂದರಾಜು ಎಂಬ ರೈಲ್ವೆ ಉದ್ಯೋಗಿ ಪರೀಕ್ಷೆಯನ್ನು ಪಾಸ್ ಮಾಡುವುದಾಗಿ ಕೆಲವರಿಗೆ ಆಮಿಶಗಳನ್ನೊಡ್ಡಿ ವಿದ್ಯಾರ್ಥಿಗಳಿಂದ ಏನೇನೋ ಪಡೆದ ಬಗ್ಗೆ ನಾನು ಮಾತನಾಡುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ವಿಜಯನಗರ ಮತ್ತು ಉಪ್ಪಾರಪೇಟೆ ಪೋಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗಿವೆ. ಪ್ರಕರಣವನ್ನು ತನಿಖೆ ಮಾಡಿಸುತ್ತೇವೆಂದು ಹೇಳಿದರು. ಆದರೆ ಆ ಬಗ್ಗೆ ಯಾವುದೇ ಮಾಹಿತಿ ಇದುವರೆಗೂ ಇಲ್ಲ. ದೋಷ ಮಾಡಿದವರು ಹಿಂದೆ ಯಾರೋ ಇದ್ದೇ ಇರುತ್ತಾರೆ. ಆದರೆ ಅವರ ಮೇಲೆ ಕ್ರಮ ಆಗಬೇಕಲ್ಲವೇ, ಆದರೆ ಅದು ಆಗಿಲ್ಲ. ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲೀಷ್ ಭಾಷೆಯಲ್ಲಿ ತಯಾರಿಸಿ, ನಂತರ ಕನ್ನಡಕ್ಕೆ ಗೂಗಲ್ ಮುಖೇನ ಅನುವಾದಿಸಲಾಯಿತು. ಇದು ಕನ್ನಡ ಆಡಳಿತ ಭಾಷಾ ನೀತಿ! ನೀವು ಕನ್ನಡದಲ್ಲಿ ಮಾಡಿ ನಂತರ ಅದನ್ನು ತರ್ಜುಮೆ ಆಂಗ್ಲ ಭಾಷೆಗೆ ಮಾಡಿದರೆ ಕನ್ನಡದವರಿಗೆ ತೊಂದರೆಯಾಗುವುದಿಲ್ಲ. ಆಂಗ್ಲ ಭಾಷೆಯನ್ನು ತರ್ಜುಮೆ ಮಾಡಿರತಕ್ಕಂಥವರು ಅದು ಹೇಗೆ ಇದ್ದರೂ ಕೂಡ

spelling mistake ಇದ್ದರೂ ಕೂಡ ಮಾಡಿಕೊಳ್ಳುತ್ತಾರೆ. Type ಮಾಡುವವರು ನಾವು ತಪ್ಪಾಗಿ spelling mistake ಹೇಳಿದರೂ ಕೂಡ ಅವರು ಅದನ್ನು ಸರಿ ಮಾಡಿಕೊಳ್ಳುತ್ತಾರೆ. ಆದರೆ ಕನ್ನಡಕ್ಕೆ ನಾವು ಕೊಡತಕ್ಕಂಥ ಗೌರವ ಎಂಥದ್ದು? ಪ್ರಶ್ನೆ ಪತ್ರಿಕೆಯಲ್ಲಿ ಕನ್ನಡ ಭಾಷೆಯ ಪ್ರಶ್ನೆಗಳಲ್ಲಿ ಲೋಪದೋಷಗಳಿದ್ದರೆ ಆಂಗ್ಲಭಾಷೆ; ಅದನ್ನು ಹೇಳಿದ್ದೇನೆಂದು ಕಾಣುತ್ತದೆ. ಇದರಲ್ಲಿ ಇನ್ನೊಂದು ವಿಚಾರವೇನೆಂದರೆ, ಪ್ರತಿ ಬಾರಿಯಂತೆ ಈ ಬಾರಿ ಕೆ.ಎ.ಎಸ್. ಪರೀಕ್ಷೆಯಲ್ಲಿ cutoff ಅಂಕಗಳನ್ನು ಕೊಡುತ್ತಾರೆ. ಆದರೆ ಈ ಬಾರಿ ಇದುವರೆಗೂ ಅದನ್ನು ಪ್ರಕಟಣೆ ಮಾಡಲೇ ಇಲ್ಲ. ಈ ರೀತಿಯ ಅನೇಕ ತಪ್ಪುಗಳನ್ನು ಮಾಡುತ್ತಲೇ ಬರುತ್ತಿದ್ದಾರೆ. ಇದು ಗುಟ್ಟಾಗಿ ಏನೂ ಉಳಿದಿಲ್ಲ. ಕೆ.ಪಿ.ಎಸ್.ಸಿ. ಎಂದರೆ ಏನು ಎಂದು ಜನರಿಗೆ ಈಗ ಅರ್ಥವಾಗಿದೆ. ಮೊದಲು 6 ಅಥವಾ 7 ಜನ ಸದಸ್ಯರಿದ್ದರು. ಆದರೆ ಇವತ್ತು ಅದು ಎಷ್ಟಾಗಿದೆ ಸ್ವಾಮಿ? ಒಂದೂವರೆ ಅಥವಾ ಎರಡು ಡಜನ್ ಸದಸ್ಯರಿಬಹುದು. ಬಹುಶಃ 16 ಜನ ಸದಸ್ಯರಿದ್ದಾರೆಂದು ಕೇಳಿದ್ದೇನೆ. ಜಾತಿಗೊಂದು ಸದಸ್ಯರನ್ನು ಮಾಡುತ್ತಾ ಹೋದಲ್ಲಿ, ಅದರ ಮಹತ್ವ ಎಲ್ಲಿ ಉಳಿಯುತ್ತದೆ? ಕೆ.ಪಿ.ಎಸ್.ಸಿ. ಸದಸ್ಯರು ಜಾತಿ ಕಾಪಾಡುವುದಕ್ಕೆ ಅಲ್ಲಿ ಕುಳಿತುಕೊಳ್ಳಬೇಕಾಗಿಲ್ಲ. ಕೆಲವು ಬಾರಿ ಸಾಮಾಜಿಕ ನ್ಯಾಯವನ್ನು ಕಾಪಾಡಲು ಕೆಲವರನ್ನು ಕೊಡಬೇಕಾಗಿದೆ. ಏಕೆಂದರೆ ಅವರ ಜಾತಿಯನ್ನು ಭದ್ರಪಡಿಸುವುದಕ್ಕೋಸ್ಕರ ಈ ಜಾತಿಗೊಂದು, ಮತ್ತೊಂದು ಜಾತಿಗೊಂದು ಸದಸ್ಯರು ಎಂದು ಮಾಡಲಾಗಿದೆ. ಈ ರೀತಿ ವ್ಯವಸ್ಥೆ ಇದ್ದಲ್ಲಿ ಯಾವುದೇ ಸರ್ಕಾರಕ್ಕೆ ಇದು ಸರಿಯಾದ ಕ್ರಮವಲ್ಲ. ಅದು ನಾವು ಭವಿಷ್ಯವನ್ನು ಸೃಷ್ಟಿ ಮಾಡತಕ್ಕಂಥ ಜಾಗವಾಗಿದೆ. ಅಲ್ಲಿ ಕುಳಿತವರು ನೀವು ಬೇರೆ ಯಾವುದೋ ಕಾರಣಕ್ಕೆ ಮೆರಿಟ್ ಇರುವವರನ್ನೆಲ್ಲಾ ಬದಿಗಿಟ್ಟು... ಇನ್ನೊಂದು ವಿಚಾರವನ್ನು ನೋಡಿದೆನು. ಎಸ್.ಎಸ್.ಎಲ್.ಸಿ., ಪಾಸ್ ಆಗದೇ ಇರತಕ್ಕಂಥವರು ಅಲ್ಲಿ ನಾಯಕತ್ವ ಮಾಡುತ್ತಾರೆ. ಇದರಿಂದ ಏನು ಆದಂತಾಯಿತು? ಇವತ್ತಿನ ದಿವಸ ನಾಗರಿಕ ಸೇವೆಯನ್ನು ಇಚ್ಛಿಸುವ ಅಪಾರವಾದ ನಂಬಿಕೆಯೊಂದಿಗೆ ಬರತಕ್ಕಂಥ ಅಭ್ಯರ್ಥಿಗಳ ವಯೋಮಿತಿ ಮೀರಿದ್ದರಿಂದ ಅವರಿಗೆ ಕೆಲಸ ಸಿಗದಂತಹ ಪರಿಸ್ಥಿತಿ ಬರುತ್ತಿದೆ. ಇಲ್ಲಿ ಆಗತಕ್ಕಂಥ ದೋಷಕ್ಕೆ ಯಾರಾದರೂ ಕೋರ್ಟ್‌ಗೆ ಹೋದಲ್ಲಿ 5 ವರ್ಷಗಳು ಮುಂದಕ್ಕೆ ಹೋದಲ್ಲಿ ಆತ ಕೆಲಸಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ. ಅಲ್ಲಿಗೆ ಅವನ future ಹೋಯಿತು. ಆಮೇಲೆ ಇವತ್ತಿನ ದಿವಸ ಅದು ಯಾವ ಮಟ್ಟಕ್ಕೆ ಹೋಗಿದೆಯೆಂದರೆ, ಪಕ್ಷಪಾತ ಧೋರಣೆಗಳು ಒಳಹೊಕ್ಕಿಬಿಟ್ಟಿವೆ. ಅಲ್ಲಿ ಮೆರಿಟ್‌ಗೆ ಬೆಲೆಯೇ ಇಲ್ಲ. ಯು.ಪಿ.ಎಸ್.ಸಿ. ರೀತಿಯಲ್ಲಿ ಕೆ.ಪಿ.ಎಸ್.ಸಿ.ಯನ್ನು ಸುಭದ್ರಗೊಳಿಸಲು ಸರ್ಕಾರ ಪ್ರಯತ್ನಿಸುತ್ತಲೇ ಇಲ್ಲ. ಅಲ್ಲಿ ಪರೀಕ್ಷೆ ಬರೆಯುವವರಿಗೂ ಭದ್ರತೆ ಇರಬೇಕು. ಅವರಿಗೆ ಒಂದು ಭರವಸೆಯ ನಂಬಿಕೆ ಬರಬೇಕು. ನನಗೆ ಒಂದು ಭವಿಷ್ಯ ಇದೆ. ಅದು ಯಾವುದೇ ಲೋಕಸೇವಾ ಆಯೋಗ ಆಗಿರಲಿ ಅಥವಾ ಸರ್ಕಾರವನ್ನಾಗಲಿ ನಾನು ನಂಬಬೇಕು ಎನ್ನತಕ್ಕಂಥ ನಂಬಿಕೆ ಅವರಲ್ಲಿ ಹುಟ್ಟುತ್ತಲೇ ಇಲ್ಲ. ಅದು ಒಂದು ರೀತಿ ವ್ಯಾಪಾರದ ಅಂಗಡಿಯಾಗಿದೆ. ನಾವು ಅಲ್ಲಿಗೆ ಹೋಗಿ, ಬೆಲೆ ಹೆಚ್ಚಿಗೆ ಕೊಟ್ಟರೆ, ಓ ನನಗೆ ಅಲ್ಲಿ ಲಾಭವಾಗುತ್ತದೆ ಎನ್ನತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಅದಕ್ಕಾಗಿ ಸರ್ಕಾರಕ್ಕೂ ಬದ್ಧತೆ ಬೇಕು ಮತ್ತು ಶಿಸ್ತು ಕೂಡ ಇರಬೇಕು. ಅವರನ್ನು ಹತೋಟಿಯಲ್ಲಿಡತಕ್ಕಂಥ ಕೆಲಸವನ್ನು ಕೂಡ ಮಾಡಬೇಕು. ಉದಾಹರಣೆಗೆ ಒಂದೊಂದು ಬಾರಿ ನನಗೆ

ಬೇಕಾದವರು ಆದಲ್ಲಿ, ಆತನಿಗೆ ಮೆರಿಟ್ ಇಲ್ಲದೇ ಇದ್ದರೂ ಕೂಡ ಆತನನ್ನು ಪಾಸ್ ಮಾಡಿಸಬೇಕು ಎಂಬ ಭಾವನೆ ನಮಗೆ ಬಂದುಬಿಟ್ಟರೆ ಮತ್ತೆ ಮೆರಿಟ್ ಇರುವವರ ಗತಿ ಏನಾಗಬೇಕು? ಇವತ್ತಿನ ದಿವಸ ಎಲ್ಲಾ double degreeಗಳನ್ನು ಮಾಡಿಕೊಂಡು ಉತ್ತಮ ಮಟ್ಟದ ಅಂಕಗಳನ್ನು ಪಡೆದು ಕೆ.ಪಿ.ಎಸ್.ಸಿ.ಗೆ ಬಂದು exam attend ಮಾಡಿ ಬೀದಿಯಲ್ಲಿ ಕುಳಿತುಕೊಂಡಿದ್ದಾರೆ. ಇವತ್ತಿನ ದಿವಸ ಈ ಸದನದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಪಾಸ್ ಮಾಡಿರತಕ್ಕಂಥ ಅಧಿಕಾರಿಗಳು ಕುಳಿತುಕೊಂಡಿದ್ದಾರೆ. ಈ ಹಿಂದಿನ ಪರಿಸ್ಥಿತಿ ಏನಿತ್ತು, ಈಗಿನ ಪರಿಸ್ಥಿತಿ ಹೇಗಿದೆಯೆಂದು ನೀವು ಅವರ ಅನುಭವಗಳನ್ನು ಕೇಳಿ. ಬಹುಶಃ ಇವತ್ತಿನ ಪರಿಸ್ಥಿತಿ ಏನಾದರೂ ಆ ಕಾಲದಲ್ಲಿ ಇದ್ದಿದ್ದರೆ ಇವರ್ಯಾರು ಕೂಡ ಇಲ್ಲಿಗೆ ಬಂದು ಕುಳಿತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಇವರ ಜಾಗದಲ್ಲೆಲ್ಲಾ ಬೇರೆಯವರು ಬರಬೇಕಾಗಿತ್ತು.

**(ಮುಂದು)**

(131)6.3.2025/5.00/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು) (ಮುಂದು):-**

ಇದು ಎಷ್ಟು ಸರಿ? ಮಾರಾಟಕ್ಕೆ ಪದವಿಗಳು ಸಿಗುವುದಾದರೆ ಏನು ಮಾಡೋದು? ಓದಿದ್ದರೂ ಕೂಡ ಪರಿಸ್ಥಿತಿ ಏನಾಗುತ್ತದೆ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿಯೂ ಕೂಡ; ಕೆಲವರು ಅವನಿಗೆ ಕೊಂಡುಕೊಳ್ಳುವ ಶಕ್ತಿ ಇದೆ ಅದಕ್ಕೆ ಬಂದಿದ್ದಾನೆ ಎಂದು ಹೇಳುತ್ತಾರೆ. ಅಂದರೆ ಕೊಂಡುಕೊಳ್ಳುವ ಶಕ್ತಿ ಇಲ್ಲದವರು ಬರುವುದಕ್ಕೆ ಸಾಧ್ಯವಿಲ್ಲ ಎಂದಾಯಿತು ಅಲ್ಲವೇ? ಇವತ್ತು ಇಂತಹ ಪರಿಸ್ಥಿತಿ ಇದೆ. ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳು/ಅಭ್ಯರ್ಥಿಗಳು ಇವತ್ತು ಏನು ಪರೀಕ್ಷೆ ಬರೆಯುತ್ತಾರೋ ಅವರಿಗೆ ಅವಕಾಶಗಳು ಬಹಳಷ್ಟು ವಿರಳವಾಗಿದೆ. ಸಿಗುತ್ತಲೇ ಇಲ್ಲ. ದೋಷಗಳು ಬೇಕಾದಷ್ಟಿವೆ. ದೋಷಗಳನ್ನು ಕೆ.ಪಿ.ಎಸ್.ಸಿ.ಯಲ್ಲಿ ಸರಿಪಡಿಸುವುದು ಯಾವಾಗ? ನಾನು ಇವತ್ತು ಕೂಡ ಫ್ರೀಡಂ ಪಾರ್ಕ್‌ಗೆ ಹೋದೆ. ಈಗಲೂ ಕೂಡ ಅಲ್ಲಿ ಅಭ್ಯರ್ಥಿಗಳು ಧರಣಿ ಕುಳಿತಿದ್ದಾರೆ. ಸರ್ಕಾರ ಮಾನ್ಯ ಮುಖ್ಯಮಂತ್ರಿಗಳು ಆಯಿತು ದೋಷ ಆಗಿದೆ ಅದಕ್ಕಾಗಿ ಮರುಪರೀಕ್ಷೆಯನ್ನು ಮಾಡುತ್ತೇವೆಂದು ಹೇಳಿದರು. ಮರುಪರೀಕ್ಷೆಯನ್ನೂ ಮಾಡಿದರು. ಮರುಪರೀಕ್ಷೆ ಮಾಡಿದ ಮೇಲೆ ಮೊದಲು 78 ತಪ್ಪುಗಳಿದ್ದವು 2ನೇ ಪರೀಕ್ಷೆ ಮಾಡಿದಾಗ 59ಕ್ಕೆ ಬಂತು. ತಪ್ಪುಗಳು ಸ್ವಲ್ಪ ಕಡಿಮೆಯಾದವೇ ಹೊರತು ದೋಷಪರಿಹಾರ ಆಗಲೇ ಇಲ್ಲ. ಇದನ್ನು ತೆಗೆದುಕೊಂಡು ಹೋಗಿ ಕೇಳಿದರೆ ''ಏನಪ್ಪ ಪದೇ ಪದೇ ಇದೇ ಇರುತ್ತದೆ ಹೋಗ್ರಿ'' ಎಂದರೆ ಆಗುತ್ತದೆಯೇ? ಈಗ ಅವರು ಏನು ಮಾಡಬೇಕು? ನಾನು ಅವರನ್ನು ಮಾತನಾಡಿಸಿ ಬರೋಣವೆಂದು ಅಲ್ಲಿಗೆ ಹೋದೆ. ಪಾಪ ಆಗಲೇ ಅನೇಕ ಹೆಣ್ಣುಮಕ್ಕಳಿಗೆ ವಯಸ್ಸಾಗಿದೆ, ಮದುವೆಯಾಗಿದೆ, ಮಕ್ಕಳನ್ನು ಕೂಡ ಕರೆದುಕೊಂಡು ಬಂದು ಅಲ್ಲಿ ಕುಳಿತಿದ್ದಾರೆ. ಆ ಮಕ್ಕಳಿಗಾದರೂ ನಾವು ಭವಿಷ್ಯ ಕಟ್ಟಿಕೊಡಬಹುದು ಎನ್ನುವ ಉದ್ದೇಶದಲ್ಲಿ ಅವರೆಲ್ಲಾ ಪರೀಕ್ಷೆಗಳನ್ನು ಬರೆದಿದ್ದಾರೆ. ಈಗ ಅವರೆಲ್ಲಾ ಏನು ಮಾಡಬೇಕು? ವಯೋಮಿತಿಯಲ್ಲಿದ್ದರೆ ಇನ್ನೊಂದು ಅವಕಾಶವನ್ನು

ಅವರು ತೆಗೆದುಕೊಳ್ಳಬಹುದು. ಅದರಲ್ಲೂ ಕೂಡ ಅವರು ಅವಕಾಶವಂಚಿತರಾಗುತ್ತಾರೆ. ಹೀಗಾಗಿ ಬಹಳಷ್ಟು ದೋಷಗಳಿವೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಏತಕ್ಕೆ ಪ್ರಯತ್ನ ಮಾಡುತ್ತಿಲ್ಲ? ಪ್ರತಿ ದಿನ ಅವರು ರಸ್ತೆಯಲ್ಲೇ ಇದ್ದಾರೆ, ಸರ್ಕಾರದ ಗಮನ ಸೆಳೆಯುತ್ತಲೇ ಇದ್ದಾರೆ. ಶಾಸಕರ ಬಳಿಗೆ ಹೋಗುತ್ತಾರೆ ಸಚಿವರ ಬಳಿಗೆ ಹೋಗುತ್ತಾರೆ, ಮುಖ್ಯಮಂತ್ರಿಗಳಲ್ಲಿ ಬೇಡಿಕೆ ಇಡುತ್ತಾರೆ. ಏನೇ ಆದರೂ ಒಂದಂಶವೂ ಕೂಡ ವ್ಯತ್ಯಾಸವಾಗುತ್ತಿಲ್ಲ. ಸಮಸ್ಯೆ ಅಲ್ಲೇನಿದೆಯೋ ಅದು ಹಾಗೆಯೇ ಮುಂದುವರೆಯುತ್ತಿದೆ. ವಿದ್ಯಾರ್ಥಿಗಳ ಸಮಸ್ಯೆ ಏನಿದೆಯೋ ಅದು ಕೂಡ ಹಾಗೇ ಮುಂದುವರೆಯುತ್ತಿದೆ. ಇದಕ್ಕಾಗಿ ಪರೀಕ್ಷೆಗಳೇಕೆ? ಸುಲಭವಾಗಿ ಓದಿ ಪರೀಕ್ಷೆಗಳಲ್ಲಿ ಬೇರೆ ರೀತಿಯಲ್ಲಿ ಬರುವುದಾದರೆ ಎಲ್ಲರೂ ಮಾಡಬಹುದು. ಆದರೆ ಇವತ್ತು competition ಇದೆ. ಎಲ್ಲಾ ವಿದ್ಯಾರ್ಥಿಗಳಲ್ಲಿಯೂ competition ಇದೆ. ಬರೀ ಅಂಕಗಳಿದ್ದರೆ ಆಗುವುದಿಲ್ಲ. ಮೊದಲು ಕೆ.ಪಿ.ಎಸ್.ಸಿ. ಇಂದಲೇ 200 ಮಾರ್ಕ್ ಇರುತ್ತಿತ್ತು. ಕಷ್ಟಪಟ್ಟು 800 ಅಂಕಗಳನ್ನು ತೆಗೆದುಕೊಂಡರೆ ಅಲ್ಲಿರುವಂತಹ ಸದಸ್ಯರುಗಳು ಅವರಿಗೆ 200 ಅಂಕಗಳನ್ನು ಕೊಡಬಹುದಾಗಿತ್ತು. 800 ಅಂಕ ತೆಗೆದುಕೊಂಡವರಿಗೆ 200 ಅಂಕ ಕೊಟ್ಟರೆ 1000 ಅಂಕಗಳಿಗೆ ತಲುಪುತ್ತಿದ್ದರು. 900 ಅಂಕ ತೆಗೆದುಕೊಂಡವರಿಗೆ 200 ಅಂಕ ಕೊಟ್ಟರೆ 1100 ಅಂಕಕ್ಕೆ ಹೋಗುತ್ತಿತ್ತು. ಅಲ್ಲೇನಾಗುತ್ತಿತ್ತು ಎಂದರೆ, 950 ಅಂಕ ತೆಗೆದುಕೊಂಡವನಿಗೆ 50 ಅಂಕ ಸಿಗುತ್ತಿತ್ತು ಆಗ 1000 ಅಂಕ ಆಗುತ್ತಿತ್ತು. 850 ತೆಗೆದುಕೊಂಡವನಿಗೆ 200 ಸಿಗುತ್ತಿತ್ತು ಆಗ ಅವರಿಗಿಂತ ಮೇಲೆ ಹೋಗುತ್ತಿದ್ದ. ಓದಿದವರು ಅವರು, ಹಗಲು ರಾತ್ರಿ ಕಷ್ಟ ಪಟ್ಟವರು ವಿದ್ಯಾರ್ಥಿಗಳು. ಅವರನ್ನು ಆ ಗೆರೆ ದಾಟಿಸುತ್ತಿದ್ದವರು ಇಲ್ಲಿ ಕುಳಿತುಕೊಂಡವರು. ಇವರನ್ನು ದಾಟಿಸಬೇಕಾ, ದಾಟಿಸಬಾರದಾ? ತೀರ್ಮಾನ ಇಲ್ಲಾಗುತ್ತಿತ್ತು. ಅದನ್ನು ಸರ್ಕಾರ ಗಮನಿಸಿ ಈಗ 20 ಅಂಕಗಳಿಗೆ ತಂದಿದೆ. ಬಹಳ ಕಡಿಮೆ. ಅದರಿಂದಾಗಿ ಓ.ಎಂ.ಆರ್. ಶೀಟ್‌ಗಳೇ ನಾಪತ್ತೆಯಾಗುತ್ತವೆ. ಇವೇ ತಿದ್ದುಪಡಿಯಾಗುತ್ತವೆ. ಇಲ್ಲೇ ದಾಟಿಸಿಬಿಡುತ್ತಾರೆ. ಇದು ವಿದ್ಯಾರ್ಥಿಗಳಿಂದ ಬರುತ್ತಿರುವಂತಹ ದೂರುಗಳು. ಕೆ.ಪಿ.ಎಸ್.ಸಿ. ಮೇಲೆ ಎಲ್ಲರಿಗೂ ಅಪನಂಬಿಕೆ ಬಂದುಬಿಟ್ಟಿದೆ. ಇದನ್ನು ಹೋಗಲಾಡಿಸಬೇಕು. ಆ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆದು ವಂಚಿತರಾಗಿ ಅಲ್ಲಿ ಹೋದರೆ ಪ್ರತಿ ದಿವಸ ಒಂದಲ್ಲ ಒಂದು ಪ್ರದರ್ಶನಗಳು ನಡೆದೇ ಇವೆ. ಸರ್ಕಾರ ಏತಕ್ಕೆ ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆ. ಈ ಕಾರಣದಿಂದ ಸರ್ಕಾರವು ಕೂಡ ಕೆಟ್ಟ ಹೆಸರನ್ನು ಪಡೆದುಕೊಳ್ಳುತ್ತಿದೆ. 'Corrupt Government' ಎಂದು ನಾವೆಲ್ಲಾ ಸುಲಭವಾಗಿ ಮಾತನಾಡುತ್ತೇವೆ. ಜನರು ಬಂದು ನಮ್ಮ ಹತ್ತಿರ ಹೇಳುತ್ತಾರೆ. ಕೆ.ಪಿ.ಎಸ್.ಸಿ. ಇಂತಹ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಸಿಕೊಂಡು ಗೌಪ್ಯತೆಯನ್ನು ಕಾಪಾಡಿ ಅವರ ಯೋಗ್ಯತೆಯ ಮೇಲೆ ಅವರನ್ನು ಆಯ್ಕೆ ಮಾಡುವ ಬದಲು ಈ ರೀತಿ ಮಾಡಿದಾಗ ಅವರು ಎಲ್ಲಾ ಕಡೆಯೂ ಬಂದು ಎಲ್ಲೆಲ್ಲಿ ಏನೇನಾಗುತ್ತಿದೆ ಎಂದು ಹೇಳುತ್ತಾರೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಿಲ್ಲವೇ? ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದ್ದನ್ನು ಒಳ್ಳೆಯ ಸರ್ಕಾರ ಎನ್ನುತ್ತೀರಾ? ನಾವು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳುವುದಿಲ್ಲ. ಅವರು ಹೇಳಿದ್ದನ್ನು ನಾವು ಜನತೆಗೆ ಹೇಳುತ್ತೇವೆ, ಸರ್ಕಾರಕ್ಕೆ ಹೇಳುತ್ತೇವೆ. ಜನರು ಇದೊಂದು 'Corrupt Government'

ಎಂದು ಹೇಳುತ್ತಾರೆ. 'Corrupt Government' ಎಂದು ನಾವೂ ಹೇಳುತ್ತೇವೆ. ನಾವೇನೂ ನಿಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ. ಇಂತಹ ನ್ಯೂನತೆಗಳನ್ನು ತಾವು ಸರಿಪಡಿಸಬೇಕು. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇವತ್ತು ಬೇಕಾದಷ್ಟು ಹಗರಣಗಳ ಪಟ್ಟಿ ಹೇಳಬಹುದು. ಆದರೆ ಈ ವಿಚಾರದಲ್ಲಿ ಅಂತಹವುಗಳನ್ನು mention ಮಾಡುವುದಕ್ಕೆ ಹೋಗುವುದಿಲ್ಲ. ಆ ಕಾರಣದಿಂದ ನಮ್ಮಲ್ಲಿ ಬಹಳ ಸದಸ್ಯರು ಕೆ.ಪಿ.ಎಸ್.ಸಿ. ವಿಚಾರದಲ್ಲಿ ತಯಾರಾಗಿ ಬಂದಿದ್ದಾರೆ. ಆದ್ದರಿಂದ ಅವರೂ ಮಾತನಾಡಬೇಕು. ನಾನು ಹೆಚ್ಚು ಸಮಯವನ್ನು ತೆಗೆದೆಕೊಳ್ಳುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ಆಗಲೇ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಎರಡು ಗಂಟೆಗಳ ಕಾಲ ಮಾತನಾಡಬೇಕು ಅವಕಾಶ ಕೊಡುತ್ತೀರಾ?

**ಸಭಾಪತಿಯವರು:-** ಮಾತನಾಡಿ, ನನ್ನದೇನೂ ತಕರಾರಿಲ್ಲ. ಎಷ್ಟು ಸಮಯ ಬೇಕಾದರೂ ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅಂದರೆ ಅವರ್ಯಾರೂ ಮಾತನಾಡುವುದು ಬೇಡ ಎನ್ನುತ್ತೀರಾ?

**ಸಭಾಪತಿಯವರು:-** ಇಲ್ಲ, ರಾತ್ರಿ 12 ಗಂಟೆಯಾದರೂ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಹೇಳಬಯಸುವುದೇನೆಂದರೆ, ಅವರಿಗೆ ನ್ಯಾಯ ಸಿಗಬೇಕು, ಮರುಪರೀಕ್ಷೆಯಾಗಬೇಕು. ಎಲ್ಲಿ ದೋಷಗಳಿವೆ ಅದನ್ನು ಸರಿಪಡಿಸಬೇಕು. ಪ್ರಶ್ನೆಪತ್ರಿಕೆಗಳನ್ನು ಇನ್ನು ಮುಂದೆ ತರ್ಜುಮೆ ಮಾಡುವಾಗ ದೋಷಗಳಾಗದಿದ್ದ ಹಾಗೆ ನೋಡಿಕೊಳ್ಳಬೇಕು. ಗೌಪ್ಯತೆಯನ್ನು ಕಾಪಾಡಿ ನಾವು ಬೇಡ ಎನ್ನುವುದಿಲ್ಲ. ಆದರೆ ಗೌಪ್ಯತೆ ಕಾಪಾಡುವ ನೆಪದಲ್ಲಿ 'ಗೂಗಲ್' ಅನ್ನು ತಂದು ಏತಕ್ಕೆ ಅಡ್ಡ ಇಟ್ಟುಕೊಳ್ಳುತ್ತೀರಿ? ನಮ್ಮಲ್ಲೇನು ಕನ್ನಡ ಪಂಡಿತರಿಲ್ಲವೇ? ನಾನು ಒಂದನ್ನು ಕೇಳ್ಪಟ್ಟೆ, ಇದನ್ನು ಮಾಡುತ್ತಿರುವಂತಹವರು ಕನ್ನಡ ಬರಲಾರದ ಒಬ್ಬ ಅಧಿಕಾರಿ. ಹೊರರಾಜ್ಯದ ಕನ್ನಡದ ಅರಿವಿಲ್ಲದ ಒಬ್ಬ ವ್ಯಕ್ತಿ. ಅವರು ನಿಮಗೆ ಏತಕ್ಕೆ ಬೇಕಾಗಿತ್ತು? ಅನೇಕ ವಿಚಾರಗಳಿವೆ. ತಾವು ಹೇಳಿದ ಹಾಗೆ ನಾನು 2-3 ಗಂಟೆಗಳ ಕಾಲ ಮಾತನಾಡಬಹುದು. ಆದರೆ ಎಷ್ಟು ಮಾತನಾಡಿದರೂ ಅಷ್ಟೇ. ನಮಗೆ ಸಮಸ್ಯೆ ಪರಿಹಾರವಾಗುವುದು ಮುಖ್ಯವಾಗಿದೆ. ಆದ್ದರಿಂದ ಎಲ್ಲರೂ ಮಾತನಾಡಲಿ. ಸರ್ಕಾರ ಇದಕ್ಕೆ ಒತ್ತು ಕೊಟ್ಟು ನ್ಯೂನತೆಗಳನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕೆ.ಎ.ಎಸ್. ಪರೀಕ್ಷೆಯಲ್ಲಿ ಆಗಿರುವಂತಹ ಲೋಪಕ್ಕೆ, ದೋಷಕ್ಕೆ ವಿದ್ಯಾರ್ಥಿಗಳು ಹರತಾಳ, ಸ್ಟ್ರೈಕ್, ಪ್ರತಿಭಟನೆ

ಮಾಡುತ್ತಿದ್ದಾರೆ. ಕೆ.ಪಿ.ಎಸ್.ಸಿ. ಪ್ರತಿ ವರ್ಷ ಕೆ.ಎ.ಎಸ್. ಗೆ ಪರೀಕ್ಷೆ ಮಾಡುತ್ತಿಲ್ಲ. 3-4 ವರ್ಷಕ್ಕೊಂದು ಸಲ ಪರೀಕ್ಷೆಗಳು ನಡೆಯುತ್ತಿವೆ. ಅದರೊಳಗೆ ಈಗ ಪ್ರಶ್ನೆಪತ್ರಿಕೆಯಲ್ಲಿ ದೋಷ ಆಗಿದ್ದಕ್ಕೆ, ಪರೀಕ್ಷೆಗಳಲ್ಲಿ ಲೋಪ ಆಗಿದ್ದಕ್ಕೆ ಈಗಾಗಲೇ ಒಂದು ಸಲ ಮರುಪರೀಕ್ಷೆ ಆಯಿತು. ಈಗ ಮತ್ತೆ ಇನ್ನೊಂದು ಸಲ ಮರುಪರೀಕ್ಷೆ ಮಾಡುತ್ತಿರುವುದಕ್ಕೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಿದ್ದಾರೆ. ಏನಾಗಿದೆ ಎಂದರೆ, ಒಂದಲ್ಲ, ಎರಡಲ್ಲ 79 ದೋಷಗಳು. ಎಷ್ಟು ಅಂಕಗಳನ್ನು ಕೊಟ್ಟಿದ್ದಾರೆ ಎಂದರೆ ಮೂರು ಅಂಕಗಳನ್ನು ಕೊಟ್ಟಿದ್ದಾರಂತೆ.

(ಮುಂದು)

**(132) 06.03.2025 (5.10) ಹೆಚ್‌ವಿ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಪಶ್ನೆ ಪತ್ರಿಕೆಯಲ್ಲಿ ಸುಮಾರು 79 ತಪ್ಪುಗಳಾಗಿವೆ. ಈ 79 ತಪ್ಪುಗಳನ್ನು ತಿದ್ದುಪಡಿ ಮಾಡಿಕೊಳ್ಳುವುದಕ್ಕೆ 03 ಅಂಕಗಳನ್ನು ಕೊಟ್ಟಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುತ್ತದೆಯೇ? ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ತೊಂದರೆಯಾಗಿದೆಯೆಂದರೇ, ಇಂಗ್ಲೀಷ್‌ನಲ್ಲಿ Export ಎನ್ನುವ ಪದ ಇದೆ. ಇದಕ್ಕೆ ಕನ್ನಡದಲ್ಲಿ "ರಫ್ತು" ಎನ್ನುವ ಅರ್ಥ ಬರುತ್ತದೆ. ಆದರೆ, ಇದನ್ನು "ಆಮದು" ಎಂದು ಭಾಷಾಂತರ ಮಾಡಲಾಗಿದೆ. ಇದನ್ನು ನೋಡಿದರೇ ವಿದ್ಯಾರ್ಥಿಗಳ ತಲೆಕೆಟ್ಟು ಹೋಗುವುದಿಲ್ಲವೇ? ಇದಕ್ಕೆ ಕೆ.ಪಿ.ಎಸ್.ಸಿ.,ಯವರು ವಿದ್ಯಾರ್ಥಿಗಳಿಗೆ,"ನೀವು ಇಂಗ್ಲೀಷ್ ಪ್ರಶ್ನೆ ಪತ್ರಿಕೆಯನ್ನು ನೋಡಿಕೊಂಡು ಉತ್ತರವನ್ನು ಬರೆಯಿರಿ" ಎನ್ನುವ ಸಮಜಾಯಿಷಿಯನ್ನು ಕೊಟ್ಟಿದ್ದಾರೆ. ಈ ರೀತಿ ಮಾಡುವುದಾದರೇ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಏತಕ್ಕೋಸ್ಕರ ಓದಬೇಕು?

ಸನ್ಮಾನ್ಯ ಸಭಾಪತಿಯವರೇ, ಕನ್ನಡದಲ್ಲಿ "ನಿಶಾಚರ" ಎನ್ನುವ ಪದವಿದೆ. ಇದು ಎಲ್ಲರಿಗೂ ಅರ್ಥವಾಗುತ್ತದೆ. ಆದರೇ, ಗೂಗಲ್ ಟ್ರಾನ್ಸ್‌ಲೇಷನ್ ಮಾಡಿ ಆ ಪದವನ್ನು "ರಾತ್ರಿ ಚಟುವಟಿಕೆ" ಎಂದು ಪ್ರಶ್ನೆಪತ್ರಿಕೆಯಲ್ಲಿ ಮುದ್ರಿಸಲಾಗಿದೆ. ಇದನ್ನು ಕನ್ನಡ ಪಂಡಿತರು ನೋಡಿದರೇ, "ಯಾರು ಈ ರೀತಿ ತರ್ಜುಮೆ ಮಾಡಿರುವುದು" ಎಂದು ಕಪಾಳಕ್ಕೆ ಹೊಡೆಯುತ್ತಾರೆ. "ನಿಶಾಚರ" ಎನ್ನುವ ಶಬ್ಧಕ್ಕೆ "ರಾತ್ರಿ ಚಟುವಟಿಕೆ" ಎಂದು ತುರ್ಜುಮೆ ಮಾಡಿರುವುದು ನಿಜಕ್ಕೂ ನಾಚಿಕೆಗೇಡಿನ ವಿಚಾರವಾಗಿದೆ. ಇಂಗ್ಲೀಷ್‌ನಲ್ಲಿ Earth worm ಎನ್ನುವ ಪದವಿದೆ. ಇದರ ಕನ್ನಡ ತರ್ಜುಮೆ ಬಹಳ ಸರಳವಾಗಿದೆ. ನಮ್ಮ ಹಳ್ಳಿ ರೈತನನ್ನು ಕೇಳಿದರೂ "ಎರೆಹುಳ" ಎಂದು ಹೇಳುತ್ತಾನೆ. ಆದರೆ, ಪ್ರಶ್ನೆಪತ್ರಿಕೆಯಲ್ಲಿ "ಮಣ್ಣು ಹುಳ" ಎಂದು ತರ್ಜುಮೆ ಮಾಡಲಾಗಿದೆ. ಅವರ ತಲೆಯೊಳಗೆ ಯಾವುದೋ ಹುಳು ಇರಬಹುದು. ಈ ರೀತಿ ಸುಮಾರು 79 ತಪ್ಪುಗಳು ಕನ್ನಡ ಪ್ರಶ್ನೆಪತ್ರಿಕೆಯಲ್ಲಿದೆ.

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಓ.ಎಂ.ಆರ್. ಶೀಟ್‌ನಲ್ಲಿ ಆಗಿರುವ ಅವಾಂತರದ ಬಗ್ಗೆ ಹೇಳಿದ್ದಾರೆ. ಡಿಸೆಂಬರ್ 29, 2024ರಂದು ಕೋಲಾರ, ರಾಮನಗರ ಮತ್ತು ವಿಜಯಪುರ ಪರೀಕ್ಷಾ ಕೇಂದ್ರಗಳಲ್ಲಿ ಓ.ಎಂ.ಆರ್. ಶೀಟ್‌ಗಳು ಅದಲು-ಬದಲು ಆಗಿದ್ದವು; ನಂತರ

ಓ.ಎಂ.ಆರ್., ಶೀಟ್‌ಗಳನ್ನು ತಿದ್ದಿಸಿ ಪರೀಕ್ಷೆಯನ್ನು ಬರೆಯಿಸಲಾಯಿತು. **"ತಿದ್ದಿಸಿ ಪರೀಕ್ಷೆಯನ್ನು ಬರೆಯಿಸಲಾಯಿತು"** ಎಂದು ಹೇಳಲಾಗಿದೆ. ಈ ಪರೀಕ್ಷೆಯಲ್ಲಿ ಪೆನ್ ಅಥವಾ ಪೆನ್ಸಿಲ್ ಬದಲಾಯಿಸುವಂತಿಲ್ಲ ಎನ್ನುವ ನಿಯಮವಿದ್ದರೂ, ಹೇಗೆ ಓ.ಎಂ.ಆರ್. ಶೀಟ್‌ಗಳನ್ನು ತಿದ್ದಿಸಿ ಬರೆಯಿಸಲಾಯಿತು ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ಸಿ.ಸಿ., ಕ್ಯಾಮೆರಾದ ಕಾಣ್ಗಾವಲಿನಲ್ಲಿ ಪರೀಕ್ಷೆಗಳು ನಡೆಯುತ್ತವೆ. ಪರೀಕ್ಷಾ ಹಾಲ್‌ಗಳಿಗೆ ಸಿ.ಸಿ., ಕ್ಯಾಮೆರಾವನ್ನು ಅಳವಡಿಸಿ ಎಸ್.ಎಸ್.ಎಲ್.ಸಿ., ಪರೀಕ್ಷೆಯನ್ನು ನಡೆಸಲಾಗುತ್ತದೆ. ಇನ್ನೂ ಕೆ.ಎ.ಎಸ್., ಪರೀಕ್ಷೆ ಎನ್ನುವುದು ಸ್ಪರ್ಧಾತ್ಮಕ ಪರೀಕ್ಷೆಗಳಾಗಿವೆ. ಇಲ್ಲಿನ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕಾಗುತ್ತದೆ. ಈ ಪರೀಕ್ಷೆಗಳನ್ನು ಎದುರಿಸುವಂತಹ ವಿದ್ಯಾರ್ಥಿಗಳು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಸುಮಾರು 5-10 ವರ್ಷಗಳ ಹಿಂದಿನಿಂದಲೂ ತಯಾರಿ ಮಾಡಿರುತ್ತಾರೆ. ನಮ್ಮ ಸದನದ ಆ ಭಾಗದ ಗ್ಯಾಲರಿಯಲ್ಲಿ ಕೆ.ಎ.ಎಸ್., ಐ.ಎ.ಎಸ್., ದರ್ಜೆಯ ಅಧಿಕಾರಿಗಳು ಕುಳಿತುಕೊಂಡಿದ್ದಾರೆ. ಅವರಂತೆ ನಾವು ಸಹ ಅಧಿಕಾರಿಗಳಾಗಬೇಕೆಂದು ಕನಸು ಕಂಡಿರುವಂತಹ ಅಭ್ಯರ್ಥಿಗಳ ಗತಿಯೇನಾಗಬೇಕು? ಈಗ ತಾನೇ ಸ್ವಲ್ಪ ಹೊತ್ತಿನ ಹಿಂದೆ ಆ ವಿದ್ಯಾರ್ಥಿಗಳು ಬಂದಿದ್ದರು.

ಸನ್ಮಾನ್ಯ ಸಭಾಪತಿಯವರೇ, ಈ ಮಧ್ಯೆ "ಕೆ.ಪಿ.ಎಸ್.ಸಿ.,ಯ ಸುಧಾರಣೆಗಳು" ಎನ್ನುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. 12ನೇ ಶತಮಾನದಿಂದ ಬಸವಣ್ಣನವರಿಂದ ಹಿಡಿದು ಇಲ್ಲಿಯವರೆಗೆ ಸಮಾಜ ಸುಧಾರಣೆ ಎನ್ನುವುದು ನಡೆಯುತ್ತಿದೆ. ಆದರೆ, ಇಲ್ಲಿಯವರೆಗೆ ಜಾತೀಯತೆ ಎನ್ನುವುದು ಈ ಸಮಾಜದಲ್ಲಿ ಹೋಗಿಲ್ಲ. ಕೆ.ಪಿ.ಎಸ್.ಸಿ.,ಯಲ್ಲಿ ಖಂಡಿತವಾಗಿಯೂ ಸುಧಾರಣೆಗಳನ್ನು ತರಬೇಕು, ಅದು ತಪ್ಪಲ್ಲ. ಅದನ್ನು ನಾನು ಅಲ್ಲಗೆಳೆಯುತ್ತಿಲ್ಲ. ಆದರೆ, ಈ ವಿದ್ಯಾರ್ಥಿಗಳ ಸುಧಾರಣೆ ಯಾವಾಗ ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ಈ ವಿದ್ಯಾರ್ಥಿಗಳ ಭವಿಷ್ಯವೇನು, ಈ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಮತ್ತು ಸಮಸ್ಯೆಗಳಿಗೆ ಮೊದಲು ಉತ್ತರವನ್ನು ಕೊಟ್ಟು, ನಂತರ ಕೆ.ಪಿ.ಎಸ್.ಸಿ., ಸುಧಾರಣೆಯ ಬಗ್ಗೆ ಮಾತನಾಡೋಣ ಬಹಳ ದೊಡ್ಡ ಪ್ರಮಾಣದಲ್ಲಿ ತಪ್ಪುಗಳಾಗಿವೆ. ಮತ್ತೊಂದು ಬಾರಿ ಮರು ಪರೀಕ್ಷೆಯನ್ನು ಮಾಡಿದರೂ ಸಹ ಸರಿಯಾದ ರೀತಿಯಲ್ಲಿ ಪರೀಕ್ಷೆಯನ್ನು ನಡೆಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಆದ್ದರಿಂದ ನಾನು ಆಗ್ರಹಪಡಿಸುವುದೇನೆಂದರೇ, ಸರ್ಕಾರ ಮತ್ತೊಂದು ಬಾರಿ ಮರು ಪರೀಕ್ಷೆಯನ್ನು ನಡೆಸಿ, ಆಗಿರುವಂತಹ ಲೋಪಗಳನ್ನು ಮೊದಲು ಸರಿಪಡಿಸಿಕೊಳ್ಳಬೇಕಾಗುತ್ತದೆ. ಆ ತಪ್ಪು-ಒಪ್ಪುಗಳ ಆಧಾರದ ಮೇಲೆ ಮತ್ತೊಂದು ಬಾರಿ ಮರು ಪರೀಕ್ಷೆಯನ್ನು ನಡೆಸಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಯಾವಯಾವ ಕ್ಯಾಟಗರಿಗೆ ಎಷ್ಟೆಷ್ಟು ಸೀಟುಗಳನ್ನು ಮೀಸಲಿರಿಸಲಾಗಿದೆ ಎನ್ನುವುದು ಇನ್ನೂ ಘೋಷಣೆಯಾಗಿಲ್ಲ. ಪ್ರತಿ ಬಾರಿಯಂತೆ ಈ ಬಾರಿಯ ಕೆ.ಎ.ಎಸ್. ಪರೀಕ್ಷೆಯ ಕಟ್‌ಆಫ್ ಅಂಕಗಳನ್ನು ಕೆ.ಪಿ.ಎಸ್.ಸಿ., ಪ್ರಕಟಿಸಿರುವುದಿಲ್ಲ. ಏತಕ್ಕೋಸ್ಕರ ಪ್ರಕಟಿಸಿಲ್ಲ? ಕಟ್‌ಆಫ್ ಅಂಕಗಳನ್ನು ಘೋಷಣೆ ಮಾಡುವುದಕ್ಕೆ ಸರ್ಕಾರಕ್ಕಿರುವ ಸಮಸ್ಯೆಗಳೇನು?

ಸನ್ಮಾನ್ಯ ಸಭಾಪತಿಯವರೇ, ನಾವು ಕರ್ನಾಟಕ ರಾಜ್ಯದಲ್ಲಿದ್ದೇವೆ. ಕನ್ನಡದ ವಿದ್ಯಾರ್ಥಿಗಳನ್ನು; ಕನ್ನಡದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರಕ್ಷಣೆ ಮಾಡಬೇಕಾಗಿರುವುದು ಶಾಸಕರಾದ ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಸರ್ಕಾರ ವಿದ್ಯಾರ್ಥಿಗಳ ಕಡೆಗೆ ಗಮನವನ್ನು ಕೊಟ್ಟು, ಮರು ಪರೀಕ್ಷೆಯನ್ನು ನಡೆಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಸರ್ಕಾರ, ಮತ್ತೊಮ್ಮೆ ಪರೀಕ್ಷೆಯನ್ನು ನಡೆಸುವುದಕ್ಕೆ 15 ಕೋಟಿ ರೂಪಾಯಿಗಳಷ್ಟು ವೆಚ್ಚವಾಗುತ್ತದೆಂದು ಹೇಳುತ್ತಿದೆ. ಆ 15 ಕೋಟಿ ರೂಪಾಯಿಗಳ ಮುಖ ನೋಡಿಕೊಂಡು ಸಾವಿರಾರು ಜನ ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲೆಗೆ ದೂಡಬಾರದು. ಆದ್ದರಿಂದ ಈ ವಿದ್ಯಾರ್ಥಿಗಳ ರಕ್ಷಣೆಗೆ ಸರ್ಕಾರ ಬರಬೇಕೆಂದು ಆಗ್ರಹಪಡಿಸುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಒಂದು ಕಾಲಕ್ಕೆ ನಮ್ಮ ರಾಜ್ಯದಲ್ಲಿ ಕೆ.ಪಿ.ಎಸ್.ಸಿ., ತನ್ನದೇ ಆಗಿರುವಂತಹ ಘನತೆ, ಗೌರವ ಮತ್ತು ಪಾವಿತ್ರತೆಯನ್ನು ಕಾಯ್ದುಕೊಂಡಿತ್ತು. ಆದರೇ, ಇತ್ತೀಚೆಗೆ ಕಳೆದ ಎರಡು ಮೂರು ವರ್ಷಗಳಲ್ಲಿ ಕೆ.ಪಿ.ಎಸ್.ಸಿ., ನಡೆಸಿರುವ ಪರೀಕ್ಷೆಗಳಲ್ಲಿ ಆಗಿರುವಂತಹ ಲೋಪ-ದೋಷಗಳು ಮತ್ತು ನೇಮಕಾತಿಯಲ್ಲಿ ಆಗಿರುವಂತಹ ಅವ್ಯವಹಾರಗಳಿಂದಾಗಿ ಇವತ್ತು ಕೆ.ಪಿ.ಎಸ್.ಸಿ., ತನ್ನ ಮಾನ ಮರ್ಯಾದೆ, ಪಾವಿತ್ರತೆ ಮತ್ತು ಘನತೆಯನ್ನು ಕಳೆದುಕೊಂಡಿದೆ. ಇದು ಸಾರ್ವಜನಿಕ ವಲಯದಲ್ಲಿ ಬಹಳಷ್ಟು ಪ್ರಚಲಿತವಾಗಿ ಚರ್ಚೆಯಾಗುವ ವಿಷಯವಾಗಿದೆ. ಪರೀಕ್ಷೆಯಲ್ಲಿ ಯಾವಯಾವ ರೀತಿಯಲ್ಲಿ ಲೋಪಗಳಾಗಿವೆ; ಅನ್ಯಾಯಗಳಾಗಿವೆ ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ವರದಿಗಳು ಪ್ರಕಟವಾಗಿವೆ. ಕೆಲವೊಂದನ್ನು ಓದುವುದಕ್ಕೆ ಬಯಸುತ್ತಿದ್ದೇನೆ. "ತಜ್ಞರಿಂದಲೇ ಕೆ.ಎ.ಎಸ್. ಪ್ರಶ್ನೆ ಪತ್ರಿಕೆ ತಯಾರು, ಆದರೂ ಗೊಂದಲ; ಏಳೆಂಟು ದಿನಗಳಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದರಿಂದ ಈ ಸಮಸ್ಯೆ" "ಕನ್ನಡ ಅಭ್ಯರ್ಥಿಗಳಿಗೆ ಆಗುತ್ತದೆ ಅನ್ಯಾಯ" "ಕೆ.ಎ.ಎಸ್. ಮರುಪರೀಕ್ಷೆಯಲ್ಲಿ ಶೇಕಡಾ 50ರಷ್ಟು ದೋಷ" "ಕೆ.ಎ.ಎಸ್. ಮರು ಪರೀಕ್ಷೆಯಲ್ಲಿಯೂ ತಪ್ಪುಗಳಾಗಿರುವುದು ಅಕ್ಷಮ್ಯ" "ಓ.ಎಂ.ಆರ್., ಶೀಟ್ ಅದಲು-ಬದಲು ಗೊಂದಲ" "ಓ.ಎಂ.ಆರ್., ಪರಿಶೀಲನೆ ವಿಚಾರ ಸದಸ್ಯರು, ಕಾರ್ಯದರ್ಶಿ ಭಿನ್ನಮತ" "ಕೆ.ಪಿ.ಎಸ್.ಸಿ., ಆಯ್ಕೆ ಪಟ್ಟಿ ಅತಂತ್ರ" "ಕೆ.ಪಿ.ಎಸ್.ಸಿ., ಸುಧಾರಣೆ ಮಾಡಿ ವಿದ್ಯಾರ್ಥಿಗಳಿಂದ ರಾಜ್ಯಪಾಲರಿಗೆ ಪತ್ರ" "ಎಸ್.ಎಸ್.ಎಲ್.ಸಿ., ಫೇಲ್ ಆದವರು ಕೆ.ಪಿ.ಎಸ್.ಸಿ., ಪಾಸ್" ಇದು ಬಹಳ ಮುಖ್ಯವಾಗಿರುವ ಅಂಶವಾಗಿದೆ. ಈ ರೀತಿಯ ಗೊಂದಲಗಳು ಮತ್ತು ಅವ್ಯವಹಾರಗಳು ಪತ್ರಿಕೆಗಳಲ್ಲಿ ವರದಿಯಾಗಿವೆ. ನಾನು ಪತ್ರಿಕೆಗಳ ಹೆಸರನ್ನು ಓದುವುದಕ್ಕೆ ಹೋಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಒಂದು ಪರೀಕ್ಷೆಯನ್ನು ಎರಡು ಬಾರಿ ನಡೆಸಿದ್ದಾರೆ. ಇದರಿಂದಾಗಿ ಸರ್ಕಾರದ ಮೇಲೆ ಆರ್ಥಿಕ ಹೊರೆಯಾಗುತ್ತದೆ. ಈ ಲೋಪ-ದೋಷಕ್ಕೆ ಕಾರಣರಾರು? ತಪ್ಪು ಮಾಡಿರುವವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಕ್ರಮ ಕೈಗೊಳ್ಳದಿದ್ದರೇ, ಕ್ರಮ ಕೈಗೊಳ್ಳಬೇಕೆಂದು ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ಬಹಳ ಮುಖ್ಯವಾಗಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಯು.ಪಿ.ಎಸ್.ಸಿ.,ಯವರು ಯಾವ ತಪ್ಪು ಮಾಡದೇ ನಿರಂತರವಾಗಿ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಆ ರೀತಿ ಪರೀಕ್ಷೆಗಳನ್ನು ನಡೆಸುವುದಕ್ಕೆ ಕೆ.ಪಿ.ಎಸ್.ಸಿ.,ಯವರಿಗೆ ಬರುವುದಿಲ್ಲವೇ? ಕೆ.ಪಿ.ಎಸ್.ಸಿ.,ಯ ಕಾರ್ಯವೈಖರಿಯ ಬಗ್ಗೆ ರಿವ್ಯೂ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಿ, ಸಂಪೂರ್ಣವಾಗಿ ರಿವ್ಯೂ ಮಾಡಿ, ಯಾವ ರೀತಿ ಪರೀಕ್ಷೆಗಳನ್ನು ನಡೆಸಬೇಕು; ಯಾವ ರೀತಿಯಲ್ಲಿ ನೇಮಕಾತಿ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಒಂದು ಅಧ್ಯಯನ ಸರ್ಕಾರಕ್ಕೆ ವರದಿ ಕೊಡಬೇಕೆಂದು ನಾನು ಸಲಹೆ ನೀಡುತ್ತಿದ್ದೇನೆ. ಕೆ.ಎ.ಎಸ್., ಮರು ಪರೀಕ್ಷೆ ಮಾಡಬೇಕೆನ್ನುವುದು ವಿದ್ಯಾರ್ಥಿಗಳ ಆಗ್ರಹವಾಗಿದೆ. ಆದ್ದರಿಂದ ಮರು ಪರೀಕ್ಷೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

(ಮುಂದುವರಿದಿದೆ)

(133) 06.03.2025/ 5.20/ಪಿಕೆಆರ್ಎನ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಬಸವಣ್ಣನವರದು ***"ಏರಿ ನೀರುಂಬುಡೆ, ಬೇಲಿ ಕೆಯ್ಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯಿ ಮೊಲೆಹಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರವೆ ಕೂಡಲಸಂಗಮದೇವಾ"*** ಎನ್ನುವ ಒಂದು ವಚನ ಇದೆ. ಈ ಸಂಸ್ಥೆಯನ್ನು 1951ರಲ್ಲಿ ಸ್ಥಾಪನೆ ಮಾಡಲಾಯಿತು. ಇದರ ಉದ್ದೇಶವೇನೆಂದರೆ, ***"ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು, ಹೊಸಯುಕ್ತಿ ಹಳೆ ತತ್ವದೊಡಗೂಡೆ ಧರ್ಮ, ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ, ಜಸವು ಜನಜೀವನಕೆ ಮಂಕುತಿಮ್ಮ"*** ಎಂದು ಮಾನ್ಯ ಡಿ.ವಿ.ಗುಂಡಪ್ಪನವರು ಹೇಳಿದ ಮಾತಿನಂತೆ, ಹೊಸ ಪೀಳಿಗೆ ಬರಬೇಕು, ಆ ರೀತಿಯ ಪಾರದರ್ಶಕವಾದ ಆಯ್ಕೆ ಪ್ರಕ್ರಿಯೆ ನಡೆಯಬೇಕು ಎನ್ನುವುದಾಗಿತ್ತು. ಆರಂಭದಲ್ಲಿ ಇಡೀ ದೇಶದಲ್ಲೇ ಕೆಪಿಎಸ್‌ಸಿಗೆ ಒಂದು ಒಳ್ಳೆಯ ಹೆಸರು ಇತ್ತು. ಆದರೆ ನಂತರದ ದಿನಗಳಲ್ಲಿ, ಅಂದರೆ ಇತ್ತೀಚಿನ ದಿವಸಗಳವರೆಗೂ ಒಳ್ಳೆಯ ಕಾರಣಕ್ಕೆ ಸುದ್ದಿ ಆಗಿಯೇ ಇಲ್ಲ. ಹಗರಣಗಳ ಕಾರಣಕ್ಕೆ, ಪರೀಕ್ಷೆಯ ಅಕ್ರಮಗಳ ಕಾರಣಕ್ಕೆ, ಬೇರೆ ಬೇರೆ ಕಾರಣಕ್ಕೆ ಸುದ್ದಿಯಾಗಿದೆ. ಒಂದು ಕಾಲದಲ್ಲಿ ಒಳ್ಳೆಯ ಆಯ್ಕೆಯ ಕಾರಣದಿಂದಾಗಿ ಪ್ರಾಮಾಣಿಕ ಅಧಿಕಾರಿಗಳು ನೇಮಕವಾಗಿ ಬರುತ್ತಿದ್ದರು. ಇವತ್ತು ಏನಾಗಿದೆ? ಇವತ್ತು, ತಾಳಿಭಾಗ್ಯ ಎನ್ನುವ ಒಂದು ಯೋಜನೆ ಇದೆ. ಯಾರು ಸೆಲೆಕ್ಷನ್ ಕಮಿಟಿಯಲ್ಲಿದ್ದಾರೆಂದು ನೋಡಿಕೊಂಡು, ಅವರ ಸಂಬಂಧಿಕರನ್ನು ಹುಡುಕಿ ಮದುವೆ ಮಾಡಿಸಿ, ಅಂಥವರನ್ನು ಆಯ್ಕೆ ಮಾಡುವಂಥದ್ದು ಈ ತಾಳಿಭಾಗ್ಯ ಪ್ರಕ್ರಿಯೆಯಾಗಿದೆ. ಇನ್ನೊಂದು, ಡೀಲ್ ಮಾಡುವಂಥದ್ದು. OMR (Optical Mark Reader) Sheet ಗಳನ್ನು ಬದಲಾವಣೆ ಮಾಡಿ, ಪರೀಕ್ಷೆಗಳೇ ಅಕ್ರಮವಾಗುವ ಹಾಗೆ ನೋಡಿಕೊಳ್ಳುವುದು. ಯಾರು ಪ್ರಾಮಾಣಿಕರಾಗಿರುತ್ತಾರೋ ಅವರಿಗಿಂತ, OMR Sheet ನಲ್ಲಿ ಅಕ್ರಮ ನಡೆಸಿದವರಿಗೆ ಶೇಕಡ ನೂರರಷ್ಟು

ಅಂಕಗಳು ಸಿಕ್ಕುವ ಹಾಗೆ ಮಾಡುವುದು, OMR Sheet ಗಳನ್ನೇ ತಿದ್ದುವುದು. ಇದು ಡೀಲ್ ಭಾಗ್ಯ. ಇನ್ನೊಂದು, ಪ್ಯಾಕೇಜ್ ಎನ್ನುವುದಿದೆ. ಯಾರೋ ಸಂಬಂಧಿಕರೊಬ್ಬರು ಸ್ವಲ್ಪ ಬುದ್ಧಿವಂತನಾಗಿದ್ದಾನೆ ಎಂದು ಗೊತ್ತಾದರೆ ಅವರೇ ಸಂದರ್ಶನದ ಖರ್ಚುಗಳನ್ನು ನೋಡಿಕೊಂಡು ಬಿಡುತ್ತಾರೆ. ಇದು ಪ್ಯಾಕೇಜ್ ಆಗಿದೆ. Package, Deal and Semi-deal ಈ ಕಾರಣದಿಂದಾಗಿ ಒಳ್ಳೆಯ ಕಾರಣಕ್ಕೆ ಹೆಸರಾಗಬೇಕಾದ ಸಂಸ್ಥೆ ಕೆಟ್ಟ ಕಾರಣಕ್ಕೆ ಹೆಸರಾಗಿದೆ. 1998-99ರ ಬ್ಯಾಚ್‌ನ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ವ್ಯಾಜ್ಯಗಳ ಕೇಸ್ ಇನ್ನೂ ಕೋರ್ಟ್‌ನಲ್ಲಿ ನಡೆಯುತ್ತಿದೆ. ಗ್ರೂಪ್-ಎ, ಬಿ ಹುದ್ದೆಗಳಿಗೆ ನೇಮಕಾತಿಯ ಪ್ರಕ್ರಿಯೆ ಬೇರೆ ಬೇರೆ ಹಂತದಲ್ಲಿ ನಡೆಯುತ್ತದೆ. ಅಂದರೆ, ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನ. ಇಡೀ ಪ್ರಕ್ರಿಯೆಯಲ್ಲಿ ಅರ್ಹನಲ್ಲದ ವ್ಯಕ್ತಿಯನ್ನು ಅಭ್ಯರ್ಥಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಟೋಟಲ್ ಪ್ಯಾಕೇಜ್ ಇದೆ. ಇದಕ್ಕೆ ಸಂಬಂಧಪಟ್ಟಂತೆ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಕೂಡ ಬುಕ್ ಆಗಿದೆ. 6-8 ಜನರನ್ನು ಅರೆಸ್ಟ್ ಮಾಡಿದ್ದಾರೆ. ಇದರ ತನಿಖೆ ಮುಂದೆ ಏನಾಗುತ್ತದೆಯೋ ನನಗೆ ಗೊತ್ತಿಲ್ಲ. ಏಕೆಂದರೆ ಇದರ ಹಿಂದಗಡೆ ಸಾಮಾನ್ಯ ಜನ ಇರುವುದಕ್ಕೆ ಸಾಧ್ಯವಿಲ್ಲ. ಯಾವ ಯಾವ ಪ್ರಭಾವಿಗಳು ಇದರ ಹಿಂದೆ ಇದ್ದಾರೋ, ಯಾರು ಈ ತನಿಖೆ ಹಳ್ಳ ಹಿಡಿಯಬೇಕು ಎಂದು ಪ್ರಯತ್ನ ಪಡುತ್ತಿದ್ದಾರೋ ಅದು ಗೊತ್ತಿಲ್ಲ. Assistant Commissioner, Revenue Tahsildar, DySP ಹುದ್ದೆಗಳಿಗೆ ಸಂಬಂಧಪಟ್ಟಂತೆ ಲಕ್ಷಗಳು ಇಲ್ಲವೇ ಇಲ್ಲ, ಎಲ್ಲವೂ ಎರಡೂವರೆ ಕೋಟಿ, ಮೂರು ಕೋಟಿ ರೂಪಾಯಿಗಳು, ಹೀಗೆ ಆಯಾ ಮಾರುಕಟ್ಟೆಯಲ್ಲಿ ಯಾವುದಕ್ಕೆ ಬೇಡಿಕೆ ಇರುತ್ತದೆಯೋ ಅದಕ್ಕನುಸಾರ ಪ್ಯಾಕೇಜ್ ಸಿಸ್ಟಮ್ ಇರುತ್ತದೆ. ಪೂರ್ವಭಾವಿ ಪರೀಕ್ಷೆ ಪಾಸ್ ಆದವರಿಗೆ ಸಂದರ್ಶನದಲ್ಲಿ ಪಾಸ್ ಮಾಡಿಸುವುದು semi-package ಇರುತ್ತದೆ. ಪರೀಕ್ಷೆಯ ಪ್ರಾರಂಭದಿಂದ ಕೊನೆಯ ತನಕ ಪಾಸ್ ಮಾಡಿಸಲು ಟೋಟಲ್ ಪ್ಯಾಕೇಜ್ ಇರುತ್ತದೆ. ಸ್ವಂತ ಅರ್ಹತೆ ಮೇಲೆ ಒಬ್ಬ ವ್ಯಕ್ತಿ ಪರೀಕ್ಷೆಯಲ್ಲಿ ಪಾಸ್ ಆದಮೇಲೆ ಆತ ಸಂದರ್ಶನದಲ್ಲಿ ಫೇಲ್ ಆಗಬಾರದು ಎಂಬುದನ್ನು ನೋಡಿಕೊಳ್ಳುವುದಕ್ಕೆ semi-package ವ್ಯವಸ್ಥೆ ಇರುತ್ತದೆ. ಸಂದರ್ಶನದವರೆಗೆ ಬಂದು ಇನ್ನೇನು ಅವನು ಎಲ್ಲಾ ಪಾಸ್ ಆಗಿಬಿಡುತ್ತಾನೆ ಎನ್ನುವ ಹಂತದಲ್ಲಿ ಡೀಲ್ ವ್ಯವಸ್ಥೆ ಇರುತ್ತದೆ. ಇದರ ಮೇಲೆ, ತಾಳಭಾಗ್ಯ ಎನ್ನುವುದೊಂದು ಇರುತ್ತದೆ. ಇವೆಲ್ಲವನ್ನೂ ನೋಡಿದರೆ ಇದು ಬೇಲಿಯೇ ಎದ್ದು ಹೊಲ ಮೇಯ್ದ ಹಾಗೆ ಆಗುವುದಿಲ್ಲವೇ? ಏರಿಯೇ ಕೆರೆಯ ನೀರು ಕುಡಿದ ಹಾಗೆ ಆಗುವುದಿಲ್ಲವೇ? ಯಾವ ಸಂಸ್ಥೆ ಪಾರದರ್ಶಕ ವ್ಯವಸ್ಥೆಯನ್ನು ತರಬೇಕಾಗಿತ್ತೋ ಆ ಸಂಸ್ಥೆಯಲ್ಲಿರುವವರೇ ಭ್ರಷ್ಟತೆಯಲ್ಲಿ ತೊಡಗಿದರೆ ಪ್ರಾಮಾಣಿಕರು ಹೇಗೆ ಆಯ್ಕೆಯಾಗುವುದಕ್ಕೆ ಆಗುತ್ತದೆ? ಮೆರಿಟ್ ಇದ್ದವರ ಪರಿಸ್ಥಿತಿ ಏನಾಗಬೇಕು? ಆಯ್ಕೆಯಾದವರು ಯಾರ ಯಾರ ಸಂಬಂಧ ಬೆಳೆಸಿದ್ದರು ಎಂದು ನೋಡಿದರೆ ತಾಳಭಾಗ್ಯದ ಮಹತ್ವ ಗೊತ್ತಾಗುತ್ತದೆ. ಆಯ್ಕೆಯಾದವರು ಯಾರ ಸಂಬಂಧಿಕರು? ಅವರು ಆಯ್ಕೆಯಾದ ಮೇಲೆ ಯಾರ ಸಂಬಂಧ ಬೆಳೆಸಿದರು ಎನ್ನುವುದನ್ನು ನೋಡಿದರೆ, ತಾಳಭಾಗ್ಯದ ಮಹತ್ವ ಏನು ಎನ್ನುವುದು ಗೊತ್ತಾಗುತ್ತದೆ. ಸಂದರ್ಶನ ಆಗಿ ಆತ ಪಾಸ್ ಆಗುತ್ತಾನೆ ಎಂದು ಖಾತ್ರಿ ಆದಮೇಲೆ ಎಂಗೇಜ್‌ಮೆಂಟ್ ಆಗುತ್ತದೆ. ಅಪಾಯಿಂಟ್‌ಮೆಂಟ್ ಆರ್ಡರ್ ಸಿಕ್ಕಿ

ನೌಕರಿಗೆ ದಾಖಲಾದ ಮೇಲೆ ಮದುವೆ ನಡೆಯುತ್ತದೆ. ಕೆಲವು ಪ್ರಕರಣಗಳು ಏನು ಕೋರ್ಟ್ ಮೆಟ್ಟಿಲು ಹತ್ತಿತೋ, ಅವರಲ್ಲಿ ಕೆಲವರ ಎಂಗೇಜ್‌ಮೆಂಟ್ ಆಗಿ ಹೋಗಿತ್ತು, Dowry ಎನ್ನುವ ಹೆಸರಿನಲ್ಲಿಲ್ಲದಿದ್ದರೂ ಅದು ಬೇರೆ ರೂಪದಲ್ಲಿ, ಅರ್ಧ ಪೇಮೆಂಟ್ ಸಂದಾಯ ಆಗಿಬಿಟ್ಟಿತ್ತು. ಅವರಿಗೆ ಅಪಾಯಿಂಟ್ ಆರ್ಡರ್ ಸಿಗಲಿಲ್ಲ; ಅಂಥವರಲ್ಲಿ ಕೆಲವರ ಮದುವೆ ರದ್ದಾಯಿತು ಮತ್ತು ಆಗಿರುವಂತಹ ಕೆಲವು ಮದುವೆಗಳು ವಿಚ್ಛೇದನದ ಮಟ್ಟಕ್ಕೂ ಹೋಯಿತು. ಯಾವ ಉದ್ದೇಶಕ್ಕೆ ಮದುವೆಯಾಗಿದ್ದರೋ ಅದು ಈಡೇರದೇ ಇದ್ದಾಗ ಅಂತಹ ಗಂಡನನ್ನು ಕಟ್ಟಿಕೊಂಡು ಏನಾಗಬೇಕು? ಗಂಡು Assistant Commissioner ಆಗುತ್ತಾನೆ, DySP ಆಗುತ್ತಾನೆ, ಇನ್ನೇನೋ ಆಗುತ್ತಾನೆ, Tahsildar ಆಗುತ್ತಾನೆ ಎಂದು ಎಂಗೇಜ್‌ಮೆಂಟ್ ಮಾಡಿ ಮದುವೆ ಮಾಡಿದ್ದರು. ಆದರೆ ಆತನ ಭವಿಷ್ಯವೇ ಕೋರ್ಟ್ ಮೆಟ್ಟಿಲು ಹತ್ತಿದೆ; ಅಬ್ಬೇಪಾರಿ ಆಗಿದ್ದಾನೆ ಎಂದಾದ ಮೇಲೆ ಏನು ಮಾಡುವುದಕ್ಕೆ ಆಗುತ್ತದೆ? 384 ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ, ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ 24 Assistant Executive ಹುದ್ದೆಗಳ ನೇಮಕಾತಿ ಪ್ರಕ್ರಿಯೆ, ಕಳೆದ ವರ್ಷ ಜನವರಿಯಲ್ಲಿ 230 Commercial Tax Inspector ಹುದ್ದೆಗಳ ನೇಮಕ, ಹೀಗೆ ಒಂದೊಂದನ್ನು ನೀವು ಗಮನಿಸಿ. 384 ಕೆಎಎಸ್ ಹುದ್ದೆಗಳ ಆಯ್ಕೆ. ಇದಕ್ಕೆ ಲೋಕಸೇವಾ ಆಯೋಗವು 2024ರ ಫೆಬ್ರವರಿ 26ರಂದು 324 ಗ್ರೂಪ್-ಎ ಮತ್ತು ಬಿ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಿತು. ಪೂರ್ವಭಾವಿ ಪರೀಕ್ಷೆ ದಿನಾಂಕ ಪ್ರಕಟ ಮಾಡಿ 4 ಸಲ ಅದನ್ನು ಮುಂದೂಡಿದರು. ಅಂದರೆ, ಅವರು ಪಂಚಾಂಗದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಾರೆಯೇ? ಯಾವ ಆಧಾರದ ಮೇಲೆ 4 ಸಲ ಮುಂದೂಡಿದರು? ಕೊನೆಗೆ 2024ರ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆಸಿದರು. ಆ ಪರೀಕ್ಷೆಯಲ್ಲಿ 59 ಕನ್ನಡ ಪದಗಳ ದೋಷ ಇತ್ತು. ಈ ಕುರಿತು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರವಿಕುಮಾರ್‌ರವರು ಮಾತನಾಡುವಾಗ ಹೇಳಿದರು. ದೋಷ ಎಂದರೆ ಅರ್ಥ ಕೆಟ್ಟುಹೋಗುವಂತಹ ದೋಷ. "ಅವನು" ಎನ್ನುವುದಕ್ಕೆ "ಅವರು" ಎನ್ನುವುದು ಆ ರೀತಿ ಅರ್ಥ ಕೆಟ್ಟು ಹೋಗದೇ ಇರುವ ಹಾಗಿದ್ದರೆ ಪರವಾಗಿಲ್ಲ. ಆದರೆ, ಅರ್ಥ ಕೆಟ್ಟು ಹೋಗುವಂತಹ ದೋಷಗಳಿತ್ತು. ಇದು ನಮ್ಮ ರಾಜ್ಯದ ಭಾಷಾ ನೀತಿಗೆ ಬಗೆದ ದ್ರೋಹವಾಗಿದೆ. ಇಂಗ್ಲಿಷ್‌ನಲ್ಲಿ ಪ್ರಶ್ನೆಗಳನ್ನು ತಯಾರಿಸಿ ಕನ್ನಡದಲ್ಲಿ ತರ್ಜುಮೆ ಮಾಡುವುದು, ಅಂದರೆ Google Translate ಮಾಡುವಂತೆ ಮಾಡುವುದು ನಮ್ಮ ಭಾಷಾ ನೀತಿಗೆ ಬಗೆದಿರುವ ದ್ರೋಹವಾಗಿದೆ; ಇದು ಕಾನೂನು ಉಲ್ಲಂಘನೆಯಾಗಿದೆ. ಯಾರು ಈ ರೀತಿ ತಪ್ಪು ಮಾಡಿದ್ದಾರೋ ಅವರ ಮೇಲೆ ಕ್ರಮ ಆಗಬೇಕಾಗಿತ್ತು. ನಮ್ಮದೇ ಒಂದು ರಾಜ್ಯ ಭಾಷೆ ಇದೆ. ನಾವು ಕನ್ನಡವನ್ನು ಆಡಳಿತ ಭಾಷೆ ಎಂದು ಅಧಿಕೃತವಾಗಿ declare ಮಾಡಿಕೊಂಡಿದ್ದೇವೆ. ಕನ್ನಡದಲ್ಲಿ ಪ್ರಶ್ನೆ ಪತ್ರಿಕೆಯನ್ನು ತಯಾರಿಸುವ ಯೋಗ್ಯತೆಯೇ ಇಲ್ಲವೇ? ಇಂಗ್ಲಿಷ್‌ನಲ್ಲಿ ತಯಾರಿಸಿ ಅದನ್ನು ಕನ್ನಡಕ್ಕೆ ಅನುವಾದ ಮಾಡುವಂತಹ ದುರವಸ್ಥೆ ಏಕೆ ಬಂತು? 8 ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವಂತಹ, ಮೇಧಾವಿಗಳನ್ನು ಹೊಂದಿರುವಂತಹ ರಾಜ್ಯ ನಮ್ಮದಾಗಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಕೊಡಬೇಕೆಂದು ಹೋರಾಟ ಮಾಡಿ ಅದನ್ನು

ದಕ್ಕಿಸಿಕೊಂಡಿದ್ದೇವೆ. ಕನ್ನಡದಲ್ಲಿ ಪ್ರಶ್ನೆ ಪತ್ರಿಕೆಯನ್ನು ತಯಾರು ಮಾಡುವವರು ಕರ್ನಾಟಕದಲ್ಲಿ ಯಾರೂ ಇಲ್ಲವೇ? ಮಾನ್ಯ ಸಭಾಪತಿಗಳೆ, 4 ತಿಂಗಳ ನಂತರ, ಡಿಸೆಂಬರ್ 29ರಂದು ಮರು ಪರೀಕ್ಷೆ ನಡೆಸಿದರು. ಒಂದು ಸಲ ಆಕಸ್ಮಿಕವಾಗಿ ತಪ್ಪಾಯಿತು, ನಾವು ಎಷ್ಟು ಎಚ್ಚರಿಕೆಯನ್ನು ವಹಿಸಬೇಕಾಗಿತ್ತೋ ಅಷ್ಟು ಎಚ್ಚರಿಕೆಯನ್ನು ವಹಿಸಲಿಲ್ಲ ಎಂದುಕೊಂಡರೆ, ಎರಡನೇ ಬಾರಿಯು ಎಡವಟ್ಟು ಮಾಡಿಕೊಂಡರು. ಮೊದಲನೆ ಸಲ ನಡೆದ ಪರೀಕ್ಷೆಯಲ್ಲಿ 59 ತಪ್ಪುಗಳಿದ್ದರೆ, ಮರು ಪರೀಕ್ಷೆಯಲ್ಲಿ 79 ತಪ್ಪುಗಳಿದ್ದವು. ಮೊದಲನೆ ಸಲ ಮಾಡಿದ್ದ ತಪ್ಪನ್ನು ಮೀರಿ ಅದಕ್ಕಿಂತ ಹೆಚ್ಚು ಎರಡನೆ ಸಲ ನಡೆಸಿದ ಪರೀಕ್ಷೆಯಲ್ಲಿ ಕಂಡುಬಂತು. ಇವರು ಯಾರ ಭವಿಷ್ಯದ ಜೊತೆ ಆಟ ಆಡುತ್ತಾರೆ? ಇದು ಮಕ್ಕಳಾಟವೇ? ಹುಡುಗಾಟವೇ? ಜವಾಬ್ದಾರಿ ಹೊತ್ತಿರುವಂತಹ ಕೆಪಿಎಸ್‌ಸಿ ಯಂತಹ ಸಂಸ್ಥೆಯಲ್ಲಿ ಈ ರೀತಿ ಬೇಜವಾಬ್ದಾರಿಯುತವಾಗಿ ಪರೀಕ್ಷೆ ನಡೆಸುವುದು, ಪ್ರಶ್ನೆ ಪತ್ರಿಕೆಗಳನ್ನು ತಯಾರು ಮಾಡುವಂಥದ್ದು ಸರಿಯೇ? Key Answers ನಲ್ಲೂ ಲೋಪದೋಷಗಳು ಇರುತ್ತದೆ. ಅವರು ಏನು ತಿನ್ನುತ್ತಾರೆ? ಏನು ತಿಂದುಕೊಂಡು ಬರುತ್ತಾರೆ ಎಂದು ಕೇಳಬೇಕಾಗುತ್ತದೆ. ಆಯ್ಕೆಯಾಗುವಂಥವರು ರಾಜ್ಯಕ್ಕೆ ಮಾದರಿಯಾಗಿ ಇರಬೇಕಾಗುತ್ತದೆ. ಅವರ ಆಯ್ಕೆಯ ಪ್ರಕ್ರಿಯೆ ದೇಶಕ್ಕೆ ಮಾದರಿ ಆಗಿರುವಂಥದ್ದು ಆಗಬೇಕಾಗಿತ್ತು.

(ಮುಂದು)

(134) 6-3-2025/5.30/ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಸಿ.ಟಿ.ರವಿ(ಮುಂದು):-

ಇದೇನು ಪರಿಸ್ಥಿತಿ? ಪ್ರಶ್ನೆ ಪತ್ರಿಕೆಯಲ್ಲಿ ಮಾತ್ರ ಲೋಪ ಆಗಿದ್ದಲ್ಲ. ರಾಮನಗರ, ಕೋಲಾರ, ವಿಜಯಪುರ, ಇತ್ಯಾದಿ ಕಡೆಗಳಲ್ಲಿ 800 ಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಓ.ಎಂ.ಆರ್. ಶೀಟ್ ಬದಲಾವಣೆಯಾಗಿದೆ. ಅವರ ಓ.ಎಂ.ಆರ್. ಶೀಟ್ ಬದಲಿಸುವಂತಹ ಕೆಲಸ ಮಾಡಿದ್ದಾರೆ. ಈ ರೀತಿಯಾದರೆ ಯಾರು ರಕ್ಷಣೆ ಮಾಡಬೇಕು? ವಿಶ್ವಸಂಸ್ಥೆ ಮತ್ತು ವಿಶ್ವ ಬ್ಯಾಂಕ್‌ಗೂ ಸಂಬಂಧವೇನು ಎಂಬುದೇ ಅರ್ಥವಾಗುವುದಿಲ್ಲ. 'World Bank' ಎನ್ನುವುದಕ್ಕೆ ಅವರು 'ವಿಶ್ವ ಬ್ಯಾಂಕ್' ಎಂದು ತರ್ಜುಮೆ ಮಾಡಬೇಕಾಗಿತ್ತು. ವಿಶ್ವಸಂಸ್ಥೆ ಎಂದು ತರ್ಜುಮೆ ಮಾಡಿದರೆ ಉತ್ತರ ಏನು ಬರೆಯಬೇಕು? ಕೀ ಉತ್ತರಗಳಲ್ಲಿ ವಿಶ್ವಸಂಸ್ಥೆ ಎಂದು ಕೊಟ್ಟಿದ್ದಾರೆ. World Bank ಮತ್ತು ವಿಶ್ವಸಂಸ್ಥೆ ಒಂದೇನಾ? ಈಶಾನ್ಯ ಎನ್ನುವುದಕ್ಕೆ ಉತ್ತರ ಪೂರ್ವ ಎಂದು translate ಮಾಡಿದ್ದಾರೆ. 'ಅನುಪಾತ' ಎನ್ನುವುದಕ್ಕೆ 'ಅನುಪಾತನ' ಎಂದು ಹಾಕುತ್ತಾರೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ, 'ರೋಗ ಶಾಸ್ತ್ರ ಸಂಸ್ಥೆ' ಎನ್ನುವುದಕ್ಕೆ 'ರೋಗ ಬರುವ ಸಂಸ್ಥೆ' ಎಂದು ಹಾಕಿದ್ದಾರೆ. ಕೆ.ಪಿ.ಎಸ್.ಸಿ.ಗೆ, ನಿಜವಾಗಿಯೂ ರೋಗ ಬಡಿದಿದೆ. ರೋಗ ಶಾಸ್ತ್ರ ಸಂಸ್ಥೆ ಎಂದು ತರ್ಜುಮೆ ಮಾಡುವುದರ ಬದಲಿಗೆ ರೋಗ ಬರುವ ಸಂಸ್ಥೆ ಎಂದು ತರ್ಜುಮೆ ಮಾಡಿದ್ದಾರೆ. ಈ ಕೆ.ಪಿ.ಎಸ್.ಸಿ.ಯ ಕಾರ್ಯಶೈಲಿಗೆ ರೋಗ ಬಡಿದಿರುವುದು. 'ಪ್ಯಾರಾ ಒಲಂಪಿಕ್ಸ್' ಎನ್ನುವುದಕ್ಕೆ 'ಪ್ಯಾರಾಲಿಂಪಿಕ್ಸ್' ಎಂದು translate ಮಾಡಿ ಹಾಕಿದ್ದಾರೆ. What is

the meaning of Paralympics? ಮರು ವಿಮರ್ಶೆ ಎನ್ನುವ ಕಡೆಗೆ ಪುನಾರವಲೋಕನ ಎಂದು ಹಾಕುತ್ತಾರೆ. ಹೀಗೆ ತಪ್ಪುಗಳ ಮೇಲೆ ತಪ್ಪು ಹಾಕಿದ್ದಾರೆ. ಈ ರೀತಿ ಮೊದಲನೇ ಸಲ 59 ತಪ್ಪುಗಳಾಗಿವೆ. ಎರಡನೇ ಸಲ 73 ತಪ್ಪುಗಳಾಗಿವೆ. ಇದನ್ನು ಉದ್ದೇಶ ಪೂರ್ವಕವಾಗಿ ಮಾಡುತ್ತಿದ್ದಾರೆಯೋ, ಏನಾದರೂ ದುರುದ್ದೇಶವಿದೆಯೋ ಎಂಬುದನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇದೆ.

ಇಷ್ಟಲ್ಲದೇ admission ticket ಮುದ್ರಣದಲ್ಲೂ ತಪ್ಪುಗಳಾಗಿವೆ. ಪೂರ್ವ ಭಾವಿ ಪರೀಕ್ಷೆ ಬರೆಯುವುದಕ್ಕೆ 2,30,000 ಜನರು ಅರ್ಜಿಯನ್ನು ಸಲ್ಲಿಸಿದ್ದರು. ಆಗಸ್ಟ್‌ನಲ್ಲಿ ನಡೆದ ಪರೀಕ್ಷೆಯಲ್ಲಿ 1,30,000 ಜನರು ಬರೆದಿದ್ದರು. ಡಿಸೆಂಬರ್‌ನಲ್ಲಿ ನಡೆದ ಮೊದಲನೇ ಮರು ಪರೀಕ್ಷೆಗೆ 1,07,000 ಜನರು ಬರೆದಿದ್ದಾರೆ. ಎರಡನೇ ಸಲ ಮರು ಪರೀಕ್ಷೆಗೆ 23,000 ಜನರು ಇವರ ಸಹವಾಸವೇ ಬೇಡ ಎಂದು ಹಾಜರಾಗಲಿಲ್ಲ. ಭವಿಷ್ಯದ ಜೊತೆಗೆ ಅಂದರೆ ಯಾರು ಉದ್ಯೋಗಕಾಂಕ್ಷಿಗಳಿದ್ದಾರೆ, ಅವರ ಭವಿಷ್ಯದ ಜೊತೆಗೆ ಇವರು ಆಟವಾಡುವ ಕೆಲಸ ಮಾಡುತ್ತಿದ್ದಾರೆ. ಮರು ಪರೀಕ್ಷೆ ಲೋಪಕ್ಕೆ ಸಂಬಂಧಪಟ್ಟಂತೆ 50 ರೂಪಾಯಿಗಳನ್ನು ಕಟ್ಟಿ 1,710 ಅಭ್ಯರ್ಥಿಗಳು ತಕರಾರು ಅರ್ಜಿಯನ್ನು ಸಲ್ಲಿಸಿದ್ದಾರೆ. ಅದರ ರಶೀದಿಯ ಒಂದು ಕಾಪಿಯನ್ನು ಇಟ್ಟುಕೊಂಡಿದ್ದೇನೆ. ತಾವು ಇದರ ಬಗ್ಗೆ ಯೋಚನೆ ಮಾಡಿ. ಈಗ ಇವರು ಇಂಗ್ಲಿಷ್‌ನಲ್ಲಿ ಆಗಿರುವ ಲೋಪಕ್ಕೆ 5 ಅಂಕಗಳ grace marks ಕೊಟ್ಟು ಕೈಬಿಟ್ಟರು. ಕನ್ನಡದಲ್ಲಿ 73 ತಪ್ಪುಗಳಿಗೆ 5 ಅಂಕಗಳ grace marks ಕೊಟ್ಟರೆ ಸಾಕೇ? ಅದಕ್ಕೆ ನಾನು ಆಗ್ರಹಿಸುತ್ತೇನೆ, ಇಡೀ ಸಮಗ್ರವಾಗಿ ಮರು ಪರೀಕ್ಷೆಯನ್ನು ನಡೆಸಬೇಕು. ಕನ್ನಡ ಆಡಳಿತ ಭಾಷೆಯಾಗಿ ಕನ್ನಡಕ್ಕೆ ಅಪಮಾನ ಮಾಡುವ ಕೆಲಸ ಮಾಡಬಾರದು. ಮೊದಲನೇ ಬಾರಿಗೆ ಸನ್ಮಾನ್ಯ ಸಿದ್ಧರಾಮಯ್ಯನವರು ಶಾಸಕರಾಗಿ ಬಂದಾಗ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದರು. ಈಗ ಅವರು ಮುಖ್ಯಮಂತ್ರಿಯಾಗಿರುವ ಸಂದರ್ಭದಲ್ಲಿ ಕೆ.ಪಿ.ಎಸ್.ಸಿ.ಯಲ್ಲಿ ಕನ್ನಡಕ್ಕೆ ಈ ಗತಿಯಾದರೆ ಕನ್ನಡಕ್ಕೆ ಯಾರು ಕಾವಲು ಕಾಯಬೇಕು? ಕೆ.ಪಿ.ಎಸ್.ಸಿ.ಯಲ್ಲಿ ಕಾವಲು ಕಾಯುವವರು ಯಾರು? ಕನ್ನಡದ ಕಾವಲು ಕಾಯುವವರು ಯಾರು? ಹಾಗಾಗಿ ಇದಕ್ಕೆ ಮರು ಪರೀಕ್ಷೆ ನಡೆಸಬೇಕೆಂದು ನಾನು ಆಗ್ರಹಿಸುತ್ತೇನೆ. ಪದೇಪದೇ ಕೀ ಉತ್ತರದಲ್ಲಿ ಆಗಿರುವ ತಪ್ಪುಗಳ ಕಾರಣಕ್ಕಾಗಿ ಇದರ ಮರು ಪರೀಕ್ಷೆ ಮಾಡಬೇಕು. ವಯಸ್ಸಿನ ಕಾರಣಕ್ಕೆ ಅನರ್ಹವಾಗುವುದನ್ನು ತಪ್ಪಿಸುವುದಕ್ಕೆ ಯಾರ್ಯಾರು ಮೊದಲನೇ ಬಾರಿಗೆ ಅರ್ಜಿಯನ್ನು ಸಲ್ಲಿಸಿ ಪರೀಕ್ಷೆಗೆ ಹಾಜರಾಗಿದ್ದಾರೆಯೋ ಅವರೆಲ್ಲರಿಗೂ ಈ ಮರು ಪರೀಕ್ಷೆಯಲ್ಲಿ ಅವಕಾಶ ಕೊಡಬೇಕು. ಯಾರ್ಯಾರು ಈ ಎಡವಟ್ಟಿಗೆ ಕಾರಣರಾಗಿದ್ದಾರಲ್ಲಾ, ಅವರೆಲ್ಲಾ ಅದೇ ಹುದ್ದೆಯಲ್ಲಿ ಮುಂದುವರೆದಿದ್ದಾರೆ. ಈಗ ನಾವೇ ಡ್ರೈವಿಂಗ್ ಸರಿಯಾಗಿ ಬರಲಿಲ್ಲವೆಂದರೆ ಎರಡು ದಿನ, ಮೂರು ದಿನ ನೋಡಿ ಡ್ರೈವರ್ ಅನ್ನು ಬದಲಾವಣೆ ಮಾಡುತ್ತೇವೆ. ಪದೇಪದೇ ಡ್ರೈವಿಂಗ್ ಸರಿಯಾಗಿ ಬರುವುದಿಲ್ಲವೆಂದು ಗೊತ್ತಿದ್ದರೂ ಕೂಡ ಡ್ರೈವರ್ ಅನ್ನು ಇಟ್ಟುಕೊಂಡರೆ ಏನಾಗಬಹುದು? ಇದು ಅದೇ ಪರಿಸ್ಥಿತಿಯಾಗಿದೆ. Key post ಗಳಲ್ಲಿರುವವರು ಯಾರು ಈ ಎಡವಟ್ಟಿಗೆ ಕಾರಣರಾಗಿದ್ದಾರೆ, ಅವರನ್ನು ಹುದ್ದೆಗಳಿಂದ ಮುಕ್ತಿಗೊಳಿಸಿ ವಿಚಾರಣೆಗೊಳಪಡಿಸಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಯಾರು ತಪ್ಪು ಮಾಡಿದ್ದಾರೆಯೋ ಆ

ಅಧಿಕಾರಿಗಳಿಂದ ಇದಕ್ಕೆ ಆಗುವ ಖರ್ಚನ್ನು ವಸೂಲಿ ಮಾಡಲಿ. ಮರು ಪರೀಕ್ಷೆ ನಡೆಸುವುದಕ್ಕೆ ಖರ್ಚಾಗುತ್ತದೆಯಲ್ಲಾ ಆ ಖರ್ಚನ್ನು ಅವರ ಮೇಲೆ ಹಾಕಿ. ಈ ಮರು ಪರೀಕ್ಷೆಗೆ ಸರ್ಕಾರ ಏಕೆ ಹಣ ಕೊಡಬೇಕು? ವಿದ್ಯಾರ್ಥಿಗಳಿಂದ ಶುಲ್ಕವನ್ನು ಸಂಗ್ರಹಿಸಿದ್ದಾರೆ, ಮತ್ತೆ ಅವರಿಂದ ಶುಲ್ಕವನ್ನು ಸಂಗ್ರಹಿಸುವ ಅವಶ್ಯಕತೆ ಇಲ್ಲ. ಇದು ಅವರ ಜವಾಬ್ದಾರಿಯಾಗಿದೆ. ತಪ್ಪು ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಬ್ಬ ವಿದ್ಯಾರ್ಥಿ ತಪ್ಪು ಮಾಡಿದರೆ ಡಿಬಾರ್ ಮಾಡುತ್ತಾರೆಯೋ ಇಲ್ಲವೋ? ಹಾಗೆಯೇ ಅವರು ತಪ್ಪು ಮಾಡಿದಾಗ ಶಿಕ್ಷೆಯಾಗಬೇಕೋ ಬೇಡವೋ? ತಪ್ಪು ಮಾಡಿದವರ ಮೇಲೆ ಶಿಕ್ಷೆಯಾಗಬೇಕು. ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಈಗ ಯು.ಪಿ.ಎಸ್.ಸಿ. ಇದೆ. ಯು.ಪಿ.ಎಸ್.ಸಿ.ಯಲ್ಲಿ ಎಂಥೆಂಥವರು ಆಯ್ಕೆಯಾಗಿ ಬರುತ್ತಾರೆ. ಅವರಿಗೆ ಸಂದರ್ಶನ ಮಾಡಿರುವ ಬಗ್ಗೆ, ಎಂತಹ ಪ್ರಶ್ನೆಗಳನ್ನು ಕೇಳುತ್ತಾರೆ, ಎಂಥೆಂಥವರು ಆಯ್ಕೆಯಾಗಿ ಬರುತ್ತಾರೆ ಎಂಬುದನ್ನೆಲ್ಲಾ ಯೂಟ್ಯೂಬ್‌ಗಳಲ್ಲಿ ಬರುತ್ತಿರುತ್ತವೆ. ಎಷ್ಟೋ ಜನ ಎಲೆಮರೆ ಕಾಯಿಯಂತೆ ಇರುವವರು ಚಮ್ಮಾರರ ಮಕ್ಕಳು, ಆಟೋರಿಕ್ಷಾ ಓಡಿಸುವವರ ಮಕ್ಕಳು, ಕೂಲಿ ಮಾಡುವವರ ಮಕ್ಕಳು, ವಾರಾನ್ನ ತಿನ್ನುವವರು ಆಯ್ಕೆಯಾಗಿ ಬರುತ್ತಾರೆ. ಕೆ.ಪಿ.ಎಸ್.ಸಿ. ಯಲ್ಲಿ ಇಂತಹ ಒಂದು ಉದಾಹರಣೆ ಇದೆಯೇ? ಇಲ್ಲಿ ತಾಳಿ ಭಾಗ್ಯ, ಜಾತಿ ಭಾಗ್ಯ, ಪ್ರಭಾವಿ ಶಾಲೆಗಳ ಭಾಗ್ಯ ಇದೆ. ಎಲ್ಲೂ ಇಲ್ಲದಿರುವಷ್ಟು 16 ಜನ ಕೆ.ಪಿ.ಎಸ್.ಸಿ. ಸದಸ್ಯರುಗಳಿದ್ದಾರೆ. ಸದಸ್ಯರ ಆಯ್ಕೆಗೂ ಜಾತಿ ಹಿನ್ನೆಲೆ ಬೇಕು. ಈಗ ನೀವು ಬೆಳೆ ಬಿತ್ತಿದ್ದೀರಿ, ನಾವು ಜಾತಿ ಕೋಟದಲ್ಲಿ ನೇಮಕ ಮಾಡಿದರೆ, ಕೆಲವು ಭ್ರಷ್ಟರು ಎಲ್ಲಾ ಕಡೆಗೂ ಸಲ್ಲುತ್ತಾರೆ. ಅವರಿಗೆ ಪಕ್ಷವೇ ಇಲ್ಲ. ಅವರು ಎಲ್ಲಾ ಪಕ್ಷಗಳಿಗೂ ಬೇಕು. ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದರೂ ಅಪ್ಯಾಯಮಾನರು, ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದರು ಅವರು ಅಪ್ಯಾಯಮಾನರು, ಕಾರ್ಡ್ಸ್ ಆಟದಲ್ಲಿ ಜೋಕರ್ ಎಂದು ಇರುತ್ತದೆ, ರಮ್ಮಿ ಸೆಟ್ ಆಗಿಬಿಟ್ಟರೆ ಜೋಕರ್ ತಾನಾಗಿಯೇ ಎಲ್ಲಾ ಕಡೆಗೂ ಕೆಲಸಕ್ಕೆ ಬರುತ್ತದೆ. ಹಾಗೆಯೇ ಈ ಭ್ರಷ್ಟರು ಎಲ್ಲಾ ಕಡೆಗೆ ಸಲ್ಲುವಂಥವರು. ಅಂಥವರಿಗೆ ಯಾವ ಅಡೆತಡೆಯೂ ಇಲ್ಲ. ಎಲ್ಲಾ ಕಡೆಗೂ ಅವರಿಗೆ free pass. ಈ ರೀತಿಯಾದರೆ ಪರಿಸ್ಥಿತಿ ಏನಾಗಬೇಕು? ನಾನು ಅದು-ಇದು ಎಂದು ಹೇಳುತ್ತಿಲ್ಲ.

ನಾನು ಮಾನ್ಯ ಭೋಜೇಗೌಡರವರ ಹತ್ತಿರ ಮಾತನಾಡುತ್ತಾ ಹೇಳುತ್ತಿದ್ದೆ, ನಾವೆಲ್ಲಾ ಕರ್ಮ ಸಿದ್ಧಾಂತದ ಮೇಲೆ ನಂಬಿಕೆ ಇಟ್ಟಿರುವವರು. ನಾವು ಒಳ್ಳೆಯದು ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ, ಕೆಟ್ಟದು ಮಾಡಿದರೆ ಕೆಟ್ಟದಾಗುತ್ತದೆ. ಹಾಗಾದರೆ ನಾವು ಯಾವುದಕ್ಕೆ ಸಾಕ್ಷಿಯಾಗಬೇಕು? ನಾವು ಈ ಭ್ರಷ್ಟಾಚಾರಕ್ಕೆ ಸಾಕ್ಷಿಯಾಗಬೇಕೇ, ಅದಕ್ಕಾಗಿಯೇ ನಾವು ಈ ಸದನಕ್ಕೆ ಬಂದಿದ್ದೇವೆಯೇ? ನಾಳೆ ನೀನು ಎಂ.ಎಲ್.ಎ., ಎಂ.ಎಲ್.ಸಿ. ಆಗಿದ್ದೆ, ಏನು ಮಾಡಿದ್ದೀಯಾ ಎಂದು ಕೇಳಿದರೆ, ನಮ್ಮ ಜಾತಿಯವನು ಇದ್ದಾನೆ ಅದಕ್ಕೆ ಸುಮ್ಮನಿದ್ದೆ ಎಂದು ನಾವು ದೇವರ ಹತ್ತಿರ ಹೇಳುವುದಕ್ಕಾಗುತ್ತದೆಯೇ ಅಥವಾ ಈ ತಾಳಿ ಭಾಗ್ಯಕ್ಕೆ ಹೋಗಿ ನಾನು ಅಕ್ಷತೆ ಹಾಕಿದೆ ಎಂದು ಹೇಳಲೇ? ನಮಗೆ ನಾಳೆ ಉತ್ತರದಾಯಿತ್ವ ಇದೆಯೋ ಇಲ್ಲವೋ? ಉತ್ತರದಾಯಿತ್ವ ಇದೆ ಎಂದರೆ ಈ ಕೆ.ಪಿ.ಎಸ್.ಸಿ. ಯನ್ನು ಸರಿ ಮಾಡದಿದ್ದರೆ ನಾವು ಇದ್ದೂ ಏನು ಪ್ರಯೋಜನ?

ಈ ಕೆ.ಪಿ.ಎಸ್.ಸಿ.ಯನ್ನು ಸರಿ ಮಾಡದಿದ್ದರೆ, ಇಲ್ಲಿ ಭ್ರಷ್ಟಾಚಾರವನ್ನು ಬಿತ್ತಿದ್ದರೆ ಅದರ ಪರಿಣಾಮ ಅದೇ ಬೆಳೆ ಬರುತ್ತದೆ. ಭ್ರಷ್ಟರೇ ಆಯ್ಕೆಯಾಗಿ ಬರುತ್ತಾರೆ. ಅದಕ್ಕೆ ಕಡಿವಾಣ ಹಾಕಬೇಕೋ ಬೇಡವೋ? ಅವರು 40 ವರ್ಷಗಳಿರುತ್ತಾರೆ. ಅಕಸ್ಮಾತ್ ಜನಪ್ರತಿನಿಧಿಗಳು ತಪ್ಪು ಮಾಡಿದರೆ ಐದು ವರ್ಷ ಜನರ ನಡುವೆ ಹೋಗಬೇಕು. ನಾವು ಸರಿಯಿಲ್ಲವೆಂದರೆ ಕಿತ್ತು ಬಿಸಾಕುತ್ತಾರೆ. ಇವರು 40 ವರ್ಷ ಇರುತ್ತಾರೆ. 40 ವರ್ಷ ಇನ್ನಷ್ಟು ಭ್ರಷ್ಟಾಚಾರ ಕೂಟವನ್ನು ವಿಸ್ತಾರ ಮಾಡಿ ಹೋಗುತ್ತಾರೆ. ಸ್ವಸ್ಥ ಸಮಾಜ ಎಲ್ಲಿಂದ ಬರುತ್ತದೆ? ಈಗ 10 ಜನ ಅಭ್ಯರ್ಥಿಗಳನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಶ್ರೀ ವಿಶ್ವ, ಶ್ರೀಮತಿ ಸಿಂಚನ, ಶ್ರೀ ಭುವನ, ಶ್ರೀ ನವೀನ್, ಶ್ರೀ ವಿಶ್ವನಾಥ್, ಶ್ರೀ ಶ್ರೀಧರ ಹೊಸಮನಿ, ಶ್ರೀ ಸಂಜೀವ್ ಕುಮಾರ್ ಬಿರದಾರ್, ಶ್ರೀ ಅಶೋಕ ಬಸಪ್ಪ ಒಡ್ಡರ್, ಶ್ರೀ ಅನಂತಕುಮಾರ್, ಇಷ್ಟು ಜನ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಈ 10 ಜನ ಅಭ್ಯರ್ಥಿಗಳು ಓ.ಎಂ.ಆರ್. ಶೀಟ್ ತಿದ್ದಿದ್ದಾರೆಂದು ವಿಧಿ ವಿಜ್ಞಾನ ಪ್ರಯೋಗಾಲಯದವರು ಹೇಳಿದ್ದರು. ಅವರು ಕೂಡ ಅಕ್ರಮ ನಡೆದಿರುವುದನ್ನು ಖಚಿತಪಡಿಸಿದ್ದಾರೆ. 500 ಪುಟಗಳ ವರದಿ ಇದೆ. ಇಷ್ಟೆಲ್ಲಾ ಆದಮೇಲೂ ನಾವು ಮರು ಪರೀಕ್ಷೆ ನಡೆಸದಿದ್ದರೆ ಏನು ನ್ಯಾಯ ಕೊಟ್ಟ ಹಾಗೆ ಆಗುತ್ತದೆ? ಲೋಕಸೇವಾ ಆಯೋಗದ ಸಿಸಿಟಿವಿ ದೃಶ್ಯ, ಓ.ಎಂ.ಆರ್.ಶೀಟ್‌ಗಳ ಕಾರ್ಬನ್ ಪ್ರತಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುವುದು ದೇಶದಲ್ಲೇ ಇದು ಮೊದಲ ಪ್ರಕರಣವಾಗಿದೆ. ಹಾಗಾಗಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ. ಸರ್ಕಾರಕ್ಕೆ ಕಳೆದ ಫೆಬ್ರವರಿ 20 ರಂದು ಆಯ್ಕೆಯಾಗಿರುವುದನ್ನು ರದ್ದುಪಡಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಇಷ್ಟೆಲ್ಲಾ ಅಕ್ರಮವಾದ ನಂತರ ಆಯ್ಕೆಯಾಗಿರುವುದನ್ನು ರದ್ದುಪಡಿಸಿದ್ದಾರೆಯೇ? ಈಗ ತನಿಖೆ ಯಾವ ಹಂತದಲ್ಲಿದೆ, ಈ ಸದನದ ಮುಂದೆ ತನಿಖೆಯ ವರದಿಯನ್ನು ಸಲ್ಲಿಸಬೇಕಲ್ಲವೇ?

(ಮುಂದು)

(135) 06/03/2025 5:40 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ(ಮುಂದು)**

ನಾವು ಸದನದಿಂದ ಹೊರಗಡೆ ಹೋಗಿ ಜನರಿಗೆ ಏನು ಉತ್ತರವನ್ನು ಹೇಳಬೇಕು? ಹಾಗಾಗಿ ಇದನ್ನು ಲಘುವಾಗಿ ಪರಿಗಣಿಸಬಾರದು ಎಂದು ನಾನು ಆಗ್ರಹಿಸುತ್ತೇನೆ. 2015 ರ ಇಸ್ವಿಯಲ್ಲಿ 424 ಹುದ್ದೆಗಳಿಗೆ ನೇಮಕಾತಿಯಾಯಿತು. ಅದರಲ್ಲಿ 115 ಅಭ್ಯರ್ಥಿಗಳು ಅಂದರೆ ಶೇಕಡಾ 27ರಷ್ಟು ಕನ್ನಡ ಮಾಧ್ಯಮದ ಅಭ್ಯರ್ಥಿಗಳು ಹಾಗೂ ಶೇಕಡಾ 73 ರಷ್ಟು ಆಂಗ್ಲ ಮಾಧ್ಯಮದ ಅಭ್ಯರ್ಥಿಗಳು ಆಯ್ಕೆಗೊಂಡಿದ್ದರು. ಆಡಳಿತ ಭಾಷೆ ಕನ್ನಡ ಮತ್ತು ಕನ್ನಡವೇ ಸಾರ್ವಭೌಮ ಭಾಷೆ ಎಂದು ಹೇಳುವುದಕ್ಕೆ ಏನು ಅರ್ಥ ಬಂತು? ಶೇಕಡಾ 73 ರಷ್ಟು ಆಂಗ್ಲ ಮಾಧ್ಯಮದ ಅಭ್ಯರ್ಥಿಗಳು ಆಯ್ಕೆಯಾದರೆ, ಕೇವಲ ಶೇಕಡಾ 27ರಷ್ಟು ಮಾತ್ರವೇ ಕನ್ನಡ ಮಾಧ್ಯಮದವರು ಆಯ್ಕೆಗೊಂಡಿದ್ದರು. ಈ ಬಗ್ಗೆ ಯೋಚನೆ ಮಾಡಬೇಕು. ಅದೇ ರೀತಿಯಾಗಿ 2020 ನೇ ಇಸ್ವಿಯ ನೇಮಕಾತಿಯಾದ 116 ಹುದ್ದೆಗಳಲ್ಲಿ ಕೇವಲ 10 ಅಭ್ಯರ್ಥಿಗಳು ಮಾತ್ರವೇ ಕನ್ನಡ ಮಾಧ್ಯಮದವರು

ಆಯ್ಕೆಗೊಂಡಿದ್ದರೆ, ಶೇಕಡಾ 90 ರಷ್ಟು ಆಂಗ್ಲ ಮಾಧ್ಯಮದ ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಅಂದರೆ 106 ಹುದ್ದೆಗಳ ಪೈಕಿ 96 ಹುದ್ದೆಗಳಿಗೆ ಆಂಗ್ಲ ಮಾಧ್ಯಮದ ಹಾಗೂ ಕೇವಲ 10 ಹುದ್ದೆಗಳಿಗೆ ಮಾತ್ರವೇ ಕನ್ನಡ ಮಾಧ್ಯಮದ ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಕರ್ನಾಟಕ ಲೋಕ ಸೇವಾ ಆಯೋಗದ ವಿಳಂಬ ನೀತಿಯದು ದೊಡ್ಡ ಕಥೆಯಾಗಿದೆ. ಇದನ್ನು ನೋಡಿದರೆ, 2011 ರಲ್ಲಿ ಆಯ್ಕೆಯಾದ ಅಭ್ಯರ್ಥಿಗೆ 2022 ರಲ್ಲಿ ಅಂದರೆ 11 ವರ್ಷಗಳ ನಂತರ ನೇಮಕಾತಿಯು ದೊರೆಯಿತು. ಪ್ರಾಯಶಃ ಇವರುಗಳೆಲ್ಲರೂ ರಾಮಾಯಣ ಮತ್ತು ಮಹಾಭಾರತಗಳಿಂದ ಪ್ರೇರಣೆ ಪಡೆದಿರಬೇಕು ಎಂದು ಅನ್ನಿಸುತ್ತದೆ. ಆಗಿನ ಕಾಲದಲ್ಲಿ 12 ಮತ್ತು 14 ವರ್ಷಗಳ ಕಾಲದ ವನವಾಸ ನಂತರದಲ್ಲಿ ಅಜ್ಞಾತವಾಸ ಇಂತಹವುಗಳ ಕರಾರು ಇತ್ತು. ಇವರುಗಳಿಗೆ ಇಷ್ಟು ದೀರ್ಘ ಅವಧಿಯ ನಂತರ ರಾಜ್ಯದ ಪಟ್ಟಾಭಿಷೇಕವಾಗಿತ್ತು. ಈ ಸಂಗತಿಗಳಿಂದ ಆಯೋಗದವರು ಪ್ರೇರಣೆಯನ್ನು ಪಡೆದಿರಬಹುದು. ಹೀಗೆ ನೇಮಕಾತಿಗೊಂಡ ಅಭ್ಯರ್ಥಿಗಳ ಪೈಕಿ ಶಹಾಬುದ್ದೀನ್ ಎಂಬವವರು 2015 ರಲ್ಲಿ ಮೃತರಾದರು. ಮತ್ತೊಬ್ಬ ಅಭ್ಯರ್ಥಿಯು ನೇಮಕಾತಿ ಹೊಂದಿದ ಕೇವಲ ನಾಲ್ಕೈದು ತಿಂಗಳುಗಳಲ್ಲಿಯೇ ನಿವೃತ್ತಿ ಹೊಂದಿದರು. ಇಂತಹ ಪರಿಸ್ಥಿತಿಯು ಆಯೋಗದಲ್ಲಿದ್ದು, ಇಷ್ಟೊಂದು ಸುದೀರ್ಘ ಅವಧಿಯ ವಿಳಂಬವುಂಟಾಗುತ್ತಿದೆ. ಒಂದೊಂದು ನೇಮಕಾತಿಗೆ 2 – 4 ವರ್ಷಗಳ ಅವಧಿಯು ಏಕೆ ಬೇಕು ಎಂದು ನಾನು ಪ್ರಶ್ನಿಸುತ್ತೇನೆ. ನೇಮಕಾತಿಯಲ್ಲಿ ಪ್ರಾಮಾಣಿಕ ಮತ್ತು ಪಾರದರ್ಶಿಕವಾದ ವ್ಯವಸ್ಥೆಯನ್ನು ಜಾರಿಗೊಳಿಸಲು ಏಕೆ ಸಾಧ್ಯವಾಗುತ್ತಿಲ್ಲ? ಇದರಲ್ಲಿ ಪಕ್ಷಾತೀತವಾಗಿ ನಮ್ಮೆಲ್ಲರ ಜವಾಬ್ದಾರಿ ಇದೆ ಎಂದು ನಾನು ಹೇಳಬಯಸುತ್ತೇನೆ. ಜಾತಿ ಆಧಾರದ ಮೇಲೆ ನೇಮಕಾತಿಯನ್ನು ಮಾಡಿ, ಪ್ಯಾಕೇಜ್ ಆಧಾರದ ಮೇಲೆ ಭ್ರಷ್ಟರನ್ನು ನೇಮಕ ಮಾಡಿ ವ್ಯವಸ್ಥೆಯನ್ನು ಕುಲಗೆಡಿಸುವುದಕ್ಕೆ ಆಳುವವರಾದ ನಾವೂ ಸಹ ಕಾರಣರಾಗಿದ್ದೇವೆ. ಈ ಬಗ್ಗೆ ನಾವೂ ಸಹ ಆತ್ಮಾವಲೋಕವನ್ನು ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ವ್ಯವಸ್ಥೆ ಸರಿಯಾಗಬೇಕಾದರೆ, ಪ್ರಾಮಾಣಿಕವಾಗಿ ಅಭ್ಯರ್ಥಿಗಳು ಆಯ್ಕೆಯಾಗಿ ಬರಬೇಕೆಂದರೆ, ನೇಮಕಾತಿಯ ಮೂಲವನ್ನು ಸರಿಪಡಿಸಬೇಕಾದ ಅವಶ್ಯಕತೆ ಇದೆ. ಹಾಗಾಗಿ ನೇಮಕ ಮಾಡುವ ಅಧಿಕಾರಿಗಳ ಹಿನ್ನೆಲೆಯನ್ನೂ ಸಹ ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇದೆ. ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ಪ್ರಥಮ ವರ್ತಮಾನ ವರದಿಯು ದಾಖಲಾಯಿತು. ಆರೋಪಿತರ ವಿರುದ್ಧ ದೂರು ಏನೆಂದರೆ, ಸಜ್ಜನ್ ಲಾಡ್ಜ್‌ನಲ್ಲಿ ವಿಜಯಪುರ ಜಿಲ್ಲೆಯ ಸಿಕಂದರ್ ಛೌಧರಿ ಎಂಬ ವ್ಯಕ್ತಿಯು ರೂಮನ್ನು ಮಾಡಿಕೊಂಡು, ಕೆ.ಎ.ಎಸ್., ಪಿ.ಡಿ.ಒ., ಪಿ.ಎಸ್.ಐ. ಮತ್ತಿತರೆ ಸರ್ಕಾರಿ ಉದ್ಯೋಗಗಳಿಗೆ ನಡೆಯುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವ ಪರೀಕ್ಷಾರ್ಥಿಗಳನ್ನು ಮಧ್ಯವರ್ತಿಗಳ ಮೂಲಕ ಸಂಪರ್ಕಿಸಿ, ಪರೀಕ್ಷೆಯಲ್ಲಿ ಪಾಸು ಮಾಡಿಸುವುದಾಗಿ ನಂಬಿಸಿ ಪಿತೂರಿ ನಡೆಸಿ, ಹಲವು ಜನ ಗುಂಪು ಕಟ್ಟಿಕೊಂಡು ಮೋಸದಿಂದ ಹಣ ಸಂಪಾದನೆ ಮಾಡಲು ಅಭ್ಯರ್ಥಿಗಳಿಂದ ಮತ್ತು ಅವರ ಸಂಬಂಧಿಕರುಗಳಿಂದ ಹಣ ಸಂಗ್ರಹಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿಯ ಮೇರೆಗೆ, ಅಪರಾಧ ವಿಭಾಗದ ಎ.ಎಸ್.ಐ. ಚಂದ್ರ ರವರು ಆರೋಪಿಯನ್ನು ದಸ್ತಗಿರಿ ಮಾಡಿ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುತ್ತಾರೆ. ಈ ಬಗ್ಗೆ ಸಿಕಂದರ್ ಛೌಧರಿ, ದಿಲೀಪ್ ಕುಮಾರ್, ಮಾರುತಿ

ರಾಥೋಡ್, ಶ್ರೇಯಸ್ ಮತ್ತು ಶೇಕ್ ಜಿಲಾನಿ ಎಂಬ 5 ಆರೋಪಿತರುಗಳನ್ನು ದಸ್ತಗಿರಿ ಮಾಡುತ್ತಾರೆ. ಇದು ಇಷ್ಟು ಗಂಭೀರವಾದ ಪ್ರಕರಣವಾಗಿದ್ದು, ಇಲ್ಲಿಂದ ಮುಂದೆ ಏನಾಯಿತು? ಕೇವಲ ಇವರುಗಳು ಮಾತ್ರವಲ್ಲದೇ, ಇವರುಗಳ ಹಿಂದೆ ಯಾರದ್ದೋ ಲಿಂಕ್ ಇರಬೇಕಲ್ಲವೇ? ಇವರುಗಳು ಹಣ ಸಂಗ್ರಹಿಸಿ ಇನ್ನು ಯಾರಿಗೆ ದುಡ್ಡು ಕೊಡುತ್ತಿದ್ದರು? ಇದರ ಹಿಂದೆ ಇದ್ದ ಕಿಂಗ್‌ಪಿನ್ ವ್ಯಕ್ತಿ ಯಾರು? ಇದು ಸಾಮಾನ್ಯವಾದ ಜಾಲವೇ? ಇಂತಹ ಜಾಲಗಳನ್ನು ಬೇಧಿಸದಿದ್ದರೆ, ಪರಿಸ್ಥಿತಿ ಎಲ್ಲಿಗೆ ಹೋಗಿ ತಲುಪುತ್ತದೆ? ಹಾಗಾಗಿ ಆರಂಭದಲ್ಲಿಯೇ ನಾನು ಬಸವಣ್ಣನವರ ವಚನವನ್ನು ಉಲ್ಲೇಖಿಸಿದೆನು. ಆಯೋಗದಲ್ಲಿ ಈ ರೀತಿಯಾದ ಪರಿಸ್ಥಿತಿ ಇದೆ. ಹೀಗಾಗಿ ನಾನು ಆಗ್ರಹಿಸುವುದೇನೆಂದರೆ, ಈ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರಬೇಕೆಂದು ಸಂದರ್ಶನದಲ್ಲಿ ನೀಡಲಾಗುವ ಅಂಕಗಳನ್ನು ಕಡಿಮೆ ಮಾಡಲಾಯಿತು. ಆದರೆ, ಅವರುಗಳು ಏನು ಮಾಡಿದ್ದಾರೆ ಎಂದರೆ, ಸರ್ಕಾರ ಚಾಪೆ ಕೆಳಗೆ ನುಗಿದ್ದರೆ, ಅವರುಗಳು ರಂಗೋಲೆ ಕಳೆಗೆ ನುಗ್ಗಿದರು. ಇವರುಗಳು ಅಭ್ಯರ್ಥಿಗಳು ಬರೆದಿರುವ ಓ.ಎಂ.ಆರ್. ಹಾಳೆಗಳನ್ನೇ ತಿದ್ದುವಂತಹ ಪರೀಕ್ಷಾ ಅಕ್ರಮಕ್ಕೆ ಮುಂದಾದರು. ಪರೀಕ್ಷಾ ಕೇಂದ್ರಗಳಲ್ಲಿಯೇ ದುರುಪಯೋಗ ಪಡಿಸಿಕೊಳ್ಳುವ ಮೂಲಕ ಅಕ್ರಮಕ್ಕೆ ಮುಂದಾದರು. ಈ ಕಾರಣಕ್ಕಾಗಿ ನಾವು ಯು.ಪಿ.ಎಸ್.ಸಿ. ಮಾದರಿಯ ನೇಮಕಾತಿ ಪ್ರಕ್ರಿಯೆಯನ್ನು ಅನುಸರಣೆ ಮಾಡಬೇಕು. ಒಳ್ಳೆಯದು ಎಲ್ಲಿಂದ ಮತ್ತು ಯಾವ ಕಡೆಯಿಂದ ಬರುತ್ತದೆಯೋ, ಅದನ್ನು ನಾವು ಸ್ವೀಕಾರ ಮಾಡಬೇಕು. ಅಲ್ಲಿ ಯಾವ ರೀತಿಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೊಳಿಸಿದ್ದಾರೆಯೋ, ಅದನ್ನು ನಾವು ಅನುಸರಿಸಬೇಕು. ಅಲ್ಲಿ ವರ್ಷಕ್ಕೆ ಎರಡು ಬಾರಿ ನಿಯಮಿತ ಅವಧಿಯಲ್ಲಿ ಒಂದು ಪೂರ್ವಭಾವಿ ಪರೀಕ್ಷೆಯನ್ನು ಹಾಗೂ ಮತ್ತೊಂದು ಮುಖ್ಯ ಪರೀಕ್ಷೆಯನ್ನು ನಡೆಸುತ್ತಾರೆ. ಆ ರೀತಿಯ ಪರೀಕ್ಷಾ ಮಾದರಿಗಳನ್ನು ನಮ್ಮ ಆಯೋಗದವರು ಏಕೆ ಅನುಸರಿಸುವುದಕ್ಕಾಗುವುದಿಲ್ಲ ಎಂದು ನಾನು ಪ್ರಶ್ನಿಸುತ್ತೇನೆ. ಈ ರೀತಿಯಾಗಿ ಮಾಡಬೇಕೆಂದರೆ, ಅಲ್ಲಿ ಪ್ರಾಮಾಣಿಕವಾದ ಅಧಿಕಾರಿಗಳನ್ನು ನಿಯೋಜಿಸಬೇಕು. ಯಾರನ್ನು ನಾವು ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನಾಗಿ ನೇಮಕ ಮಾಡುತ್ತೇವೆಯೋ, ಅಂತಹವರುಗಳು ಯೋಗ್ಯರಾಗಿರಬೇಕು. ನಮಗೆ ಸರ್ ಎಂ.ವಿಶ್ವೇಶ್ವರಯ್ಯ ನಂತಹವರು ಬೇಕೆಂದರೆ, ನಾವು ಸರ್ ಎಂ.ವಿಶ್ವೇಶ್ವರಯ್ಯ ನಂತಹವರನ್ನೇ ಅಲ್ಲಿ ನೇಮಕ ಮಾಡಬೇಕು. ಅದನ್ನು ಬಿಟ್ಟು ಕಳ್ಳರು, ಕದಿಮರು ಮತ್ತು ಎಲ್ಲಾ ಕಡೆ ಸಲ್ಲದವರನ್ನು, ಮುಗುತಿ, ತಾಳಿ ಮತ್ತಿತರೆ ಭಾಗ್ಯಗಳನ್ನು ನೀಡುವವರನ್ನು ಅಲ್ಲಿಗೆ ನೇಮಕ ಮಾಡಿದರೆ, ಅಲ್ಲಿನ ಪರಿಸ್ಥಿತಿ ಏನಾಗುತ್ತದೆ? ಹೀಗಾಗಿ ಮೂಲವನ್ನೇ ಸರಿಪಡಿಸುವ ಕೆಲಸವಾಗಬೇಕು ಎನ್ನುವುದು ನನ್ನ ಆಗ್ರಹವಾಗಿದೆ. ಇದರ ಜೊತೆಗೆ, ಈಗ ನಾವು ಏನು ಮಾಡಬೇಕೆಂದರೆ, ದೊಡ್ಡ ಪ್ರಮಾಣದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿಯೇ ತಪ್ಪಾಗಿರುವ ಹಿನ್ನೆಲೆಯಲ್ಲಿ ಆಯೋಗವು 'ಎ' ಮತ್ತು 'ಬಿ' ಶ್ರೇಣಿಗಳಿಗೆ ನಡೆಸಿರುವ ಪೂರ್ವಭಾವಿ ಮರು ಪರೀಕ್ಷೆಯನ್ನು ರದ್ದುಗೊಳಿಸಬೇಕು. ಈಗಾಗಲೇ ಹೊರಡಿಸಿದ ಹಳೆಯ ಅಧಿಸೂಚನೆಯನ್ನು ಹಿಂಪಡೆದು ಹೊಸ ಅಧಿಸೂಚನೆಯನ್ನು ಹೊರಡಿಸಬೇಕು. ವಯಸ್ಸಿನ ಮಿತಿ ನಿರ್ಭಂಧವನ್ನು ಸಡಿಲಿಸಿ, ಅರ್ಜಿ ಸಲ್ಲಿಸಿದ 2,30,000 ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯುವುದಕ್ಕೆ ಅವಕಾಶವನ್ನು ನೀಡಬೇಕು. ಗೂಗಲ್ ಭಾಷಾಂತರ ಮೂಲಕ ಕನ್ನಡ ಭಾಷೆಗೆ

ಅಪಮಾನ ಮಾಡಿರುವ ಅಧಿಕಾರಿಗೆ ಭಾಷಾ ನೀತಿಯ ಅವಹೇಳನ ಮಾಡಿದ ಆರೋಪದ ಮೇರೆಗೆ, ಕಠಿಣ ಶಿಕ್ಷೆಗೊಳಪಡಿಸಬೇಕು ಮತ್ತು ಕನ್ನಡ ಭಾಷೆಯಲ್ಲಿಯೇ ಪ್ರಶ್ನೆ ಪತ್ರಿಕೆಯನ್ನು ತಯಾರಿಸಿ, ಅದನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಬೇಕು. ಬೇಜವಾಬ್ದಾರಿ ಮತ್ತು ಹೊಣೆಗಾರಿಕೆ ಮರೆತು ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಅಮಾನತ್ತುಗೊಳಿಸಿ, ಅವರನ್ನು ವಿಚಾರಣೆಗೊಳಪಡಿಸಲು ಆದೇಶಿಸಬೇಕು. ಮರು ಪರೀಕ್ಷೆ ನಡೆಸುವುದಕ್ಕೆ ಏನು ವೆಚ್ಚವಾಗುತ್ತದೆಯೋ, ಆ ವೆಚ್ಚವನ್ನು ತಪ್ಪಿತಸ್ಥರಿಂದಲೇ ವಸೂಲಿ ಮಾಡಬೇಕು. ಮುಂದಿನ ದಿನಗಳಲ್ಲಿ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ, ಯು.ಪಿ.ಎಸ್.ಸಿ. ಮಾದರಿಯ ಪಾರದರ್ಶಕ ಮಾದರಿಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ.

ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಹುದ್ದೆಯ ಪರೀಕ್ಷಾ ಫಲಿತಾಂಶವನ್ನು ಪರೀಕ್ಷೆ ಮುಗಿದ ಒಂದು ವರ್ಷದ ಅವಧಿಯ ನಂತರ ಪ್ರಕಟಿಸಿದರು. ಇದರಲ್ಲಿ ಒಂದೇ ಪ್ರದೇಶದ 23 ಅಭ್ಯರ್ಥಿಗಳು ಆಯ್ಕೆಗೊಂಡಿದ್ದಾರೆ. ಇದು ಕಾಕತಾಳಿಯವೋ ಅಥವಾ ಕೈ ಚಳಕವೋ? 230 ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಒಂದೇ ಪ್ರದೇಶದ 23 ಅಭ್ಯರ್ಥಿಗಳು ಆಯ್ಕೆಗೊಂಡಿರುವುದು ಕಾಕತಾಳಿಯವೋ ಅಥವಾ ಕೈ ಚಳಕವೋ ಎನ್ನುವ ಬಗ್ಗೆ ತನಿಖೆ ಮಾಡಿಸುವಂತ ಕೆಲಸವಾಗಬೇಕು. ಇದರಲ್ಲಿನ ಬಹುತೇಕ 23 ಅಭ್ಯರ್ಥಿಗಳು ಒಂದೇ ಕುಟುಂಬದ ರಕ್ತ ಸಂಬಂಧಿಗಳೆ ಆಯ್ಕೆಗೊಂಡಿದ್ದಾರೆ. ಇದು ಸ್ವಾಭಾವಿಕವಾಗಿ ಆಗಿದೆ ಎಂದು ನನಗೆ ಅನ್ನಿಸುವುದಿಲ್ಲ. ಇದರ ಬಗ್ಗೆ ತನಿಖೆಯಾಗಬೇಕು. ಪ್ರಥಮ ಮರ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಪರೀಕ್ಷೆಗಳು ನಡೆದಾಗ ಸಿ.ಟಿ.ಐ. ಪರೀಕ್ಷೆಯಲ್ಲಿ 166 ಅಂಕಗಳೊಂದಿಗೆ ಮೊದಲನೇ ಸ್ಥಾನ ಪಡೆದಿದ್ದ ಅಭ್ಯರ್ಥಿಯು ಎಫ್.ಡಿ.ಎ. ಮತ್ತು ಎಸ್.ಡಿ.ಎ. ಪರೀಕ್ಷೆಯಲ್ಲಿ ಪಡೆದ ಅಂಕಗಳು ಕೇವಲ 11.5 ಆಗಿದ್ದು, ಇದು ನಕಾರಾತ್ಮಕ ಮೌಲ್ಯಮಾಪನವಾಗಿದೆ. ಎರಡು ತಿಂಗಳಿನ ಅಂತರದಲ್ಲಿ ನಡೆದ ಪರೀಕ್ಷಾ ಫಲಿತಾಂಶವು ಚಮತ್ಕಾರಿಯಾಗಿದೆ. ಈ ಎಲ್ಲಾ ಗೋಲ್‌ಮಾಲ್‌ಗಳಿಗೆ ಕಡಿವಾಣ ಹಾಕುವುದಕ್ಕಾಗಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪಾರದರ್ಶಕ ವ್ಯವಸ್ಥೆಯನ್ನು ತರಬೇಕೆಂದು ನಾನು ಆಗ್ರಹಿಸುತ್ತೇನೆ. ಕೇವಲ ತೇಪೆಯನ್ನು ಹಾಕುವ ಕೆಲಸವಾಗಬಾರದು. ಈ ವಿಚಾರದಲ್ಲಿ ನಾವುಗಳೆಲ್ಲರೂ ಆತ್ಮಾವಲೋಕವನ್ನು ಮಾಡಿಕೊಳ್ಳಬೇಕು. ಜಾತಿ, ಕೋಟಾ ಮತ್ತು ಪೇಮೆಂಟ್ ಆಧಾರಗಳ ಮೇಲೆ ಆಯೋಗಕ್ಕೆ ನೇಮಕ ಮಾಡುವುದನ್ನು ಕೈಬಿಡಬೇಕು. ಇದನ್ನು ನಿಲ್ಲಿಸಿದರೆ, ಉಳಿದೆಲ್ಲಾ ವ್ಯವಸ್ಥೆಯು ತಹಬದಿಗೆ ಬರುತ್ತದೆ. ಇಲ್ಲದಿದ್ದರೆ, ನಾವುಗಳೆಲ್ಲರೂ ಈ ಪಾಪಕೂಪಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬೆಂಬಲಿಸುವ ಪಾಪಿಗಳಾಗುತ್ತೇವೆ. ಇದು ಕೊನೆಯಾಗಬೇಕು ಎಂದು ಹೇಳಿದರೆ, ಪಾರದರ್ಶಕವಾದ ವ್ಯವಸ್ಥೆಯನ್ನು ಜಾರಿಗೊಳಿಸಿದರೆ, ಪ್ರಾಮಾಣಿಕರು ಆಯ್ಕೆಗೊಳ್ಳುತ್ತಾರೆ. ಅವರುಗಳಿಂದ ಸಮಾಜಮುಖಿ ಕೆಲಸಗಳಾಗುತ್ತವೆ. ಇಲ್ಲದಿದ್ದರೆ, ಭ್ರಷ್ಟರು ಅಲ್ಲಿಗೆ ಬಂದು ಲೂಟಿ ಹೊಡೆಯುತ್ತಾರೆ. ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ದಾಳಿ ಮಾಡಿದರೆ ಒಬ್ಬೊಬ್ಬರ ಮನೆಯಲ್ಲಿ ಚಿನ್ನದ ಖಜಾನೆ, ನೋಟಿನ ಕಂತೆಗಳು ದೊರೆಯುತ್ತವೆ. ಇಷ್ಟೊಂದು ಎಲ್ಲಿಂದ ಬರುತ್ತದೆ? ನಾವು ಈ ವ್ಯವಸ್ಥೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತೇವೆ ಎಂದು ನಾನು ಪ್ರಶ್ನಿಸುತ್ತೇನೆ.

(ಮುಂದು)

(136) 06-03-2025(5-50)bkp- bns **ಸಭಾಪತಿಯವರ ಉಪಸ್ಥಿತಿ**

**ಶ್ರೀ ಸಿ.ಟಿ. ರವಿ(ಮುಂದು)**

ಹಾಗಾಗಿ, ಈ ವ್ಯವಸ್ಥೆಯಲ್ಲಿ ಬೇವಿನ ಬೀಜವನ್ನು ಬಿತ್ತಿದರೆ ಅದರಲ್ಲಿ ಮಾವಿನ ಫಸಲು ಬರುವುದಿಲ್ಲ. ನಾವು ಬಿತ್ತಬೇಕಾದರೆ ಯೋಗ್ಯ ಫಸಲು ಅಂದರೆ ಯೋಗ್ಯರು ಆಯ್ಕೆಯಾಗುವಂತೆ ನೋಡಿಕೊಳ್ಳಬೇಕು. ಕೆಪಿಎಸ್‌ಸಿ ಈ ರೀತಿಯಲ್ಲಿ ಹಗರಣದ ಕೂಪವಾದರೆ ಯೋಗ್ಯರು ಹೇಗೆ ಆಯ್ಕೆಯಾಗಿ ಬರುತ್ತಾರೆ?

ಮಾನ್ಯ ಸಭಾಪತಿಯವರೆ, ಇದಕ್ಕಾಗಿ ಈ ಸದನ ಪಕ್ಷಾತೀತವಾಗಿ ಈ ವ್ಯವಸ್ಥೆಯನ್ನು ಸರಿ ಮಾಡುವಂತಹ ಆಗ್ರಹವನ್ನು ಮಾಡಬೇಕೆಂದು ವಿನಂತಿ ಮಾಡಿ ಇದನ್ನು ಸರಿಪಡಿಸುವಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಒಬ್ಬನಿಗೆ ಶಿಕ್ಷೆಯಾಗಲಿ, ಉಳಿದವರು ಎಚ್ಚರ ವಹಿಸುತ್ತಾರೆ. ಇಲ್ಲದಿದ್ದರೆ, ಇಲ್ಲಿ ಭ್ರಷ್ಟಾಚಾರದ ಆರೋಪವನ್ನು ಹೊತ್ತುಕೊಂಡವನು ಇನ್ನೊಂದು ಆಯಕಟ್ಟಿನ ಸ್ಥಳಕ್ಕೆ ಬಂದು ಕುಳಿತುಕೊಳ್ಳುತ್ತಾನೆ. ಅಲ್ಲಿಯೂ ತಿಂದು, ಇಲ್ಲಿಯೂ ತಿಂದು ಅವರಿಗೆ ರಕ್ಷಣೆಯನ್ನು ಕೊಡುತ್ತಾರೆ. ಹಾಗಿದ್ದರೆ ವ್ಯವಸ್ಥೆ ಎಲ್ಲಿ ಸರಿ ಹೋಗುತ್ತದೆ? ಆ ನಿಟ್ಟಿನಲ್ಲಿ ಕ್ರಮ ಆಗಬೇಕೆಂದು ಆಗ್ರಹಿಸಿ, ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಎಲ್ಲಾ ಅಂಶಗಳನ್ನು ಕ್ರೋಢಿಕರಿಸಿ ವ್ಯವಸ್ಥೆಯನ್ನು ಸರಿ ಮಾಡುವ ದೃಷ್ಟಿಯಿಂದ ಕ್ರಮ ಆಗಬೇಕು. ಈ ವಿಚಾರದಲ್ಲಿ ಸಂಪುಟ ನಿನ್ನೆ ಏನೋ ಶಿಫಾರಸ್ಸು ಮಾಡಿರುವ ಬಗ್ಗೆ ಕೇಳಿದ್ದೇನೆ. 25 ಅಂಕಗಳಿಂದ 166 ಅಂಕಗಳಿಗೆ ಶಿಫಾರಸ್ಸು ಮಾಡಿದೆಯಂತೆ. ಹೀಗಾದರೆ, ಇನ್ನೂ ಅಂಗಡಿ ಬಾಗಿಲು ತೆಗೆದುಕೊಂಡಂತಾಗುತ್ತದೆ. ನನ್ನ ಹತ್ತಿರ 2 ಜನ ಸದಸ್ಯರು ಬಂದು ನನಗೂ ಮನವಿಯನ್ನು ಕೊಟ್ಟರು. ಸರ್, ನಮ್ಮ ಕೈ ಕಟ್ಟಿ ಹಾಕಿದಂತಾಗಿದೆ 25 ಅಂಕಗಳಲ್ಲಿ ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ಅಂದರೆ ಅವರಿಗೆ 166 ಅಂಕಗಳಿಗೆ ನೀವು ಅವಕಾಶವನ್ನು ಕೊಟ್ಟರೆ ಅಂಗಡಿ ಬಾಗಿಲು ತೆಗೆದುಕೊಂಡಂತಾಗುತ್ತದೆ. ಯಾವ ಒಂದು ವ್ಯವಸ್ಥೆಯನ್ನು ಸರಿದಾರಿಗೆ ತರಬೇಕೆಂದು ನಾವು ಏನು ಹೊರಟಿದ್ದೇವೆಯೋ, ಅದಕ್ಕೆ ವಿರುದ್ಧವಾಗಿ ಮಾಡಿದಂತಾಗುತ್ತದೆ. ಹೀಗಾಗಿ, ಅಂತಹದ್ದನ್ನೆಲ್ಲಾ ಮಾಡುವುದರ ಬದಲಿಗೆ ಕೆ.ಪಿ.ಎಸ್.ಸಿ.ಯನ್ನೆ ಮುಚ್ಚಿಬಿಡಿ. ಅದರ ಅವಶ್ಯಕತೆಯೇ ಇರುವುದಿಲ್ಲ. ಇಲ್ಲವೇ ಸರಿ ಮಾಡಿ.

**ಶ್ರೀ ಐವನ್‌ಡಿ'ಸೋಜಾ( ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದನ್ನು ಮುಚ್ಚಲಿಕ್ಕೆ ಆಗುವುದಿಲ್ಲ. It is created by Constitution. But, the system can be changed. ಅದರಲ್ಲಿನ ನ್ಯೂನ್ಯತೆಗಳನ್ನು ಸರಿಮಾಡಬಹುದು.

**ಶ್ರೀ ಸಿ.ಟಿ.ರವಿ:–** ಅದನ್ನು ಮುಚ್ಚಬೇಕೆಂದು ಹೇಳುತ್ತಿಲ್ಲ, ನಾನು ನನ್ನ ನೋವನ್ನು ಹೇಳಿದೆ. ಅಂದರೆ, ಭ್ರಷ್ಟರನ್ನು ಆಡಳಿತ ವ್ಯವಸ್ಥೆಗೆ ತರಲಿಕ್ಕೆ ಈ ಸಂಸ್ಥೆ ಬೇಕಾಗುತ್ತದೆಯೇ? ಇಂತಹದ್ದನ್ನು ನಡೆಸುವುದರ ಬದಲಿಗೆ ಆ ಕಳಂಕ ಏತಕ್ಕೆ ಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಭವಿಷ್ಯದ ಜೊತೆ ಚೆಲ್ಲಾಟ ಆಡುವಂತಹ ಸಂಸ್ಥೆ ಏತಕ್ಕೆ ಬೇಕು?

**ಶ್ರೀ ಐವನ್‌ಡಿ'ಸೋಜಾ( ವಿಧಾನಸಭಾ ಕ್ಷೇತ್ರ):–** ಮಾನ್ಯ ಸಿ.ಟಿ.ರವಿಯವರೆ, ನೀವು ಮಾತನಾಡಿದ್ದನ್ನು ನಾವು ಕೂಡ ಒಪ್ಪುತ್ತೇವೆ. ನೀವು ಹೇಳಿದಿರಿ, ಇಡಿ ಸದನ ಒಪ್ಪಬೇಕು ಮತ್ತು ಒಂದು reforms ತರಬೇಕು. ಖಂಡಿತವಾಗಿ ಈ ಕೆಲಸ ಆಗುತ್ತದೆ. ಆದರೆ, ಈ ಸಂಸ್ಥೆಯನ್ನು ಮುಚ್ಚಲಿಕ್ಕೆ ಬರುವುದಿಲ್ಲ. ಏಕೆಂದರೆ, it is created by the Constitution.

**ಶ್ರೀ ಸಿ.ಟಿ.ರವಿ:–** ನಾನು ಹೇಳುವುದೇನೆಂದರೆ ಬೇಲಿ ಎದ್ದು ಹೊಲ ಮೇಯುವುದಾದರೆ ಬೇಲಿ ಏತಕ್ಕೆ ಬೇಕು? ನೀವು ಕೆರೆಗೆ ಏರಿಯನ್ನು ಕಟ್ಟುವುದು ಏತಕ್ಕೆಂದರೆ ನೀರನ್ನು ನಿಲ್ಲಿಸಲಿಕ್ಕೆ ಏರಿಯನ್ನು ಕಟ್ಟಲಾಗುತ್ತದೆ. ಏರಿಯೇ ನೀರು ಕುಡಿಯುವುದಾದರೆ ಏರಿ ಏತಕ್ಕೆ ಬೇಕು? ಸಂಸ್ಥೆಯೇ ಭ್ರಷ್ಟವಾದರೆ ಆ ಸಂಸ್ಥೆ ಏತಕ್ಕೆ ಬೇಕು? ಅದನ್ನು ಸರಿ ಮಾಡಬೇಕೆಂದರೆ ಕೆ.ಪಿ.ಎಸ್.ಸಿ.ಗೆ ಸದಸ್ಯರ ನೇಮಕದಿಂದಲೂ ಸರಿಯಾಗಬೇಕು. ಯೋಗ್ಯ ಅಧಿಕಾರಿಗಳನ್ನು ಹಾಕಬೇಕು. ಪ್ರಮಾಣಿಕ ವ್ಯವಸ್ಥೆಯನ್ನು ತರಬೇಕು. ಇದರಲ್ಲಿ ರಾಜಕೀಯ ಹಸ್ತಕ್ಷೇಪ ಇಲ್ಲದಂತೆ ನೋಡಿಕೊಳ್ಳಬೇಕು. ಜಾತಿ ಕೂಟದ ಪ್ರಭಾವ ನಡೆಯದ ರೀತಿಯಲ್ಲಿ ನೋಡಿಕೊಳ್ಳಬೇಕು. ರೋಸ್ಟರ್ ಮತ್ತು ಮೆರಿಟ್ ಮೇಲೆ ಯೋಗ್ಯರು ಆಯ್ಕೆಯಾಗಿ ಬರುವಂತೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಇಷ್ಟು ಹೇಳಿ ಸರ್ಕಾರದ ಉತ್ತರದಲ್ಲಿ ನಿರೀಕ್ಷೆಯನ್ನು ಇಟ್ಟುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ತಾವು ಈ ವಿಚಾರವನ್ನು ಚರ್ಚೆ ಮಾಡಲು ನಿಯಮ 59 ರಡಿಯಲ್ಲಿ ನೋಟೀಸ್ ಕೊಟ್ಟಿದ್ದಿರಿ. ಅದನ್ನು ನಿಯಮ 330 ರಡಿಯಲ್ಲಿ ಚರ್ಚೆಗೆ ಬರುವಂತೆ ಮಾಡಿದ್ದೇನೆ. ಈ ನಿಯಮದಡಿ 40 ನಿಮಿಷಗಳಿಗಿಂತ ಹೆಚ್ಚು ಸಮಯ ಮಾತನಾಡುವಂತಿಲ್ಲ. ಶ್ರೀಯುತ ಸಿ.ಟಿ.ರವಿಯವರೆ ಸುಮಾರು 43 ನಿಮಿಷಗಳ ಕಾಲ ಮಾತನಾಡಿದ್ದಾರೆ. ಯಾರ್ಯಾರು, ಎಷ್ಟೆಷ್ಟು ಹೊತ್ತು ಮಾತನಾಡಿದ್ದಾರೆಂದು ಬರೆದಿದ್ದೇನೆ. ನೀವು ಎಷ್ಟು ಜನರು ಬೇಕೋ ಮಾತನಾಡಿ. ನಾನು ಬೆಲ್ ಹೊಡೆಯುವುದೇ ಇಲ್ಲ. ಬೆಲ್ ಅನ್ನು ತೆಗೆದು ಇಡುತ್ತೇನೆ. ಎಷ್ಟು ಹೊತ್ತು ಬೇಕಾದರೂ ಮಾತನಾಡಿ ನಾನು ಕೇಳುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್(ವಿದಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ,

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಸಭಾಪತಿಯವರು:-** ಇದು ಸಭೆ ನಡೆಸುವ ಪದ್ಧತಿಯೇ? ನೀವೇ ಹೇಳಿ ನೋಡೋಣ. ಸಭೆಗೆ ಕಿಮ್ಮತ್ತು ಇಲ್ಲವೇ? ನಿಮಗೆ ಯಾರು ಹೇಳುವವರು, ಕೇಳುವವರು ಇಲ್ಲವೇ? **(ಗೊಂದಲ)** ನಾನು ಯಾರಿಗೂ object ಮಾಡುವುದಿಲ್ಲ. ಯಾರು ಎಷ್ಟು ಹೊತ್ತು ಬೇಕಾದರೂ ಮಾತನಾಡಿ. Sorry, ನನಗೆ ಇವೆಲ್ಲಾ like ಆಗಲ್ಲ.

**(ಗೊಂದಲ)**

**ಶ್ರೀಮತಿ ಹೇಮಲತಾ ನಾಯಕ್(ವಿದಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಇಲ್ಲಿಯವರೆಗೂ ಮಾನ್ಯ ಸದಸ್ಯರಾದ ಶ್ರೀಮಾನ್ ಸಿ.ಟಿ. ರವಿಯವರು ಹೇಳಿದಂತೆ ಕೆ.ಪಿ.ಎಸ್.ಸಿ.ಯ ಕರ್ಮಕಾಂಡದಿಂದ ಪ್ರತಿಯೊಂದು ಹಂತದಲ್ಲಿಯೂ ಕೂಡ ಬಹಳಷ್ಟು ನಿರಾಸೆ ಪರೀಕ್ಷೆ ಬರೆದಂತಹ ಯುವಕರಿಗೆ ಆಗಿದೆ. ಅದೇ ರೀತಿಯಲ್ಲಿ ನಾನು ಇವತ್ತು ಎಲ್ಲಾ ಮಾನ್ಯ ಸದಸ್ಯರು ಸಂಪೂರ್ಣವಾಗಿ ಸದನದಲ್ಲಿ ಹೇಳಿದ ನಂತರ ನನಗೆ ಫೋನ್ ಮೂಲಕ ಕೆಲವೊಂದು ಮಾಹಿತಿಗಳು ಬಂದವು. ಕೆ.ಪಿ.ಎಸ್.ಸಿ. 2018 ರಲ್ಲಿ J.T.O. (ಕಿರು ತರಬೇತಿ ಅಧಿಕಾರಿ) ಹುದ್ದೆಗೆ ಅರ್ಜಿಯನ್ನು ಕರೆದಿದ್ದರು. ಆಗ ಕೆಲವರು ಅರ್ಜಿಯನ್ನು ಹಾಕಿ ಪರೀಕ್ಷೆ ಬರೆದು ಸಂದರ್ಶನದಲ್ಲಿ ಸಹ ಆಯ್ಕೆಯಾಗಿದ್ದು, ಕೆಲವು ಕಾರಣಗಳಿಂದ ಈ ಒಂದು J.T.O. ಹುದ್ದೆಯ ಆಯ್ಕೆ ಪಟ್ಟಿಯಲ್ಲಿ ಗೊಂದಲವಾದಾಗ ಅದನ್ನು ಪ್ರಶ್ನಿಸಿ ಕೋರ್ಟ್‌ಗೆ ಹೋಗಿದ್ದರು. ನಂತರ ಇದರ ಬಗ್ಗೆ ಸುಪ್ರೀಂ ಕೋರ್ಟ್ ಮೆಟ್ಟಿಲು ಏರಿದಾಗ ಅಲ್ಲಿ ಅವರಿಗೆ ಜಯ ಲಭಿಸಿತು. ಅವರನ್ನು ಆಯ್ಕೆ ಮಾಡಲು ಆದೇಶ ಮಾಡಿ ಸುಮಾರು 2 ತಿಂಗಳಾದರೂ ಸಹ ಇದುವರೆಗೆ ಕೆ.ಪಿಎಸ್.ಸಿ.ಯಿಂದ J.T.O. ಅಂತಿಮ ಆಯ್ಕೆ ಪಟ್ಟಿ ಬಿಡಲು ವಿಳಂಬ ಮಾಡುತ್ತಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು.)**

ಈ ವಿಚಾರವನ್ನು ಕೆ.ಪಿ.ಎಸ್.ಸಿ. ಅಧ್ಯಕ್ಷರ ಗಮನಕ್ಕೆ ತಂದರೆ ಅಂತಿಮ ಪಟ್ಟಿಯನ್ನು ಬೇಗ ಬಿಡುತ್ತಾರೆಂದು ಹೇಳುತ್ತಿದ್ದಾರೆ. ಇವುಗಳೆಲ್ಲವೂ ಕೆ.ಪಿ.ಎಸ್.ಸಿ. ಪರೀಕ್ಷೆ ಬರೆದಂತಹ ಯುವಕ-ಯುವತಿಯರ ನೋವು ಆಗಿದೆ. ಇಂತಹ ಸಾವಿರಾರು ಯುವಕರ ಆಸೆಯ ನಿರಾಸೆಯಾಗಿರುವುದಾಗಿದೆ. ಇವತ್ತು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಕೆ.ಪಿ.ಎಸ್.ಸಿ. ಕರ್ಮಕಾಂಡದ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಹಂತದಲ್ಲಿ ಪರೀಕ್ಷೆ ಬರೆದಂತಹ ವ್ಯಕ್ತಿ ಕೂಡ ಇವತ್ತು ಬಹಳಷ್ಟು ಆಸೆಯಿಂದ ಬರೆದಿರತಕ್ಕಂತಹ ಪರೀಕ್ಷೆ ಬಗ್ಗೆ ಮನನ ಮಾಡಿಕೊಂಡು ತಮ್ಮಲ್ಲಿ ಹಂಚಿಕೊಂಡಾಗ ತಕ್ಷಣ ಈ ರೀತಿಯಲ್ಲಿ O.M.R. sheet ಬದಲಾಗಿದ್ದು, ಆನಂತರ ಭಾಷಾಂತರ ಆಗಿರುವಂತಹದ್ದು, ಈ ರೀತಿಯಲ್ಲಿ ಹಲವಾರು ವಿಚಾರಗಳನ್ನು ನಮ್ಮ ನಾಯಕರು ಹೇಳಿದರು. ಅದರ ಬಗ್ಗೆ ನಾನು ಮತ್ತೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ಇವತ್ತು ಅಲ್ಲಿ ಇರತಕ್ಕಂತಹ ಪ್ರತಿಯೊಬ್ಬ ಯುವಕರು ನಿಮಗೆ ಸದನ ನಡೆಯುತ್ತಿದೆ, ನಿಮಗೆ

ಮಾತನಾಡಲು ಅವಕಾಶ ಸಿಗುತ್ತದೆ, ಆ ವಿಷಯನ್ನು ಪ್ರಸ್ತಾಪ ಮಾಡಿ ಮೇಡಂ ಎಂದು ಅವರು ನಮಗೆ ಹೇಳುತ್ತಾರೆ. ಈ ವಿಚಾರದಲ್ಲಿ ಪ್ರತಿದಿನವೂ ಫೋನ್ ಕಾಲ್‌ಗಳು ಬರುತ್ತಿರುತ್ತವೆ. ನೋಡಿ, ಕೋಲಾರದಲ್ಲಿ ಇರುವಂತಹ ಒಬ್ಬ ಯುವಕ ವಿನಯ್ ಎನ್ನುವಂತಹವನು KREIS, ಜಲಸಂಪನ್ಮೂಲ ಇಲಾಖೆಯಿಂದ F.D.A. ಇತ್ಯಾದಿ ಹುದ್ದೆಗೆ ಪರೀಕ್ಷೆ ಬರೆದಿದ್ದು, ನ್ಯಾಯಾಲದಲ್ಲಿ ಇರುವ ಪ್ರಕರಣಗಳ ಹೊರತಾಗಿ 2017 ರಿಂದ 2024 ರವರಗೆ ಬಾಕಿ ಉಳಿದಿರುವಂತಹ ಹೆಚ್ಚುವರಿ ಪಟ್ಟಿಯನ್ನು ಹಾಗೆಯೇ ಇಟ್ಟುಕೊಂಡಿರುತ್ತಾರೆ. ಅಂದರೆ ನಾವು ನೌಕರಿಯನ್ನು ಮಾಡುವುದು ಯಾವಾಗ? ನಮ್ಮ ವಯಸ್ಸು ಮುಗಿಯುತ್ತಿದೆ, ನಮಗೆ ಆಯಸ್ಸು ಕೂಡ ಇದೆಯೋ, ಇಲ್ಲವೋ ಗೊತ್ತಿಲ್ಲ. ನಾವು ಪ್ರತಿಯೊಂದು ಪರೀಕ್ಷೆಯನ್ನು ಕೆ.ಪಿ.ಎಸ್.ಸಿ.ಯಿಂದ ನಿರೀಕ್ಷೆ ಮಾಡುವಂತಹದ್ದು ಇದೆ. ಆದರೆ, ಈ ಒಂದು ಕರ್ಮಕಾಂಡ ನೋಡುತ್ತಿದ್ದರೆ ನನ್ನ ಜೀವನದಲ್ಲಿ ನಿರಾಸೆಯಾಗುತ್ತಿದೆ. ನಾವು ಏನು ಮಾಡೋಣ ಎನ್ನುವಂತಹ ಒಂದು ಪ್ರಶ್ನೆ ಅವರ ಮುಂದಿರುವಾಗ ಕೆ.ಪಿ.ಎಸ್.ಸಿ.ಯಲ್ಲಿ ಬಾಕಿ ಉಳಿದಿರುವಂತಹ ಪಟ್ಟಿಯನ್ನು ಪ್ರಕಟಿಸಲು ಏಕೆ ವಿಳಂಬ ಆಗುತ್ತಿದೆ? ಏತಕ್ಕೆ ಈ ರೀತಿಯಲ್ಲಿ ಸರ್ಕಾರ ಮಾಡುತ್ತಿದೆ? ಕಳೆದ ಹಲವು ತಿಂಗಳುಗಳಿಂದ ಪರೀಕ್ಷೆಗಳನ್ನು ಬರೆದು ಅವರು ತಮ್ಮ ಉತ್ತಮವಾದ ಜೀವನಕ್ಕಾಗಿ ಎದುರು ನೋಡುವಂತಹದ್ದು ಇದೆ. ಇವತ್ತು ಎಲ್ಲಾ ಕಡೆಯಿಂದಲೂ ನೋಡಿದಾಗ ಈ ಕೆ.ಪಿ.ಎಸ್.ಸಿ. ಬಗ್ಗೆ ನಿಜವಾಗಿಯೂ ಸಹ ಅವರು ಮಾಡಿರುವಂತಹ ತಪ್ಪುಗಳನ್ನು ಎಣಿಸುವುದಕ್ಕೆ ಹೋದರೆ ನಿಜವಾಗಿಯೂ ಬಹಳ ದುಃಖ ಎನಿಸುತ್ತದೆ. ತಪ್ಪು ಎಸಗಿದವರ ಮೇಲೆ ಇಲ್ಲಿಯವರೆಗೂ ಯಾವುದೇ ಕ್ರಮವಿಲ್ಲ. ಕಳೆದ ಬಾರಿ ಪ್ರಶ್ನೆ ಪತ್ರಿಕೆಯ ಅನುವಾದದಲ್ಲಿ ಲೋಪಕ್ಕೆ ಕಾರಣರಾದವರ ವಿರುದ್ಧ ಆಯೋಗ ಯಾವ ಒಂದು ಕ್ರಮವನ್ನು ಕೈಗೊಂಡಿರುವುದಿಲ್ಲ. ಇವತ್ತು ಪರೀಕ್ಷೆಯನ್ನು ನಡೆಸುವಂತಹ ಅಧಿಕಾರಿಗಳು ಯಾರೂ ಕೂಡ ನಿಯತ್ತಿನಿಂದ ಕೆಲಸ ಮಾಡುವುದಿಲ್ಲ. ಅವರು ಮಾಡುವಂತಹ ತಪ್ಪು ಎಂತಹದ್ದು ಎನ್ನುವ ಅರಿವು ಅವರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಕೇವಲ ಇಂಗ್ಲೀಷ್ ಅನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಯುವಕರ ಜೀವನದ ಜೊತೆ ಆಟವಾಡುತ್ತಿದ್ದಾರೆ ಎಂದರೆ ಎಷ್ಟರಮಟ್ಟಿಗೆ ಅವರಲ್ಲಿ ಇದರ ಬಗ್ಗೆ ನಿರಾಸಕ್ತಿ ಇದೆ ಎನ್ನುವುದನ್ನು ನೋಡಬೇಕಾಗಿದೆ. ಏತಕ್ಕೆ ಭಾಷಾಂತರದ ವಿಷಯದಲ್ಲಿ ಪ್ರಮಾದಗಳು ಆಗುತ್ತವೆ? ಒಂದು ಬಾರಿ ತಪ್ಪು ಆದರೆ ಸರಿ, ಅದೇ ತಪ್ಪುಗಳನ್ನು ಮತ್ತೊಮ್ಮೆ ಮಾಡುತ್ತಾರೆ. O.M.R. sheet ಅನ್ನು ತಿದ್ದುವಂತಹ ಕೆಲಸಗಳು ಇವತ್ತು ಆಗುತ್ತಿವೆ. ಇಲ್ಲಿಯವರೆಗೂ ಸರ್ಕಾರ ಕಾಟಾಚಾರಕ್ಕೆಂದು ಪರೀಕ್ಷೆಯನ್ನು ನಡೆಸುತ್ತಿತ್ತು ಎಂದು ಅನಿಸುತ್ತದೆ. ನಾವು ಹೇಳುತ್ತಿದ್ದೇವೆ, ಅವರು ತಪ್ಪುಗಳನ್ನು ಮಾಡುತ್ತಲೇ ಇದ್ದಾರೆ. ಇದನ್ನು ತಿದ್ದಿಕೊಳ್ಳುವುದು ಯಾವಾಗ? ಅಧಿಕಾರಿಗಳಿಗೆ ಶಿಕ್ಷೆ ಇಲ್ಲ. ಪರೀಕ್ಷೆ ನಡೆಸುವಂತಹ ಅಧಿಕಾರಿಗಳಿಗೂ ಶಿಕ್ಷೆ ಇಲ್ಲ. ನಮಗೆ ಏತಕ್ಕೆ ಶಿಕ್ಷೆ? ನಾವು ಏನು ಮಾಡಬೇಕು, ನಿಜವಾಗಿಯೂ ಸಹ ಒಬ್ಬ ಯುವಕ ಪೂರ್ಣವಾಗಿ ನರ್ವಸ್ ಆಗಿ ನಮ್ಮ ಹತ್ತಿರ ಬಂದು ಭೇಟಿಯಾದಂತಹ ಸಂದರ್ಭದಲ್ಲಿ ಬಹಳ ಬೇಜಾರು ಎನಿಸಿತು. ಏತಕ್ಕೆಂದರೆ ಜೀವನದಲ್ಲಿ ನಾನು ಒಬ್ಬ

ಪ್ರತಿಭಾವಂತ ವಿದ್ಯಾರ್ಥಿ ಇದ್ದೇನೆ. ನಾನು ಒಂದು ಉತ್ತಮವಾದ ಜೀವನವನ್ನು ಕಂಡುಕೊಳ್ಳಬೇಕು, ಈ ಪರೀಕ್ಷೆ ಮೂಲಕ ನನ್ನ ಜೀವನವನ್ನು ಸಾಗಿಸಬೇಕೆಂದು ಏನೇನೋ ಕನಸುಗಳನ್ನು ಯುವಕರು ಇಟ್ಟುಕೊಂಡಿರುತ್ತಾರೆ. ಆ ಕನಸುಗಳು ಇವತ್ತು ಈಡೇರುತ್ತಿಲ್ಲ. ಈಗ ಮತ್ತೊಂದು ಪರೀಕ್ಷೆ ನಡೆಯಬೇಕೆಂದಾಗ ಇವತ್ತು ಪ್ರತಿಭಟನೆಗಳನ್ನು ಮಾಡುತ್ತಿದ್ದಾರೆ. ಜೀವನ ಪರ್ಯಂತ ಒಬ್ಬ ಯುವಕ ತಾನು ಪದವಿಯನ್ನು ಪಾಸು ಮಾಡಿದ ಮೇಲೆ ನೌಕರಿಯನ್ನು ಹುಡುಕ ಬೇಕೆಂದರೆ ಪರೀಕ್ಷೆ ಬರೆದ ತಕ್ಷಣ ಪ್ರತಿಭಟನೆ ಮಾಡುತ್ತಾರೆ. ನಾನು ಆ ಸರ್ಕಾರ ಈ ಸರ್ಕಾರ ಎಂದು ನಾನು ಹೇಳುತ್ತಿಲ್ಲ. ನಿಜವಾಗಿಯೂ ಅಲ್ಲಿ ನಡೆಯತಕ್ಕಂತಹ ಎಲ್ಲಾ ಕೆಲಸಗಳು ಪ್ರಮಾದವಾಗಿವೆ. ಕಳೆದ P.S.I. ಹುದ್ದೆಗೆ ಪರೀಕ್ಷೆಯನ್ನು ನೋಡಿದಾಗ ಆ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಔಟ್ ಆಗಿದೆ. ಪ್ರತಿಯೊಂದು ಪರೀಕ್ಷೆಯ ಪ್ರಶ್ನೆ ಪತ್ರಿಕೆ ಔಟ್ ಆಗುತ್ತಿದೆ. ಅಂದರೆ, ಈ ವಿಷಯ ಎಲ್ಲಿಗೆ ಹೋಗಬೇಕು? ಬೇಲಿಯೇ ಎದ್ದು ಹೊಲ ಮೇಯ್ದ ಹಾಗೆ ಆಗುವಂತಹ ಸಂದರ್ಭ ಇದಾಗಿದೆ. ನಾವು ರಾಜಕಾರಣಿಗಳು ಬಂದು ಕೇಳಿದಾಗ ಇಲ್ಲಿ ಮಾತನಾಡುತ್ತೇವೆ, ಹೋಗುತ್ತೇವೆಂದು ಹೇಳುತ್ತಾರೆ. ಆದರೆ, ವ್ಯವಸ್ಥೆ ಏನಾಗಿದೆ? ವ್ಯವಸ್ಥೆ ಸುಧಾರಣೆಯಾಗಬೇಕು. ಅದು ಒಂದು ಹಂತಕ್ಕೆ ಬರಬೇಕಲ್ಲವೇ? ಆ ಕೆಲಸ ಆಗುತ್ತಿಲ್ಲ. ಇದೇ ಒಂದು ತಿಂಗಳಿನಲ್ಲಿ ನಿರಂತರವಾಗಿ ಫ್ರೀಡಂ ಪಾರ್ಕ್‌ನಲ್ಲಿ ಯುವಕರು ಬಂದು ನ್ಯಾಯಕ್ಕಾಗಿ ಪ್ರತಿಭಟಿಸಿ ಆಸೆಯಿಂದ ಬಂದು ನಿರಾಸೆಯಾಗಿ ಹೋಗಿದ್ದಾರೆ. ಅಂತಹ ಒಂದು ಕರ್ಮಕಾಂಡ ಕೆ.ಪಿ.ಎಸ್.ಸಿ.ಯಲ್ಲಿ ಆಗುವಂತಹದ್ದು ಆಗಿದೆ. ಅದಲ್ಲದೆ, ಇವತ್ತು ಕೆ.ಪಿ.ಎಸ್.ಸಿ. ತನ್ನ ಎಡವಟ್ಟುಗಳ ಬಗ್ಗೆ ಪಾಠ ಕಲಿಯಲಿಲ್ಲ ಎನ್ನುವುದು ನಿಜವಾಗಿಯೂ ಮಾಧ್ಯಮಗಳಲ್ಲಿ ಮತ್ತು ಪೇಪರ್‌ಗಳನ್ನು ತೆಗೆದು ನೋಡಿದರೆ ನಮಗೆ ಏನು ಅನಿಸುತ್ತದೆ ಎಂದರೆ ಒಬ್ಬರು ಪರೀಕ್ಷೆಯನ್ನು ಬರೆಯಬೇಕಾದರೆ ಎಂತೆಂತಹ ತೊಂದರೆಗಳು ಆಗಿವೆ ಎಂದು ಹೇಳಿ ನಾನು ಮಾತನಾಡುತ್ತೇನೆ. ಏಕೆಂದರೆ, ನಮ್ಮ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿಯವರು ಈಗಾಗಲೇ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಚೆನ್ನಾಗಿ ಮನವರಿಕೆ ಮಾಡಿದ್ದಾರೆ. ಒಬ್ಬ ಮಹಿಳೆಯ ವಿಚಾರ ಹೇಳಬೇಕೆಂದರೆ ಮೂಗುತಿಯನ್ನು ಮತ್ತು ಓಲೆಗಳನ್ನು ಮಾರಿ ಪರೀಕ್ಷೆಯನ್ನು ಬರೆದಿರುತ್ತಾರೆ. ಮಹಿಳೆಯರು ಉದ್ದದ ತೋಳುಗಳ ಬಟ್ಟೆಗಳನ್ನು ಹಾಕಬಾರದು ಎನ್ನುವಂತಹ ಷರತ್ತುಗಳಿಗೂ ಮಹಿಳೆಯರು ಒಪ್ಪಿಕೊಂಡರು. ಈ ಬಗ್ಗೆ ಒಬ್ಬ ಮಹಿಳೆ ಪತ್ರವನ್ನು ಬರೆದಿರುತ್ತಾಳೆ.

(ಮುಂದು.)

**(137) 06.03.2025 06.00 ಎಸ್‌ವಿ-ಬಿಎನ್‌ಎಸ್ (ವೈಸ್ ಛೇರ್‌ಮನ್ ಉಪಸ್ಥಿತಿ)**

**ಶ್ರೀಮತಿ ಹೇಮಲತಾ ನಾಯಕ್ ಕೆ (ಮುಂದು):-**

ಅವರು ಕಾಲುಂಗುರ ತೆಗೆಸಿದರು. ತಾಳಿ ತೆಗೆಸಿದರು. ನಮ್ಮ ಉಡುಪುಗಳನ್ನು ಕಟ್ ಮಾಡಿ ಒಳಗೆ ಬಿಟ್ಟರು. ಇದೆಲ್ಲಕ್ಕೂ ಒಳಪಟ್ಟು ನಾವು ಪರೀಕ್ಷೆ ಬರೆದೆವು. ಅಂದರೆ ಜೀವನ ಅವರನ್ನು ಎಷ್ಟೊಂದು ನಿರಾಶೆಯ ಮಟ್ಟಕ್ಕೆ

ತರುತ್ತಿದೆ. ವಾಟರ್ ಬಾಟಲ್ ತರುವಂತಿಲ್ಲ. ಇಷ್ಟೆಲ್ಲದರ ನಡುವೆ open ಆಗಿ ಅವರ O.M.R. sheet ಅನ್ನು ಬದಲಿ ಮಾಡತಕ್ಕಂಥ ಜಗಜ್ಜಾಹೀರಾಗಿರುವ ವೀಡಿಯೋ ನೋಡಿದ ಮೇಲೆಯೂ ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಈ ರೀತಿ ಪರೀಕ್ಷೆ ಮಾಡುತ್ತಿರುವುದು ಬಹಳ ಬೇಜಾರಾಗುತ್ತಿದೆ. ಇವತ್ತು ಯು.ಪಿ.ಎಸ್.ಸಿ. ಮಾದರಿಯಲ್ಲಿ ಕೆ.ಪಿ.ಎಸ್.ಸಿ. ಬರಬೇಕೆನ್ನುವುದು ಎಲ್ಲರ ಅಪೇಕ್ಷೆಯಾಗಿದೆ. ಯಾವ ಮುಲಾಜಿಲ್ಲದೆ, ಯಾವ ವಶೀಲಿಯಿಲ್ಲದೆ ಮಾಹಿತಿ ಸೋರಿಕೆಯಾಗದೆ ಪರೀಕ್ಷೆ ನಡೆಯಬೇಕು. ಇನ್ನೂ ಹೆಚ್ಚು ಪರೀಕ್ಷೆಗೆ ಒಳಪಡಿಸಬೇಕಾದ ಸಮಯ ಬಂದಿದೆ. ಕೆ.ಪಿ.ಎಸ್.ಸಿ.ನಲ್ಲಿ PDO ಪರೀಕ್ಷೆ ಆಯಿತು, CET ಆಯಿತು ಎಲ್ಲದರಲ್ಲಿಯೂ ಒಂದೊಂದು ತೊಂದರೆಯಾಗಿರುವ ನಿದರ್ಶನಗಳಿವೆ.

ಮೊದಲನೆಯದಾಗಿ ಕೆ.ಪಿ.ಎಸ್.ಸಿ.ನಲ್ಲಿ ಮಾರ್ಪಾಡು ಆಗಬೇಕಾಗಿರುವುದೇನೆಂದರೆ ಯಾವುದಾದರೂ ಮಧ್ಯವರ್ತಿಗಳ ಹಾವಳಿ ಕಂಡು ಬಂದಲ್ಲಿ ಅವರನ್ನು ಹಿಡಿದು ಅದನ್ನು ತಾರ್ಕಿಕ ಮಟ್ಟಕ್ಕೆ ಕೊಂಡೊಯ್ಯಬೇಕು. ಮಧ್ಯವರ್ತಿಗಳು ಹಿಡಿದರೂ ಅದನ್ನು ತಾರ್ಕಿಕ ಅಂತ್ಯ ಕಾಣುವ ಪರಿಸ್ಥಿತಿ ಇಲ್ಲ. ಮೋಸಗಾರರ ವಂಚನೆಯ ಜಾಲ ಹೆಚ್ಚಾಗುತ್ತಿದೆ. ಪ್ರಶ್ನೆಪತ್ರಿಕೆಗಳಲ್ಲಿ ದೋಷ ಹಾಗೂ ಪ್ರಶ್ನೆಪತ್ರಿಕೆಗಳ ಸೋರಿಕೆ ಹೆಚ್ಚಾಗುತ್ತಿದೆ. ಕನ್ನಡ ಭಾಷಾಂತರದಲ್ಲಿ ಶೇ.60 ರಷ್ಟು ದೋಷ ಆಗಿದೆ. ಪ್ರಶ್ನೆಪತ್ರಿಕೆಗಳನ್ನು ತಡವಾಗಿ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿ 24 ಅಭ್ಯರ್ಥಿಗಳಿಗೆ 12 ಪ್ರಶ್ನೆಗಳಿಗೆ ಉತ್ತರ ನೀಡದಿರುವುದು ಇವೆಲ್ಲಾ ಏಕೆ ಆಗುತ್ತಿದೆ? ಎಲ್ಲಿ ನಾವು ತಪ್ಪುತ್ತಿದ್ದೇವೆ? ಕೆ.ಪಿ.ಎಸ್.ಸಿ. ಒಂದು ಸಂಸ್ಥೆ ವಹಿಸಿಕೊಂಡಿರುವ ಪರೀಕ್ಷೆಗಳನ್ನು ಒಂದು ಉತ್ತಮವಾದ ಮಟ್ಟಕ್ಕೆ ಏಕೆ ನಡೆಸುತ್ತಿಲ್ಲ? ಈಗ ಯುಪಿಎಸ್‌ಸಿ ಎಷ್ಟು success ಆಗಿದೆ? ಅದರಲ್ಲಿರುವ Rules and Regulation ಗಳನ್ನು ನಾವು follow ಮಾಡಬೇಕಲ್ಲವೆ? ಕೆ.ಪಿ.ಎಸ್.ಸಿ. ಕಣ್ಣಿಗೆ ಕಂಡರೂ ಕೈಗೆಟುಕದ ವಸ್ತುವಾಗಿ ಪರಿಣಮಿಸಿದೆ. ಯುವಕರು ಕಟ್ಟಿಕೊಂಡಿರುವ ಕನಸನ್ನು ನನಸು ಮಾಡಿಕೊಳ್ಳಲಾಗದಂಥ ಪರಿಸ್ಥಿತಿ ಇದೆ. ಇದರ ಮೋಸದ ಜಾಲ ಕಲಬುರಗಿ, ವಿಜಯಪುರ, ದಾವಣಗೆರೆ, ತುಮಕೂರು, ಬೆಳಗಾವಿ, ಹಾಸನ, ಬಾಗಲಕೋಟೆ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹರಡಿದೆ. ಇದನ್ನು ಬಯಲಿಗೆ ತರುವ ಕೆಲಸಗಳು ಏಕೆ ಆಗುತ್ತಿಲ್ಲ?

ನನಗೆ ತಿಳಿದಿರುವಂತೆ ಹಿಂದೆ ಕೆ.ಇ.ಬಿ.ನಲ್ಲಿ ಪರೀಕ್ಷೆಗಳು ನಡೆದವು. ಅವರ ಸಂಬಂಧಿಗಳು, ಅಧಿಕಾರಿಗಳ ಮಕ್ಕಳು ಎ.ಇ. ಗಳು, ಎ.ಇ.ಇ.ಗಳಾಗಿದ್ದಾರೆ. ಕಣ್ಣಿಗೆ ಕಟ್ಟಿರುವಂತಹ ನಿದರ್ಶನಗಳು ನಮಗೆ ಸಾಕಷ್ಟು ಸಿಗುತ್ತಿವೆ. ಇದೆಲ್ಲವನ್ನೂ ನೋಡಿ ಬೇರೆಯವರು ನಿರಾಶರಾಗುವಂತಾಗುತ್ತಿದೆ.

**ವೈಸ್ ಛೇರ್ಮನ್:-** ಮಾನ್ಯ ಹೇಮಲತಾ ನಾಯಕ್ ಅವರೆ, ಇದು ನಿಯಮ 330ಕ್ಕೆ convert ಆಗಿರುವ ವಿಷಯ. ಉಲ್ಲೇಖ ಮಾಡಿರುವುದನ್ನೇ ಪುನಃ ಮಾಡಬೇಡಿ. ಅರ್ಧಗಂಟೆ ಚರ್ಚೆಯನ್ನು ಒಂದು ಗಂಟೆ ತೆಗೆದುಕೊಂಡು ಹೋಗಿದ್ದೇವೆ. 13 ಜನ ಈಗಾಗಲೇ ಮಾತನಾಡಿದ್ದಾರೆ. ಇನ್ನೂ ಮಾತನಾಡುವವರಿದ್ದಾರೆ. ಸಮಯವನ್ನು ನೋಡಿ ಆದಷ್ಟು ಬೇಗ ಮುಗಿಸಬೇಕು.

**ಶ್ರೀಮತಿ ಹೇಮಲತಾ ನಾಯಕ್ ಕೆ:-** ಮಾನ್ಯ ಸಭಾಪತಿಯವರೆ, ಆಯಿತು. ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದ.

**ಶ್ರೀ ಡಿ.ಎಸ್.ಅರುಣ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು. ಯಾವುದನ್ನೂ repeat ಮಾಡುವುದಿಲ್ಲ. ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಮಾನ್ಯ ಸಿ.ಟಿ.ರವಿಯವರು ಕೆ.ಪಿ.ಎಸ್.ಸಿ.ಯಿಂದ ಯಾವ ಯಾವ ತೊಂದರೆಗಳಾಗುತ್ತಿದೆ ಎಂದು ವಿಸ್ತೃತವಾದಂತಹ ಎಲ್ಲಾ ವಿಷಯಗಳನ್ನೂ ಹೇಳಿದ್ದಾರೆ. ಮಾನ್ಯ ಸಿ.ಟಿ.ರವಿಯವರೆ, ನಾನು ಅದಕ್ಕೆ ಒಂದು add ಮಾಡುತ್ತೇನೆ. ಕೆ.ಪಿ.ಎಸ್.ಸಿ. ಎಂದರೆ ನಾವು role model ಎಂದುಕೊಂಡಿದ್ದೇವೆ. ಬೇರೆ ಬೇರೆ ಪರೀಕ್ಷೆಗಳು ಅದರ ಕೆಳಗೆ ನಡೆಯುತ್ತಿದ್ದು, ಅದು ಒಂದು Constitutional Body ಆಗಿರುವುದರಿಂದ ನಾವು ಅದಕ್ಕೆ ಹೆಚ್ಚು ಶಕ್ತಿ ಕೊಡಬೇಕಿತ್ತು. ಕಳೆದ ಹಲವಾರು ವರ್ಷಗಳಿಂದ ನಾವು ಅದಕ್ಕೆ demotivation ಮಾಡುತ್ತಾ ಬರುತ್ತಿದ್ದೇವೆ. ಕನ್ನಡದ ಬಗ್ಗೆ ಬಹಳ ವಿಶೇಷವಾಗಿ ಮಾನ್ಯ ಸಿ.ಟಿ.ರವಿಯವರು ಮಾತನಾಡಿದಾಗ ನನಗನ್ನಿಸಿದ್ದು Controller of Examination, Secretary, Joint Controller of Examination, ಇವರು ಯಾರು? ಇವರು ಯಾರು ಕರ್ನಾಟಕ ರಾಜ್ಯದವರಲ್ಲ. ಅವರಿಗೆ ಕನ್ನಡ ಗೊತ್ತಿಲ್ಲ. ಏಕೆ ಹೀಗೆ ಗೂಗಲ್‌ನಲ್ಲಿ ಹಾಕಿ translation ಮಾಡಿ ಮಾಡುತ್ತಾರೆಂದರೆ ಅವರು ಕನ್ನಡದಲ್ಲಿ ಓದೇ ಇಲ್ಲ. ಇಲ್ಲಿ ಬಂದು ವ್ಯಾವಹಾರಿಕವಾಗಿ ಕನ್ನಡ ಭಾಷೆ ಕಲಿತಿರುವವರನ್ನು ಅಲ್ಲಿ Controller of Examination ಆಗಿ ಮಾಡುತ್ತಾರೆ. ಗೌಪ್ಯತೆ ಕಾಪಾಡುವ ದೃಷ್ಟಿಯಿಂದ. ಆದರೆ ಗೌಪ್ಯತೆ ಎಲ್ಲಿರಬೇಕೋ ಅಲ್ಲಿ ಇಲ್ಲ. ಅಲ್ಲಿರುವಂಥವರು Joint Secretary of Examination, ಇವರೆಲ್ಲರೂ ಹೊರ ರಾಜ್ಯದ ಅಧಿಕಾರಿಗಳು. ಇದನ್ನು ನಾವು ಗಂಭೀರವಾಗಿ ನೋಡಬೇಕು. ಎತ್ತಿಗೆ ಜ್ವರ ಬಂದರೆ ಕೋಣಕ್ಕೆ ಬರೆ ಹಾಕುತ್ತಾರೆ.

ಈ ಕೆ.ಪಿ.ಎಸ್.ಸಿ. ಪರೀಕ್ಷೆಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಯುತ್ತವೆ. ಅಲ್ಲಿನ ಅಭ್ಯರ್ಥಿಗಳು ಬೆಳಗಿನಿಂದ ರಾತ್ರಿಯ ತನಕ ನಾಳೆ ಒಂದು ಪರೀಕ್ಷೆ ಬರುತ್ತದೆ. ಇನ್ನೊಂದು ವಾರ ಬಿಟ್ಟರೆ ಇನ್ನೊಂದು ಪರೀಕ್ಷೆ ಬರುತ್ತದೆ. ಯಾವುದಾದರೊಂದು ಸರ್ಕಾರಿ ಕೆಲಸ ಸಿಕ್ಕಿದರೆ ನನ್ನ ಜೀವನಕ್ಕೆ ಒಳ್ಳೆಯದಾಗುತ್ತದೆ ಎಂದು ಅವರು ಪ್ರಯತ್ನ ಮಾಡುತ್ತಿರುತ್ತಾರೆ. ಬಹಳ ಪಾರದರ್ಶಕತೆ ತರಬೇಕು, ನ್ಯಾಯಯುತವಾಗಿ ಪರೀಕ್ಷೆ ನಡೆಯಬೇಕು, ಗೌಪ್ಯತೆಯನ್ನು ಕಾಪಾಡುವುದಕ್ಕೆ ಏನು ಮಾಡಿದ್ದಾರೆಂದರೆ K.P.S.C. examination ಬರೆಯುವವನಿಗೆ ಅವನು local ನಲ್ಲಿ ಬರೆಯುವ ಹಾಗಿಲ್ಲವಂತೆ. ಪಕ್ಕದ ಜಿಲ್ಲೆಗೆ ಹೋಗಬೇಕು. ಬೆಳಗ್ಗೆ 09 ಗಂಟೆಗೆ examination ಇರುತ್ತದೆ. ಅವನು ದಿನಕ್ಕೆ ರೂ.100-200 ದುಡಿಯುತ್ತಿರುವುದಿಲ್ಲ. ಇವರಿಗೆ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಕಂಟ್ರೋಲ್ ಮಾಡುವುದಕ್ಕಾಗದೆ ಅವರನ್ನು ಬೇರೆ ಜಿಲ್ಲೆಗೆ ಕಳುಹಿಸಿರುತ್ತಾರೆ. ಬೇರೆ ಜಿಲ್ಲೆಯಲ್ಲಿ ಅವನು ಪರೀಕ್ಷೆ ಬರೆಯಬೇಕೆಂದರೆ ಅವನು ರಾತ್ರಿಯೆಲ್ಲಾ ಪ್ರಯಾಣ ಮಾಡಬೇಕು. ಅವನಿಗೆ ಬೆಳಗ್ಗೆ ಎದ್ದು ಪರೀಕ್ಷೆ ಬರೆಯುವ ತಾಕತ್ತಿರುವುದಿಲ್ಲ. ಆ ರೀತಿ ಎಷ್ಟು ಜನ ದಿನಾ ಕಾಯುತ್ತಿರುತ್ತಾರೆ. ನೋಡಿದರೆ ಹೊಟ್ಟೆ ಉರಿಯುತ್ತದೆ. ಅವರು ಎಷ್ಟು ಓದಿ ಎಲ್ಲಿಯಾದರೂ ಒಂದು ಉದ್ಯೋಗ ಸಿಗುತ್ತದೆ ಎಂದು ಕಾಯುತ್ತಿರುತ್ತಾರೆ. ಇಲ್ಲಿನ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಈ ಸಮಸ್ಯೆಯುಂಟಾಗಿ ಬೇರೆ ಜಿಲ್ಲೆಗೆ ಹೋಗಿ ಅಭ್ಯರ್ಥಿಗಳು ಪರೀಕ್ಷೆ ಬರೆಯುವಂಥ ಸ್ಥಿತಿ ಉಂಟಾಗಿದೆ. ಕರ್ನಾಟಕ ಎಂದರೆ software ನಲ್ಲಿ I.T.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(Information Technology) ಯಲ್ಲಿ ತುಂಬಾ ಮುಂದುವರೆದಿದ್ದೇವೆ. ಕೆ.ಪಿ.ಎಸ್.ಸಿ. ಯಲ್ಲಿ ಈಗಲೂ 2004ನೇ ಇಸವಿಯ software ಇದೆ 21 ವರ್ಷ ಆಯಿತು. ನಮ್ಮ ಕೈಲಿ update ಮಾಡವುದಕ್ಕಾಗಿಲ್ಲ. ಇವತ್ತು ಸಣ್ಣ ಸಣ್ಣ ಮಕ್ಕಳು App ಅನ್ನು develop ಮಾಡುತ್ತಾರೆ. Software ಅನ್ನು ಬರೆಯುತ್ತಾರೆ. A.I. (Artificial Intelligence) ಬಂದಾಯಿತು. A.I. ಮುಖಾಂತರ ನಮಗೆ ಬೇಕಾಗಿರುವುದನ್ನು ಮಾಡಬಹುದು. ಅದನ್ನು ಕೂಡ ಮಾಡುವುದಿಲ್ಲ. 2004ರ software ಅನ್ನು ಬಳಸುತ್ತಿದ್ದಾರೆ. 15+1 ಸದಸ್ಯರು ಏಕೆ ಬೇಕು? ಹಿಂದೆ ನಾವು ಕೂಡ ನೋಡಿದ್ದೇವೆ. ನನಗೆ ಬಹಳ ಹೆಮ್ಮೆ ಎಂದರೆ ಶಿವಮೊಗ್ಗ ಜಿಲ್ಲೆಯ ಮಾಜಿ ವಿಧಾನ ಪರಿಷತ್ ಸದಸ್ಯರಾದ ಎಸ್.ರುದ್ರೇಗೌಡ ಅವರು ಕೆ.ಪಿ.ಎಸ್.ಸಿ. ಸದಸ್ಯರಾಗಿದ್ದರು. ಸಾವಿರಾರು ಜನಕ್ಕೆ ಕೆಲಸ ಕೊಡಿಸಿದ್ದರು. Competent ಆಗಿ ಮುಂದಿರುವವರಿಗೆ ಕೆಲಸ ಕೊಡಿಸಿದರು. ಅವರ ಮೇಲೆ ಒಂದೇ ಒಂದು ಆರೋಪ ಇಲ್ಲ. ಅಂತಹ ಉದಾಹರಣೆಗಳಿವೆ. ಈಗ ಇಂತಹ ಉದಾಹರಣೆಗಳೆಲ್ಲಿ? 15+1 = 16 ಹಂಚಿಕೊಂಡು ಬಿಟ್ಟರೆ ಹೇಗಾಗುತ್ತದೆ? ಅದನ್ನು ಕಡಿಮೆ ಮಾಡಬೇಕು.

**ಶ್ರೀ ಸಿ.ಟಿ.ರವಿ:–** ಮಾನ್ಯ ಅರುಣ್ ಅವರೆ, ಗ್ರಾಮ ಪಂಚಾಯಿತಿಗೆ ಅನುದಾನ ಬಂದರೆ ಕಾಮಗಾರಿ ಲೆಕ್ಕ ಕೊಡುವುದಿಲ್ಲ. ಪಂಚಾಯಿತಿ ಸದಸ್ಯರಿಗೆ ಹಂಚಿಕೆ ಮಾಡುವುದು. ರೂ.30,000-40,000 ಹಂಚಿಕೆ ಮಾಡಿ ಅವನೇನೂ ಮಾಡುವ ಹಾಗಿಲ್ಲ. ಚರಂಡಿ ಏಕೆ ಅರ್ಧ ಮಾಡಿ ಬಿಟ್ಟಿದ್ದೀರಿ ಎಂದರೆ ನಮಗೆ ರೂ.30,000 grant ಬಂದಿತ್ತು, ಅದಕ್ಕೆ ಏನು estimate ಮಾಡಬೇಕು ಅಷ್ಟು ಮಾಡಿಸಿದ್ದೇನೆಂದು ಹೇಳುತ್ತಾರೆ. ಹಾಗೆ ಈ ಸಂದರ್ಶನದ್ದು ಎಷ್ಟೆಷ್ಟಿದೆಯೋ ಅಷ್ಟು 16 ಜನರಿಗೆ ಹಂಚಿಕೊಳ್ಳುವುದು.

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೆ, ನಿನ್ನೆ ನೀವು ಸಚಿವ ಸಂಪುಟ ಎಂದು ಹೇಳಿದಿರಿ. ಮಾನ್ಯ ದಿನೇಶ್ ಗುಂಡೂರಾವ್ ಹೊರ ಹೋಗಿದ್ದಾರೆ. ಅವರು ಇಲ್ಲ ಎನ್ನುತ್ತಿದ್ದರು. ಇಲ್ಲ ಎಂದರೆ ಒಳ್ಳೆಯದು. Interview ಗೆ 5 ಅಂಕ ಕೊಡಿ. ಅದಕ್ಕಿಂತ ಜಾಸ್ತಿ ಬೇಡ. ನೀವು 25 ಅಂಕ ಕೊಟ್ಟರೆ 99 ಅಂಕ ಬರುವವನಿಗೆ 75 ಅಂಕ ಬರುವವನು ಹೊಡೆದುಬಿಡುತ್ತಾನೆ. 25 ಅಂಕಕ್ಕಿಂತಲೂ ಕಡಿಮೆ ಮಾಡುವುದಕ್ಕಾಗುತ್ತದೆಯೇ ಎಂದು ನೋಡಬೇಕು. ದಯಮಾಡಿ ಜಾಸ್ತಿ ಮಾಡಬೇಡಿ ಮಾನ್ಯ ಸಚಿವರೆ. ನಮಗೂ-ನಿಮಗೂ ನಿಜವಾಗಲೂ ಯಾರೂ ಒಳ್ಳೆಯದನ್ನು ಬಯಸುವುದಿಲ್ಲ. 99 ಅಂಕ ತೆಗೆದಿರುತ್ತಾನೆ. ನಾವು 75 ಅಂಕ ತೆಗೆದಿರುವವನಿಗೆ 25 ಅಂಕ ಕೊಟ್ಟು ಕೆಲಸ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. 99 ಅಂಕ ತೆಗೆದಿರುವವನಿಗೆ 0 ಅಂಕ ಕೊಡುತ್ತೇವೆ.

**(ಮುಂದು)**

**(138) 06-03-2025/6.10/ಎಂವಿ-ಕೆಎಸ್** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಡಿ.ಎಸ್.ಅರುಣ್ (ಮುಂದು):–**

ಅವನಿಗೆ ಸೊನ್ನೆ ಕೊಡುತ್ತಾರೆ. ಅದು ನಮ್ಮ ಕಣ್ಣು ಮುಂದೆ ಆಗಿರುತ್ತದೆ. ಅವರು ಶಾಪ ಹಾಕುತ್ತಾರಲ್ಲ, ಆಗ ಇವರು ಉದ್ದಾರವಾಗುವುದಿಲ್ಲ. ನಾವು ಆ ಸ್ಥಿತಿಗೆ ಹೋಗುತ್ತೇವೆ. ಅವರು ಶೇಕಡಾ 99ರಷ್ಟು ತೆಗೆಯಬೇಕು

ಎಂದರೆ, ಅವನ ಸ್ಥಿತಿ ಮತ್ತು ಅವರು ಹೇಗೆ ಕಷ್ಟಪಟ್ಟು ಮಾಡಿರುತ್ತಾರೆಂದರೆ, ಒಬ್ಬರಿಗೆ 25 ಅಂಕಗಳನ್ನು ನೀಡಿ ಮತ್ತೊಬ್ಬರಿಗೆ ಸೊನ್ನೆ ಕೊಡುತ್ತಾರಲ್ಲ ಅಲ್ಲಿ ಅವರಿಗೆ ತುಂಬಾ ದೋಖವಾಗುತ್ತದೆ. ದಯಮಾಡಿ ಅದನ್ನು ಜಾಸ್ತಿ ಮಾಡುವುದಕ್ಕೆ ಹೋಗುವುದು ಬೇಡ. ಈಗ ಅದರ ಒಳಗಡೆಯೇ ಎಲ್ಲಾ ರೀತಿಯ ಅನಾಹುತಗಳು ಆಗುತ್ತಿರುವುದು. ಹಾಗಾಗಿ, 1998ನೇ ಬ್ಯಾಚ್‌ನ ಕೆ.ಎ.ಎಸ್. ಅಧಿಕಾರಗಳ ಹಗರಣ ಏನಿತ್ತು, ಅದನ್ನು ಸೂಕ್ತವಾದ ತನಿಖೆ ಮಾಡಬೇಕು. ಈಗ ಇವರಿಗೆಲ್ಲಾ ಒಂದು ಫ್ಯಾಷನ್ ಆಗಿಬಿಟ್ಟಿದೆ. ಈಗ ಎಲ್ಲವೂ ಸಹ ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿದೆ. ಹಾಗಾಗಿ, ಅದನ್ನು ಮಾಡುವುದಿಲ್ಲ. ಈಗ ಏನು ಮಾತನಾಡಿದರೂ ಸಹ legal ಆಗಿ ಕೋರ್ಟ್‌ನಲ್ಲಿ ಇರುವುದರಿಂದ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಅವರು ಇದನ್ನು ಮಾಡಬೇಕೆಂದು ಹೇಳುತ್ತೇನೆ. ಮುಂದಿನ ದಿನಗಳಲ್ಲಿ ನಾವೆಲ್ಲರೂ ಸೇರಿಕೊಂಡು ಸರಿ ಮಾಡಲಿಲ್ಲವೆಂದರೆ, ಮುಂದಿನ ದಿನಗಳಲ್ಲಿ ಈ ವ್ಯವಸ್ಥೆಗೆ ನಮ್ಮ ಮಕ್ಕಳು ಮತ್ತು ಯಾರೂ ಬರುವುದಿಲ್ಲ. ಈಗ ಯಾರಿಗೆ ಶಕ್ತಿ ಇರುತ್ತದೆ ಅವರಿಗೆ ಕೊಡಿಸುವಂಥದ್ದು ಆಗುತ್ತದೆ. ಈಗ ನಮ್ಮ ಹಿಂದೆ ಎಷ್ಟು ಜನರು ಇದ್ದಾರೆ ಎಂಬುವಂಥದ್ದನ್ನು ಮತ್ತು ಯಾರಿಗೆ ಸಿಗುವುದಿಲ್ಲ ಅಂತಹವರಿಗೆ ಕೊಡಿಸಿದರೆ ನಾವು ರಾಜಕಾರಣಿಗಳು ನಮ್ಮ ಹಿಂದೆ ಜನರು ಬರುತ್ತಾರೆಂದು ನಮ್ಮ ಭಾವನೆ ಇದೆಯಲ್ಲ ಇದು ತಪ್ಪು ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಚರ್ಚೆ ಮಾಡುತ್ತಿರುವುದು ಯಾರಿಗಾಗಿ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರು ಎಲ್ಲಿದ್ದಾರೆ?

**ಶ್ರೀ ಶರವಣ. ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಮಾನ್ಯ ಸಭಾನಾಯಕರು, ಮಾನ್ಯ ಸಚಿವರು ಮತ್ತು ಅಧಿಕಾರಿಗಳು ಇಲ್ಲ. ತಾವು ಸದನದ ಗೌರವವನ್ನು ಕಾಪಾಡಬೇಕು. ಇದು ಏನು ವ್ಯವಸ್ಥೆ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಏನು ಖಾಲಿ ಮನೆಗೆ ಭಾಷಣ ಮಾಡಬೇಕೆ?

**(ಗೊಂದಲ)**

**ಶ್ರೀ ಶರವಣ. ಟಿ.ಎ.:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಎಷ್ಟು ಬಾರಿ ಹೇಳುವುದು?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಭಾನಾಯಕರ ಪ್ರಶ್ನೆಯಲ್ಲ. ಮಾನ್ಯ ಸಭಾನಾಯಕರು ಬೆಳಗ್ಗೆಯಿಂದ ಸದನದಲ್ಲಿ ಕುಳಿತುಕೊಂಡಿದ್ದಾರೆ. ಆದರೆ, ಬೇರೆ ಸದಸ್ಯರು ಎಲ್ಲಿದ್ದಾರೆ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ಇಷ್ಟೊಂದು ಗಂಭೀರವಾಗಿರತಕ್ಕಂಹ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದು ಯಾರಿಗೋಸ್ಕರ ಚರ್ಚೆ ನಡೆಯುತ್ತಿದೆ? ಸರ್ಕಾರಕ್ಕೆ ಈ ರೀತಿಯ ಗಾಂಭೀರ್ಯತೆ ಇದ್ದರೆ ಈ ರೀತಿ ನಡೆಯುತ್ತದೆ. ಈ ಗಾಂಭೀರ್ಯತೆ ಸರ್ಕಾರಕ್ಕೆ ಶೋಭೆ ತರುವಂಥದ್ದಲ್ಲ. ಸದನದಲ್ಲಿ ಎಷ್ಟು ಜನ ಸಚಿವರು ಇರಬೇಕಾಗಿತ್ತು ಎಂದು ತಾವು ಹೇಳಿ. ಸದನದಲ್ಲಿ ಇಷ್ಟೊಂದು ಗಂಭೀರವಾಗಿರುವಂತಹ ಚರ್ಚೆ ನಡೆಯುತ್ತಿದೆ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಇರುವ ಸದನವನ್ನು ನೋಡಿದರೆ ಮತ್ತು ಆಡಳಿತ ಪಕ್ಷದ ರೀತಿಯನ್ನು ನೋಡಿದರೆ ನನಗೆ ಮಾತನಾಡಬೇಕೆಂದು ಅನಿಸುವುದಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪ್ರತಾಪ್ ಸಿಂಹ ನಾಯಕ್.ಕೆ ರವರೆ, ಗಂಭೀರತೆಯನ್ನು ಗಮನಿಸಿ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಕುಳಿತುಕೊಂಡಿರುವಂತಹ ಎಲ್ಲಾ ಸದಸ್ಯರಿಗೂ ಸಹ ಇದು ಗೊತ್ತಿರುವಂಥದ್ದು. ಈಗ ಪಾಲಿಸಿ ಮಾಡಬೇಕು ಎಂದರೆ, ಪಾಲಿಸಿ ಮಾಡಬೇಕಾದಂತಹವರು ಇಲ್ಲಿ ಇರಬೇಕು.

**ಶ್ರೀ ಶರವಣ. ಟಿ.ಎ.:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಕೆಳಮನೆಯಲ್ಲಿ ವಿಧೇಯಕ ಬರುತ್ತಿದೆ, ಅದಕ್ಕೆ ನಾನು ಅಲ್ಲಿಗೆ ಹೋಗುತ್ತಿದ್ದೇನೆ ಎಂದು ಹೇಳಿದರು. ಆದರೆ, ಇಲ್ಲಿ ಸಚಿವರು ಕುಳಿತ್ತಿರುತ್ತಾರೆ. ನಾನು ವಾಪಸ್ಸು ಬಂದುಬಿಡುತ್ತೇನೆಂದು ಹೇಳಿ ಹೋಗಿದ್ದಾರೆ. ಆದರೆ, ಸದನದಲ್ಲಿ ನೋಡಿದರೆ, ಎಲ್ಲಾ ಆಸನಗಳು ಖಾಲಿ ಖಾಲಿ. ಆದರೆ, ಮಾನ್ಯ ಆರೋಗ್ಯ ಸಚಿವರು ಈಗ ಬಂದು ಕುಳಿತುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ Calling Attention Notice ಬರುತ್ತದೆಂದು message ಬಂತು.

**ಶ್ರೀ ಶರವಣ. ಟಿ.ಎ.:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರ ಬಗ್ಗೆ ಹೇಳುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಈ ರೀತಿ ಹೇಳಿ ಎರಡು ನಿಮಿಷ ಆಗಿದೆ. ಮಾನ್ಯ ಸಚಿವರು ಸಹ ಎರಡು ನಿಮಿಷದಲ್ಲಿ ಹೋಗಿ ಬರುತ್ತೇನೆಂದು ಹೇಳಿ ಹೋಗಿದ್ದರು. ಈಗ ಎಲ್ಲರೂ ಸಹ ಇಲ್ಲಿಯೇ ಇದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೆ, ಮಾನ್ಯ ಮಂತ್ರಿಗಳು ಬರುತ್ತಾರೆಯೇ ಎಂದು ಕೇಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವತ್ತು ಅವರು ಇರಬೇಕಾಗಿತ್ತು. ಮಾನ್ಯ ಸಭಾನಾಯಕರು ಯಾವಾಗಲೂ ಇಲ್ಲಿಯೇ ಇರುತ್ತಾರೆ. ಅವರ ಬಗ್ಗೆ ಪ್ರಶ್ನೆಯೇ ಇಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಏನೂ ಇಲ್ಲ. ನನಗಿಂತ ಮೊದಲು ಮಾತನಾಡಿದ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನೆ.

**(ಗೊಂದಲ)**

**ಶ್ರೀ ಶರವಣ.ಟಿ.ಎ.:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ವಕೀಲರು ಮತ್ತು ಗೌರವಾನ್ವಿತ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ ರವರು ಹೇಳಿದಂತೆ, ನನಗೂ ಕೂಡ ಬೇಸರವಿದೆ. ನಾವು ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡುವಾಗ, ಇದು ಒಂದು burning issue. ನಾವು ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ವಿಚಾರವಾಗಿ ಮಾತನಾಡುತ್ತಿದ್ದೇವೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆಯೂ ಕೂಡ ಮಾತನಾಡುವಂತಹ ತುಂಬಾ ಜನ ಮಾನ್ಯ ಸದಸ್ಯರು ಇದ್ದಾರೆ. ಆದರೆ, ಮಾನ್ಯ ಸಭಾಪತಿಯವರು ಅದನ್ನು ಪಕ್ಕಕ್ಕೆ ಇಟ್ಟು. ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾವು ಉತ್ತಮವಾದ ಸಮಾಜವನ್ನು ಕಟ್ಟಬೇಕು. ಅದಕ್ಕೆ ಎಲ್ಲಿ ದೋಷಗಳಾಗುತ್ತಿದೆ ಮತ್ತೆ ಅದಕ್ಕೆ ಏನು ಬದಲಾವಣೆ ತರಬೇಕು ಎಂಬ ಕಳಕಳಿ ಮತ್ತು commitment ಅನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇವೆ. ಇದನ್ನು ಸರ್ಕಾರ ಕೇಳುವುದಕ್ಕೆ ಇಷ್ಟವಿಲ್ಲವೆಂದ ಮೇಲೆ ಮಾನ್ಯ ಸದಸ್ಯರು ಏಕೆ ಮಾತನಾಡಬೇಕು?

**ವೈಸ್ ಛೇರ್ಮನ್:-** ಮಾನ್ಯ ಶರವಣರವರೆ, ತಾವು ತಮ್ಮ ಮಾತನ್ನು ಪ್ರಾರಂಭ ಮಾಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಯಾರ್ಯಾರು ಏನೇನು ಮಾತನಾಡಿದ್ದಾರೆಂದು ಎಲ್ಲವನ್ನು ಸಹ ನೋಟ್ ಮಾಡಿಕೊಂಡಿದ್ದಾರೆ.

**ಶ್ರೀ ಶರವಣ.ಟಿ.ಎ.:-** ಮಾನ್ಯ ಸಭಾಪತಿಯವರೇ, ಇದನ್ನು ಯಾರು ನೋಟ್ ಮಾಡಿಕೊಂಡಿದ್ದಾರೆಂದು ಒಬ್ಬರ ಹೆಸರನ್ನು ನನಗೆ ಹೇಳಲಿ. ಈಗ ಯಾರು ಮಾತನಾಡಿದ್ದಾರೆಂದು ಅಲ್ಲ. ಅವರು ಏನು ಮಾತನಾಡಿದ್ದಾರೆಂದು. ತಾವು ಅಧಿಕಾರಿಗಳ ಗ್ಯಾಲರಿ ನೋಡಿ ಮತ್ತು ಮಾನ್ಯ ಸಚಿವರು ಕುಳಿತುಕೊಳ್ಳುವಂತಹ ಆಸನಗಳನ್ನು ನೋಡಲಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು.

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಸಭಾನಾಯಕರೆ, ಎಲ್ಲರೂ ಹಾಜರಿರುವಂತೆ ತಿಳಿಸಿ.

**(ಗೊಂದಲ)**

**ಶ್ರೀ ಶರವಣ.ಟಿ.ಎ.:–** ಮಾನ್ಯ ಸಭಾಪತಿಯವರೇ, ಸಚಿವರ ಕಡ್ಡಾಯ ಹಾಜರಿ ಎಂದರೆ ಏನು?

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಈಗ ಅವಕಾಶ ಸಿಕ್ಕಿದೆ ಅವರು ಮಾತನಾಡಲಿ. ಈಗ ನಾವೆಲ್ಲರೂ ಸಹ ಕುಳಿತುಕೊಂಡಿದ್ದೇವೆ.

**(ಗೊಂದಲ)**

**ಶ್ರೀ ಶರವಣ.ಟಿ.ಎ.:–** ಮಾನ್ಯ ಸಭಾಪತಿಯವರೇ, ಇಲ್ಲಿ ನಾವು ಮಾತನಾಡಿದ್ದನ್ನು ಕೇಳಿಸಿಕೊಳ್ಳುವುದಕ್ಕೆ ಮತ್ತೆ ಬರೆದುಕೊಳ್ಳುವುದಕ್ಕೆ ಯಾರೂ ಇಲ್ಲ. ನಾವು ಸುಮ್ಮನೆ ಏಕೆ ಮಾತನಾಡಬೇಕು?

**(ಗೊಂದಲ)**

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೇ, ಈಗ ಸಮಯ ಏನು ವ್ಯರ್ಥವಾಗುವುದಿಲ್ಲ. ಈಗ ಮಾನ್ಯ ಸದಸ್ಯರು ಮಾತನಾಡಲಿ. ನಾವು ಕೇಳಿಸಿಕೊಳ್ಳುತ್ತಿದ್ದೇವೆ. ಬರೆದುಕೊಳ್ಳುತ್ತಿದ್ದಾರೆ ಮತ್ತೆ ಅದು ರೆಕಾರ್ಡ್ಸ್‌ಗೆ ಹೋಗುತ್ತದೆ. ನಾವು ಎಲ್ಲವನ್ನು ಸಹ ನೋಡುತ್ತೇವೆ. ದಯವಿಟ್ಟು ಮಾನ್ಯ ಸದಸ್ಯರು ಮಾತನಾಡಲಿ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದನ್ನು ನೋಟ್ ಮಾಡಿಕೊಳ್ಳುವುದಕ್ಕೆ ಒಬ್ಬ ಅಧಿಕಾರಿಯೂ ಇಲ್ಲ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಇದ್ದರು.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಕಾರ್ಯದರ್ಶಿಗಳು ಎಲ್ಲಿದ್ದಾರೆ? ಅವರು ಕಾಣುತ್ತಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಪ್ರಶ್ನೆಗಳು ಇದ್ದವು. ಅದಕ್ಕೆ ನಾವು reply ಯನ್ನು ರೆಡಿ ಮಾಡಿದ್ದೇವೆ.

**(ಗೊಂದಲ)**

**ಶ್ರೀ ಶರವಣ.ಟಿ.ಎ.:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯಮಾಡಿ ನಾನು ಹೇಳುವುದು ಏನೆಂದರೆ, ಈಗ ಸದನ ನಡೆಯುವಾಗ ನೀವು ಯಾರನ್ನು assign ಮಾಡಿರುತ್ತೀರಿ, ಅಂತಹ ಅಧಿಕಾರಿಗಳು ಇಲ್ಲಿ ಕುಳಿತುಕೊಳ್ಳಬೇಕಲ್ಲವೇ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೆ, ಮಾನ್ಯ ಮಂತ್ರಿಗಳು ಮತ್ತು ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು.

**(ಗೊಂದಲ)**

**ಶ್ರೀ ಶರವಣ.ಟಿ.ಎ.:-** ಮಾನ್ಯ ಸಭಾಪತಿಯವರೇ, ಈಗ ಇಬ್ಬರೂ ಸಹ ಕಡ್ಡಾಯವಾಗಿ ಇರಬೇಕು ಎಂದರೆ ಅದರ ಅರ್ಥವೇನು?

**ವೈಸ್ ಛೇರ್ಮನ್:-** ಮಾನ್ಯ ಶರವಣರವರೆ, ತಾವು ತಮ್ಮ ಮಾತನ್ನು ಪ್ರಾರಂಭ ಮಾಡಿ.

**ಶ್ರೀ ಶರವಣ.ಟಿ.ಎ.:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಸೇವಾ ಆಯೋಗ ರಾಜ್ಯದ ಜನರಿಗೆ ಉದ್ಯೋಗಾವಕಾಶವನ್ನು ಕೊಡಬೇಕು ಎನ್ನುವುದಕ್ಕೋಸ್ಕರ ನ್ಯಾಯಬದ್ಧವಾಗಿ ಸಂವಿಧಾನದತ್ತವಾಗಿ ಇರತಕ್ಕಂತಹ ಒಂದು ಸಂಸ್ಥೆಯಾಗಿ ಕೆಲಸ ಮಾಡಬೇಕಾಗಿದೆ. ಕರ್ನಾಟಕ ಲೋಕಸೇವಾ ಆಯೋಗವು ಮೇ 18, 1951ರಂದು ಸ್ಥಾಪನೆಯಾಗಿರತಕ್ಕಥದ್ದು. ಈಗ ಉದ್ಯೋಗ ಸೌಧ ಎಂದರೆ, ನಾವೆಲ್ಲರೂ ಸಹ ಅದನ್ನು ಒಂದು ಭವ್ಯವಾದ ಸೌಧವೆಂದು ತಿಳಿದುಕೊಂಡಿದ್ದೇವೆ. ಅಂತಹ ಭವ್ಯವಾದ ಸೌಧದಲ್ಲಿ ಇವತ್ತು ಇಂತಹ ದೊಡ್ಡಮಟ್ಟದ ಅಕ್ರಮಗಳು ನಡೆದರೂ ಕೂಡ ಸರ್ಕಾರ ಯಾವುದೇ ರೀತಿಯ ಕ್ರಮ ವಹಿಸಿಲ್ಲ. ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಇದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರದ ಕಿವಿ ಕಿವುಡಾಗಿದೆ. ಸರ್ಕಾರಕ್ಕೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಳಕಳ ಇದ್ದಿದ್ದರೆ, ಎಚ್ಚರ ವಹಿಸುತ್ತಿತ್ತು. ಆಗಲೇ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಮತ್ತು ಶ್ರೀ ಎನ್.ರವಿಕುಮಾರ್‌ರವರು ಏನೇನು ದೋಷಗಳ ಪಟ್ಟಿಯನ್ನು ಹೇಳಿದ್ದಾರೆ ಮತ್ತೆ ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಅದನ್ನು ಕೇಳಿಸಿಕೊಂಡಿದ್ದೇನೆ. ಆದರೆ, ಅವರುಗಳು ಅದನ್ನು ನೋಟ್ ಮಾಡಿಕೊಂಡಿಲ್ಲ. ಇವತ್ತು ಈ ಪರೀಕ್ಷೆ ನಡೆಯುವಾಗ ಅದಕ್ಕೆ ಕೆಲವು ನಿಯಮಗಳಿವೆ. ಆ ನಿಯಮಗಳನ್ನು ಗಾಳಿಗೆ ತೂರಿ ಪರೀಕ್ಷೆ ನಡೆಸುವಂತಹ ಮುಖ್ಯಸ್ಥರು ಯಾರು ಇರುತ್ತಾರೆ? ಅವರು

ಯಾವುದನ್ನು ಪಾಲನೆ ಮಾಡುತ್ತಿದ್ದಾರೆಯೇ? ಅವರು ವಿದ್ಯಾರ್ಥಿಗಳಿಗೆ ಏನು ಸಹಕಾರ ಕೊಟ್ಟು, ಏನು ಮಾಡಬೇಕಾಗಿತ್ತು? ಆದರೆ, ಅವರು ಎಲ್ಲವನ್ನೂ ಸಹ ಎಡವಟ್ಟು ಮಾಡಿಕೊಂಡಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸುಮಾರು 16 ಜನರು ಸದಸ್ಯರಿದ್ದಾರೆಂದು ಹೇಳಿದ್ದಾರೆ. ಅದು ಸರ್ಕಾರಕ್ಕೆ ಬಿಟ್ಟ ವಿಚಾರ, ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಬಡ ಕುಟುಂಬದಲ್ಲಿ ಜನಿಸಿರತಕ್ಕಂತಹವರು, ಗ್ರಾಮೀಣ ಭಾಗದಿಂದ ಬಂದಿರತಕ್ಕಂತಹವರು ಒಂದು ಕನಸನ್ನು ಇಟ್ಟುಕೊಂಡು, ನನ್ನ ಭವಿಷ್ಯಕ್ಕಾಗಿ ನಾನು ಪ್ರಾಮಾಣಿಕವಾಗಿ ಪರೀಕ್ಷೆ ಬರೆಯುತ್ತೇನೆ. ನಾನು ಪ್ರಾಮಾಣಿಕವಾಗಿ ಮತ್ತು ದೈಹಿಕವಾಗಿ ಎಲ್ಲವನ್ನೂ ಕೂಡ attend ಮಾಡುತ್ತೇನೆ. ಮತ್ತೆ ನಾನು ಒಬ್ಬ ಕೆ.ಎ.ಎಸ್. ಅಧಿಕಾರಿಯಾಗಬೇಕು, ನನ್ನ ಜನರಿಗೆ ನಾನು ಸೇವೆ ಮಾಡಬೇಕೆಂದು ಅವರು ದೊಡ್ಡ ಕನಸನ್ನು ಹೊತ್ತುಕೊಂಡು ಆ ಪರೀಕ್ಷೆಗೆ ಹಾಜರಾಗುತ್ತಾರಲ್ಲ, ಅಂತಹವರ ಒಂದು ಬದುಕಿನಲ್ಲಿ ಇವತ್ತು ಸರ್ಕಾರ ಚೆಲ್ಲಾಟವಾಡುತ್ತಿದೆ. ನನಗೆ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಅಪಾರವಾದ ಗೌರವವಿದೆ.

(ಮುಂದು)

(139) 06.03.2025 06.20 LL-KS **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಶರವಣ ಟಿ.ಎ.(ಮುಂದು):-**

ಈಗಾಗಲೇ ಕನ್ನಡ ಭಾಷೆಯ ಬಗ್ಗೆ ಬಹಳಷ್ಟು ಚರ್ಚೆ ಮಾಡಿರುತ್ತೇವೆ. ಕನ್ನಡ ಶಾಲೆಗಳನ್ನು ಉಳಿಸಬೇಕು ಎಂದು ಆಗಲೇ ಚರ್ಚೆ ಮಾಡಿರುತ್ತೇವೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯೇ ಪ್ರಥಮ. ರಾಜ್ಯದಲ್ಲಿರುವ ಅಂಗಡಿ-ಮುಂಗಟ್ಟುಗಳ ನಾಮಫಲಕಗಳನ್ನು ಶೇಕಡ 70 ರಷ್ಟು ಕನ್ನಡದಲ್ಲಿ ದೊಡ್ಡದಾದ ಅಕ್ಷರ ಇರಬೇಕು ಮತ್ತು ಶೇಕಡ 30 ರಷ್ಟು ಮಾತ್ರ ಇಂಗ್ಲಿಷ್‌ನಲ್ಲಿ ಮುದ್ರಿಸಬೇಕೆಂದು ಸರ್ಕಾರ ಆದೇಶ ಹೊರಡಿಸಿರುತ್ತದೆ.

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಶೇಕಡ 60 ರಷ್ಟು ಕನ್ನಡ ಮತ್ತು ಶೇಕಡ 40 ರಷ್ಟು ಇಂಗ್ಲಿಷ್.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಆಯಿತು. ಕನ್ನಡ ಭಾಷೆಗೆ ಶೇಕಡ 60 ಮತ್ತು ಆಂಗ್ಲ ಭಾಷೆಗೆ ಶೇಕಡ 40 ಎಂತಲೇ ಇಟ್ಟುಕೊಳ್ಳೋಣ. ಈ ಆದೇಶವನ್ನು ಸರ್ಕಾರವೇ ಅಲ್ಲವೇ ಹೊರಡಿಸಿರುವುದು? ಸರ್ಕಾರದ ಆದೇಶಕ್ಕೆ ಎಲ್ಲರೂ ಸಹ ಬದಲಾವಣೆ ಆದರಲ್ಲವೇ? ಆದರೆ, ಇವರು ಇಲ್ಲಿ ಏನು ಮಾಡುತ್ತಿದ್ದಾರೆ? ಅಧಿಕಾರಿಗಳ ಮಕ್ಕಳು ಒಂದೇ ಕುಟುಂಬದ ಸದಸ್ಯರು 25 ಜನ ಕೆಪಿಎಸ್‌ಸಿ (ಕರ್ನಾಟಕ ಲೋಕಸೇವಾ ಆಯೋಗ) ನಲ್ಲಿ ಆಯ್ಕೆಯಾಗುತ್ತಾರೆ. ಹಾಗಾಗಿ, ಈ ಪ್ರಾಧಿಕಾರ ಎಲ್ಲಿಯೋ ಒಂದು ತನ್ನ ನೈತಿಕತೆಯನ್ನು ಕಳೆದುಕೊಂಡು, ಒಂದು ದೊಡ್ಡ ಭ್ರಷ್ಟಾಚಾರ...

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ಅದು ಪ್ರಾಧಿಕಾರ ಅಲ್ಲ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಹೌದು ಪ್ರಾಧಿಕಾರ ಅಲ್ಲ. ಅದು ಒಂದು ಆಯೋಗ. ಕೆಪಿಎಸ್‌ಸಿ ಒಂದು ಆಯೋಗ

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ಇಂಗ್ಲಿಷ್ ಸರಿಯಾಗಿ ಹೇಳುತ್ತಾರೆ. ಆದರೆ, ಕನ್ನಡವನ್ನು ಮಾತ್ರ ತಪ್ಪು ಹೇಳುತ್ತಾರೆ ಏತಕ್ಕೆ?

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಪ್ರಾಧಿಕಾರ ಎನ್ನುವುದು ಕನ್ನಡವೇ ಅಥವಾ ಇಂಗ್ಲಿಷ್ ಭಾಷೆಯೇ?

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಅದು ಪ್ರಾಧಿಕಾರ ಅಲ್ಲ. ಅದು ಲೋಕಸೇವಾ ಆಯೋಗ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಆಯಿತು. ಪ್ರಾಧಿಕಾರ ಎನ್ನುವುದು ಇಂಗ್ಲಿಷ್ ಭಾಷೆಯೇ?

**(ಗೊಂದಲ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರ ಮಾತೃ ಭಾಷೆ ಕನ್ನಡ ಅಲ್ಲದೇ ಇದ್ದರೂ ಸಹ, ಪ್ರಯತ್ನ ಪೂರ್ವಕವಾಗಿ ಅವರು ಕನ್ನಡವನ್ನು ಬಹಳ ಚೆನ್ನಾಗಿಯೇ ಮಾತನಾಡುತ್ತಿದ್ದಾರೆ. ಎಷ್ಟೋ ಜನ ಮೂರು ಬಾರಿ, ಎರಡು ಬಾರಿ ಶಾಸಕರಾಗಿ, ಮಂತ್ರಿಯಾದವರು ಅವರು ಉತ್ತರ ಕೊಡುವಾಗ ಕನ್ನಡ ಭಾಷೆಯಲ್ಲಿ ತಡವರಿಸುವುದನ್ನು ನಾವು ನೋಡಿದ್ದೇವೆ. ಅಂತಹದ್ದರಲ್ಲಿ ಮಾನ್ಯ ಶರವಣರವರು ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾವು ಅವರಿಗೆ ಅಭಿನಂದನೆ ಸಲ್ಲಿಸೋಣ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಪ್ರಾಧಿಕಾರ ಎನ್ನುವುದು ಕನ್ನಡ ಭಾಷೆ. ಅವರು ಅದನ್ನು ಕನ್ವರ್ಟ್ ಮಾಡಬಾರದು.

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರಾಧಿಕಾರಕ್ಕೂ ಆಯೋಗಕ್ಕೂ ಬಹಳಷ್ಟು ವ್ಯತ್ಯಾಸವಿದೆ.

**(ಗೊಂದಲ)**

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಪ್ರಾಧಿಕಾರನೂ ಕನ್ನಡನೇ, ಆಯೋಗ ಕೂಡ ಕನ್ನಡನೇ.

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣವರು ಕನ್ನಡ ಮಾತನಾಡುವುದರ ಬಗ್ಗೆ ನನಗೂ ಅಭಿಮಾನವಿದೆ. ಅವರು ಬೇರೆ ಭಾಷೆಯಿಂದ ಬಂದವರಾಗಿದ್ದರೂ ಸಹ, ಕನ್ನಡ ಭಾಷೆಯನ್ನು ಕಲಿತು ಮಾತನಾಡುತ್ತಿದ್ದಾರೆ. ಅದಕ್ಕೆ ನಾನೂ ಕೂಡ ಖುಷಿಪಡುತ್ತೇನೆ. ಆಗಲೇ ಕನ್ನಡ

ಫಲಕಗಳ ಬಗ್ಗೆ ಮಾತನಾಡುವಾಗ ತಪ್ಪು ಹೇಳಿದ್ದನ್ನು ನಾನು ಶೇಕಡ 60 ಮತ್ತು ಶೇಕಡ 40 ಎಂದು ಹೇಳಿರುತ್ತೇನೆ.

**(ಗೊಂದಲ)**

**ಶ್ರೀ ಎ. ವಸಂತ ಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರಾಧಿಕಾರಕ್ಕೂ ಆಯೋಗಕ್ಕೆ ಬಹಳಷ್ಟು ವ್ಯತ್ಯಾಸವಿದೆ. ಮಾನ್ಯ ಶರವಣರವರು ಆಯೋಗದ ಬಗ್ಗೆ ಮಾತನಾಡುತ್ತಾ, ಪ್ರಾಧಿಕಾರ ಎಂದು ಹೇಳಿದರೆ, ಕೇಳುವವರಾದ ನಮಗೆ ಗೊಂದಲವಾಗುತ್ತದೆ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಹೌದು, ವ್ಯತ್ಯಾಸವಿದೆ.

**ವೈಸ್ ಛೇರ್ಮನ್:-** ಮಾನ್ಯ ಶರವಣರವರೇ, ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರ ಬಗ್ಗೆ ನಮಗೆ ಗೌರವವಿದೆ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, "ಕೆಪಿಎಸ್‌ಸಿ ಮತ್ತೆ ಫೇಲ್. ಆಯೋಗ ಬದಲಾಗಲಿ." ಕೆಪಿಎಸ್‌ಸಿ ಇದೇ ರೀತಿ ಪರೀಕ್ಷೆಗಳನ್ನು, ಕೀ ಉತ್ತರಗಳನ್ನು ಪದೇ ಪದೇ ಬದಲಾಯಿಸುವುದು, ನಿಗದಿತ ಅವಧಿಯಲ್ಲಿ ಪರೀಕ್ಷೆಗಳನ್ನು ನಡೆಸದೇ ಇರುವುದರಿಂದ, ಹಲವು ಅಭ್ಯರ್ಥಿಗಳು ಅತ್ಯಂತ ಮಾನಸಿಕ ಖಿನ್ನತೆಯನ್ನು ಅನುಭವಿಸುತ್ತಿದ್ದಾರೆ.

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಗಣಿ ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಇದೊಂದು ರೀತಿಯಲ್ಲಿ ಗೂಗಲ್ ಟ್ರಾನ್ಸ್‌ಲೇಟ್ ಆದ ರೀತಿ ಆಯಿತು.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಗೂಗಲ್ ಅನ್ನು ಈಗ ಅವರು ಮಾಡಿಬಿಟ್ಟಿದ್ದಾರೆ. ಈ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕವಾಗಿ ಏನೂ ನಡೆಯಲಿಲ್ಲ ಎನ್ನುವುದು ಜಗಜ್ಜಾಹೀರಾಗಿದೆ. ಅದನ್ನು ಅವರು ಕೂಡ ಒಪ್ಪುತ್ತಾರೆ. ಅಲ್ಲವೇ?

**(ಗೊಂದಲ)**

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದು ಇಂಗ್ಲಿಷ್‌ನಿಂದ ಕನ್ನಡ ಟ್ರಾನ್ಸ್‌ಲೇಟ್ ಆಯಿತು. ಅದನ್ನು ಬಿಟ್ಟು ಅವರು ಮುಂದೆ ಹೋಗಲಿ.

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ದಾರಿ ತಪ್ಪಿಸಬಾರದು. ಇಷ್ಟು ದಿನ ಆದ ನಂತರ, ಈಗ ಅವರು ಸದನದಲ್ಲಿ ಕಾಣಿಸಿಕೊಂಡಿದ್ದಾರೆ. **(ಗೊಂದಲ)** ಆಗಲೇ ಅವರು ತಪ್ಪು ದಾರಿಗೆ ಹೋಗಿಬಿಟ್ಟಿದ್ದಾರೆ. ಪುನಃ ನನ್ನನ್ನು ಸಹ ದಾರಿ ತಪ್ಪಿಸಬಾರದು. ನಾನು ಹೇಳುವುದೇನೆಂದರೆ, ಮಾನ್ಯ ವಿರೋಧ ಪಕ್ಷದ ಗೌರವಾನ್ವಿತ ಸದಸ್ಯರ ಕಳಕಳಿ ಇರುವುದೇನೆಂದರೆ, ಕೆಪಿಎಸ್‌ಸಿ ಯಲ್ಲಿ ಮರುಪರೀಕ್ಷೆ ಮಾಡಬೇಕು. ಜೊತೆಗೆ, ನೊಂದ ಅಭ್ಯರ್ಥಿಗಳಿಗೆ ನ್ಯಾಯ ಕೊಡಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹ ಮಾಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಹೆಚ್ಚು ಕಡಿಮೆ ಎಲ್ಲಾ ಸದಸ್ಯರು ಈ ವಿಚಾರದ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಬಹಳ ಮುಖ್ಯವಾಗಿ ಯುವಕರು ಪದವಿ ಪಡೆದುಕೊಂಡು ಬರುತ್ತಾರೆ. ಕೆಪಿಎಸ್‌ಸಿ ಯಲ್ಲಿ ಏನೋ ಒಂದು ವಿಶ್ವಾಸ ಇಟ್ಟುಕೊಂಡಿರುತ್ತಾರೆ. ನಾನು ಐಎಎಸ್ ಆಗಬೇಕು ಅಥವಾ ಕೆಎಎಸ್ ಆಗಬೇಕೆಂದು ಬಹಳ ಅಧ್ಯಯನ ಮಾಡಿ, ಸರ್ಕಾರದ ಮೇಲೆ ವಿಶ್ವಾಸ ಇಟ್ಟುಕೊಂಡು ಬೇರೆ ಬೇರೆ ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆದಿರುತ್ತಾರೆ. ಇಂದಲ್ಲಾ ನಾಳೆ ನಾನು ಈ ಪರೀಕ್ಷೆಯಲ್ಲಿ ಪಾಸ್ ಆಗಿ ಸರ್ಕಾರಿ ಉದ್ಯೋಗಕ್ಕೆ ಬರುತ್ತೇನೆಂಬ ವಿಶ್ವಾಸವನ್ನು ಬಹಳಷ್ಟು ಜನ ಇಟ್ಟುಕೊಂಡಿರುತ್ತಾರೆ. ಆದರೆ, ಇವೊತ್ತಿನ ದಿವಸ ಅವರೆಲ್ಲರೂ ಸಹ ಸಂಪೂರ್ಣವಾಗಿ ನಿರಾಶರಾಗಿರುತ್ತಾರೆ. ಹಾಗಾಗಿ, ಸರ್ಕಾರದ ಮುಂದೆ ಅಥವಾ ನಮ್ಮೆಲ್ಲರ ಮುಂದೆ ಇರುವುದು ಕೇವಲ ಎರಡು ಪ್ರಶ್ನೆ. ಅದರಂತೆ, ನಾವು ಸರ್ಕಾರಕ್ಕೆ ಪ್ರಶ್ನೆ ಮಾಡಬೇಕಾಗಿರುವುದೇನೆಂದರೆ, ನಾವು ಪಾರದರ್ಶಕವಾಗಿ ಪರೀಕ್ಷೆಯನ್ನು ಮಾಡುತ್ತಾರೆಯೇ ಎಂದು ಕೇಳಬೇಕಾಗಿದೆ. ಏಕೆಂದರೆ, ಎಲ್ಲರಲ್ಲಿಯೂ ಈ ಬಗ್ಗೆ ವಿಶ್ವಾಸ ಹೋಗಿಬಿಟ್ಟಿದೆ. ಯಾರ ವಿಶ್ವಾಸ ಕೂಡ ಉಳಿದಿರುವುದಿಲ್ಲ. ಎರಡು ಬಾರಿ ತಪ್ಪು ಮಾಡಿದ್ದರೂ ಸಹ, ಅದೇ ಅಧಿಕಾರಿಗಳನ್ನು ಅದೇ ಹುದ್ದೆಯಲ್ಲಿ ಮುಂದುವರೆಸುತ್ತಾರೆ. ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಂದ ತೆಗೆದು ಹಾಕುತ್ತಾರೆ. ಅಂಕಗಳನ್ನು ಹೇಗೆ ಬೇಕೋ ಹಾಗೆ, ಮೇಲೆ ಕೆಳಗೆ ಮಾಡಿ ಮ್ಯಾನಿಪುಲೇಟ್ ಮಾಡುತ್ತಾರೆ. 5 ಇದ್ದದ್ದನ್ನು 25 ಮಾಡುತ್ತಾರೆ. 25 ಇದ್ದದ್ದನ್ನು... ನಿನ್ನೆಯ ದಿವಸ ನಮಗೆ ಏನೋ ಒಂದು ಮೆಸೇಜ್ ಸಿಗುತ್ತದೆ ಎಂದು ಬಹಳ ಜನ ನಿರೀಕ್ಷೆ ಮಾಡುತ್ತಿದ್ದರು. ಆದರೆ, 160ಕ್ಕೆ ಏರಿಸುತ್ತಾರೆಂದರೆ ಏನು? The people of Karnataka have lost their faith in KPSC and this Government. ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. **(ಗೊಂದಲ)** 160ಕ್ಕೆ ಏರಿಸುವುದಕ್ಕೆ ಹೊರಟಿದ್ದಾರೆಯೇ ಎಂದು ಎಲ್ಲರೂ ಮಾತನಾಡುತ್ತಿದ್ದಾರೆ. ಈ ದಿನ ನಾವೆಲ್ಲರೂ ಮಾತನಾಡದಿದ್ದರೆ, ಸರ್ಕಾರ ಆ ಕೆಲಸವನ್ನು ಶೇಕಡ 100 ರಷ್ಟು ಮಾಡುವಂಥ ಪ್ರಯತ್ನ ಸರ್ಕಾರದಿಂದ ನಡೆದಿದೆ. ಹಾಗಾಗಿ, ನಾನು ಹೇಳುವುದೇನೆಂದರೆ...

**ಶ್ರೀ ದಿನೇಶ್ ಗುಂಡುರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, 160ಕ್ಕೆ ಏರಿಸುವಂತಹದ್ದರ ಬಗ್ಗೆ ಸರ್ಕಾರದ ಯಾವುದೇ ಹೇಳಿಕೆ ಇರುವುದಿಲ್ಲ. ಅಲ್ಲದೇ, ನಿನ್ನೆಯ ದಿವಸ ಸಚಿವ ಸಂಪುಟದ ಸಭೆಯಲ್ಲಿಯೂ ಸಹ ಈ ರೀತಿಯ ಚರ್ಚೆ ಆಗಿರುವುದಿಲ್ಲ. ಆದರೆ, ಕೆಪಿಎಸ್‌ಸಿ ಯನ್ನು ಸುಧಾರಣೆ ತರುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದು ಮುಂದೆ ಬರುತ್ತದೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಕನ್ನಡಿಗರಿಗೆ ಕರ್ನಾಟಕ ರಾಜ್ಯದಲ್ಲಿ ಅವಕಾಶವಿಲ್ಲವೆಂದು ಈ ಸರ್ಕಾರ ಪ್ರೂವ್ ಮಾಡಿದೆ, ಪ್ರೂವ್ ಮಾಡಲಿಕ್ಕೆ ಹೊರಟಿದೆ ಮತ್ತು ಪ್ರೂವ್ ಆಗಿದೆ. ಪ್ರಶ್ನೆ ಏನೆಂದರೆ, ಸರ್ಕಾರ ಅದನ್ನೇ ಮುಂದುವರೆಸುತ್ತಾರೋ, ಅದೇ ವಿಶ್ವಾಸವನ್ನು ಜನರಲ್ಲಿ ಮೂಡಿಸಿ ನಾವು ಹೀಗೆಯೇ ಇದ್ದೇವೆಂದು ತೋರಿಸಬೇಕೆನ್ನುತ್ತಾರೋ ಅಥವಾ ಇಲ್ಲ, ನಾವು ಕನ್ನಡಿಗರ ಪರವಾಗಿದ್ದೇವೆ ಎಂದು ತೋರಿಸಬೇಕೆನ್ನುತ್ತಾರೋ ಹೇಳಿ, ಇದೊಂದು ಪರೀಕ್ಷೆ ಎಂದು ಸರ್ಕಾರಕ್ಕೆ ಹೇಳಬೇಕಾಗಿದೆ. ನಾವು ಸರ್ಕಾರದಲ್ಲಿ

ಬೇರೆ ಏನೂ ಕೇಳುವುದಿಲ್ಲ. ಕೆಪಿಎಸ್‌ಸಿಯಲ್ಲಿ ಮರುಪರೀಕ್ಷೆ ಆಗಬೇಕು ಮತ್ತು ಈಗಾಗಲೇ ಯಾರು ಪರೀಕ್ಷೆ ಬರೆದಿದ್ದಾರಲ್ಲಾ, ಅವರಿಗೆ ಮೂರು ವರ್ಷ ಅವಧಿಯನ್ನು ರಿಲ್ಯಾಕ್ಸ್ ಮಾಡಿರುತ್ತದೆ. ಅದರಂತೆ, ಆ ಅಭ್ಯರ್ಥಿಗಳಿಗೆ ಇದು ಕೊನೆಯ ಅವಕಾಶವಾಗಿರುತ್ತದೆ. ಒಂದು ವೇಳೆ ಸರ್ಕಾರ ಇದರಲ್ಲಿ ಏನಾದರೂ ಮಾಡಿದರೆ, ಪುನಃ ಅವರಿಗೆ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ, ಈ ವಿಚಾರದಲ್ಲಿ ಮರು ಪರೀಕ್ಷೆ ಮಾಡುವುದೊಂದೇ ಈ ಸಮಸ್ಯೆಗೆ ಪರಿಹಾರವಾಗಿರುತ್ತದೆ. ಏಕೆಂದರೆ, ಆ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವಿರುವುದಿಲ್ಲ. ಇಲ್ಲ, ನಾವು ಕನ್ನಡಿಗರ ಪರವಾಗಿದ್ದೇವೆಂದು ಸರ್ಕಾರ ತೋರಿಸಿಕೊಡಬೇಕು. ಇನ್ನೊಂದು ಬಹಳ ಸರಳವಾದ ವಿಚಾರ ಹೇಳಬೇಕೆಂದರೆ, ಅನೇಕ ವರ್ಷಗಳಿಂದ ಕೆಪಿಎಸ್‌ಸಿ ಬಗ್ಗೆ ನಾವು ಸಾಕಷ್ಟು ವಿಚಾರಗಳನ್ನು ಮಾತನಾಡುತ್ತಿದ್ದೇವೆ. ಅಲ್ಲಿ ಹಗರಣಗಳ ಮೇಲೆ ಹಗರಣಗಳು ನಡೆಯುತ್ತಿವೆ. 2011 ರಲ್ಲಿ ಪರೀಕ್ಷೆಯಾಗಿದ್ದು, 2022ರಲ್ಲಿ ಫಲಿತಾಂಶವನ್ನು ಪ್ರಕಟ ಮಾಡುತ್ತೇವೆ. ಇದು ಏನಿದು? ಆದರೆ, ಕೇಂದ್ರದಲ್ಲಿರುವ ಯುಪಿಎಸ್‌ಸಿ (Union Public Service Commission) ತಾವೆಲ್ಲರೂ ನೋಡಬೇಕಾಗುತ್ತದೆ. ಯುಪಿಎಸ್‌ಸಿ ಮಾದರಿಯಲ್ಲಿ ನಮ್ಮ ರಾಜ್ಯ ಏತಕ್ಕೆ ಪರೀಕ್ಷೆ ಮಾಡುವುದಿಲ್ಲ? ಅಲ್ಲದೇ, ನಮ್ಮ ಆಕ್ಟ್‌ನಲ್ಲಿ ಒಂದು ಪ್ರಾವಿಷನ್ ಇದೆ. ಕೆಪಿಎಸ್‌ಸಿ ನಲ್ಲಿ ಇಷ್ಟೆಲ್ಲಾ ಗೊಂದಲ ಆಗಿದೆಯೆಂದರೆ, ಕೆಎಎಸ್ ಪರೀಕ್ಷೆ ನಡೆಸಿ, ಫಲಿತಾಂಶ ನೀಡುವಂತೆ ಕೇಂದ್ರ ಸರ್ಕಾರದ ಯುಪಿಎಸ್‌ಸಿ ಯನ್ನು ಕೇಳಬಹುದಾಗಿರುತ್ತದೆ. ಯುಪಿಎಸ್‌ಸಿಯವರು ಪರೀಕ್ಷೆ ನಡೆಸಿಕೊಡುತ್ತಾರೆ. ಸರ್ಕಾರಕ್ಕೆ ನಿಜವಾಗಿಯೂ ನಿಯತ್ತು ಇದ್ದರೆ, ದಯವಿಟ್ಟು ನಾವು ಕೆಎಎಸ್ ಪರೀಕ್ಷೆ ನಡೆಸುವುದನ್ನು ಯುಪಿಎಸ್‌ಸಿ ಗೆ ಕೊಟ್ಟು, ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ತೋರಿಸಿಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತಾ, ಈ ವಿಷಯದಲ್ಲಿ ಮರುಪರೀಕ್ಷೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಸಾಕಷ್ಟು ಸಂಗತಿಗಳನ್ನು ನನ್ನ ಎಲ್ಲಾ ಹಿರಿಯ ಸದಸ್ಯರುಗಳು ಹೇಳಿರುತ್ತಾರೆ. ನಾನು ಯಾವುದನ್ನು ಕೂಡ ಪುನರಾವರ್ತನೆ ಮಾಡುವುದಿಲ್ಲ. ಕೆಪಿಎಸ್‌ಸಿ ಯಲ್ಲಿ ನಡೆದಿರುವಂತಹ ವಿಷಯ ಮುಖ್ಯಮಂತ್ರಿಗಳಿಗೆ ಗೊತ್ತಾದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಎಚ್ಚರಿಸಿದ್ದಾರೆಂಬುದು ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರ ಎಚ್ಚರಿಕೆಯ ನಂತರವೂ ಒಂದಿಂಚು ಜಗ್ಗಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ. "ನುಡಿಯಲ್ಲಿ ಎಚ್ಚೆತ್ತು, ನಡೆಯಲ್ಲಿ ಎಡವಿದೆಡೆ, ಹಿಡಿದಿರ್ಪ ಲಿಂಗವು, ಘೋರಸರ್ಪವಯ್ಯ" ಎಂದು ಹೇಳುತ್ತೇನೆ. ಅಂದರೆ, ಮಾನ್ಯ ಮುಖ್ಯಮಂತ್ರಿಗಳು ನುಡಿಯಲ್ಲಿ ಎಚ್ಚೆತ್ತುಕೊಂಡಿರುತ್ತಾರೆ. ಆದರೆ, ನಡೆಯಲ್ಲಿ ಎಡವಿದ್ದಾರೆ. ಹಾಗಾಗಿ, ಅವರು ಹಿಡಿದಿರುವ ಲಿಂಗವು ಘೋರ ಸರ್ಪವಾಗಿ ಅವರನ್ನು ಕಚ್ಚುತ್ತದೆ. ಹಾಗಾಗಿ, ನಾನು ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ಎಚ್ಚರಿಕೆ ಇರಲಿ, ಎಚ್ಚರಿಕೆಯಿಂದ ಮುಂದಿನ ಹೆಜ್ಜೆ ಇಡಿ, ಮುಂದಿನ ಎಲ್ಲಾ ಕೆಡರ್‌ಗಳನ್ನು ಸರ್ಕಾರ ತಯಾರು ಮಾಡುವುದು ಇಲ್ಲಿಂದ. ಹಾಗಾಗಿ, ಈ ಸಂಸ್ಥೆಯನ್ನು ಹಾಳಾಗುವುದಕ್ಕೆ ಬಿಡಬೇಡಿ. ಇದರ ಜೊತೆಗೆ, "ಎಸ್‌ಎಸ್‌ಎಲ್‌ಸಿ ಯಲ್ಲಿ ಫೇಲ್ ಆದವರೇ ಬಾಸ್" ಎಂದು

ಮತ್ತೊಂದು ವರದಿ ಇರುತ್ತದೆ. ಅದರಲ್ಲಿ, ಶ್ರೀ ಶಿವಶಂಕರಪ್ಪ ಸಾಹುಕಾರ್, ಕೆಪಿಎಸ್‌ಸಿ ಅಧ್ಯಕ್ಷರು ಏನು ಹೇಳುತ್ತಾರೆಂದರೆ, "ಅನುಕಂಪದ ಹುದ್ದೆಯಲ್ಲಿರುವವರ ಶೈಕ್ಷಣಿಕ ದಾಖಲೆ ಪರಿಶೀಲಿಸಬೇಕಿದೆ. ಎಷ್ಟು ಪ್ರಮಾಣದಲ್ಲಿ ಇದ್ದಾರೆಂಬುದನ್ನು ತಿಳಿದು ಕ್ರಮ ಕೈಗೊಳ್ಳುತ್ತೇವೆ. ಅದು ಯಾವಾಗ ಎಂದು ನಾನು ಕೇಳುತ್ತೇನೆ.

(ಮುಂದು)

(140) 06.03.2025 6.30 ವೈಎಲ್-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್.ಎಸ್ (ಮುಂದು):-**

ಈಗಾಗಲೇ ಎಲ್ಲರೂ ಮಾತನಾಡಿರುವುದರಿಂದ ಸಮಯಕ್ಕೆ ಗೌರವ ಕೊಟ್ಟು ನಾನು ತನಿಖಾ ಸಮಿತಿಯ ಶಿಫಾರಸ್ಸನ್ನು ಮಾತ್ರ ಓದುತ್ತೇನೆ. ಅದೇನೆಂದರೆ, 'ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ ಅಭ್ಯರ್ಥಿಗಳ ವಿರುದ್ಧ ಪೊಲೀಸ್ ದೂರು ದಾಖಲಿಸಿ, ಸಿ.ಐ.ಡಿ. ತನಿಖೆಗೆ ಆದೇಶಿಸಬೇಕು. ಯಾರೂ ರೆಕಾರ್ಡ್ ಮಾಡುತ್ತಿದ್ದಾರೆ, ಅವರು ರೆಕಾರ್ಡ್ ಮಾಡಬೇಕೆಂದು ವಿನಂತಿಸುತ್ತೇನೆ. ಪರೀಕ್ಷೆಯಲ್ಲಿ ಕೊಡುವ ಓ.ಎಂ.ಆರ್. ಶೀಟ್‌ಗಳಲ್ಲಿ ಯಾವುದೇ ಪ್ರಶ್ನೆಗೆ ಅಭ್ಯರ್ಥಿಗಳಿಗೆ ಉತ್ತರ ಗೊತ್ತಿಲ್ಲವೆಂದಾದರೆ, ಅದನ್ನು ಸ್ಪಷ್ಟವಾಗಿ ನಮೂದಿಸಲು ನಿರ್ದಿಷ್ಟ ಜಾಗವನ್ನು ಕೊಡಬೇಕು. ಪರೀಕ್ಷೆಯಲ್ಲಿ ಬ್ಲೂ ಬಾಲ್ ಪೆನ್ನಿನಿಂದಲೇ ಬರೆಯುವುದನ್ನು ಕಡ್ಡಾಯ ಮಾಡಬೇಕು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ 5 ಜಿ ತಂತ್ರಜ್ಞಾನಯುಳ್ಳ ಜಾಮರ್ ಅಳವಡಿಸಬೇಕು, ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವವರು ಸಂಪೂರ್ಣವಾಗಿ ಸೀಲ್ ಆದ ಕವರ್‌ಗಳನ್ನು ಮುಖ್ಯ ಪರೀಕ್ಷಾ ಅಧೀಕ್ಷಕರ ಕೊಠಡಿಗೆ ತೆಗೆದುಕೊಂಡು ಹೋಗುವುದನ್ನು ಖಾತರಿಪಡಿಸಿಕೊಳ್ಳಲು ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಕಾರಿಡಾರ್‌ನಲ್ಲಿ ಸಿ.ಸಿ.ಟಿವಿ ಕ್ಯಾಮರಾಗಳನ್ನು ಅಳವಡಿಸಬೇಕು. ಅಗತ್ಯ ಮೂಲಸೌಕರ್ಯ ಇರುವ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಾಗಿ ಆಯ್ಕೆ ಮಾಡಬೇಕು. ದೂರದ ಪ್ರದೇಶಗಳಲ್ಲಿರುವ ಶಾಲಾ-ಕಾಲೇಜುಗಳನ್ನು ಪರೀಕ್ಷಾ ಕೇಂದ್ರಗಳಾಗಿ ಆಯ್ಕೆ ಮಾಡಬಾರದು. ಜಿಲ್ಲಾಧಿಕಾರಿಗಳ ಕಛೇರಿಗಳಿಂದ ಪರೀಕ್ಷಾ ಕೇಂದ್ರಗಳಿಗೆ ಓ.ಎಂ.ಆರ್. ಶೀಟ್, ಕೈಪಿಡಿ ಇತ್ಯಾದಿಗಳನ್ನು ಜಿ.ಪಿ.ಎಸ್. ಸೌಲಭ್ಯದೊಂದಿಗೆ ಪೊಲೀಸ್ ಭದ್ರತೆ ಸಹಿತ ಕಳುಹಿಸಿಕೊಡಬೇಕು' ಎಂದು ಇದೆ. ಇಷ್ಟು ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಬಹಳಷ್ಟು ವಿಷಯವನ್ನು ಮಾತನಾಡಲು ಹೋಗುವುದಿಲ್ಲ. ಎರಡು ವಿಚಾರವನ್ನು ಹೇಳಬಯಸುತ್ತೇನೆ. ಅದೇನೆಂದರೆ, ಕರ್ನಾಟಕ ಲೋಕ ಸೇವಾ ಆಯೋಗದ ಪರೀಕ್ಷಾ ವ್ಯವಸ್ಥೆಯಲ್ಲಿ ಈ ಹಿಂದೆ ವ್ಯವಸ್ಥಿತವಾದಂಥ ಶಿಸ್ತು, ಸಂಯಮ, ನಿರ್ದಿಷ್ಟತೆ, ಕಟ್ಟಳೆ ಯಾವ ರೀತಿ ಇರುತ್ತಿತ್ತು, ಅದೆಲ್ಲವೂ ಇವತ್ತಿನ ಪರಿಸ್ಥಿತಿಯಲ್ಲಿ ಗಾಳಿಗೆ ತೂರಿ ಹೋಗಿದಂತಾಗಿದೆ.

ಒಟ್ಟಾರೆಯಾಗಿ ವಾತಾವರಣ ಕಲುಷಿತವಾಗಿರುವ ಕಾರಣಕ್ಕಾಗಿ ಅರ್ಹ ವ್ಯಕ್ತಿಗಳು ಯಾವ ಜಾಗದಲ್ಲಿ ಕೆಲಸ ಮಾಡಬೇಕಾಗಿತ್ತು, ಅಂಥವರು ಇವತ್ತು ಆ ಜಾಗದಲ್ಲಿಲ್ಲ. ಜಾತಿಯ ವಿಷ ಬೀಜ, ಹಣ ಬಲ, ಅಧಿಕಾರದ ದರ್ಪ ಇವೆಲ್ಲವೂ ಕೆ.ಪಿ.ಎಸ್.ಸಿ. ವ್ಯವಸ್ಥೆಯಲ್ಲಿ ತೂರಿಕೊಂಡು ಕಳೆದ 15 ವರ್ಷಗಳಿಂದ ಇಡೀ ವ್ಯವಸ್ಥೆಯೇ ಸಂಪೂರ್ಣವಾಗಿ ಹಾಳಾಗಿರುವುದನ್ನು ನಾವು ಯಾರು ಅಲ್ಲಗೆಳೆಯಲು ಆಗುವುದಿಲ್ಲ. ಮಾನ್ಯ ರವಿಯವರು ಹೇಳಿದ ಹಾಗೆ, ನಾವು ಏನನ್ನು ಬಿತ್ತಿದ್ದೆವೋ, ಅದನ್ನು ಬೆಳೆಯಬೇಕು. 'ಮಾಡಿದ್ದುಣ್ಣೋ ಮಾರಾಯ' ಎನ್ನುವ ಹಾಗೆ ಇನ್ನು ಎಷ್ಟು ವರ್ಷಗಳವರೆಗೆ ಈ ಸ್ಥಿತಿ ಇರುತ್ತದೆ ಎನ್ನುವುದು ಗೊತ್ತಿಲ್ಲ. ಒಂದು ವಿಷಯದ ಬಗ್ಗೆ ನಾವು ಈ ಸಂದರ್ಭದಲ್ಲಿ ಗಮನಿಸಬೇಕಾಗಿದ್ದು, ಮೇಲಿಂದ ಮೇಲೆ court interference ಆಗುತ್ತಿರುತ್ತದೆ. ಅಧಿಕಾರಿಗಳು ವ್ಯವಸ್ಥಿತವಾಗಿಯೇ ದೋಷಪೂರಿತವಾದ ಆದೇಶವನ್ನು ನೀಡುತ್ತಾರೆ. ಅಂದರೆ, ಅದಕ್ಕೆ ಪೂರಕವಾಗಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಸಿಗಬೇಕು. ಸುಮಾರು ಹತ್ತಾರು ವರ್ಷಗಳವರೆಗೂ ಅದನ್ನು ಎಳೆಯುತ್ತಾ, ಎಳೆಯುತ್ತಾ, ಅಭ್ಯರ್ಥಿಗಳ / ಯುವಕರ ಜೀವನದ ಜೊತೆ ಚೆಲ್ಲಾಟವಾಡುವುದನ್ನು ಇವತ್ತು ನಾವೆಲ್ಲರೂ ನೋಡುತ್ತಿದ್ದೇವೆ. ಈಗಾಗಲೇ ಹೇಳಿದ ಹಾಗೆ ಸುಮಾರು 10 ವರ್ಷಗಳ ಹಿಂದೆ ಆಯ್ಕೆಯಾದ ಅಭ್ಯರ್ಥಿಗಳು ಇವತ್ತಿಗೂ ಕೂಡ ಜಾತಕ ಪಕ್ಷಿಯಂತೆ 'ಇಂದು ಆದೇಶ ಸಿಗಬಹುದೇನೋ, ನಾಳೆ ಆದೇಶ ಸಿಗಬಹುದೇನೋ' ಎಂದು ಕನಸು ಕಾಣುತ್ತಾ, ಮದುವೆ ಸಹ ಆಗದೇ ಕ್ರಮೇಣವಾಗಿ ಆತ್ಮಹತ್ಯೆ ದಾರಿಯನ್ನು ಹೋಗಿ ಮುಟ್ಟುವಂಥ ಸ್ಥಿತಿಯನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. Criminal law of jurisprudence ನಲ್ಲಿ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎನ್ನುವ ಒಂದು ವ್ಯಾಖ್ಯಾ ಇದೆ. ಅದನ್ನು 'Maxims' ಎಂದು ಕರೆಯುತ್ತೇವೆ. 99 ನೈಜ ಅಪರಾಧಿಗಳನ್ನು ಬಿಟ್ಟರೂ ಕೂಡ ತೊಂದರೆ ಏನಿಲ್ಲ, ಇಲ್ಲಿಯ ವ್ಯವಸ್ಥೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಒಬ್ಬ ಯೋಗ್ಯನನ್ನು ಆಯ್ಕೆ ಮಾಡುವ ಸಲುವಾಗಿ ಹತ್ತಾರು ಅಯೋಗ್ಯರವನ್ನು ಆಯ್ಕೆ ಮಾಡುವಂಥ ಒತ್ತಡದಲ್ಲಿ ಈ ಅಧಿಕಾರಿಗಳು ಆಡಳಿತ ವ್ಯವಸ್ಥೆ, ಶಾಹಿ ಎರಡೂ ಸೇರಿಕೊಂಡು ಯೋಗ್ಯರಾದ ನೂರಾರು ಜನರ ಬದುಕಿನ ಜೊತೆ ಚೆಲ್ಲಾಟವಾಡುವುದನ್ನು ಕಾಣುತ್ತಿದ್ದೇವೆ. ಯಾವುದೋ ಒಂದು ರೀತಿಯಲ್ಲಿ ಆ ಹತ್ತು ಜನರನ್ನು ಆಯ್ಕೆ ಮಾಡಬೇಕು. ನಾನು ಒಬ್ಬರ ಬಗ್ಗೆ ಹೇಳಿರುತ್ತೇನೆ, ಅದೇ ರೀತಿ ಇನ್ನೊಬ್ಬರು ಹೇಳಿರುತ್ತಾರೆ. ತಾಳಿ ಭಾಗ್ಯ ಕೊಡುತ್ತೇವೆ ಎಂದು ಬೇರೆ ಬೇರೆ ಭಾಗ್ಯದ ಬಗ್ಗೆ ಹೇಳಿದರು. ಎಲ್ಲಾ ಭಾಗ್ಯವನ್ನು ಒಳಗೊಂಡ ವ್ಯವಸ್ಥೆಯಲ್ಲಿ ಹತ್ತಾರು ಜನ ಅಭ್ಯರ್ಥಿಗಳನ್ನು ಯಾವುದೋ ಒಂದು ರೀತಿಯಲ್ಲಿ ಆಯ್ಕೆ ಮಾಡಬೇಕು. ಆ ರೀತಿ ಆಯ್ಕೆ ಮಾಡುವ ಸಂದರ್ಭದಲ್ಲಿ ಯೋಗ್ಯರು, ಅಮಾಯಕರು, ಅರ್ಹತೆ ಇರುವ ಅಭ್ಯರ್ಥಿಗಳ /ಯುವಕರ ಜೀವನದ ಜೊತೆ ಚೆಲ್ಲಾಟ ಆಡುವಂಥ ಪ್ರವೃತಿ ಕ್ರಮೇಣವಾಗಿ ನಡೆದುಕೊಂಡು ಬರುತ್ತಿದೆ. ಒಟ್ಟಾರೆಯಾಗಿ ಇದು ಸರಿದೂಗಬೇಕೆಂದರೆ, ಈಗಾಗಲೇ ಅಪೇಕ್ಷೆ ಮಾಡಿದಂತೆ ಎಲ್ಲಾ ಸದಸ್ಯರು ಹೇಳಿದ ಹಾಗೆ ಈಗಿನಿಂದಲೇ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು. "Better late than never" ಎನ್ನುವ ಹಾಗೆ ಈಗಾಗಲೇ ಆ ಹಂತಕ್ಕೆ ತಲುಪಿಬಿಟ್ಟಿದ್ದೇವೆ. ಕಳೆದ ಹತ್ತಾರು ವರ್ಷಗಳಿಂದ ಪರೀಕ್ಷೆಗಳಲ್ಲಿ ಅಕ್ರಮ ಅವ್ಯವಸ್ಥೆ, ಜಾತೀಯತೆ ಇತ್ಯಾದಿಗಳೆಲ್ಲವೂ ಉದ್ಭವಿಸುತ್ತಿದ್ದು,

ಪಕ್ಷಾತೀತವಾಗಿ ಪ್ರಾಮಾಣಿಕ ಚಿಂತನೆಯನ್ನು ನಾವೆಲ್ಲರೂ ಮಾಡಬೇಕು. ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಯೋಗ್ಯ ಸ್ಥಾನದಲ್ಲಿ ಒಳ್ಳೆಯ ವ್ಯಕ್ತಿಗಳು ಕುಳಿತುಕೊಳ್ಳಬೇಕು, ಅರ್ಹ ವ್ಯಕ್ತಿಯಾಗಿರಬೇಕು. ಯಾವುದೇ ರೀತಿ ಜಾತಿಯ ವಿಷಬೀಜಕ್ಕೆ, ಹಣದ ಪ್ರಭಾವಕ್ಕೆ, ಅಧಿಕಾರಿಗಳ ದರ್ಪಕ್ಕೆ ಸಿಲುಕಿದವರಾಗಿರಬಾರದು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಾ, ಇವತ್ತಿನ ದಿವಸ ಮರು ಪರೀಕ್ಷೆ ಮಾಡಬೇಕೆಂಬ ಆಗ್ರಹವನ್ನು ಮಾಡುತ್ತೇನೆ. ಒಂದು ಸಂಶಯ ಕಾಡುತ್ತಿರುವುದೇನೆಂದರೆ, ಭಾಷಾಂತರಗಳಲ್ಲಿ ಆಗಿರುವ ಅದ್ವಾನದ ಬಗ್ಗೆ ಮಾನ್ಯ ಎನ್.ರವಿಕುಮಾರ್‌ರವರು, ಮಾನ್ಯ ಸಿ.ಟಿ.ರವಿರವರು ಎಲ್ಲರೂ ಮಾತನಾಡುತ್ತಾ 'ಭಾಷಾಂತರ ದೋಷದಿಂದ ಕನ್ನಡದಿಂದ ಅತೀ ಕಡಿಮೆ ಸಂಖ್ಯೆಯ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಆಯ್ಕೆಯಾಗಿದ್ದಾರೆ ಎಂದು ಹೇಳುತ್ತಾರೆ. ಆದರೆ, ಭಾಷಾಂತರ ಅದ್ವಾನದಿಂದ ಬಹಳಷ್ಟು ಜನ ಆಯ್ಕೆಯಾಗಿಲ್ಲ' ಎಂದು ಹೇಳಿದರು. ಆ ಕಾರಣಕ್ಕಾಗಿ ಕೆ.ಎ.ಎಸ್. ಮರು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದಿರುವ ಕನ್ನಡ ಮಾಧ್ಯಮ ಅಭ್ಯರ್ಥಿಗಳು ಎಷ್ಟು ಮಂದಿ ಇದ್ದಾರೆ ಎಂಬುದರ ವರದಿಯನ್ನು ಸರ್ಕಾರ ಕೊಡಬೇಕೆಂದು ಮತ್ತು ಮತ್ತೊಮ್ಮೆ ಮರು ಪರೀಕ್ಷೆ ಮಾಡಿ ಯೋಗ್ಯ ಅಭ್ಯರ್ಥಿಗಳು ಆಯ್ಕೆಯಾಗುವ ರೀತಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಚುಕ್ಕೆ ಗುರುತಿನ ಪ್ರಶ್ನೆ ಅಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಲಾಗಿತ್ತು. ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಜಾಣ್ಮೆಯ ಉತ್ತರವನ್ನು ಕೊಟ್ಟಿದ್ದರು. ಆದರೆ, ಸಾಮಾನ್ಯವಾಗಿ ಅವರ ನಿಲುವು ಸದನವನ್ನು ಮತ್ತು ಕನ್ನಡ ಮಾಧ್ಯಮ ಅಭ್ಯರ್ಥಿಗಳನ್ನು ದಿಕ್ಕು ತಪ್ಪಿಸುವ ರೀತಿಯಲ್ಲಿತ್ತು. ಅದೇನೆಂದರೆ, '2017-18ನೇ ಸಾಲಿನಲ್ಲಿ ಪರೀಕ್ಷೆ ನಡೆದಿದ್ದು ಅದನ್ನು compare ಮಾಡಿ, 2023-24ನೇ ಸಾಲಿಗೆ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಯನ್ನು ತೆಗೆದುಕೊಂಡು ಅರ್ಹರಾದವರ ಸಂಖ್ಯೆಗೂ ಹೋಲಿಸಿದರೆ ಶೇಕಡ 6.5 ರಷ್ಟು ಹೆಚ್ಚಳವಾಗಿದ್ದು, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಿಲ್ಲ' ಎಂದು ಆಯೋಗವು ತಿಳಿಸಿಲ್ಲ ಎಂದು ಉಲ್ಲೇಖ ಮಾಡಿದ್ದಾರೆ. ಏತಕ್ಕೆ ಅನ್ಯಾಯವಾಗಿಲ್ಲ? ಅನ್ಯಾಯವಾಗಿದೆ. ಕಳೆದ ಬಾರೀ ಪರೀಕ್ಷೆ ಬರೆದಿದ್ದು, ಮುಖ್ಯ ಪರೀಕ್ಷೆಯಲ್ಲಿ ಬರೆಯಲು ಆಯ್ಕೆಯಾದವರು 2,120 ಅಭ್ಯರ್ಥಿಗಳಾಗಿದ್ದು, ಆ 2,120 ಅಭ್ಯರ್ಥಿಗಳ ಪೈಕಿ ಮಾಹಿತಿ ಹಕ್ಕಿನ ಆಧಾರದ ಮೇಲೆ ತೆಗೆದುಕೊಂಡು ನೋಡಿದಾಗ 530 ಅಭ್ಯರ್ಥಿಗಳು ಕನ್ನಡದಲ್ಲಿ ಪರೀಕ್ಷೆ ಬರೆದಿದ್ದಾರೆ. ಅಂದರೆ, ಒಟ್ಟು ಅಭ್ಯರ್ಥಿಗಳಲ್ಲಿ ಶೇಕಡ 25 ರಷ್ಟು ಕನ್ನಡ ಮಾಧ್ಯಮದವರಾಗಿದ್ದಾರೆ ಎಂದು ಉಲ್ಲೇಖ ಮಾಡಿದ್ದಾರೆ. 2023-24ನೇ ಸಾಲಿನಲ್ಲಿ ನಡೆದ ಪರೀಕ್ಷೆಯಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳು 5,760. ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ 530 ಅಭ್ಯರ್ಥಿಗಳು ಕನ್ನಡದಲ್ಲಿ ಪರೀಕ್ಷೆ ಬರೆದಿದ್ದು, ಶೇಕಡ 6.5 ರಷ್ಟು ಮಂದಿ ಆಯ್ಕೆಗೊಂಡಿದ್ದು, ಜಾಸ್ತಿ ಜನರೇ ಆಯ್ಕೆಯಾಗಿರುವುದರಿಂದ ಅನ್ಯಾಯವಾಗಿಲ್ಲ ಎಂದು ಹೇಳಿದ್ದಾರೆ. ಆ ಒಂದು ನಿಟ್ಟಿನಲ್ಲಿ ಹೇಳುವುದಾದರೆ, ಶೇಕಡ 6.5 ರಷ್ಟು ಎಂದರೆ 564 ಆಗುತ್ತದೆ. 5760 ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಲ್ಲಿ

ಶೇಕಡ 25 ರಷ್ಟು ಎಂದರೆ, 1440 ಅಭ್ಯರ್ಥಿಗಳು ಆಯ್ಕೆಯಾಗಬೇಕಾಗಿತ್ತು. ಅಲ್ಲಿಗೆ ಸುಮಾರು 876 ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ.

(ಮುಂದು)

**(141) 06.03.2025/6.40/ಎಸ್‌ಕೆ-ಎಂಡಿ** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಡಾ॥ ಧನಂಜಯ ಸರ್ಜಿ (ಮುಂದು):-**

ಸರ್ಕಾರ ಬಹಳ ಜಾಣ್ಮೆ ಉತ್ತರವನ್ನು ಕೊಟ್ಟು, ಸದನವನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂಬ ಬಗ್ಗೆ ನಾನು ಉಲ್ಲೇಖ ಮಾಡುತ್ತೇನೆ. Actual ಆಗಿ ಕನ್ನಡ ಮಾಧ್ಯಮದಿಂದ ಆಯ್ಕೆಯಾದ ಆಭ್ಯರ್ಥಿಗಳ ಅಂಕಿ-ಅಂಶಗಳು ಎಷ್ಟು ಎಂಬುದರ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರ ಉತ್ತರ ಕೊಡಬೇಕೆಂದು ಈ ಸಮಯದಲ್ಲಿ ಕೇಳಬಯಸುತ್ತೇನೆ. ಎರಡನೇ ಅಂಶವೇನೆಂದರೆ, ಒಟ್ಟು 384 ಇರುವಂತಹ ಹುದ್ದೆಗಳಲ್ಲಿ ಕನ್ನಡ ಮಾಧ್ಯಮದವರಿಗೆ upto five percent ಮೀಸಲಾತಿ ಕೊಡಬೇಕೆಂಬುದು ಇದೆ. ಕನ್ನಡ ಮಾಧ್ಯಮದವರಿಗೆ ಒಟ್ಟು 19 ಹುದ್ದೆಗಳನ್ನು ಕೊಡಬೇಕಾಗುತ್ತದೆ. ಈ ಬಾರಿ ಕೇವಲ 6 ಹುದ್ದೆಗಳನ್ನು ಮಾತ್ರ ಕೊಡುತ್ತಿದ್ದಾರೆ. ಅದರ ಬಗ್ಗೆಯೂ ಮಾಹಿತಿ ಕೊಡಬೇಕೆಂದು ಕೇಳುತ್ತೇನೆ. ಮೂರನೇಯದಾಗಿ, ಕನ್ನಡ ಆಡಳಿತ ಭಾಷಾ ನೀತಿ 2002ರ ಪ್ರಕಾರ ಕನ್ನಡ ಭಾಷೆಯಲ್ಲಿಯೇ ಪ್ರಶ್ನೆಪತ್ರಿಕೆಯನ್ನು ತಯಾರು ಮಾಡಿ, ಅದನ್ನು ಆಂಗ್ಲ ಭಾಷೆಯಲ್ಲಿ ಅನುವಾದ ಮಾಡಬೇಕು ಎಂಬುದು ಇದೆ. ಇವರು ಕೊಟ್ಟಿರುವ ಪ್ರಕಾರ ಕನ್ನಡ ಭಾಷೆಯಲ್ಲಿ ಅರ್ಥವಾಗದಿದ್ದರೆ, ಆಂಗ್ಲ ಭಾಷೆಯಲ್ಲಿ ಓದಿ. Total number of questions ನಲ್ಲಿ ಒಂದು ಪ್ರಶ್ನೆ ಓದಿ ಉತ್ತರ ಬರೆಯುವುದಕ್ಕೆ ಒಂದು ನಿಮಿಷ ಹದಿನೈದು ಸೆಕೆಂಡುಗಳು ಮಾತ್ರ ಸಮಯ ಇರುವಂತಹದ್ದು. ಅಷ್ಟರೊಳಗೆ ಸರಾಸರಿ ತೆಗೆದುಕೊಂಡು ಒಂದು ನಿಮಿಷ ಹದಿನೈದು ಸೆಕೆಂಡುಗಳೊಳಗೆ ಓದಿ ಉತ್ತರ ಬರೆಯಬೇಕು. ಅಂತಹದ್ದರಲ್ಲಿ ಕನ್ನಡ ಭಾಷೆ ಅರ್ಥವಾಗಲಿಲ್ಲವೆಂದರೆ, ಅದನ್ನು ಆಂಗ್ಲ ಭಾಷೆಯನ್ನು ಓದಿಕೊಂಡು ಉತ್ತರ ಬರೆಯುವುದಕ್ಕೆ 79 ಪ್ರಶ್ನೆಗಳು wrong ಇದ್ದರೆ, ಅವರಿಗೆ ಎಷ್ಟು ಸಮಯ ಬೇಕಾಗುತ್ತದೆ? ನೀವು ಅವರಿಗೆ extra time ಕೊಟ್ಟಿದ್ದೀರಾ? ಇದೂ ಕೂಡ ಅನ್ಯಾಯವಾಗುತ್ತದೆ ಎಂದು ನಾನು ಈ ಸಮಯದಲ್ಲಿ ಉಲ್ಲೇಖ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಒಂದು ಪ್ರಶ್ನೆಗೆ ಒಂದು ನಿಮಿಷ ಹನ್ನೆರಡು ಸೆಕೆಂಡುಗಳು.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವ ಸಮಯ ಒಂದು ನಿಮಿಷ ಹನ್ನೆರಡು ಸೆಕೆಂಡುಗಳು. ಕನ್ನಡ ಭಾಷೆ ಅರ್ಥವಾಗಲಿಲ್ಲವೆಂದರೆ, ಅದನ್ನು ಆಂಗ್ಲ ಭಾಷೆಯಲ್ಲಿ ಓದಿಕೊಂಡು ಉತ್ತರ ಬರೆಯುವುದಕ್ಕೆ ಎಷ್ಟು ಸಮಯ ಆಗುತ್ತದೆ? 79 ಪ್ರಶ್ನೆಗಳು ತಪ್ಪಿದ್ದಾಗ, ಅದು ಸಾಧ್ಯವೇ ಇಲ್ಲ. ಮಾನ್ಯ ಸದಸ್ಯರೆಲ್ಲರೂ ಹೇಳಿದಂತೆ, ಇಲ್ಲಿ ಮರು ಪರೀಕ್ಷೆ ಬೇಡ. ಮರು ಅಧಿಸೂಚನೆ ಹೊರಡಿಸಬೇಕು. 2002 ನಿಯಮದ ಪ್ರಕಾರ ಕನ್ನಡದಲ್ಲಿ ಪ್ರಶ್ನೆಪತ್ರಿಕೆಯನ್ನು ಪ್ರಿಂಟ್ ಆಗಬೇಕು. ನಂತರ

ಆಂಗ್ಲ ಭಾಷೆಯಲ್ಲಿ ಅನುವಾದವಾಗಬೇಕಾಗುತ್ತದೆ. ಸುಮಾರು ಜನ ಅಭ್ಯರ್ಥಿಗಳ ಪ್ರಾಮುಖ್ಯವಾದ ಸಮಯವನ್ನು ಹಾಳು ಮಾಡಿಕೊಂಡಿದ್ದಾರೆ. ಆ ನಿಟ್ಟಿನಲ್ಲಿ ಬರುವ ಪರೀಕ್ಷೆಗೆ age relaxation ಕೊಡಬೇಕೆಂದು ಈ ಸಮಯದಲ್ಲಿ ನಾನು ಸರ್ಕಾರಕ್ಕೆ ಉಲ್ಲೇಖವನ್ನು ಮಾಡುತ್ತೇನೆ. ಇವತ್ತು ಬಂದಿರುವ ದಿನಪತ್ರಿಕೆಯಲ್ಲಿ ಸುಮಾರು ಜನರು ಉಲ್ಲೇಖ ಮಾಡಿರುವಂತೆ "ಎಸ್.ಎಸ್.ಎಲ್.ಸಿ., ಫೇಲಾದವರೇ ಬಾಸ್" "ಕೆ.ಪಿ.ಎಸ್.ಸಿ. ಪರೀಕ್ಷೆ ಬರೆಯುವ ಪದವೀಧರಗಳಿಗೆ ಇವರದ್ದೇ ಉಸ್ತುವಾರಿ" ಎಂಬುದು ಇದೆ. ಆ ನಿಟ್ಟಿನಲ್ಲಿ ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರುದ್ರೇಗೌಡರವರ ವ್ಯಕ್ತಿತ್ವ ಇರುವಂತಹವರನ್ನು ನೇಮಕ ಮಾಡುವುದು ಬಹಳ ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ವೈಸ್ ಛೇರ್ಮನ್:-** ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವಕ್ಕೆ ಮಾನ್ಯ ಗೋವಿಂದರಾಜುರವರು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ,...

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ಒಂದು ನಿಮಿಷ.

## 10) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕಂತಹ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ** (ವಿರೋಧ ಪಕ್ಷದ ನಾಯಕರು)**:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ವಂದಾನ ನಿರ್ಣಯದ ಬಗ್ಗೆ ಚರ್ಚೆ ಪ್ರಾರಂಭವಾಗಿ ಈಗಾಗಲೇ ಮೂರು ದಿವಸಗಳಾಯಿತು. ಈ ಚರ್ಚೆ ಪ್ರಾರಂಭವಾಗುವುದಕ್ಕಿಂತ ಮುಂಚೆ ನಾನು ಒಂದು ಪ್ರಸ್ತಾಪವನ್ನು ತಮ್ಮ ಗಮನಕ್ಕೆ ತರಬೇಕು. ನಾನು ಈಗಾಗಲೇ ಮಾತನಾಡಿ ಮುಗಿದಾಗಿದೆ. ರಾಜ್ಯಪಾಲರ ಭಾಷಣದಲ್ಲಿ 117 ಪ್ಯಾರಾಗಳನ್ನು ನಮೂದಿಸಲಾಗಿದೆ. 7ನೇ ಪ್ಯಾರಾದಲ್ಲಿ ಸರ್ಕಾರ ಅಭಿವೃದ್ಧಿಯನ್ನು ಮಾಡಿದೆ. ಆ ಸಬಲೀಕರಣದ ಬಗ್ಗೆ ಮಾತನಾಡುತ್ತಾ, ಒಂದು ಮಾತನ್ನು ಹೇಳಿಸಿದ್ದಾರೆ. ಅದೇನೆಂದರೆ, ಜಗತ್ತಿನ ಅನೇಕ ಅರ್ಥಶಾಸ್ತ್ರಜ್ಞರು ಮತ್ತು ವಿಶ್ವವಿದ್ಯಾಲಯಗಳು ಅಧ್ಯಯನ ಮಾಡುತ್ತಿವೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು "Oxford Human Rights Hub" blog ನಲ್ಲಿ "Shining a Light in the Darkness: How The Karnataka Model Bridges Economic Divides and Advances Human Rights" ಎನ್ನುವುದರ ಬಗ್ಗೆ ಬರೆದಿದ್ದಾರೆ ಎಂದು ಹೇಳಿ, ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದಾರೆ. ಅದರ ಜೊತೆಗೆ ಅದೇ blog ನಲ್ಲಿ "A Blue Print for the World" ಎಂದು ಹೇಳಿ ರಾಜ್ಯಪಾಲರಿಂದ ಹೇಳಿಸಿದ್ದಾರೆ. ಇದಕ್ಕೆ ಪೂರಕವಾಗಿ ಈ ಪ್ರಮೇಯದ ಕುರಿತು ತಿಳಿದುಕೊಳ್ಳಲು ವಿಶ್ವಸಂಸ್ಥೆಯ ಮುಖ್ಯಸ್ಥರೇ ರಾಜ್ಯಕ್ಕೆ ಬಂದು ನಮ್ಮ ಯೋಜನೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ ಎಂದು ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದಾರೆ.

**ಶ್ರೀ ಎನ್ ರವಿಕುಮಾರ್:-** ಅವರ ಹೆಸರೇನು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಇವರ ಹೆಸರನ್ನು ಹೇಳುತ್ತೇನೆ. ಸರ್ಕಾರ ಇದನ್ನು ರಾಜ್ಯಪಾಲರಿಂದ ಹೇಳಿಸಿರುವಂತಹದ್ದು. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು. ಇದು ಅಂತರರಾಷ್ಟ್ರೀಯ "Oxford Human Rights Hub" ನವರು ಶ್ಲಾಘನೆ ಮಾಡಿ, ನಮಗೆ ಶಭಾಷ್‌ಗಿರಿಯನ್ನು ಕೊಟ್ಟು, ಈ ಸ್ಕಿಮ್‌ಗಳು ಬಹಳ advancement ಆಗಿದೆ ಎಂದು ಹೇಳಿ ಅಲ್ಲಿನ ವಿಶ್ವ ಸಂಸ್ಥೆ ಮುಖ್ಯಸ್ಥರು ರಾಜ್ಯಕ್ಕೆ ಬಂದು ನಮ್ಮ ಯೋಜನೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಲ್ಲ, ಆ ವರದಿ ಎಲ್ಲಿದೆ ಕೊಡಿ? ಇದು ಸತ್ಯಕ್ಕೆ ದೂರವಾದ ವಿಚಾರ. ಈ ಹಬ್ ಬೆಂಗಳೂರಿನಲ್ಲಿಯೇ ಇದೆ. ಇವರು ಅಂತರರಾಷ್ಟ್ರೀಯದವರಲ್ಲ. ಎರಡು ಸದನಗಳಿಗೆ ತಪ್ಪು ಮಾಹಿತಿಯನ್ನು ಸರ್ಕಾರ ಕೊಡಿಸಿದೆ. ಇದನ್ನು ಬರೆದವರು ಯಾರು? ಇದನ್ನು ಬರೆದವರು Sri Jehosh Paul ನವರು. ನೋಡಿ ಇದು ನನ್ನ ಬಳಿ ಇದೆ. ಇದು Hub ನಲ್ಲಿಯೂ ಸಿಗುತ್ತದೆ. ಎರಡು ವಿಚಾರಗಳನ್ನು

ಅವರೇ ಬರೆದಿರುವುದು. ಇವರು ಅಂತರರಾಷ್ಟ್ರೀಯದವರು ಅಲ್ಲ. ಇವರು ಬೆಂಗಳೂರಿನವರು. ಇವರು ಎಲ್ಲಿದ್ದರು ಎಂದರೆ, Jehosh Paul is a Lawyer and Research Consultant. He holds an LLM in Law and Development from the Azim Premji University, Bengaluru. ಇವರು ಅದರಲ್ಲಿ ಏನಾಗಿದ್ದಾರೆ ಎಂದರೆ, he served at the Office of the Chief Political Advisor (Cabinet Rank) to the Chief Minister of Karnataka, where he worked on governance, policy, political, electoral and social media strategies. ಮುಖ್ಯಮಂತ್ರಿಗಳಿಗೆ ಇದನ್ನು 27 ಮಾರ್ಚ್ 2024 ರಲ್ಲಿ ಬರೆದಿದ್ದಾರೆ. ಅದನ್ನು ಇಲ್ಲಿ ಪ್ರಯೋಗ ಮಾಡಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ನಮಗೆ ಹೆಸರು ಸಿಕ್ಕಿದೆ ಎಂದು ಹೇಳಿ ಶ್ಲಾಘನೆ ಮಾಡಿದ್ದಾರೆ ಎಂಬುದನ್ನು ರಾಜ್ಯಪಾಲರಿಂದ ಹೇಳಿಸಿದ್ದಾರೆ. ಸರ್ಕಾರ ಈ ರೀತಿ ಸುಳ್ಳು ಮಾಹಿತಿಯನ್ನು ಕೊಟ್ಟು, ಯಾರ ಕಿವಿಗೆ ಹೂವು ಇಡುತ್ತಿದೆ?

**ಶ್ರೀ ಎನ್. ರವಿಕುಮಾರ್:-** ಇದು ರಾಜ್ಯಪಾಲರಿಗೆ ಮಾಡುವಂತಹ ಅಪಮಾನ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಸಂವಿಧಾನ ಮಾಡಿರುವಂತಹ ಅಪಮಾನ ಮತ್ತು ರಾಜ್ಯಪಾಲರಿಗೂ ಮಾಡಿರುವಂತಹ ಅಪಮಾನ. ಈ ಸದನಗಳಿಗೆ ತಪ್ಪು ಹೇಳಿಸಿ, ನಮಗೂ ಮತ್ತು ಸದನಗಳಿಗೂ ಮಾಡಿಸಿರುವಂತಹ ಅಪಮಾನ. ಸರ್ಕಾರ ಬಂದು ಮೊದಲು ಕ್ಷಮೆ ಕೇಳಬೇಕು. ಸರ್ಕಾರ ಕ್ಷಮೆ ಕೇಳದೇ ಹೋದರೆ, ಇಲ್ಲಿ ಯಾವುದೇ ಚರ್ಚೆ ಮಾಡಿದರೂ ಕೂಡ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ತಾವು ತೀರ್ಮಾನ ಕೊಡಬೇಕು.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಯಾವೊಬ್ಬ ವ್ಯಕ್ತಿಯ ಬಗ್ಗೆ ಉಲ್ಲೇಖ ಮಾಡಿದ್ದಾರಲ್ಲ, ಇದೇ ಸರ್ಕಾರದ ವಿಧಾನಸೌಧದಲ್ಲಿಯೇ ಸುಮಾರು ಒಂದು ವರ್ಷಗಳ ಕಾಲ Good Governance Consultant ಆಗಿ ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿ ಸಂಬಳ ತೆಗೆದುಕೊಂಡಿರುವಂತಹ ವ್ಯಕ್ತಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ರಾಜ್ಯಪಾಲರ ಭಾಷಣದಲ್ಲಿ ಬಂದಿರುವಂತಹ ವಿಚಾರವನ್ನು ಇಲ್ಲಿ ತಂದಿದ್ದಾರೆ.

**ಶ್ರೀ ಕೆ.ಎಸ್. ನವೀನ್-** ಮಾನ್ಯ ಸಭಾನಾಯಕರೇ, ನಾನು ಮಾತನಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದರ ಬಗ್ಗೆ ಮಾಹಿತಿ ಇದೆ. ರಾಜ್ಯಪಾಲರ ಮೂಲಕ ಅಕ್ಸಫರ್ಡ್ ವಿಶ್ವವಿದ್ಯಾಲಯ ಎಂದು ಹೇಳಿಸಿರುವಂತಹದ್ದು. ನಮ್ಮ ಕರ್ನಾಟಕ ರಾಜ್ಯದ ತೆರಿಗೆ ಹಣದಿಂದ ಅವನಿಗೆ ಸಂಬಳ ಕೊಟ್ಟು, ಸರ್ಕಾರವೇ ಇದನ್ನು ಬರೆಸಿರುವಂತಹದ್ದು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೂ ಇದಕ್ಕೂ ಸಂಬಂಧವಿಲ್ಲ. ಯಾರು ಬೇಕಾದರೂ ಇವತ್ತು ಮಧ್ಯಾಹ್ನ ಕುಳಿತುಕೊಂಡು ಕರ್ನಾಟಕದಲ್ಲಿ ಅತಿ ಭ್ರಷ್ಟ ಸರ್ಕಾರ ಎಂದು ಆ ರೀತಿಯಲ್ಲಿಯೂ ಕೂಡ ಬರೆಯಬಹುದು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದವರು ಶ್ಲಾಘಿಸಿದ್ದಾರೆ ಎಂದು

ಆ ವ್ಯಕ್ತಿ ಹತ್ತಿರ ಬರೆಸಿದ್ದಾರೆ. ಎರಡನೇಯದಾಗಿ, United Nations ನವರು ಏನು ಹೇಳಿದ್ದಾರೆ ಎಂಬ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳಿಬಿಡುತ್ತೇನೆ. ವಿಶ್ವ ಸಂಸ್ಥೆಯವರು ಶ್ಲಾಘನೆ ಮಾಡಿದ್ದಾರೆ ಎಂದು ಕೆಲವು ಜನ ಮಾನ್ಯ ಸದಸ್ಯರು ಹೇಳಿದರು. ವಿಶ್ವ ಸಂಸ್ಥೆಗಳಲ್ಲಿ ಅನೇಕ ಉಪ ಸಮಿತಿಗಳಿವೆ. ಆ ಸಮಿತಿಯ ಒಬ್ಬ ಅಧ್ಯಕ್ಷರಿಗೂ Cameroon ದೇಶ ಎಲ್ಲಿ ಎಂದರೆ ಅಫ್ರಿಕಾ ದೇಶದ ಒಬ್ಬ ಮಾಜಿ ಮಂತ್ರಿಯವರು ಭಾರತಕ್ಕೆ ಭೇಟಿ ನೀಡಿದ ಸಮಯದಲ್ಲಿ ಕರ್ನಾಟಕಕ್ಕೆ ಆಗಮಿಸಿದಾಗ, ನಮ್ಮ ದೇಶದಲ್ಲಿ ಮಹಿಳೆಯರಿಗೆ ಈ ರೀತಿಯ ಉತ್ತೇಜನ ಕೊಡುವಂತಹ ರೀತಿಯಲ್ಲಿ ನಮ್ಮಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮಲ್ಲಿ ಮಹಿಳೆಯರಿಗೆ ಸಾಕಷ್ಟು ಉದ್ಯೋಗದ ಕೊರತೆ ಇದೆ ಎಂದು ಹೇಳಿದ್ದಾರೆ.

(ಮುಂದು)

(142) 06.03.2025/6.50/ಟಿಸಿಹೆಚ್-ಎಕೆ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):-**

ಅವರ ದೇಶಕ್ಕೆ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಆದರೆ ವಿಶ್ವಕ್ಕೆಲ್ಲಾ ಪ್ರಚಾರ ಮಾಡುವಂಥದ್ದು ಇಲ್ಲ. ಅದು ಕೂಡ ತಪ್ಪು ವಿಶ್ವಸಂಸ್ಥೆಯ ಬಗ್ಗೆ ಬರೆದಿರುವುದು ಕೂಡ ತಪ್ಪು. ಆ ವ್ಯಕ್ತಿಯ ಹೆಸರು ಶ್ರೀ ಸುಲೋಮಿನಾ ವ್ಯಾಂಗ್ ಎನ್ನುವಂತಹ ವ್ಯಕ್ತಿ. ಅವರು ಕ್ಯಾಮ್‌ರೂನ್ ದೇಶದ ಒಬ್ಬ ಮಾಜಿ ಮಂತ್ರಿ. ಅವರು ವಿಶ್ವಸಂಸ್ಥೆಯ ಒಂದು ಉಪ ಸಮಿತಿಯ ಕೇವಲ ತಾತ್ಕಾಲಿಕವಾಗಿ ಅಧ್ಯಕ್ಷರಾಗಿದ್ದಾರೆ. ವಿಶ್ವಸಂಸ್ಥೆಯಲ್ಲಿ ಯಾರೂಬ್ಬರು ಕೂಡ ಇದರ ಬಗ್ಗೆ ಚರ್ಚೆ ಮಾಡಿಲ್ಲ. ಚಕಾರವನ್ನೂ ಕೂಡ ವಿಶ್ವಸಂಸ್ಥೆ ಎತ್ತಿಲ್ಲ.

**ವೈಸ್‌ಛೇರ್ಮನ್:-** ಶ್ರೀ ಗೋವಿಂದರಾಜು ರವರೇ, ತಾವು ಮಾತನಾಡಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅದು ಮುಗಿಯಿತೇ?

**ವೈಸ್‌ಛೇರ್ಮನ್:-** ಅದಕ್ಕೆ ಉತ್ತರ ಕೊಡುವಾಗ ಹೇಳುತ್ತಾರಂತೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ವಿಶ್ವಸಂಸ್ಥೆಯಿಂದ ಬಂದು ಸರ್ಕಾರವನ್ನು ಶ್ಲಾಘನೆ ಮಾಡಿದ್ದಾರೆ, ಸರ್ಕಾರಕ್ಕೆ ಅಂತರರಾಷ್ಟ್ರೀಯ ಖ್ಯಾತಿ ಬಂದಿದೆಯೆಂದು ಈ ರೀತಿಯ ಬೆಂಗಳೂರಿನಲ್ಲಿರತಕ್ಕ ಸಂಗತಿಯನ್ನು ಗೌರವಾನ್ವಿತ ರಾಜ್ಯಪಾಲರ ಮೂಲಕ ಹೇಳಿಸತಕ್ಕಂಥದ್ದು ಎಷ್ಟು ಸಮಂಜಸ. ಸರ್ಕಾರ, ಭಾರತದ ಸಂವಿಧಾನದ ಒಬ್ಬ Head ಗೆ ಮಾಡಿರತಕ್ಕಂಥ ಅಪಮಾನ. ಇದು ಭಾರತದ ಸಂವಿಧಾನಕ್ಕೆ ಮಾಡಿರತಕ್ಕಂಥ ಅಪಮಾನ. ಈ ರೀತಿ ತಪ್ಪು ಮಾಹಿತಿಯನ್ನು ಮುದ್ರಣ ಮಾಡಿ ಗೌರವಾನ್ವಿತ ರಾಜ್ಯಪಾಲರ ಮೂಲಕ ಓದಿಸುವುದು, ಗೌರವಾನ್ವಿತ ರಾಜ್ಯಪಾಲರ ಮೂಲಕ ಭಾಷಣ ಮಾಡಿಸುವುದು ಎಂದರೆ, ಇದು ಈ ಸದನವನ್ನು ದಾರಿ ತಪ್ಪಿಸಿದಂತಾಗುತ್ತದೆ. ಸರ್ಕಾರ ಏನು ತಿಳಿದುಕೊಂಡಿದೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)-** ಮಾನ್ಯ ಸಭಾಪತಿಯವರೇ, ಸರ್ಕಾರ ಇದಕ್ಕೆ ಕ್ಷಮೆ ಕೇಳಬೇಕು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ವೈಸ್‌ಛೇರ್ಮನ್:-** ಮಾನ್ಯ ಕೆ.ಎಸ್.ನವೀನ್ ರವರೇ, ತಮ್ಮದು ವಿಷಯ ಇದೆ, ನೀವು ಮಾತನಾಡುವಾಗ ಮಾತನಾಡಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಿಲ್ಲ. ಅವರದೇ ಒಂದು ವಿಷಯವನ್ನು ಹೇಳುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿಯ ವ್ಯಕ್ತಿಗಳ ಕೈಯಲ್ಲೇ ಬರೆಸಿ, ವಿಶ್ವಸಂಸ್ಥೆಯವರು ಬಂದು ಇಲ್ಲೇ ನಮ್ಮನ್ನು ಶ್ಲಾಘನೆ ಮಾಡಿದ್ದಾರೆಂದು ನೀವು ಕೊಟ್ಟರೆ ಇದು ಏನು ಅರ್ಥ? ಸರ್ಕಾರ ಯಾರ ಕಿವಿಗೆ ಹೂವು ಇಡಲು ನೋಡುತ್ತಿದೆ? ನೀವು ಏನು ಮಾಡಬೇಕು ಅಂದುಕೊಂಡಿದ್ದೀರಿ. ಏಕೆ ಸುಳ್ಳುಗಳನ್ನು ಹೇಳುತ್ತಿದ್ದೀರಿ. ಇದಕ್ಕೆ ಸರ್ಕಾರ ಮೊದಲು ಉತ್ತರ ಕೊಡಿಸಬೇಕು. ಇಲ್ಲದಿದ್ದರೆ ನಾವು ಚರ್ಚೆ ಮಾಡಿ ಪ್ರಯೋಜನ ಏನು ಹೇಳಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಜೀಂಪ್ರೇಮ್‌ಜಿ ಯೂನಿವರ್ಸಿಟಿಯಲ್ಲಿ ಒಬ್ಬ ಎಲ್.ಎಲ್.ಬಿ ಮಾಡಿರುವಂತಹ ವ್ಯಕ್ತಿ, ಇಲ್ಲಿನ ವ್ಯಕ್ತಿ ಅಂತರರಾಷ್ಟ್ರೀಯ ವಿಶ್ವಸಂಸ್ಥೆಗೆ ಹೋಗಬೇಕು ಎಂದು ಅವರು ಹೇಳುತ್ತಿರುವುದು. **(ಗೊಂದಲ)** ಮಾನ್ಯ ಮುಖ್ಯಮಂತ್ರಿಗಳಿಗೆ ವಿಶ್ವಸಂಸ್ಥೆ ಎಲ್ಲಿಂದ ಬಂತು.

**(ಗೊಂದಲ)**

**ವೈಸ್‌ಛೇರ್ಮನ್:-** ಎಲ್ಲರೂ ಕುಳಿತುಕೊಳ್ಳಿ ಮಾನ್ಯ ಸಭಾನಾಯಕರು ಉತ್ತರ ಹೇಳುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ಮಾನ್ಯ ವಿರೋಧಪಕ್ಷದ ಸದಸ್ಯರು ಹೇಳಿದ್ದನ್ನೆಲ್ಲಾ ನಾವು ಕೇಳಬೇಕೆ? **(ಗೊಂದಲ)** ನಮಗೆ ಅವರ ಹೇಳಿಕೆ ಕೊಡಿ.

**(ಗೊಂದಲ)**

**ವೈಸ್‌ಛೇರ್ಮನ್:-** ಶ್ರೀ ಐವನ್ ಡಿ'ಸೋಜಾ ರವರೇ, ಒಂದು ನಿಮಿಷ. ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

**ಶ್ರೀ ಎನ್.ಎಸ್.ಭೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ಬೇರೆ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. Sudden ಆಗಿ ಅವರಿಗೆ ಏನೋ ಬೇರೆ information ಸಿಕ್ಕಿರಬಹುದು, ಬಂದುಬಿಟ್ಟಿದ್ದಾರೆ. ಆದರೆ ಇವತ್ತು ರಾಜ್ಯ . . .

**ವೈಸ್‌ಛೇರ್ಮನ್:-** ಬೇರೆ ಬೇರೆ ವಿಷಯದ ಬಗ್ಗೆ ಚರ್ಚೆಯಾಗುತ್ತಿಲ್ಲ. ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗುತ್ತಿದೆ.

**ಶ್ರೀ ಎನ್.ಎಸ್.ಭೋಸರಾಜು:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಿಲ್ಲ. ಈಗ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆಯೆ?

**ವೈಸ್‌ಛೇರ್ಮನ್:-** ಹೌದು. ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೆ.

**ಶ್ರೀ ಎನ್.ಎಸ್.ಭೋಸರಾಜು:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಭಾಷಣ ಶುರು ಮಾಡಿದ್ದಾರೆಯೇ?

**ವೈಸ್‌ಛೇರ್ಮನ್:-** ಹೌದು.

**ಶ್ರೀ ಎನ್.ಎಸ್.ಭೋಸರಾಜು:-** ಮಾನ್ಯ ಸಭಾಪತಿಯವರೇ, ಆಯಿತು, ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದರೆ ಉತ್ತರ ಕೊಡುತ್ತೇವೆ, ಪರವಾಗಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಈ ಸದನಕ್ಕೆ ತಪ್ಪು ಸಂದೇಶ ಕೊಡುವುದಿಲ್ಲ.

**ಶ್ರೀ ಎನ್.ಎಸ್.ಭೋಸರಾಜು:-** ಮಾನ್ಯ ಸಭಾಪತಿಯವರೇ, ತಪ್ಪು ಏನೂ ಇಲ್ಲ. ಉತ್ತರ ಕೊಡುತ್ತೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ಇದು ನನ್ನ ಹತ್ತಿರ ಬೆಳಗ್ಗೆಯಿಂದ ಇದೆ, ನಾನು ಇದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಏಕೆಂದರೆ ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಾರದು. ಆದರೆ ಈಗ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಬಂದಾಗ ಇದನ್ನು ತೆಗೆದಿದ್ದೇನೆ.

**ಶ್ರೀ ಎನ್.ಎಸ್.ಭೋಸರಾಜು:-** ಮಾನ್ಯ ಸಭಾಪತಿಯವರೇ, ಆಯಿತು ಸ್ವಾಮಿ. ಈಗ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ಚರ್ಚೆಯಾದ ನಂತರ ಸರ್ಕಾರ ಉತ್ತರ ಕೊಡುತ್ತದೆ. ಅವರ ಏನೇ clarification ಇದ್ದರೂ ಕೂಡ ಅದರಲ್ಲಿ ಏನೇ ತಪ್ಪಿದ್ದರೂ ಕೂಡ ಅದನ್ನು ಯಾವ ರೀತಿಯಾಗಿ ಸರ್ಕಾರ ಯಾವ ವಿಷಯವನ್ನು ಯಾವ ಆಧಾರದ ಮೇಲೆ ಹೇಳಿದೆ ಎಂದು clarification ಕೊಡುತ್ತಾರೆ. ಮಧ್ಯೆ ಎದ್ದು ಇದಕ್ಕೆ ಈಗಲೇ ಕ್ಷಮೆ ಕೇಳುವುದು ಅಸಂಬದ್ಧ. ಸರ್ಕಾರ ಅದಕ್ಕೆ clarification ಕೊಡುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಕೂಡ ಇದ್ದಿರಿ. ನಾನು ಪ್ರಾರಂಭದಲ್ಲೇ ಮಹಾತ್ಮ ಗಾಂಧೀಜಿಯವರ ಒಂದು ವಿಚಾರ ಪ್ರಸ್ತಾಪ ಮಾಡಿದ ಮೇಲೆ ಅದರ next ವಿಚಾರ "ಚಂದ್ರನಿಲ್ಲದ ಬಾನಿನಲ್ಲಿ ಬೆಳದಿಂಗಳು ಹುಡುಕುವ ಕುರುಡನು ನಾನಿಲ್ಲಿ, ಕಂಡದ್ದು ಸುಳ್ಳು, ಹೇಳಿದ್ದು ಸುಳ್ಳು, ಇದರ ಜೊತೆಗೆ ನೋಡಿದ್ದು ಸುಳ್ಳು, ನಿಜ ಹೇಳಲು ಬಾಯಿಲ್ಲ, ಅಳುವ ಕಣ್‌ಗಳಿಗೆ ರಪ್ಪೆಗಳಿಲ್ಲ" ಎಂದು ಹೇಳಿದೆನು. ಅದೇ ಪುಸ್ತಕ, ಅಳುವ ಕಣ್‌ಗಳಿಗೆ ರೆಪ್ಪೆಗಳಿಲ್ಲ. ನಿಜ ಹೇಳುವುದಕ್ಕೆ ಬಾಯಿಲ್ಲ. ಅದಕ್ಕೆ ಇದೆಲ್ಲಾ ವಿಚಾರ ಹೇಳಿರುವುದು. ಅದಕ್ಕೆ ತನಿಖೆಯಾಗಲಿ, ಸರ್ಕಾರ ಉತ್ತರ ಕೊಡುವಾಗ ಕೊಡಲಿ, ಪರವಾಗಿಲ್ಲ. ನಮಗೇನು ತೊಂದರೆಯಿಲ್ಲ, ಬೇಜಾರು ಇಲ್ಲ.

**ವೈಸ್‌ಛೇರ್ಮನ್:-** ಶ್ರೀ ಗೋವಿಂದರಾಜು ರವರೇ, ತಾವು ಮಾತನಾಡಿ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಸ್ನೇಹಿತರು ಸಾಕಷ್ಟು ಮಾತನಾಡಿದ್ದಾರೆ. ನಾನು ಮಾತನಾಡುವುದಕ್ಕೂ ಮೊದಲು ನನ್ನ ಸ್ನೇಹಿತರಾದ ಶ್ರೀ ಐವನ್ ಡಿ'ಸೋಜಾರವರು ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸೂಚಿಸಿ, ಅವೊತ್ತು ಮಾತನಾಡಿದ್ದನ್ನು ಕೂಡ ನಾನು ಬಹಳ ಹೊತ್ತು ಆಲಿಸಿದ್ದೇನೆ. ಆ ಮಾತಿನ ಉದ್ದಕ್ಕೂ ನಮ್ಮ ಶಾಸಕರು ಈ ಗ್ಯಾರಂಟಿ ಯೋಜನೆಗಳ ಬಗ್ಗೆಯೇ ಬಹಳ ಹೊತ್ತು ಉಲ್ಲೇಖ ಮಾಡಿದರು. ಎರಡು ವರ್ಷದಲ್ಲಿ ಈ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ಯಾವ ರೀತಿ implement ಮಾಡಿದ್ದೇವೆ. ಈ ಯೋಜನೆಗಳಿಂದ ಜನರಿಗೆ ಎಷ್ಟು ಸಾವಿರ ಕೋಟಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದು ಬಿಟ್ಟರೆ ಸರ್ಕಾರ ಮಾಡಿದ್ದು ಕೂಡ ಅದನ್ನೇ ಎಂದು ನಾನಂತು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಸರ್ಕಾರ ಅಧಿಕಾರಕ್ಕೆ ಬಂದನಂತರ ಸುಮಾರು 2 ಲಕ್ಷ ಕೋಟಿಯಷ್ಟು ಸಾಲವನ್ನು ಮಾಡಿ, ಸುಮಾರು 70 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಗೌರವಾನ್ವಿತ ರಾಜ್ಯಪಾಲರಿಂದ ಕೂಡ ಅದನ್ನೇ ಹಲವಾರು ಬಾರಿ ಈ ಒಂದು ಪುಸ್ತಕದಲ್ಲಿ ಸುಮಾರು 117 ಪ್ಯಾರಾಗಳಲ್ಲಿ ಹೇಳಿಸಿದ್ದಾರೆ. ನಾನು ಹೇಳುವುದು ಇಷ್ಟೇ. ಈ ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ.... ನಾವು ಸಾಲ ಮಾಡುತ್ತೇವೆ. ಯಾವುದೇ ಒಂದು ಕುಟುಂಬದವರು ಬೆಳೆಯಬೇಕಾದರೆ ಸಾಲ ಮಾಡಲೇಬೇಕು. ಇವತ್ತಿನ ದಿವಸ ದೊಡ್ಡದೊಡ್ಡ ಕಂಪನಿಗಳು ಕೂಡ ಸಾಲ ಮಾಡಿ ಕೆಟ್ಟಿರುವಂಥವು ಕೂಡ ಇವೆ. ಸಾಲ ಮಾಡಿ ಚೆನ್ನಾಗಿ ಆಗಿರುವವರು ಕೂಡ ಇದ್ದಾರೆ. ಪ್ರತಿ ವರ್ಷ ನಮ್ಮ ಸರ್ಕಾರದ ಸಾಲ ಈ ರೀತಿ ಬೆಳೆಯುತ್ತಾ ಹೋದಲ್ಲಿ, ಅದಕ್ಕೆ ಕಟ್ಟುವಂತಹ ಬಡ್ಡಿ ಬೆಳೆಯುತ್ತಾ ಹೋದಲ್ಲಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಏನಾಗುತ್ತದೆ? ನಾನು ಬೇರೆ ಯಾವುದೇ ವಿಚಾರ ಮಾತನಾಡುವುದಿಲ್ಲ. ಈ ಸರ್ಕಾರ ಸಾಕಷ್ಟು ಬಾರಿ ಸಾಲ ಪಡೆದು ಬಡ್ಡಿ ಕಟ್ಟುವುದನ್ನು ನೋಡಿದರೆ, ಈ ಸಾಲದ ಪ್ರಮಾಣ ಇದೇ ರೀತಿ ಬೆಳೆದುಕೊಂಡು ಹೋದಲ್ಲಿ ಈ ಸಾಲವನ್ನು ತೀರಿಸುವವರು ಯಾರು? ಈ ಹಿಂದಿನ ಸರ್ಕಾರದವರು ಅಷ್ಟು ಲಕ್ಷ ಕೋಟಿ ಸಾಲ ಮಾಡಿ ಹೋದರು. ನಾವು ಅದನ್ನು ತೀರಿಸಬೇಕಲ್ಲ ಎಂದು ನಾವು ಒಂದಷ್ಟು ಲಕ್ಷ ಕೋಟಿ ಸಾಲ ಮಾಡಿ ಹೋದರೆ, ಇದು ಎಲ್ಲಿಗೆ ಮುಟ್ಟುತ್ತದೆ? ನಮ್ಮ ತೋಟಗಾರಿಕೆ ಸಚಿವರು ಕೂಡ ಬಹಳ ದೊಡ್ಡ ವ್ಯವಹಾರಸ್ಥರು.

ಮಾನ್ಯ ಶರವಣರವರೇ, ನೀವು ಮಾತನಾಡುವಾಗ ನಾವು ನಿಮ್ಮಹಾಗೆ ಮಾತನಾಡುತ್ತೇವೆಯೆ? ಮಾನ್ಯ ಸಭಾಪತಿಯವರೇ, ನನಗೆ ಯಾರಾದರೂ ಕೇಳಿಸಿಕೊಳ್ಳುವುದಾದರೆ ಮಾತ್ರ ಮಾತನಾಡುತ್ತೇನೆ. ಇಲ್ಲ ಮಾತನಾಡಿ ನನಗೇನು ಚಪ್ಪಾಳೆ ಗಿಟ್ಟಿಸಿಕೊಳ್ಳಬೇಕಾಗಿಲ್ಲ. ಅವರು ಈ ರೀತಿ center ನಲ್ಲಿ ವಟಾವಟಾ ಎಂದು ಮಾತನಾಡುತ್ತಿದ್ದರೆ ಎಲ್ಲಿ ಮಾತನಾಡುವುದಕ್ಕೆ ಆಗುತ್ತದೆ. ನೀವು ಅಷ್ಟೊತ್ತು ಮಾತನಾಡಿದ್ದೀರಿ. ನಾನು ಏನಾದರು center ನಲ್ಲಿ ತುಟಿ ಬಿಚ್ಚಿದ್ದೇನೆಯೇ?

ಮಾನ್ಯ ಸಭಾಪತಿಯವರೇ, ನಾನು ಕೂಡ ರೂ.5,000 ಸಾಲ ಮಾಡಿ ವ್ಯವಹಾರಕ್ಕೆ ಬಂದಂತವನು. ಕೇವಲ ರೂ.5,000 ಸಾಲದಿಂದ ಈ ಮಟ್ಟಕ್ಕೆ ಬೆಳೆದು ಬಂದಿದ್ದೇನೆ. ಯಾರೇ ಆಗಲಿ ಬೇಳೆಯಬೇಕಾದರೆ ಸಾಲ

ಮಾಡಲೇಬೇಕು. ಸಾಲ ಮಾಡುವ ಉದ್ದೇಶ, ನಾವು ಏತಕ್ಕೋಸ್ಕರ ಸಾಲ ಮಾಡುತ್ತಿದ್ದೇವೆಂದು ತಿಳಿದುಕೊಂಡರೆ ಮಾತ್ರ ಆ ಸಾಲ ಕೊಟ್ಟವರಿಗೂ ನಂಬಿಕೆ ಬಂದು ಹಣ ಕೂಡ ವಾಪಸ್ಸು ಹೋಗುತ್ತದೆ. ಆ ಸಾಲ ಮಾಡಿದ ವ್ಯಕ್ತಿ ಕೂಡ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ನಾನು ನಿಮಗೆ ಒಂದು ಸ್ಪಷ್ಟ ಸಂದೇಶ ಏನು ಕೊಡುತ್ತೇನೆಂದರೆ, ಈಗ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರಂಸಿಂಗ್ ರವರ ಕಾಲದಲ್ಲಿ ಸಾಲ ಮಾಡುವುದಕ್ಕೆ ಶುರು ಮಾಡಿದ್ದು ಎಂದು ಕೇಳಿದ್ದೇನೆ. ನನಗೆ ಸರಿಯಾಗಿ ಗೊತ್ತಿಲ್ಲ. ಅದಕ್ಕೆ ಮೊದಲೆಲ್ಲಾ ಸರ್ಕಾರಗಳು ಬಂದಿವೆ. ಈ ಭವ್ಯವಾದಂತಹ ವಿಧಾನಸೌಧವನ್ನು ಕಟ್ಟಿಸಿದಂತಹ ಶ್ರೀ ಕೆಂಗಲ್ ಹನುಮಂತಯ್ಯನವರಿಂದ ಹಿಡಿದು, ಸನ್ಮಾನ್ಯ ಕೆ.ಸಿ. ರೆಡ್ಡಿಯವರು ನಮ್ಮ ಜಿಲ್ಲೆಯ ಮುಖ್ಯಮಂತ್ರಿಯವರಾದಾಗಿನಿಂದ ಹಿಡಿದು, ಸ್ವಾತಂತ್ರ್ಯ ಬಂದ ನಂತರ ಎಂತಹ ಆರ್ಥಿಕ ಸಂಕಷ್ಟ ಬಂದರೂ ಕೂಡ ಇಷ್ಟೆಲ್ಲಾ ಬೆಳವಣಿಗೆ ಮಾಡಿ, ಏನೂ ಸಾಲ ಮಾಡದೇ ಶ್ರೀ ಧರಂಸಿಂಗ್ ರವರು 2004ನೇ ಸಾಲಿನಲ್ಲಿ ಮುಖ್ಯಮಂತ್ರಿಯಾಗುವವರೆಗೆ . . . ಅಂದರೆ 1947ರಲ್ಲಿ ನಮಗೆ ಸ್ವಾತಂತ್ರ್ಯ ಬಂದರೂ ಕೂಡ 2004ರವರೆಗೆ ಅಂದರೆ ಸುಮಾರು 57 ವರ್ಷಗಳ ಕಾಲ ಯಾವುದೇ ಸಾಲ ಮಾಡದೇ ಇದ್ದಂತಹ ಸರ್ಕಾರಗಳು 2004ರ ನಂತರ ರೂ.6,83,054 ಕೋಟಿಯನ್ನು ಇಲ್ಲಿಯವರೆಗೂ ಸಾಲ ಮಾಡಿದ್ದಾರೆ. ಈ ಒಂದು ಅಧಿವೇಶನದಲ್ಲೇ ಇನ್ನೊಂದು Supplementary Bill ಬಂದರೂ ಬರಬಹುದು. ಆ ಒಂದು ಮುಂಗಡ ಪತ್ರಕ್ಕೆ ಏನಾದರೂ ಮರ್ಯಾದೆ ಇದೆಯೇ? ಮುಂಗಡ ಪತ್ರ ಎಂದರೆ, ಒಂದು ಧರ್ಮ ಗ್ರಂಥಕ್ಕಿಂತಲೂ ಹೆಚ್ಚು. ಇವತ್ತಿನ ದಿವಸ ನಮ್ಮ ಭಾರತ ದೇಶದ ಸಂವಿಧಾನವನ್ನು ಪವಿತ್ರ ಗ್ರಂಥವೆಂದು ನಾವು ನಂಬಿ, ಈ ರಾಜ್ಯದ ಆಡಳಿತವನ್ನು ನಡೆಸುತ್ತಿದ್ದೇವೆ. ಸರ್ಕಾರದ ಹಣಕಾಸು ವ್ಯವಸ್ಥೆಗೆ ಹಿಡಿದಂತಹ ಕನ್ನಡಿ ಈ ಒಂದು ಮುಂಗಡ ಪತ್ರ.

**(ಮುಂದು)**

(143)6.3.2025/7.00/ಎಂ.ಎಂ-ಎ.ಕೆ (ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಗೋವಿಂದರಾಜು (ಮುಂದು):-**

ಅಂತಹ ಮುಂಗಡ ಪತ್ರವನ್ನು ಇಟ್ಟುಕೊಂಡು ನಮ್ಮ ರಾಜ್ಯದ ಪ್ರಥಮ ಪ್ರಜೆಯಾದ ಮಾನ್ಯ ಮುಖ್ಯಮಂತ್ರಿಯವರು ವರ್ಷಪೂರ್ತಿ ಆಡಳಿತ ಮಾಡುತ್ತಾರೆ. ನಾನು ಶಾಸಕನಾಗಿ ನಾಲ್ಕು ವರ್ಷವಾಯಿತು. ಪುಸ್ತಕದಲ್ಲಿ ಹೇಳುವುದೇ ಒಂದು, ವರ್ಷಪೂರ್ತಿ ನಡೆಯುವುದೇ ಒಂದು. ವಿಶೇಷ ಅನುದಾನ, ಶಾಸಕರಿಗೆ ವಿಶೇಷ ಅನುದಾನ, ಎಲ್ಲಾ ಸಂಪುಟದಲ್ಲಿ ವಿಶೇಷ ಅನುಮೋದನೆ ಈ ರೀತಿ ಆಗಿ ಆಗಿ ನಾವು ಸಂವಿಧಾನದಲ್ಲಿ ಸರ್ಕಾರಕ್ಕೆ ಕೊಟ್ಟಂತಹ ವಿಶೇಷ ಶಕ್ತಿ ದುರುಪಯೋಗವಾಗುತ್ತಿದೆ ಎಂದು ನಾನೊಬ್ಬ ವ್ಯವಹಾರ ಮಾಡಿಕೊಂಡು ಬೆಳೆದು ಬಂದವನಾಗಿ ಹೇಳುತ್ತೇನೆ. ಈ ಸರ್ಕಾರ ಇದೆ ರೀತಿ ಸಾಲಗಳನ್ನು ಮಾಡುತ್ತಾ ಹೋದರೆ ಖಂಡಿತವಾಗಿಯೂ ಇದು ಯಾವುದೇ ಹಣವನ್ನು ವಾಪಸ್ ಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತು ನೀವು ಮೂರು

ಬಿಲ್ಲುಗಳನ್ನು ತಂದಿದ್ದೀರಿ. The Karnataka Prohibition of Charging Exorbitant Interest (Amendment) Bill, 2025, The Karnataka Money Lenders (Amendment) Bill, 2025, ಗಿರವಿದಾರರ ತಿದ್ದುಪಡಿ ಇದೆಲ್ಲವನ್ನೂ ತಂದಿದ್ದೀರಿ. ಜನರು ಸಾಲ ಮಾಡಿ ಹಣವನ್ನು ವಾಪಸ್ ಕೊಡುವುದಕ್ಕಾಗದೇ ಆತ್ಮಹತ್ಯೆ ಹಾದಿ ಹಿಡಿದುಕೊಂಡಾಗ ಸರ್ಕಾರ ಪ್ರವೇಶ ಮಾಡಿ ಕಾನೂನು ಮುಖಾಂತರ ಸಾಲ ಕೊಟ್ಟವರಿಗೆ ನೀವು ಸಾಲಕ್ಕೆ ಜಾಸ್ತಿ ಬಡ್ಡಿ ಹಾಕಿದ್ದೀರಿ. ಅವರನ್ನು ಹಿಂಸೆ ಮಾಡಕೂಡದು ಎಂದು ಕಾನೂನು ಮಾಡಿ ಅವರನ್ನೆಲ್ಲಾ ನೀವು ತಡೆಯುತ್ತಿದ್ದೀರಿ. ಅಂದರೆ ಸಾಲ ಮಾಡುವುದು ಎಷ್ಟು ತಪ್ಪೋ ಸಾಲ ಕೊಡುವವನದ್ದು ಏನೂ ತಪ್ಪಿಲ್ಲ. ಸಾಲಗಾರರನ್ನು ತಾನೇ ಹುಡುಕಿಕೊಂಡು ಹೋಗುತ್ತಾರೆ. ಕೊಡುವವನ ಕೈ ಯಾವತ್ತು ಮೇಲೆ ಇರುತ್ತದೆ. ಎಂದು ನಮ್ಮಲ್ಲಿ ಒಂದು ಗಾದೆ ಹೇಳುತ್ತದೆ. ತೆಗೆದುಕೊಳ್ಳುವವನ ಕೈ ಯಾವಾಗಲೂ ಕೆಳಗಡೆ ಇರುತ್ತದೆ. ಆ ರೀತಿ ಸಾಲ ಕೊಡುವುದೇ ತಪ್ಪು ಎಂದು ಬಿಲ್ಲುಗಳ ಮುಖಾಂತರ ತಡೆಯುವುದಕ್ಕೆ ಹೊರಟಿದ್ದೀರಿ. ನೀವು ಸಾಲ ಮಾಡುವುದು ಯಾವುದು ಸರಿ? ಸಾಲ ಮಾಡುವುದಕ್ಕೆ ಕೊನೆ ಎಲ್ಲಿದೆ? ನಮಗೆ ಸಂವಿಧಾನಬದ್ಧವಾಗಿ ಅಧಿಕಾರ ಇದೆ. ಪ್ರತಿವರ್ಷ ಶೇ.20-25ರಷ್ಟು ಸಾಲ ಮಾಡಬಹುದು. ಮಹಾರಾಷ್ಟ್ರ, ತಮಿಳುನಾಡು ಬಿಟ್ಟರೆ ನಮ್ಮ ಕರ್ನಾಟಕ ರಾಜ್ಯ ಭಾರತದಲ್ಲಿಯೇ ಮೂರನೇ ಅತಿ ದೊಡ್ಡ ಆರ್ಥಿಕತೆ ಹೊಂದಿರುವಂತಹ ರಾಜ್ಯವಾಗಿದೆ. ನಮ್ಮಲ್ಲಿ ಸಾಕಷ್ಟು ಕೈಗಾರಿಕೆಗಳಿವೆ. ಐದು ಇಲಾಖೆಗಳಲ್ಲಿ ಬರುವಂತಹ ಹಣವನ್ನು ಇನ್ನೂ 22 ಜನ ಮಂತ್ರಿಗಳು ಆ ಹಣವನ್ನು ಖರ್ಚು ಮಾಡಿ ಜನರಿಗೆ ಸೇವೆ ಕೊಡಬೇಕೆನ್ನುವುದು ನಿಯಮ. ಆರ್ಥಿಕ ಖಾತೆ ಹೊತ್ತಿರುವ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ರಾಮಣ್ಣನವರು ಲಿಕ್ಕರ್ ಕ್ಷೇತ್ರದಲ್ಲಿ; ಮಾನ್ಯ ಸಚಿವರಾದ ಆರ್.ಬಿ.ತಿಮ್ಮಾಪುರ್‌ರವರ ಹೆಸರು ರಾಮಣ್ಣ ಅಲ್ಲವೇ.

**ಶ್ರೀ ಆರ್.ಬಿ. ತಿಮ್ಮಾಪುರ (ಅಬಕಾರಿ ಸಚಿವರು):-** ನನ್ನ ಹೆಸರು ತಿಮ್ಮಾಪುರ. ಆದರೆ ರಾಮಣ್ಣ ಎಂತಲೂ ಹೇಳುತ್ತಾರೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಚಿವರೇ, ಹೌದು. ನಾನು ಗೌರವಯುತವಾಗಿ ಅಣ್ಣ ಎಂದು ಹೇಳುತ್ತಿದ್ದೇನೆ. ತಾವು ಸಾಕಷ್ಟು ಲಾಭವನ್ನು ತಂದುಕೊಡುತ್ತಿದ್ದೀರಿ. ಅದೇ ರೀತಿ ನಮ್ಮ ಮಲ್ಲಿಕಾರ್ಜುನಣ್ಣನವರು ಮೈನಿಂಗ್‌ನಿಂದ ಆದಾಯ ತಂದುಕೊಡುತ್ತಿದ್ದಾರೆ. ಅದೇ ರೀತಿ ಮೋಟಾರ್ ವಾಹನಗಳಿಗೆ ಜಿ.ಎಸ್.ಟಿ. ಮುಖಾಂತರ ಮತ್ತು Road Tax ಮುಖಾಂತರ ಹಣವನ್ನು ತಂದು ಕೊಡುತ್ತಿದ್ದಾರೆ. ನಿಮ್ಮ ಸರ್ಕಾರ ಬಂದ ನಂತರ ಎಲ್ಲಾ ಇಲಾಖೆಗಳಲ್ಲಿಯೂ ಎಲ್ಲಾ ಬೆಲೆಗಳನ್ನೂ ಜಾಸ್ತಿ ಮಾಡಲಾಯಿತು. ನಿಮ್ಮಲ್ಲಂತೂ ಇನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಷ್ಟರಮಟ್ಟಿಗೆ ಇವತ್ತಿನ ದಿವಸ ಬೆಲೆ ಏರಿಕೆ ಮಾಡಿದ್ದಾಯಿತು. ಡೀಸೆಲ್, ಪೆಟ್ರೋಲ್ ಮೇಲೆ ಜಿ.ಎಸ್.ಟಿ. ಹಾಕಿದ್ದಾಯಿತು. ಇನ್ನು ಮೋಟಾರು ವಾಹನಗಳಲ್ಲಿ ಎಷ್ಟು ಬೇಕೋ ಅಷ್ಟು; ಇವತ್ತು ವಾಹನದ ಬೆಲೆ ಅಷ್ಟು ಹಣ ಮತ್ತು ಅದರ ಇನ್ನಷ್ಟು ಹಣವನ್ನು ಬರೀ ತೆರಿಗೆ ರೂಪದಲ್ಲಿಯೇ ಒಂದು ವಾಹನಕ್ಕೆ ಕೊಟ್ಟುಕೊಳ್ಳಬೇಕಾಯಿತು. ನಾನು ಒಂದು ಬೆನ್ಜ್ ಜಿ.ಎಲ್.ಎಸ್. ಎಂಬ ವಾಹನವನ್ನು ತೆಗೆದುಕೊಂಡೆ. ಅದರ ಅಸಲಿ ಬೆಲೆ ರೂ. 70 ಲಕ್ಷ. ಫ್ಯಾಕ್ಟರಿಯಿಂದ ನಮ್ಮ ದೇಶಕ್ಕೆ ಅದು ಬರುವುದು ರೂ.

70 ಲಕ್ಷಕ್ಕೆ. ಇವತ್ತಿನ ದಿವಸ ಆ ವಾಹನದ ಬೆಲೆ ನಮ್ಮ ದೇಶದಲ್ಲಿ ರೂ. 1,74,00,000/- ಅಂದರೆ ಶೇ.100ಕ್ಕಿಂತಲೂ ಜಾಸ್ತಿ ತೆರಿಗೆ ವಿಧಿಸುತ್ತಿದ್ದಾರೆ. ಅಬಕಾರಿ ಇಲಾಖೆಯಲ್ಲಿಯೂ ಅಷ್ಟೇ, ಏನು liquor ತಯಾರು ಮಾಡುತ್ತಾರೆ ಅದಕ್ಕಿಂತಲೂ ಜಾಸ್ತಿ ತೆರಿಗೆ ವಿಧಿಸುತ್ತಿದ್ದಾರೆ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ನಿಮ್ಮ ಷೇರು ನಿಮಗೆ ಬರುತ್ತದಲ್ಲವೇ? ಒಂದು ವಾಹನಕ್ಕೆ Life Tax ರೂ. 36ಲಕ್ಷ ಇದೆ.

**ಶ್ರೀ ಆರ್.ಬಿ. ತಿಮ್ಮಾಪುರ:-** ಮಾನ್ಯ ಗೋವಿಂದರಾಜುರವರೇ, ನಿಮ್ಮ ಷೇರು ಸರಿಯಾಗಿ ಬರುವುದಿಲ್ಲವೆಂದು ನಾವು ಅಡ್ಡ ಹಾಕುತ್ತಿದ್ದೇವೆ.

**ಶ್ರೀ ಗೋವಿಂದರಾಜು:-** ನಾನು ಹೇಳುವುದೇನೆಂದರೆ, ಇಷ್ಟೆಲ್ಲಾ ಆದಾಯ ಇದ್ದಾಗ್ಯೂ ಕೂಡ ನೀವು ಗ್ಯಾರಂಟಿಗಳ ಹೆಸರು ಹೇಳುತ್ತೀರಿ. ಗ್ಯಾರಂಟಿಗಳಿಗೆ ಖರ್ಚು ಮಾಡುವುದು ರೂ. 59,000/- ಕೋಟಿ. ಎಲ್ಲರಿಗೂ ಕೊಟ್ಟರೂ ಸಹ; ಅದು ಸಹ ನಾಲ್ಕು ತಿಂಗಳಿನಿಂದ ಕೊಟ್ಟಿಲ್ಲ. ಯಾವುದೇ ಇಲಾಖೆಗಳಿಗೆ ವಿಶೇಷ ಅನುದಾನ ಇಲ್ಲ. ನಾನು ನಿಮ್ಮನ್ನು ಕೇಳಿದೆ. ''ಸ್ವಾಮಿ, ಕೋಲಾರ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಿದ್ದು ರೈತರು ಜೀವನಕ್ಕೆ ಅದನ್ನೇ ನಂಬಿದ್ದಾರೆ. ಕೃಷಿ, ತೋಟಗಾರಿಕೆ, ರೇಷ್ಮೆ, ಹೂವು, ಹಣ್ಣು ಮತ್ತು ಹೈನುಗಾರಿಕೆ ಇಷ್ಟೆಲ್ಲಾ ಬೆಳೆಯುತ್ತೇವೆ. ನಮಗೇನಾದರೂ ಒಂದು ಅನುದಾನ ಕೊಡಿ'' ಎಂದರೆ ಹಣವೇ ಇಲ್ಲ, ಪರಿಕರಗಳನ್ನು ಕೇಳಿ ಬೇಕಾದರೆ ಕೊಡುತ್ತೇನೆ ಎಂದು ನೀವೇ ಹೇಳಿದ್ದೀರಿ. ಮೈನಿಂಗ್‌ನಲ್ಲಿ ಹಣ ತಂದುಕೊಡುವವರೂ ನೀವೇ. ರೈತರು ಬೆಳೆಯುವಂತಹ ಒಂದು ತೋಟಗಾರಿಕೆಗೆ; ನಮ್ಮ ರವಿಯವರು ಇಲ್ಲಿಯೇ ಇದ್ದಾರೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಈ 4-5 ಜಿಲ್ಲೆಗಳು ಬರೀ ತೋಟಗಾರಿಕೆ ರೇಷ್ಮೆ, ಹೈನುಗಾರಿಕೆ ಮೇಲೆ ನಿಂತಿರುವಂತಹ ಜಿಲ್ಲೆಗಳು. ಅದಕ್ಕೂ ಸಹ ಕೊಡುವುದಕ್ಕೆ ನಿಮ್ಮಲ್ಲಿ ಹಣ ಇಲ್ಲ. ಸಾಲ ಮಾಡಿ ಹಣವನ್ನು ಎಲ್ಲಿಗೆ ಕೊಡುತ್ತಿದ್ದೀರಿ?

**ವೈಸ್ ಛೇರ್ಮನ್:-** ಇನ್ನು ಐದು ನಿಮಿಷದಲ್ಲಿ conclude ಮಾಡಿ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಬೇಕಾದರೆ ನಾನು ಈಗಲೇ ಕುಳಿತುಕೊಳ್ಳುತ್ತೇನೆ. ಈ ಸರ್ಕಾರಗಳು ಇಷ್ಟು ಸಾಲವನ್ನು ನಮ್ಮ ತಲೆಯ ಮೇಲೆ ಹೊರಿಸುತ್ತಿವೆಯಲ್ಲಾ ಎಂದು ನನಗೆ ಬಹಳ ಹೊಟ್ಟೆ ಉರಿಯುತ್ತಿದೆ. ಪ್ರತಿಯೊಂದು ಪ್ರಜೆ ಮೇಲೆ; ಹುಟ್ಟಿದ ಮಗು ಮೇಲೆ ರೂ.1,10,000/- ಸಾಲ ರಾಜ್ಯ ಸರ್ಕಾರದ್ದಿದೆ. ರೂ. 1,10,000/-ಕ್ಕಿಂತಲೂ ಹೆಚ್ಚು ಸಾಲ ಕೇಂದ್ರ ಸರ್ಕಾರದ್ದಿದೆ. ಅಂದರೆ ಹುಟ್ಟಿದ ಮಗು ಮೇಲೆ ರೂ. 2,25,000/- ತನಕ ಸಾಲ ಇದೆ. ನನಗೆ ಮೊಮ್ಮಗ ಆಗಿದ್ದಾನೆ ಅವನ ತಲೆ ಮೇಲೆ ರೂ. 2,25,000/- ಸಾಲವನ್ನು ಸರ್ಕಾರ ಹೊರೆಸಿದೆ. ಜನರಿಂದ ಜನರಿಗಾಗಿ ಬರುವಂತಹ ಸರ್ಕಾರಗಳು ಈ ರೀತಿ ಸಾಲ ಮಾಡಿ ಜನರ ತಲೆ ಮೇಲೆ ಸಾಲ ಹೊರೆಸಿದರೆ ಅದನ್ನು ತೀರಿಸುವುದು ಯಾರು ಎಂದು ಕೇಳುತ್ತಿದ್ದೇನೆ. ಇವತ್ತು ಸನ್ಮಾನ್ಯ ಸಿದ್ದರಾಮಯ್ಯನವರು 14 ಬಾರಿ ಬಜೆಟ್ ಮಂಡಿಸಿದ್ದಾರೆ. ನಾಳೆ 15ನೇ ಬಜೆಟ್ ಅನ್ನು ಮಂಡನೆ ಮಾಡುತ್ತಾರೆ. ಅವರನ್ನು ಆರ್ಥಿಕ ಮಂತ್ರಿ ಮಾಡಿದಂತಹ ಸನ್ಮಾನ್ಯ ಹೆಚ್.ಡಿ. ದೇವೇಗೌಡರು ಅವರಿಗೆ ಇಷ್ಟವಿಲ್ಲದಿದ್ದರೂ ಕೂಡ ಆರ್ಥಿಕ ಮಂತ್ರಿ ಮಾಡಿದರು. ಇಂತಹ ಘನತೆವೆತ್ತ ಹಣಕಾಸು

ಖಾತೆಯನ್ನು ಹೊಂದಿರುವಂತಹ ಸಿದ್ದರಾಮಯ್ಯನವರ ಕಾಲದಲ್ಲೂ ಸಹ ಈ ರೀತಿ ಸಾಲ ಆದರೆ ಮುಂದಕ್ಕೆ ನಮ್ಮ ರಾಜ್ಯ ಯಾವ ಕಡೆ ಹೋಗುತ್ತದೆ? ವರ್ಷಕ್ಕೆ ರೂ. 37,000/- ಕೋಟಿ ಬಡ್ಡಿಯನ್ನು installment ಅನ್ನು ಕಟ್ಟಬೇಕು. ಸಾಲ ತೀರಿಸುವುದಕ್ಕು ಕೂಡ ಇವರು ಸಾಲ ಮಾಡಬೇಕು. ಸಾಲ ತೀರಿಸುವುದಕ್ಕೂ, ಬಡ್ಡಿ ಕಟ್ಟುವುದಕ್ಕು ಕೂಡ ಇವರು ಸಾಲ ಮಾಡುವಂತಹ ಪರಿಸ್ಥಿತಿಯಾದರೆ ಇನ್ನು ಮುಂದಕ್ಕೆ ಯಾವುದೇ ಇಲಾಖೆಯಲ್ಲಿ ಬೆಲೆಗಳನ್ನು ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ ತಿಮ್ಮಾಪುರ್ ಸಾಹೇಬರೇ. ಈಗಾಗಲೇ ಜನರು ರೋಸಿ ಹೋಗಿದ್ದಾರೆ. ಇವತ್ತು Renewal Fees, ಜಿ.ಎಸ್.ಟಿ., ಜೊತೆಗೆ ಬೆಲೆ ಏರಿಕೆ, ಎಲ್ಲಾ ಮಾಡಿದರೂ ಇವತ್ತಿನ ದಿವಸ; ನಮ್ಮ ಕಂದಾಯ ಮಂತ್ರಿಗಳು ಬಹಳ ಒಳ್ಳೆಯ ಬುದ್ಧಿವಂತ ಮಂತ್ರಿಗಳು. ಆದರೆ ಅವರ ಬುದ್ಧಿವಂತಿಕೆ ಎಲ್ಲಾ ಸರ್ಕಾರಕ್ಕೆ ತಂದು ತುಂಬಿ ತುಂಬಿ ಇವತ್ತು ಸಾಲದ ಪ್ರಮಾಣ ಏರುತ್ತಿದೆ. 10 ರೂಪಾಯಿ ಇದ್ದಂತಹ ಸ್ಟಾಂಪ್ ಪೇಪರ್ ಇವತ್ತು 100 ರೂಪಾಯಿ ಆಯಿತು. ಸ್ಟಾಂಪ್ ಪೇಪರ್ 500 ರೂಪಾಯಿ ಆಯಿತು. ಶೇ.20 ರಿಂದ ಶೇ.125 ವರೆಗೆ Guidance Value ಜಾಸ್ತಿ ಮಾಡಿದರು. ಆದಾಯ ಜಾಸ್ತಿಯಾಗಿದ್ದೆಲ್ಲಾ ಎಲ್ಲಿಗೆ ಹೋಗುತ್ತಿದೆ? ಇದನ್ನೆಲ್ಲಾ ನಾವು ಹೇಗೆ assessment ಮಾಡುವುದು? ನಾನು ರೂ. 5,000/- ಸಾಲ ಮಾಡಿ ವ್ಯವಹಾರವನ್ನು ಪ್ರಾರಂಭಿಸಿದ ಮೇಲೆ ಇವತ್ತು ನನ್ನ ಸ್ವಂತ ದುಡಿಮೆಯಿಂದ ಸುಮಾರು 750/- ಕೋಟಿ ರೂಪಾಯಿಗಳಷ್ಟು ಹಣವನ್ನು ದುಡಿದು, ಸಾಲವನ್ನೂ ಮಾಡಿ ಅವರಿಗೆ ಬಡ್ಡಿಯನ್ನೂ ಕಟ್ಟಿ ಸಾಲವನ್ನೂ ತೀರಿಸಿ ಈ ಮಟ್ಟಕ್ಕೆ ಬೆಳೆದಿದ್ದೇನೆ. ಇದನ್ನು ನಾವು ಯೋಚನೆ ಮಾಡಬಾರದೇ? ಅಂದರೆ ನಾವು ಏನು ಹಣವನ್ನು ಖರ್ಚು ಮಾಡುತ್ತೇವೆ ಅದಕ್ಕೆ Capital Expenditure ಗೆ major share ಹಾಕಬೇಕು ಎನ್ನುವುದು ಸರ್ಕಾರಕ್ಕೆ ಇಲ್ಲಿಯವರೆಗೂ ಏತಕ್ಕೆ ತಿಳುವಳಿಕೆ ಬರಲಿಲ್ಲ? ನಮ್ಮಲ್ಲಿ ಲೆಕ್ಕ ಇದೆ ಬುಕ್ಕಲ್ಲಿ, ದುಡ್ಡಿದೆ ಎಲ್ಲಿ ಎಂದು ಹೇಳುತ್ತಾರೆ. ಲೆಕ್ಕ ಬುಕ್ಕಲ್ಲಿರುತ್ತದೆ, ದುಡ್ಡೆಲ್ಲಿದೆ? ದುಡ್ಡು ತೀರಿಸಬೇಕಲ್ಲವೇ? ನೀವು ಸರ್ಕಾರವನ್ನು ನಡೆಸುತ್ತೀರಿ. 2025ಕ್ಕೆ ನಿಮ್ಮ ಅಕೌಂಟ್ ಕ್ಲೋಸ್ ಆಗುತ್ತದೆ. ನಂತರ ಇನ್ನೊಂದು ಸರ್ಕಾರ ಬರುತ್ತದೆ. ನಾವೇನು ಮಾಡುವುದಕ್ಕಾಗುತ್ತದೆ ಹಿಂದಿನ ಸರ್ಕಾರ ಬಿಟ್ಟು ಹೋಗಿದ್ದಾರೆ. ಈ ರೀತಿ ಆಗುತ್ತಾ ಹೋದರೆ ನಮ್ಮಲ್ಲಿ ಅಭಿವೃದ್ಧಿಯಾಗದೇ ಒಂದು ಇಲಾಖೆಯಲ್ಲಿಯೂ ಕೂಡ ಒಬ್ಬರಿಗೂ ಒಂದು ರೂಪಾಯಿಯ ಅನುದಾನ ಕೊಟ್ಟಿಲ್ಲ. ನಮ್ಮ ಶ್ರೀ ಟಿ.ಎ. ಶರವಣರವರು ನಿನ್ನೆ ಲೋಕೋಪಯೋಗಿ ಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ನಮ್ಮಂತಹವರಾದರೆ ಮೊದಲು ಸಾಲ ತೀರಿಸಿ ಹೊರಟುಬಿಡೋಣ ಎಂದು ಅನಿಸುತ್ತಿತ್ತು. ರೂ. 8,800/- ಕೋಟಿ ಬಿಲ್ ಬಾಕಿ ಇದ್ದುಕೊಂಡು ಎಷ್ಟು ಒತ್ತಾಯ ಮಾಡಿದರೂ ಕೂಡ ಯಾವತ್ತು ಕೊಡುತ್ತೀರಿ ಎಂದರೆ ಹೇಳುವುದಕ್ಕೆ ಅವರಿಗೆ ಧೈರ್ಯ ಇಲ್ಲ. ಒಬ್ಬ ಪಿ.ಡಬ್ಲ್ಯು.ಡಿ. ಮಂತ್ರಿಯಾಗಿ ಇಷ್ಟು ಹಣ ಬಾಕಿ ಇದೆ ಈ ಹಣವನ್ನು ಯಾವಾಗ ಕೊಡುತ್ತೀರಿ ಎಂದರೆ ಹೇಳುವುದಕ್ಕೆ ಅವರಿಗೆ ಧೈರ್ಯ ಇಲ್ಲ. ಅಂದರೆ ಹಣಕಾಸು ಇಲಾಖೆಯವರು ಹಣ ಕೊಡಬೇಕಲ್ಲವೇ. ಮಾನ್ಯ ಸಚಿವರಾದ ಮಲ್ಲಿಕಾರ್ಜುನ್‌ರವರು ಸಹ ಬಹಳ ಕಷ್ಟಪಟ್ಟು ಬೆಳೆದು ಬಂದವರು. ಯಾರೇ ಆಗಲಿ ಇವತ್ತು ಕಾಂಗ್ರೆಸ್ ಸರ್ಕಾರ; ಆ ಕಡೆ ಕುಳಿತಿರುವವರೂ ನಮ್ಮ ಸ್ನೇಹಿತರೇ.

(ಮುಂದು)

**(144) 06.03.2025 (7.10) ಹೆಚ್‌ವಿ.ಆರ್‌ಎನ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಗೋವಿಂದರಾಜು(ಮುಂದು):-**

ಸನ್ಮಾನ್ಯ ಸಭಾಪತಿಯವರೇ, "ನೂರು ವರ್ಷ ಇತಿಹಾಸವಿರುವ ಕಾಂಗ್ರೆಸ್ ಪಕ್ಷದ ಇತಿಹಾಸದಲ್ಲಿ ಸ್ವಾತಂತ್ರ್ಯ ಭಾರತದ ಮೊದಲನೆಯ ಆಯವ್ಯಯದ ಗಾತ್ರ ಆಗಿನ ಕಾಲಕ್ಕೆ 197 ಕೋಟಿ ರೂಪಾಯಿಗಳಾಗಿತ್ತು ಮತ್ತು ಕರ್ನಾಟಕ ರಾಜ್ಯದ ಆಯವ್ಯಯದ ಗಾತ್ರ 21 ಕೋಟಿ ರೂಪಾಯಿಗಳಾಗಿತ್ತು" ಎಂದು ಮಾನ್ಯ ಸಿ.ಟಿ.ರವಿಯವರು ಹೇಳಿದ್ದರು. ನನಗೆ ಸರಿಯಾಗಿ ಮಾಹಿತಿ ಇಲ್ಲ. ಅಷ್ಟು ಪ್ರಮಾಣದಲ್ಲಿದ್ದ ಆಯವ್ಯಯದ ಗಾತ್ರ ಇವತ್ತು ಅದರ ಮುಂದೆ ಎಷ್ಟು ಸೊನ್ನೆಗಳನ್ನು ಸೇರಿಸಿದರೂ ಸಹ ಸಾಲದ ಪ್ರಮಾಣ ಕಡಿಮೆಯಾಗುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಜಮೀನು ಮತ್ತು ಚಿನ್ನದ ಬೆಲೆ ಏತಕ್ಕೋಸ್ಕರ ಹೆಚ್ಚಾಗುತ್ತಿದೆ? ಒಂದು ಲಕ್ಷ ರೂಪಾಯಿಗಳಾಗಿದ್ದ ಜಮೀನಿನ ಬೆಲೆ ಇವತ್ತು ಒಂದು ಕೋಟಿ ರೂಪಾಯಿಗಳಾಗಿದೆ. ನಾನು 2004ರಲ್ಲಿ 79 ಸಾವಿರ ರೂಪಾಯಿಗಳಿಗೆ ಒಂದು ಜಮೀನನ್ನು ಖರೀದಿ ಮಾಡಿದ್ದೆ. ಇವತ್ತು ಅದರ ಬೆಲೆ 1 ಕೋಟಿ ರೂಪಾಯಿಗಳಾಗಿದೆ. ಇದಕ್ಕೆ ಕಾರಣವೇನು? ಎಲ್ಲಿಂದ ಬಂತು ಹಣ? ನಮ್ಮಲ್ಲಿ ಆರ್ಥಿಕತೆ ಎನ್ನುವುದು ಇಲ್ಲವೇ? ನಮ್ಮಲ್ಲಿ ಆರ್ಥಿಕತೆ ಇಲ್ಲದಿದ್ದರೇ, ಜಮೀನು ಮತ್ತು ಬಂಗಾರದ ಬೆಲೆ ಇಷ್ಟು ದುಬಾರಿ ಯಾಕಾಗುತ್ತಿತ್ತು? ನಿನ್ನೆ ನ್ಯೂಸ್‌ನಲ್ಲಿ ನೋಡುತ್ತಿದ್ದೆ, ಯಾರೋ ಒಬ್ಬ ಸಿನಿಮಾ ತಾರೆ, ಸುಮಾರು 15 ಕೆ.ಜಿ. ಬಂಗಾರವನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ಕಳ್ಳ ಸಾಗಾಣಿಕೆ ಮಾಡುತ್ತಿದ್ದರು. ಈ ಬಂಗಾರವೆಲ್ಲ ಎಲ್ಲಿಗೆ ಹೋಗುತ್ತಿದೆ? ನಮ್ಮಲ್ಲಿ ಆದಾಯ ಇಲ್ಲವೇ? ಇಷ್ಟು ಆದಾಯವಿದ್ದರೂ ಸಹ ನಾವು ಇವತ್ತು ಸಾಲದ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಈಗ ಇವರೆಲ್ಲರೂ "ಆ ಅಭಿವೃದ್ಧಿ ಮಾಡುತ್ತಿದ್ದೇವೆ...., ಈ ಅಭಿವೃದ್ಧಿ ಮಾಡುತ್ತಿದ್ದೇವೆ" ಎಂದು ಹೇಳಿ ಇಷ್ಟೊಂದು ಸಾಲವನ್ನು ಮಾಡಿದ್ದಾರೆ. ಸಾಯಲಿ.

ಹಾಲು ಉತ್ಪಾದಕರಿಗೆ ಬಾಕಿ ಇರುವಂತಹ ಸುಮಾರು 758 ಕೋಟಿ ರೂಪಾಯಿಗಳ ಪ್ರೋತ್ಸಾಹಧನವನ್ನು ಕೊಡಲಿಲ್ಲವೆಂದು ನಿನ್ನೆ ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರೊಂದಿಗೆ ಜಟಾಪಟಿ ನಡೆದಿತ್ತು.

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು ಸಂಸದೀಯ ಮತ್ತು ಶಾಸನ, ಪ್ರವಾಸೋದ್ಯಮ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾರಿಗೆ "ಸಾಯಲಿ" ಎಂದು ಹೇಳುತ್ತಿದ್ದಾರೆ?

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಸಾಲ ಮಾಡಿಕೊಂಡು ಸಾಯಲಿ, ಕೊಡಬೇಕಾಗಿರುವ ದುಡ್ಡನ್ನಾದರೂ ಕೊಡಲಿ ಎನ್ನುವುದು ನನ್ನ ಭಾವನೆಯಾಗಿದೆ.

**ವೈಸ್‌ಛೇರ್ಮನ್:-** ಮಾನ್ಯ ಗೋವಿಂದರಾಜುರವರೇ, ಇನ್ನೂ 5 ನಿಮಿಷದಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಬೇಕಾಗಿದೆ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಇನ್ನು 05 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹಿಂದೆ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ

ಸರ್ಕಾರದಲ್ಲಿ ಆರ್.ಡಿ.ಪಿ.ಆರ್., ಮಂತ್ರಿಗಳಾಗಿದ್ದರು. ಆಗ ನಾನು ಇನ್ನೂ ರಾಜಕೀಯಕ್ಕೆ ಬಂದಿರಲಿಲ್ಲ. ಈ ಸರ್ಕಾರದಲ್ಲಿ ಗ್ಯಾರಂಟಿಗಳ ಜಪ ಮಾಡಲಾಗುತ್ತಿದೆ. ಹಿಂದಿನ ಸರ್ಕಾರದಲ್ಲಿ, "ಆ ಭಾಗ್ಯ... ಈ ಭಾಗ್ಯ" ಎಂದು ಸುಮಾರು 5 ವರ್ಷಗಳ ಕಾಲ ಭಾಗ್ಯಗಳ ಜಪ ಮಾಡಲಾಗಿತ್ತು. ಆಗ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳಿದ ಮಾತನ್ನು ನಾನು ಇಲ್ಲಿಯವರೆವಿಗೂ ಮರೆತಿಲ್ಲ. "ನಾವು ಜನರನ್ನು ಪರಾವಲಂಬಿಗಳನ್ನಾಗಿ ಮಾಡುತ್ತಿದ್ದೇವೆ; ಅವರು ಅವಲಂಬಿತರಾದರೇ ಸ್ವಂತ ದುಡಿಮೆ ಮಾಡುವುದಕ್ಕೆ ಆಗದೇ, ಸರ್ಕಾರದ ಮೇಲೆಯೇ ಅವಲಂಬನೆಯಾಗುವಂತೆ ಮಾಡುತ್ತಿದ್ದೇವೆ. ಇದು ತಪ್ಪು" ಎನ್ನುವ ಮಾತನ್ನು ಹೇಳಿದ್ದರು. ನಾನು ಆರೋಪ ಮಾಡುತ್ತಿಲ್ಲ. ಇದು ನೂರಕ್ಕೆ ನೂರರಷ್ಟು ಸತ್ಯದ ಮಾತಾಗಿದೆ. ಇವತ್ತಿನ ದಿವಸ ಗೃಹಲಕ್ಷ್ಮಿ, ಉಚಿತ ಬಸ್ ಸೌಲಭ್ಯ ಮುಂತಾದ ಗ್ಯಾರಂಟಿಗಳನ್ನು ಈ ಸರ್ಕಾರ ನೀಡಿದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕಾ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾವು ನೀಡುತ್ತಿರುವ ಉಚಿತ ಬಸ್ ಸೌಲಭ್ಯದಿಂದಾಗಿ ಸರ್ಕಾರಕ್ಕೆ ಆದಾಯ ಬರುತ್ತಿದೆ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಅವರು ಏನಾದರೂ ಹೇಳಲಿ; ಸಾಲ ಯಾಕೆ ಹೆಚ್ಚಾಗಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಇವರು ನೀಡುತ್ತಿರುವ ಗ್ಯಾರಂಟಿಗಳಿಂದ ವರಮಾನ ಬರುತ್ತಿದೆ ಎನ್ನುವುದಾದರೇ, ಸಾಲ ಯಾಕೆ ಎರಡು ಲಕ್ಷ ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ಈ ಸರ್ಕಾರ ಎನು ಅಭಿವೃದ್ಧಿ ಮಾಡಿದೆ ಎನ್ನುವುದನ್ನು ಹೇಳಬೇಕಾಗುತ್ತದೆ, ಯಾವ ನೀರಾವರಿ ಯೋಜನೆಗಳಿಗೆ ಹಣವನ್ನು ಕೊಟ್ಟಿದೆ? ಎಲ್ಲಿ ಹೊಸ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ? ಆರ್.ಡಿ.ಪಿ.ಆರ್., ಇಲಾಖೆಗೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ? ಎನ್ನುವ ಪ್ರಶ್ನೆಗಳಿಗೆ ಅವರು ಉತ್ತರವನ್ನು ಕೊಡಬೇಕಾಗಿದೆ. ಎಲ್ಲೆಲ್ಲಿ ಅಭಿವೃದ್ಧಿ ಕೆಲಸಗಳು ನಡೆದಿವೆ ಎನ್ನುವುದನ್ನು ಅವರೇ ಹೇಳಬೇಕಾಗಿದೆ. ಜನರು ಬಂದು ಕಣ್ಣೀರು ಹಾಕುತ್ತಿದ್ದಾರೆ. ರಸ್ತೆಗಳೆಂದು ಹೇಳುವ ಕಡೆಗಳಲ್ಲಿ ಮೊಣಕಾಲು ಉದ್ದ ಹಳ್ಳಗಳಿವೆ. ಈಗ ಹೊಸದಾಗಿ "ಗ್ರಾಮ ಪಥ" ಎನ್ನುವ ಯೋಜನೆ ಪ್ರಾರಂಭವಾಗಿದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣ ಮತ್ತು ಆಹಾರವನ್ನು ಜನರಿಗೆ ಉಚಿತವಾಗಿ ನೀಡುವುದು ಸರ್ಕಾರದ ಕರ್ತವ್ಯವಾಗಿದೆ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣವನ್ನು ಉಚಿತವಾಗಿ ನೀಡುವುದು ಸರ್ಕಾರದ ಕರ್ತವ್ಯವೆಂದು ಅವರು ಹೇಳುತ್ತಿದ್ದಾರೆ. ಮಾನ್ಯ ಪಶುಸಂಗೋಪನಾ ಸಚಿವರು ಮಾನ್ಯ ಸದಸ್ಯರ ಒಂದು ಪ್ರಶ್ನೆಗೆ ಉತ್ತರವನ್ನು ನೀಡುತ್ತಾ, "ಸುಮಾರು 10,818 ಪಶುವೈದ್ಯರ ಹುದ್ದೆಗಳು ಖಾಲಿ ಇವೆ" ಎಂದು ಹೇಳಿದ್ದಾರೆ. ಅಂದರೇ, ಸುಮಾರು ಶೇಕಡಾ 60ರಷ್ಟು ಹುದ್ದೆಗಳು ಖಾಲಿ ಇವೆ. ಶೇಕಡಾ 40ರಷ್ಟು ಪಶುವೈದ್ಯರನ್ನು ನೇಮಕಾತಿ ಮಾಡಲಾಗಿದೆ. ಎಲ್ಲಾ ಇಲಾಖೆಗಳಲ್ಲಿಯೂ ಶೇಕಡಾ 60ರಷ್ಟು ಹುದ್ದೆಗಳು ಖಾಲಿ ಇವೆ. ಈ ಸರ್ಕಾರ ಜನರಿಗೆ ಎಲ್ಲ ಗ್ಯಾರಂಟಿಗಳನ್ನು ಮತ್ತು ಯೋಜನೆಗಳನ್ನು ಕೊಟ್ಟಿದೆ. ಕೊಡಲಿ; ಆದರೆ,

ಕೆಲಸ ಮಾಡುವುದಕ್ಕೆ ಜನರು ಸಿಗುತ್ತಿಲ್ಲ. ಜನ ಅಷ್ಟೋ ಇಷ್ಟೋ ದುಡಿಯುವಂತಹ ಹಣವನ್ನು ತೆಗೆದುಕೊಂಡು ಹೋಗಿ ಸಂಜೆ ನಮ್ಮ ತಿಮ್ಮಾಪುರ ಅವರ ಇಲಾಖೆಯ ಹುಂಡಿಗೆ ಹಾಕುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಸ್.ಮಲ್ಲಿಕಾರ್ಜುನರವರ ಬಳಿಯೂ ಸಾವಿರಾರು ಜನರು ಕೆಲಸ ಮಾಡುತ್ತಿದ್ದಾರೆ. ಇವತ್ತಿನ ದಿವಸ ನಮಗೆ ಕೂಲಿ ಕಾರ್ಮಿಕರು ಸಿಗುತ್ತಿದ್ದಾರೆಯೇ? ಅವರುಗಳು ಕೆಲಸಕ್ಕೆ ಬರುತ್ತಿದ್ದಾರೆಯೇ ಎನ್ನುವುದನ್ನು ಅವರೇ ಹೇಳಬೇಕಾಗಿದೆ. ಗ್ಯಾರಂಟಿಗಳಿಂದ ಆರ್ಥಿಕತೆ ಹೆಚ್ಚಾಗಿದೆ ಎನ್ನುವ ಅವರ ಮಾತನ್ನು ನಾನು ಒಪ್ಪುತ್ತೇನೆ. ಸರ್ಕಾರಕ್ಕೆ ಬರಬೇಕಾಗಿರುವ ಆದಾಯ ಹೆಚ್ಚಾಗಿದ್ದರೆ, ಜಿ.ಎಸ್.ಟಿ. ಹೆಚ್ಚಾಗಿದ್ದರೆ, ಈ ಸರ್ಕಾರ ಸಾಲ ಮಾಡುವ ಬದಲಿಗೆ ಸಾಲ ತೀರಿಸಿದ್ದರೇ, ಆಗ ಎಲ್ಲವನ್ನೂ ಅವರು ಉಚಿತವಾಗಿ ನೀಡಿದ್ದರೂ ನಮ್ಮ ಅಭ್ಯಂತರವೇನು ಇರುತ್ತಿರಲಿಲ್ಲ. ನಾವು ಒಪ್ಪುತ್ತಿದ್ದೆವು. ಐವತ್ತೊಂಭತ್ತು ಸಾವಿರ ಕೋಟಿ ರೂಪಾಯಿಗಳಲ್ಲ; ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಉಚಿತವಾಗಿ ಕೊಡಲಿ.

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡಬೇಕು. ಮಾನ್ಯ ಗೋವಿಂದರಾಜುರವರು ಗ್ಯಾರಂಟಿಗಳ ವಿರೋಧಿಗಳೇ?

**ವೈಸ್ ಛೇರ್ಮನ್:-** ಮಾನ್ಯ ಎಂ.ನಾಗರಾಜುರವರೇ, ಮಾನ್ಯ ಗೋವಿಂದರಾಜುರವರು ಯೀಲ್ಡ್ ಆಗಿಲ್ಲ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ. ಗ್ಯಾರಂಟಿಗಳಿಗೆ ನಮ್ಮ ವಿರೋಧವಿಲ್ಲ. ನಾನು ಹೇಳಿರುವುದರಲ್ಲಿ ಅವರಿಗೆ ಏನಾದರೂ ತೊಂದರೆ ಇದ್ದರೇ ಹೇಳಲಿ. ನಾನು ಮಾತನಾಡಿರುವುದರಲ್ಲಿ ಏನಾದರು ತಪ್ಪಿದ್ದರೇ ಅವರು ಏನು ಶಿಕ್ಷೆ ಕೊಟ್ಟರೂ ಅನುಭವಿಸುವುದಕ್ಕೆ ಸಿದ್ಧನಿದ್ದೇನೆ.

**ವೈಸ್ ಛೇರ್ಮನ್:-** ಮಾನ್ಯ ಗೋವಿಂದರಾಜುರವರೇ, ನೀವು ಪೀಠವನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ನಾನೊಬ್ಬ ಕೃಷಿಕ ನಮ್ಮ ತೋಟ, ಹೊಲ ಮತ್ತು ಗದ್ದೆಗಳಲ್ಲಿ ಸುಮಾರು ೩೦೦ ರಿಂದ ೪೦೦ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ನಾವು ಎಷ್ಟೇ ಸೌಲಭ್ಯಗಳನ್ನು ನೀಡಿದರೂ ಸಹ ಕೆಲಸ ಮಾಡುವುದಕ್ಕೆ ಕಾರ್ಮಿಕರು ಸಿಗುತ್ತಿಲ್ಲ. ಈ ಸರ್ಕಾರದವರು ಏನು ಗ್ಯಾರಂಟಿಗಳನ್ನು ಕೊಟ್ಟಿದ್ದಾರೆ; ಅದನ್ನೇ ಅನುಸರಿಸಕೊಂಡು ಬೇರೆ ರಾಜ್ಯಗಳಲ್ಲಿಯೂ ಬೇರೆಬೇರೆ ಪಕ್ಷದವರು ಚುನಾವಣೆಯನ್ನು ಎದುರಿಸಿದ್ದಾರೆ. ಅಲ್ಲಿಯೂ ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದರಿಂದ ಇಲ್ಲಿಂದ ಹೊರ ರಾಜ್ಯಗಳ ಕಾರ್ಮಿಕರು ತಮ್ಮ ರಾಜ್ಯಗಳಿಗೆ ವಾಪಸ್ಸು ಹೋಗಿದ್ದಾರೆ. ಅಸ್ಸಾಂ, ಒರಿಸ್ಸಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದಿಂದ ಬಂದಂತಹ ಕಾರ್ಮಿಕರು ವಾಪಸ್ಸು ಹೋಗಿದ್ದಾರೆ. ಕಾಫಿ ಕೊಯ್ಯುವುದಕ್ಕೆ ಎಷ್ಟು ಕೂಲಿ ಕೊಡಬೇಕಾಗಿದೆ ಎನ್ನುವುದು ಅವರಿಗೆ ಗೊತ್ತಿದೆಯೇ? ಮೂರು ರೂಪಾಯಿಗಳಿಗೆ ಬದಲಾಗಿ ಆರು ರೂಪಾಯಿಗಳನ್ನು ಕೊಟ್ಟರೂ ಸಹ ಇವತ್ತಿನವರೆವಿಗೂ ಕಾಫಿ ಕೊಯ್ಯುವುದಕ್ಕೆ ಸಾಧ್ಯವಾಗಿಲ್ಲ. ಎಲ್ಲವನ್ನು ಉಚಿತವಾಗಿ ನೀಡಿದರೆ ಜನರು ಅವರಿಗೆ ಮತ ಹಾಕುತ್ತಾರೆಂದು ಇವತ್ತಿನ ಮಟ್ಟಿಗೆ ಯೋಚನೆ ಮಾಡಿದ್ದಾರೆ.

ಮುಂದಿನ ಭವಿಷ್ಯ ಏನಾಗುತ್ತದೆ ಎನ್ನುವುದನ್ನು ಅವರು ಯೋಚನೆ ಮಾಡಬೇಕಾಗುತ್ತದೆ, ಆಸ್ತಿವಂತರು ಯಾರೂ ಇವತ್ತು ಹೊಲ-ಗದ್ದೆಗಳಲ್ಲಿ ದುಡಿಮೆ ಮಾಡುವುದಿಲ್ಲ. ಆತನಿಗೆ ಕಾರ್ಮಿಕರ ಅವಶ್ಯಕತೆ ಇದೆ. ಕಾರ್ಮಿಕರು ಸಿಗುವುದಿಲ್ಲ. ತಿನ್ನುವುದಕ್ಕೆ ಏನು ಮಾಡಬೇಕು?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಸನ್ಮಾನ್ಯ ಸಭಾಪತಿಯವರೇ, ಹಾಗಾದರೇ, ಬಡವರು ಬಡವರಾಗಿಯೇ ಉಳಿಯಬೇಕೆ?

**ಶ್ರೀ ಗೋವಿಂದರಾಜು:-** ಸನ್ಮನ್ಯಾ ಸಭಾಪತಿಯವರೇ, ಬಡವರು ಬಡವರಾಗಿಯೇ ಇರಬಾರದು ಅವರು ಮೇಲಕ್ಕೆ ಬರಬೇಕು. ನಾನು ಬಡವನೇ; ಮೂರು ಹೊತ್ತು ಊಟಕ್ಕಿಲ್ಲದೇ ಕಷ್ಟಪಟ್ಟು ಬೆಳೆದವನು ನಾವು. ಬೆಳೆಯುವವರಿಗೆ ಏನು ಬೇಕಾದರೂ ಸೌಲಭ್ಯಗಳನ್ನು ಸರ್ಕಾರ ನೀಡಲಿ. ದುಡಿಯುವವರ ಕೈಗೆ ಕೆಲಸವನ್ನು ಕೊಡಲಿ; ನಾವು ಬೇಡವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಜನರು ದುಡಿಯಬೇಕು.

**ಶ್ರೀ ಬಿ.ಆರ್.ತಿಮ್ಮಾಪುರ(ಅಬಕಾರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಗ್ಯಾರಂಟಿಗಳನ್ನು ಕೊಡುತ್ತಿರುವುದು ತಪ್ಪು ಎಂದು ಅವರು ಹೇಳಲಿ. ಅದನ್ನು ಬಿಟ್ಟು ಎರಡನ್ನು ಅವರೇ ಹೇಳಿದರೆ ಹೇಗೆ?

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ನಾವು ಗ್ಯಾರಂಟಿಗಳನ್ನು ಕೊಡುತ್ತಿರುವುದು ತಪ್ಪು ಎಂದು ಹೇಳುತ್ತಿಲ್ಲ. ಕೊಡಲಿ; ಕಳೆದ 4 ತಿಂಗಳಿಂದ ಗೃಹಲಕ್ಷ್ಮಿ ಫಲಾನುಭವಿಗಳ ಖಾತೆಗೆ ಸರ್ಕಾರ ಹಣವನ್ನು ಹಾಕಿಲ್ಲ. ಏತಕ್ಕೋಸ್ಕರ ಹಾಕಿಲ್ಲವೆಂದು ಅವರು ಹೇಳಬೇಕಾಗುತ್ತದೆ.

**ಶ್ರೀ ಬಿ.ಆರ್.ತಿಮ್ಮಾಪುರ:-** ಸನ್ಮಾನ್ಯ ಸಭಾಪತಿಯವರೇ, ಅದನ್ನು ಬೇಕಾದರೇ ಕೇಳಲಿ. ಅದೇ ರೀತಿಯಲ್ಲಿ ಗ್ಯಾರಂಟಿಗಳನ್ನು ಕೊಟ್ಟಿರುವುದು ಸರಿಯೇ, ತಪ್ಪೇ ಎನ್ನುವುದರ ಬಗ್ಗೆ ಅವರ ನಿಲುವನ್ನು ಹೇಳಲಿ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ನಾವು ಸಹ ದಾನ-ಧರ್ಮಗಳನ್ನು ಮಾಡುತ್ತೇವೆ. ನಾನು ತಿಂಗಳಿಗೆ ಮೂರು ಲಕ್ಷ ರೂಪಾಯಿಗಳಷ್ಟು ದಾನ ಮಾಡುತ್ತೇನೆ. ನನ್ನ ಹತ್ತಿರ ಆದಾಯ ಇದ್ದರೇ ಮಾತ್ರ ದಾನ ಮಾಡುತ್ತೇನೆ. ಸಾಲ ಮಾಡಿ ಯಾರೂ ದಾನ ಮಾಡುವುದಿಲ್ಲ. ದಾನ ಮಾಡುವುದನ್ನು ಹೇಳಬಾರದು. ನಾನು ಸಹ ದಾನ-ಧರ್ಮ ಮಾಡುತ್ತೇನೆ. ಓದುವ ವಿದ್ಯಾರ್ಥಿಗಳ ಶುಲ್ಕವನ್ನು ಪಾವತಿ ಮಾಡುತ್ತೇನೆ. 220 ಲಕ್ಷ ರೂಪಾಯಿಗಳನ್ನು ಕೊಟ್ಟು.....

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರ ನೋವು ಆಕ್ರೋಶದ ರೂಪದಲ್ಲಿ ವ್ಯಕ್ತವಾಗುತ್ತಿದೆ. ದಾನ ಮಾಡಿರುವುದನ್ನು ಹೇಳಬಾರದೆಂದು ಅವರೇ ಹೇಳುತ್ತಿದ್ದಾರೆ. ನಮ್ಮ ಸಮುದಾಯಗಳಲ್ಲಿ ಇರುವಂತಹ ಶೋಷಿತ ವರ್ಗದವರಿಗೆ ಈ ಸರ್ಕಾರ ಸೌಲಭ್ಯಗಳನ್ನು ನೀಡುತ್ತಿದೆ. ಇದು ದಾನವಲ್ಲ. ನಾವು ಕೊಡುವವರು ಅಲ್ಲ; ಅವರು ಬೇಡುವವರು ಅಲ್ಲ. ಇದು ಪ್ರಜಾಪ್ರಭುತ್ವವಾಗಿದೆ.

ಸರ್ಕಾರ ಗ್ಯಾರಂಟಿಗಳ ರೂಪದಲ್ಲಿ ದಾನ ಮಾಡುತ್ತಿದೆ ಎಂದು ಅವರು ತಿಳಿದುಕೊಂಡಿದ್ದರೆ, ಅವರಂತೆ ತಪ್ಪು ತಿಳುವಳಿಕೆ ಮಾಡಿಕೊಂಡಿರುವವರು ಯಾರೂ ಇಲ್ಲ. ಆ ರೀತಿಯ ಭ್ರಮೆಯಲ್ಲಿ ಯಾರೂ ಇರಬಾರದು. ಆದರೆ, ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಗ್ಯಾರಂಟಿಗಳನ್ನು ಹೊಗಳುವುದರ ಬಗ್ಗೆ ಮಾನ್ಯ ಸದಸ್ಯರು ಹಿಂದೇಟು ಹಾಕುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಜೆ.ಡಿ.(ಎಸ್) ನಾಯಕರುಗಳಲ್ಲಿ ಕೆಲವರು ಅಂದರೇ ಮಾನ್ಯ ಜಿ.ಟಿ.ದೇವೇಗೌಡರು ನಮ್ಮ ಗ್ಯಾರಂಟಿಗಳನ್ನು ಬಿಚ್ಚು ಮನಸ್ಸಿನಿಂದ ಹೊಗಳುತ್ತಾರೆ. ಅವರಂತೆ ಮಾನ್ಯ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಇವರ್ಯಾರು ಹೇಳುವುದಿಲ್ಲ. ಇವರು ಸಹ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. First time in the history of Karnataka, ಸುಮಾರು ಒಂದು ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ತಂದಿದ್ದೇವೆ. ಒಂದು ವರ್ಷಕ್ಕೆ ಒಂದು ಬಡ ಕುಟುಂಬದ ಆದಾಯವನ್ನು ಸುಮಾರು 60 ಸಾವಿರ ರೂಪಾಯಿಗಳಷ್ಟು ಹೆಚ್ಚು ಮಾಡಿದ್ದೇವೆ. Is it a small thing? 1969-70ನೇ ಇಸವಿಯ "ಗರೀಬಿ ಹಠಾವೋ" ಎನ್ನುವ ಘೋಷಣೆ ನೆನಪಾಗುತ್ತದೆ. That slogan itself was so thrilling to many of us. ಇವತ್ತು ಆ ಒಂದು ಕಲ್ಪನೆ; ಆ ಒಂದು ಘೋಷಣೆ ಸಂಪೂರ್ಣವಾಗಿ ನನಸಾಗಿದೆ. ಅದನ್ನು ರಾಜಕೀಯ ಕಾರಣದಿಂದಾಗಿ, ಯಾವುದೋ ಒತ್ತಡದಿಂದ ಕಾರಣದಿಂದಾಗಿ ಅಥವಾ ಯಾರು ಏನು ತಿಳಿದುಕೊಳ್ಳುತ್ತಾರೋ ಎನ್ನುವ ಕಾರಣದಿಂದಾಗಿ ಹೊಗಳದೇ ಇದ್ದರೂ ಅಪರಾಧವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ರಸ್ತೆ ನಿರ್ಮಾಣಕ್ಕಾಗಿ ನಾವು ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೇ, ದಾವಣಗೆರೆಯಿಂದ ಬೆಂಗಳೂರಿನ ತನಕ ಇನ್ನೂ ಒಂದು ಲೈನ್ ಹೆಚ್ಚಿಗೆ ಮಾಡಬಹುದಾಗಿತ್ತು. ಆದರೇ, this can wait, but those poor people could not to wait for a longer time. That is the reason we have done.

(ಮುಂದುವರಿದಿದೆ)

(145) 06.03.2025/7.20/ಪಿಕೆ;ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಮಾತನಾಡುತ್ತಾ, ಗ್ಯಾರಂಟಿ ಯೋಜನೆಗಳನ್ನು ಹೊಗಳದೇ ಇದ್ದರೂ ಅದು ಒಂದು ರೀತಿಯ ಅಪವಾದವೇ ಆಗಿದೆ ಎಂದು ಹೇಳಿದರು. ಗ್ಯಾರಂಟಿ ಯೋಜನೆಗಳು ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ತಲುಪಬೇಕು. ಗ್ಯಾರಂಟಿಗಳನ್ನು ನಾವೂ ಸಹ ಕೊಟ್ಟಿದ್ದೇವೆ. ಹೀಗಿರುವಾಗ ನಾವೇಕೆ ನಿಮ್ಮನ್ನು ವಿರೋಧಿಸಬೇಕು? ಗ್ಯಾರಂಟಿ ಯೋಜನೆಗಳು ನಿಮ್ಮ ಬದ್ಧತೆಯಾಗಿತ್ತು, ಅದನ್ನು ಕೊಡಿ ಎಂದು ಹೇಳಿದ್ದೇವೆ. ಲೋಕಾಯುಕ್ತರಾಗಿದ್ದ ಮಾನ್ಯ ಸಂತೋಷ್ ಹೆಗ್ಡೆಯವರು, ಗ್ಯಾರಂಟಿಗಳೂ ಕೂಡ ಒಂದು ರೀತಿಯಲ್ಲಿ ಆಮಿಷಗಳಾಗಿವೆ ಎಂದು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಕೂಡ, ಗ್ಯಾರಂಟಿಗಳನ್ನು ಕೊಡುವುದು ತಪ್ಪು

ಎಂದು ಹೇಳಿದೆ. ಆದರೆ, ನಾವೂ ಕೂಡ ಕೊಟ್ಟಿದ್ದೇವೆ. ಒಂದು ಸಲ ಆಳುವ ಸರ್ಕಾರಗಳು ವ್ಯವಸ್ಥೆಯನ್ನು derailment ಮಾಡಿದರೆ, ವ್ಯವಸ್ಥೆಯನ್ನು ಕೆಡಿಸಿದರೆ ಅದಕ್ಕೆ ಪ್ರತ್ಯುತ್ತರವಾಗಿ, ನಮ್ಮ ಸೈಡ್‌ಗೆ ತೆಗೆದುಕೊಳ್ಳಬೇಕೆಂದರೆ ಅದೇ ತಪ್ಪುಗಳನ್ನು ಇನ್ನೊಬ್ಬರು ಮಾಡಬೇಕಾಗುತ್ತದೆ. ಸವಲತ್ತುಗಳನ್ನು ಕೊಡುವುದು ತಪ್ಪಲ್ಲ; ಸರ್ಕಾರಗಳು ಇರುವುದೇ ಸವಲತ್ತುಗಳನ್ನು ಕೊಡುವುದಕ್ಕೆ, ಕಷ್ಟ-ಸುಖಗಳನ್ನು ಕೇಳುವುದಕ್ಕೆ, ಬಡವರ ಕಲ್ಯಾಣ ಮಾಡುವುದಕ್ಕೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಲ್ಯಾಣದ ಹೆಸರಿನಲ್ಲಿ ಚುನಾವಣೆಗಳಿಗಾಗಿ ಅದನ್ನು ಬಳಸಿಕೊಳ್ಳುವುದು ತಪ್ಪು. ಸುಪ್ರೀಂ ಕೋರ್ಟ್‌ನ ನ್ಯಾಯಧೀಶರೂ ಇದೇ ರೀತಿ ಹೇಳಿದ್ದಾರೆ. ನಾವು ಯಾವತ್ತೂ ನಿಮ್ಮನ್ನು ವಿರೋಧ ಮಾಡಿಲ್ಲ; ಇವತ್ತೂ ಮಾಡುವುದಿಲ್ಲ. Commitment ಏನಿದೆಯೋ ಅದನ್ನು ನೀವು ತಲುಪಿಸಿ; ನಾವು ಬೇಡ ಎನ್ನುವುದಿಲ್ಲ. ನಾವೂ ಮಾಡಿದ್ದೇವೆ. ಆದರೆ, ಆಡಳಿತ ಮಾಡತಕ್ಕಂಥ ವರ್ಗ ಈ ವ್ಯವಸ್ಥೆಯನ್ನು ಕೆಡಿಸುವುದು ಸರಿಯೇ ಎನ್ನುವುದರ ಬಗ್ಗೆ ಅವಲೋಕನ ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ವಿರೋಧ ಪಕ್ಷದ ನಾಯಕರು, ಕೊಡುವುದರ ಬಗ್ಗೆ ಒಂದು ಸಲ ಚಿಂತನೆ ಮಾಡಿ ಎಂದು ಹೇಳಿದರು.

**ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ನಾನು ಹೇಳಿದ್ದು ಸರಿಯಿದೆ. ಏಕೆಂದರೆ, ಆಳಲು ಬಯಸುವ ರಾಜಕೀಯ ಪಕ್ಷಗಳ ನಾಯಕರು ಯಾರೂ ಸನ್ಯಾಸಿಗಳಲ್ಲ. ಕಾಂಗ್ರೆಸ್ ಪಕ್ಷದ ಸರ್ಕಾರ ಆಡಳಿತ ಮಾಡುತ್ತಿದ್ದರೆ, ನಂತರ ಬಿಜೆಪಿ ನೇತೃತ್ವದ ಆಡಳಿತ ಪಕ್ಷ ಅಧಿಕಾರಕ್ಕೆ ಬರಬೇಕು ಎಂದು ಅಂದುಕೊಳ್ಳುತ್ತೇವೆ. ಸರ್ಕಾರ ಏನು ಐದು ಗ್ಯಾರಂಟಿಗಳನ್ನು ಕೊಟ್ಟಿರುತ್ತದೆಯೋ, ಆನಂತರ ಬೇರೆ ಪಕ್ಷದ ಸರ್ಕಾರಗಳು ಅಧಿಕಾರಕ್ಕೆ ಬರಬೇಕಾದರೆ ಐದಕ್ಕಿಂತಲೂ ಹೆಚ್ಚಿನ ಗ್ಯಾರಂಟಿಗಳನ್ನು ಕೊಡಬೇಕಾಗುತ್ತದೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಅಲ್ಲವೇ? ಆದರೆ ಇದೇರೀತಿ ಮಾಡಿಕೊಂಡು ಹೋದರೆ ಖಜಾನೆ ಸ್ಥಿತಿ ಏನಾಗುತ್ತದೆ? ಅದನ್ನು ವಿಚಾರ ಮಾಡಿ.

**ವೈಸ್ ಚೇರ್ಮನ್:-** ಮಾನ್ಯ ಗೋವಿಂದ ರಾಜುರವರೇ ಇನ್ನೊಂದು ನಿಮಿಷದಲ್ಲಿ ಮುಗಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಗಳೆ, ಮಾನ್ಯ ಹೆಚ್.ಕೆ.ಪಾಟೀಲರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಕೆ.ಹೆಚ್. ಪಾಟೀಲರ ಕಾಲದಿಂದಲೂ ನಾವು ನಿಮ್ಮ ಅಭಿಮಾನಿಗಳಾಗಿದ್ದೇವೆ. ನೀವು ಕೊಟ್ಟಿರುವ ಗ್ಯಾರಂಟಿಗಳನ್ನು, ಬಡವರಿಗೆ ಕೊಟ್ಟಿರುವಂಥದ್ದನ್ನು ನಾವು ಖಂಡಿತವಾಗಿ ಗೌರವಿಸುತ್ತೇವೆ. ಆದರೆ ನೀವು ಯಾವ ಸಮಯದಲ್ಲಿ ಗ್ಯಾರಂಟಿಗಳನ್ನು ಘೋಷಣೆ ಮಾಡಿದಿರಿ? ಚುನಾವಣೆಯ ಮೊದಲು ನೀವು ಘೋಷಣೆ ಮಾಡಿದಿರಿ. ಅಂದರೆ, ಓಟಿಗೋಸ್ಕರ ಒಂದು ಕುಟುಂಬಕ್ಕೆ ಒಂದು ವರ್ಷಕ್ಕೆ ರೂ.60,000 ಕೊಡುತ್ತಿದ್ದೇವೆ ಎಂದು ನೀವೇ ಒಪ್ಪಿಕೊಂಡಂತಾಯಿತು. ರಾಮನಗರದಲ್ಲಿ ಉಪಚುನಾವಣೆಯಾಯಿತು. ನೀವು

ನಾಲ್ಕು ತಿಂಗಳಿಂದ ಉಳಿಸಿಕೊಂಡಿದ್ದ "ಗೃಹಲಕ್ಷ್ಮಿ" ಯೋಜನೆಯ ದುಡ್ಡನ್ನು ಒಟ್ಟಿಗೆ ಆಗಲೇ ಏಕೆ ಕೊಟ್ಟಿರಿ? ನಾವು ಇನ್ನೊಬ್ಬರಿಗೆ ಮೋಸ ಮಾಡಬಾರದು.

ಡಾ॥ **ಉಮಾಶ್ರೀ:-** ಅಂತಹ ಅನಿವಾರ್ಯ ಪರಿಸ್ಥಿತಿ ಸಮಾಜದಲ್ಲಿ ನಿರ್ಮಾಣ ಮಾಡಿದ್ದರಿಂದ ಅವರಿಗೆ ಸಪೋರ್ಟಿವ್ ಆಗಿ ಸರ್ಕಾರ ನಿಲ್ಲಬೇಕಾದುದು ಧರ್ಮವಾಗಿತ್ತು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಗಳೆ, ನಾನು ಸತ್ಯವಾಗಿ ಸತ್ಯವನ್ನೇ ಹೇಳುತ್ತಿದ್ದೇನೆ. ರಾಮನಗರದ ಉಪಚುನಾವಣೆಯ ಸಮಯದಲ್ಲಿ ಬಾಕಿ ಉಳಿಸಿಕೊಂಡಿದ್ದ ನಾಲ್ಕು ತಿಂಗಳ ದುಡ್ಡನ್ನು ಒಂದೇ ಸಲ ಏಕೆ ಕೊಟ್ಟಿರಿ? ಅದರ ಉದ್ದೇಶವೇನು? ಇದರ ಬಗ್ಗೆ ಬಜೆಟ್‌ನಲ್ಲಿ ಹೇಳುತ್ತೀರಾ? ಮಾನ್ಯ ಹೆಚ್.ಕೆ.ಪಾಟೀಲರ ಮನಸ್ಸಿಗೆ ನೋವಾಗಬಹುದು. ನೀವು ಕೊಟ್ಟಿರುವಂತಹ ಕಾರ್ಯಕ್ರಮಗಳನ್ನು ಕೊಡಬೇಡಿ ಎಂದು ಹೇಳುವುದಿಲ್ಲ. ಲಕ್ಷಾಂತರ ರೂಪಾಯಿಗಳ ಸಹಾಯವನ್ನು ನಾವೂ ಸಹ ಮಾಡುತ್ತೇವೆ. ಇದ್ದಂಥವರು ಇಲ್ಲದೇ ಇರುವವರಿಗೆ ಕೊಡುವುದು ಮಾನವ ಧರ್ಮ. ಹೋದ ಚುನಾವಣೆ ಸಂದರ್ಭದಲ್ಲಿ ಐದು ಗ್ಯಾರಂಟಿಗಳನ್ನು ಕೊಟ್ಟಿದ್ದೀರಿ. ಮುಂಬರುವ ಚುನಾವಣೆ ಸಂದರ್ಭದಲ್ಲಿ ಇನ್ನೆಷ್ಟು ಗ್ಯಾರಂಟಿಗಳನ್ನು ಕೊಡುತ್ತೀರಿ?

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಎಲ್ಲಾದರೂ ಬೇರೆ ಕಡೆ ನಿಂತು ನಾವುಗಳು ಮಾತನಾಡುವಾಗ ಇದು ನಡೆಯಬಹುದು. ನಾವು ಗಣರಾಜ್ಯದೊಳಗೆ ಇದ್ದೇವೆ, ಪ್ರಜಾರಾಜ್ಯದೊಳಗೆ ಇದ್ದೇವೆ. ಇದ್ದವರು ಇಲ್ಲದವರಿಗೆ ಕೊಡುವುದು . . .

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಗಳೆ, ಪರಿಸ್ಥಿತಿಯನ್ನು ನೋಡಿ ಕೊಡಬೇಕು. ದಾನ ಮಾಡಬೇಕು, ಆದರೆ ಯಾರಿಗೆ ಅವಶ್ಯಕತೆ ಇದೆಯೋ ಅಂಥವರಿಗೆ ಮಾಡಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಾವು ಯಾರಿಗೂ ದಾನ ಮಾಡುತ್ತಿಲ್ಲ. ನಾವು ಎಲ್ಲರೂ ಒಂದು ಸರಿಯಾದ ಕಲ್ಪನೆಗೆ ಬರಬೇಕು. ನಮ್ಮ ದೇಶಕ್ಕೋಸ್ಕರ ಯಾರು ಬೆವರು, ರಕ್ತ ಸುರಿಸುತ್ತಾರೋ, ಯಾರು ನಮ್ಮ ದೇಶಕ್ಕಾಗಿ ಸಂಪತ್ತನ್ನು ಸೃಷ್ಟಿ ಮಾಡುತ್ತಾರೋ ಅಂಥವರೇ ಕಡುಬಡವರಾಗಿದ್ದಾರೆ. ನಾವು ಅವರನ್ನು ಶೋಷಣೆ ಮಾಡಿ ಉಳಿದವರು ಉಳ್ಳವರಾಗಿರಬಹುದು. ಆದರೆ, ಆ ಕಡುಬಡವರಿಗೆ, ಯಾರು ರಾಷ್ಟ್ರದ ಸಂಪತನ್ನು ಸೃಷ್ಟಿ ಮಾಡುತ್ತಿದ್ದಾರೋ ಅವರಿಗೆ ದಾನ ಮಾಡುವ ಶಕ್ತಿ ಯಾವ ಸರ್ಕಾರಗಳಿಗೂ ಇಲ್ಲ, ಯಾವ ವ್ಯಕ್ತಿಗಳಿಗೂ ಇಲ್ಲ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಗಳೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಅಜೀಂ ಪ್ರೇಮ್‌ಜಿಯವರ ಬಗ್ಗೆ ಮಾತನಾಡಿದರು.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಒಂದು ನಿಮಿಷದಲ್ಲಿ ನಿಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಗಳೆ, ನಾನು ಮನಸ್ಸು ತುಂಬಿ ಮಾತನಾಡುತ್ತಿದ್ದೇನೆ; ನನಗೆ ಹೊಟ್ಟೆ ಉರಿ ಇದೆ.

**ವೈಸ್ ಛೇರ್ಮನ್:-** ಆದರೆ ಅದನ್ನು ಎಲ್ಲರೂ ಮನಸ್ಸು ತುಂಬಿ ಕೇಳಿಕೊಳ್ಳಬೇಕು ಅಲ್ಲವೇ?

**ಶ್ರೀ ಗೋವಿಂದ ರಾಜು:-** ಮಾನ್ಯ ಸಚಿವರು, ಯಾರು ಸಂಪತ್ತನ್ನು ಸೃಷ್ಟಿ ಮಾಡುತ್ತಾರೋ ಅವರಿಗೆ ದಾನ ಮಾಡುವ ಶಕ್ತಿ ಇಲ್ಲ ಎಂದು ಹೇಳಿದರು. ಮಾನ್ಯ ಅಜೀಂ ಪ್ರೇಮ್‌ಜಿಯವರು ನಮ್ಮ ಪಕ್ಷದವರಲ್ಲ. ನಮ್ಮ ದೇಶದ ಒಬ್ಬ ಸತ್ಪ್ರಜೆ. ತಾವು ಕಟ್ಟಬೇಕಾದ ಎಲ್ಲಾ ತೆರಿಗೆಗಳನ್ನು ಕಟ್ಟಿ, ರೂ. 8,000 ಕೋಟಿಯನ್ನು ವಿದ್ಯಾಭ್ಯಾಸಕ್ಕೆಂದು ದಾನ ಮಾಡುತ್ತಾರೆ. Infosysನ ಶ್ರೀಮತಿ ಸುಧಾಮೂರ್ತಿ ಯವರು ಉಡುವುದು ಸಾಮಾನ್ಯ ಸೀರೆ. ಆದರೆ ಅವರು ನಮ್ಮ ಕರ್ನಾಟಕದ ಆರ್ಥಿಕತೆಗೆ ಕೊಡುಗೆ ನೀಡುತ್ತಿದ್ದಾರೆ. ದಾನ ಮಾಡುವವರನ್ನು ಯಾವತ್ತೂ ಮರೆಯಬಾರದು. ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡುತ್ತೇನೆ. ಇನ್ನು ಮುಂದಕ್ಕೆ, ಜನರಿಗೆ ಏನು ಬೇಕೋ ಅದೆಲ್ಲವನ್ನೂ ಸರ್ಕಾರ ಮಾಡುವುದಕ್ಕೆ ಸಾಧ್ಯವಿಲ್ಲ. ಇದೇರೀತಿ ಸಾಲದ ಪ್ರಮಾಣವನ್ನು ಏರಿಕೆ ಮಾಡಿಕೊಂಡು ಹೋದರೆ, ನೀವು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ಆದಾಯದ ಮಿತಿ ಸಾಲದ ಮಿತಿಗಿಂತ ಮುಂದೆ ಹೋಗುತ್ತದೆಯೋ ಆವತ್ತು ನಾವು ವಿಫಲರಾಗುತ್ತೇವೆ.

**ಶ್ರೀ ತಂಗಡಗಿ ಶಿವರಾಜ ಸಂಗಪ್ಪ:-** ಅಂದರೆ, ಗ್ಯಾರಂಟಿ ಕೊಡುವುದು ಬೇಡವೇ?

**ಶ್ರೀ ಗೋವಿಂದ ರಾಜು:-** ಗ್ಯಾರಂಟಿ ಬೇಡ ಎಂದು ಹೇಳುತ್ತಿಲ್ಲ. ನೀವು ಗ್ಯಾರಂಟಿಯಲ್ಲೇ ಹುಟ್ಟಿದವರ ಹಾಗೆ ಹೇಳುತ್ತಿದ್ದೀರಲ್ಲಾ?

**ವೈಸ್ ಛೇರ್ಮನ್:-** ಅದಕ್ಕೆ ನಾನು ಆಗಲೇ, ನೀವು ಮನಃತುಂಬಿ ಹೇಳಿದರೂ ಅವರಿಗೆ ಮನಃತುಂಬಿ ಕೇಳುವ ಮನಸ್ಥಿತಿ ಇಲ್ಲ ಇಲ್ಲ ಎಂದು ಹೇಳಿದೆ. ಆದ್ದರಿಂದ ನೀವು ಬೇಗ ನಿಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಗಳೆ, ನಾನು ಯಾವುದಕ್ಕೋಸ್ಕರ ಹೇಳುತ್ತಿದ್ದೇನೆ ಎನ್ನುವುದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ರಾಜಕೀಯವಾಗಿ ನಮ್ಮನ್ನು ಸಿಕ್ಕಿ ಹಾಕಿಸಬೇಕು ಎನ್ನುವುದು ಆಡಳಿತ ಪಕ್ಷದವರ ಉದ್ದೇಶವಾಗಿದೆ. ನಾನು ರಾಜಕಾರಣಿಯಲ್ಲ. ನಾವು ಇದೇ ರೀತಿ ಮುಂದುವರೆದರೆ, ಒಂದಲ್ಲ ಒಂದು ದಿನ ಬಾಂಗ್ಲಾದೇಶ, ಶ್ರೀಲಂಕಾ, ಪಾಕಿಸ್ತಾನದಲ್ಲಿ ಏನು ಸ್ಥಿತಿ ಉಂಟಾಗಿದೆಯೋ ಅದೇ ಸ್ಥಿತಿಗೆ ನಾವೂ ಕೂಡ ಮುಟ್ಟುತ್ತೇವೆ. ಈ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಬೇಕಿದೆ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

## 11. ಪ್ರಕಟಣೆ

**ವೈಸ್ ಛೇರ್ಮನ್:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸೂಚನೆ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:6.3.2025ರಂದು, 2025ನೇ ಸಾಲಿನ ಬೆಂಗಳೂರು ಅರಮನೆ ಭೂಬಳಕೆ ಮತ್ತು ನಿಯಂತ್ರಣ ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

(ಮುಂದು)

(146) 6.3.2025 7.30 DS-VK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ವೈಸ್ ಛೇರ್ಮನ್:-** ಶ್ರೀ ಎಂ.ನಾಗರಾಜುರವರೇ, ತಾವು ಹತ್ತು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು. ಮಾನ್ಯ ನಾಗರಾಜುರವರು 20 ನಿಮಿಷಗಳ ವಿಷಯವನ್ನು ಕೇವಲ 10 ನಿಮಿಷಗಳಲ್ಲಿ ಮುಗಿಸುತ್ತಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ತಾವು ನನಗೆ ಆ ರೀತಿ 10 ನಿಮಿಷ ಕೊಡುವುದಕ್ಕೆ ಸಾಧ್ಯವಿಲ್ಲ. ಎಲ್ಲರಿಗೂ ತಾವು ಅರ್ಧ ಗಂಟೆಯ ಮೇಲೆ ಕೊಟ್ಟಿದ್ದೀರಿ. ನನಗೂ ಅರ್ಧ ಗಂಟೆ ಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ನಾನು ಫಾಸ್ಟ್ ಆಗಿ ಮಾತನಾಡಿ ಕನ್‌ಕ್ಲೂಡ್ ಮಾಡುತ್ತೇನೆ, ಎಲ್ಲರೂ ಸುಮ್ಮನೆ ಇರಬೇಕಾಗುತ್ತದೆ. ಕರ್ನಾಟಕ ರಾಜ್ಯದ ರಾಜ್ಯಪಾಲರು ವಿಧಾನ ಮಂಡಲದಲ್ಲಿ ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,....

**Sri M.Nagaraju:-** Sir, what is this?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೆ.ಪಿ.ಎಸ್.ಸಿ. ವಿಚಾರಕ್ಕೆ ಉತ್ತರ ಕೊಡುವುದಕ್ಕೆ ಬಂದಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಕೆ.ಪಿ.ಎಸ್.ಸಿ. ವಿಚಾರದ ಬಗ್ಗೆ ಉತ್ತರ ಕೊಡುವುದಕ್ಕೆ ಮತ್ತೆ ವಾಪಸ್ ಬಂದಿದ್ದೇನೆ. ಕೆ.ಪಿ.ಎಸ್.ಸಿ. ವಿಚಾರದ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿದೆ. ನಾನು ಒಂದು ಗಂಟೆಯೊಳಗಾಗಿ ಬರುತ್ತೇನೆ ಎಂದು ಹೇಳಿದ್ದೆ. ಆದರೆ "Bangalore Palace (Utilisation and Regulation of Land) Bill ಏನಿತ್ತು, ಅದು ಸ್ವಲ್ಪ ಹೆಚ್ಚು ಕಾಲ ಚರ್ಚೆಗೆ ತೆಗೆದುಕೊಂಡಿತ್ತು. ಹಾಗಾಗಿ ನಾನು ವಿಳಂಬವಾಗಿ ಬಂದಿದ್ದೇನೆ. ಈ ಸಂದರ್ಭದಲ್ಲಿ ನಾವು ಇದರ ಬಗ್ಗೆ ಹಲವಾರು ಚರ್ಚೆಗಳನ್ನು ಮಾಡುತ್ತಿದ್ದೇವೆ. ಕಾನೂನು ಪಂಡಿತರ ಜೊತೆಯಲ್ಲೂ ಚರ್ಚೆ ಮಾಡುತ್ತಿದ್ದೇವೆ. ಏಕೆಂದರೆ, ಒಂದು ತಪ್ಪು,

ಎರಡು ತಪ್ಪು ಎಂದು ನಾವು ಇಷ್ಟಕ್ಕೆ ನಿಲ್ಲಿಸುವುದಕ್ಕಾಗುವುದಿಲ್ಲ. ಮಾನ್ಯ ಭೋಜೇಗೌಡರವರಿಗೆ ಗೊತ್ತಿದೆ, Article – 315 to 319 of the Constitution. In all these articles there is only protection for KPSC, which is a constitutional body of course. But there is no possibility, no specific instrument where we can do something. That is why we are discussing it in detail. ನಮ್ಮ ರಾಜ್ಯದಲ್ಲಿ ಏನು ಕಾನೂನು ಇತ್ತು ಆ ಕಾನೂನು ಸಂಪೂರ್ಣವಾಗಿರಲಿಲ್ಲ, ನಿಯಮಗಳು ಸಂಪೂರ್ಣವಾಗಿರಲಿಲ್ಲ. ಆ ಕಾನೂನಿನ ತಿದ್ದುಪಡಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಅದನ್ನು ನಿನ್ನೆ ಸಚಿವ ಸಂಪುಟದ ಮುಂದೆ ತಂದಿದ್ದೇವೆ. ಸಚಿವ ಸಂಪುಟದಲ್ಲಿ ಚರ್ಚೆಯಾಗಿರುವ ಎಲ್ಲಾ ವಿವರಗಳನ್ನು ನಾವು present ಮಾಡುತ್ತೇವೆ. ಆ ಕಾನೂನಿನ ತಿದ್ದುಪಡಿಯ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಸಂದರ್ಭ ಎನ್ನುವ ಕಾರಣಕ್ಕೆ ಅವರು ಕೂಡ ಉತ್ತರ ಕೊಡುವುದಕ್ಕೆ ಬರುತ್ತಾರೆ. ನಾಳೆ ಬಜೆಟ್ ಇರುವುದರಿಂದ ನಾಳೆ ಉತ್ತರ ಕೊಡುವುದಿಲ್ಲ, ಸೋಮವಾರ ಉತ್ತರ ಕೊಡುತ್ತಾರೆ.

**ವೈಸ್ ಛೇರ್ಮನ್:–** ಶ್ರೀ ಎಂ.ನಾಗರಾಜುರವರೇ, ತಾವು 10–15 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು. ಮಧ್ಯದಲ್ಲಿ ಎಲ್ಲರೂ ಮಾತನಾಡಿರುವುದರಿಂದ ಅವರಿಗೆ ಅರ್ಧ ಗಂಟೆ ಸಮಯ ಕೊಟ್ಟಿದ್ದೇನೆ. ನೀವು ಮಾತನಾಡುವಾಗ ಯಾರು ಮಾತನಾಡುವುದಿಲ್ಲ. 15 ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಬೇಕು.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಪೀಠಕ್ಕೆ ಗೌರವ ಕೊಟ್ಟು ನಾನು ಬಹಳ ಬೇಗ ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮಯವಾಗಿದೆ, ಅವರು ಸೋಮವಾರ ಮಾತನಾಡಲಿ.

**ವೈಸ್ ಛೇರ್ಮನ್:–** ಮಾನ್ಯ ನಾಗರಾಜುರವರೇ, ತಾವು ಸೋಮವಾರ ಮಾತನಾಡುತ್ತೀರೇನು?

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲ, ನಾನು ಈಗ ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಕಾದರೆ ಇಷ್ಟೊಂದು ಜನ ಮಧ್ಯದಲ್ಲಿ ಏಕೆ ಮಾತನಾಡುತ್ತಾರೋ ನನಗೆ ಗೊತ್ತಿಲ್ಲ. ನಾನು 10–15 ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

## 12. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕಂತಹ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ರಾಜ್ಯಪಾಲರು ವಿಧಾನ ಮಂಡಲದಲ್ಲಿ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತಿನ ದಿನ ಕರ್ನಾಟಕ ರಾಜ್ಯದಲ್ಲಿ ನಮಗೆ ನಮ್ಮ ಸಂವಿಧಾನವೇ ರಾಷ್ಟ್ರ ಧರ್ಮ. ಕುವೆಂಪುರವರ ಆಶಯದಂತೆ "ಸರ್ವ ಜನಾಂಗದ ಶಾಂತಿಯ ತೋಟ" ಎಂಬ ವಿಚಾರಧಾರೆಯಲ್ಲಿ ಆಡಳಿತ ನಡೆಸುತ್ತಿರತಕ್ಕಂಥ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಹೆಮ್ಮೆ ಎನ್ನುವ ಮಾತನ್ನು ಹೇಳಲು ಬಯಸುತ್ತೇನೆ. ಅದರ ಜೊತೆಗೆ ಹೇಳಬೇಕೆಂದರೆ ಬಸವಣ್ಣನವರ ಸಿದ್ಧಾಂತಗಳ ನಂಬಿಕೆಯನ್ನು ಇಟ್ಟುಕೊಂಡಿರತಕ್ಕಂಥ, ಸರ್ವರನ್ನು ಒಳಗೊಂಡಂತಹ ಸರ್ಕಾರ ಆಗಿರತಕ್ಕಂಥಾದ್ದು. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸತಕ್ಕಂಥ ಕೆಲಸವನ್ನು ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲು ಬಾರಿಗೆ ಕಾಂಗ್ರೆಸ್ ಸರ್ಕಾರ ಮಾಡಿದೆ ಎಂದು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರ ಕೊಟ್ಟಿರತಕ್ಕಂಥ ಐದು ಗ್ಯಾರಂಟಿಗಳ ಯೋಜನೆಗಳಿಂದ ಕರ್ನಾಟಕ ರಾಜ್ಯದಲ್ಲಿ 1.3 ಕೋಟಿಯಷ್ಟು ಜನ ಬಡತನ ರೇಖೆಗಿಂತ ಮೇಲೆ ಬಂದಿರತಕ್ಕಂಥಾದ್ದು ನಾವು ಶ್ಲಾಘಿಸಬೇಕಾದ ವಿಚಾರ. ಆದರೆ ಅದನ್ನು ಟೀಕೆ ಮಾಡತಕ್ಕಂಥಾದ್ದು ಎಷ್ಟು ಸರಿ? ಇದೇ ನಮ್ಮ ವಿರೋಧ ಪಕ್ಷದ ನಾಯಕರುಗಳು, ದೇಶದ ಪ್ರಧಾನ ಮಂತ್ರಿಗಳಾಗಿರತಕ್ಕಂಥವರು ಕೂಡ ನಾವು ಗ್ಯಾರಂಟಿಗಳನ್ನು ಘೋಷಣೆ ಮಾಡಿದಂಥ ಸಂದರ್ಭದಲ್ಲಿ, ಜೈಪುರದಲ್ಲಿ ಚುನಾವಣಾ ಭಾಷಣಗಳನ್ನು ಮಾಡುವಂಥ ಸಂದರ್ಭದಲ್ಲಿ "ಯಾವುದೇ ರಾಜ್ಯ ಸರ್ಕಾರಗಳು ಇದನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಸಾಧ್ಯವೇ ಇಲ್ಲ" ಎಂದು ಹೇಳಿದಾಗ ಅದನ್ನು ಸವಾಲಾಗಿ ಸ್ವೀಕರಿಸಿ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಆರ್ಥಿಕ ಇಲಾಖೆಯನ್ನು ಹೊಂದಿರುವಂತಹ ಮಾನ್ಯ ಸಿದ್ಧರಾಮಯ್ಯನವರು ಇದನ್ನು ಇಂಪ್ಲಿಮೆಂಟ್ ಮಾಡಿ ತೋರಿಸಿರುವುದನ್ನು ನಾವು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಕರ್ನಾಟಕ ರಾಜ್ಯದ ಜನ ಅದರ ಬಗ್ಗೆ ಹೆಮ್ಮೆ ಪಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಒಂದೆರಡು ತಿಂಗಳುಗಳು ತಡವಾದರೂ ಸಹ ಉಳಿದ ಹಣವನ್ನು ಕೂಡಿಸಿ ಹಾಕತಕ್ಕಂಥ ಕೆಲಸವನ್ನು ಮಾಡಿದ್ದರೆ ಅದು ಕರ್ನಾಟಕ ರಾಜ್ಯದ ನುಡಿದಂತೆ ನಡೆದ ಸರ್ಕಾರ-ನಮ್ಮ ಸರ್ಕಾರ ಎನ್ನುವ ಮಾತನ್ನು ಹೇಳಲು ಬಯಸುತ್ತೇನೆ.

ಅದೇ ರೀತಿ ಆಡಳಿತದಲ್ಲಿ ಬಹಳಷ್ಟು ಪಾರದರ್ಶಕತೆ ತರುವಂಥಾದ್ದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿರತಕ್ಕಂಥಾದ್ದು ಶ್ಲಾಘನೀಯ ಎನ್ನುವಂಥ ಮಾತನ್ನು ಹೇಳುತ್ತೇನೆ. 2013-18ರವರೆಗೆ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ನಾವು ಚುನಾವಣಾ ಪ್ರಣಾಳಿಕೆಯಲ್ಲಿ 165 ಭರವಸೆಗಳನ್ನು ಕೊಟ್ಟಿದ್ದೆವು. ಅದರಲ್ಲಿ 158 ಭರವಸೆಗಳನ್ನು ಈಡೇರಿಸಿದಂಥ ಕೀರ್ತಿ ಸಹ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ. ಇದೇ ರೀತಿ 2024-25ರ ಬಜೆಟ್‌ನಲ್ಲಿ ಘೋಷಣೆ ಮಾಡಿದಂಥ 344 ಘೋಷಣೆಗಳ ಪೈಕಿ 331 ಘೋಷಣೆಗಳಿಗೆ ಸರ್ಕಾರಿ ಆದೇಶಗಳನ್ನು ಹೊರಡಿಸಿರತಕ್ಕಂಥಾದ್ದು ಕೂಡ ಎಲ್ಲರೂ ಕೂಡ ಒಪ್ಪಿಕೊಳ್ಳಬೇಕಾದ ವಾಸ್ತವಾಂಶ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ನಾನು ಪಶುಪಾಲನಾ ಸಮುದಾಯದಿಂದ ಬಂದಿರುವವನಾಗಿರುವುದರಿಂದ ಹೈನುಗಾರಿಕೆಗೆ ಈಗಾಗಲೇ ಪ್ರೋತ್ಸಾಹಧನವನ್ನು ಕೊಡುವ ರೀತಿಯಲ್ಲಿ 1500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಕ್ಕಾಗಿ ನಾನು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಜೊತೆಗೆ ಕುರಿ ಮತ್ತು ಪಶುಗಳು ಸತ್ತಾಗ ಅದಕ್ಕೆ 26 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿ ಪರಿಹಾರ ಕೊಟ್ಟಿರತಕ್ಕಂಥಾದ್ದನ್ನು ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ.

ಅದೇ ರೀತಿ ನಾನು ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟಿರುವವನಾಗಿರುವುದರಿಂದ ಡಾ॥ ಡಿ.ಎಂ.ನಂಜುಂಡಪ್ಪನವರ ವರದಿ ಬಗ್ಗೆ ಹೇಳುವುದಾದರೆ, ಪ್ರಾದೇಶಿಕ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗಿರುವುದರಿಂದ ಅದಕ್ಕೆ ಒಂದು ಕಮಿಟಿಯನ್ನು ರಚನೆ ಮಾಡಿ, ಅದಕ್ಕೆ ಈಗಾಗಲೇ ಬೇಕಾಗಿರತಕ್ಕಂಥ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಿಕ್ಕೆ 37,662 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದರ ಬಗ್ಗೆ ಬೇಕಾದರೆ ನಮ್ಮ ಸರ್ಕಾರ ಶ್ವೇತಪತ್ರವನ್ನು ಕೊಡಲಿಕ್ಕೆ ತಯಾರಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದೇ ರೀತಿ ಮೊನ್ನೆ ನಡೆದಂತಹ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 19 ವಿದೇಶಿ ಪ್ರತಿನಿಧಿಗಳು ಭಾಗವಹಿಸಿ, ಸುಮಾರು 10 ಲಕ್ಷ ಕೋಟಿಗಿಂತ ಹೆಚ್ಚು ಬಂಡವಾಳವನ್ನು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಒಡಂಬಡಿಕೆಯನ್ನು ಮಾಡಿಕೊಂಡಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಅದೇ ರೀತಿ ಕೇಂದ್ರದಲ್ಲಿರತಕ್ಕಂಥ ಸರ್ಕಾರಗಳು ಭಾರತವನ್ನು 5 trillion economy ಮಾಡಬೇಕೆಂದಾಗ ಕರ್ನಾಟಕವನ್ನು 1 trillion economy ಮಾಡಬೇಕೆನ್ನುವ ರೀತಿಯಲ್ಲಿ ಎಲ್ಲಾ ಪ್ರಯತ್ನವನ್ನು ಮಾಡುತ್ತಿರತಕ್ಕಂಥಾದ್ದು ನಮ್ಮ ಸರ್ಕಾರ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಎಂಎಸ್ಎಂಇ ಗಳಿಗೆ ಒಳ್ಳೆಯ ಉತ್ತೇಜನವನ್ನು ಕೊಡಲಿಕ್ಕೆ ಕೂಡ 687 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥಾದ್ದು, ಹಿಂದುಳಿದ ವರ್ಗದವರು ಮತ್ತು ಶೋಷಿತ ವರ್ಗದವರಿಗೆ ಒಳ್ಳೆಯ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲಿಕ್ಕೋಸ್ಕರ ಬಜೆಟ್‌ನಲ್ಲಿ ಹೇಳಿದಂತೆ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಹೊಸದಾಗಿ ಹಲವಾರು ಹಾಸ್ಟೆಲ್‌ಗಳನ್ನು ಕಟ್ಟತಕ್ಕಂಥ ಕೆಲಸವನ್ನು ಮಾಡಿರುವವರು ಯಾರಾದರೂ ಇದ್ದರೆ ಅದು ಕಾಂಗ್ರೆಸ್ ಸರ್ಕಾರ ಎಂದು ಹೇಳುತ್ತೇನೆ. Short ಆಗಿ ಹೇಳುವುದಾದರೆ, ಐದು ಗ್ಯಾರಂಟಿಗಳಿಂದಾಗಿ ಖಂಡಿತವಾಗಿ ಕಷ್ಟಕಾಲದಲ್ಲಿ ಯಾವಾಗ 10 ವರ್ಷಗಳ ಕಾಲ ಈ ದೇಶದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಬಡತನ

ಹೆಚ್ಚಾಗಿತ್ತು. ಅಂತಹ ಸಂದರ್ಭದಲ್ಲಿ ಈ ಬೆಲೆ ಏರಿಕೆಯನ್ನು ತಡೆಗಟ್ಟಲಿಕ್ಕೋಸ್ಕರ, ಜನಗಳಿಗೆ ನೆಮ್ಮದಿಯ ಬದುಕನ್ನು ಕೊಡಲಿಕ್ಕೋಸ್ಕರ, ಸ್ವಾಭಿಮಾನದ ಬದುಕನ್ನು ಕೊಡಲಿಕ್ಕೋಸ್ಕರ ನಮ್ಮ ರಾಜ್ಯ ಸರ್ಕಾರ ಕೊಟ್ಟಂತಹ ಗ್ಯಾರಂಟಿಗಳು ಅನುವು ಆಗಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಈ ಒಂದು ಗ್ಯಾರಂಟಿಗಳನ್ನು ನಾವು ಕೊಟ್ಟಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಇವತ್ತಿಗೂ ಸಹ ಆತ್ಮಹತ್ಯೆಗಳು ಕಡಿಮೆಯಾಗಿವೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮೊದಲ ಗ್ಯಾರಂಟಿ ಯೋಜನೆ ಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಿದಾಗ ಅದನ್ನು ಎಲ್ಲರೂ ಕೂಡ ಸ್ವಾಗತ ಮಾಡಿದರು. ಸುಮಾರು 3.5 ಕೋಟಿಗಿಂತ ಹೆಚ್ಚು ಮಹಿಳೆಯರು ಶಕ್ತಿ ಯೋಜನೆಯ ಲಾಭವನ್ನು ಪಡೆದಿರತಕ್ಕಂಥಾದ್ದು ಕೂಡ ಮಹಿಳೆಯರ ಸಬಲೀಕರಣಕ್ಕೆ ಜ್ವಲಂತ ಸಾಕ್ಷಿ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದರಲ್ಲಿಯೂ ಸಹ ಸುಮಾರು 450 ಕೋಟಿಯಷ್ಟು ಟ್ರಿಪ್‌ಗಳನ್ನು 4 ಸಾರಿಗೆ ಕಾರ್ಪೊರೇಷನ್‌ನಲ್ಲಿ ಮಾಡಿರತಕ್ಕಂಥಾದ್ದು ಒಂದು ಒಳ್ಳೆಯ ಸಂಗತಿಯಾಗಿದೆ. ಅದಕ್ಕೆ ಮೀಸಲಿಟ್ಟ 5,015 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ಕಳೆದ ತಿಂಗಳವರೆವಿಗೂ 4,403 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಎಲ್ಲಾ ಕಡೆ ಸರ್ಕಾರ ದಿವಾಳಿಯಾಗಿರುವುದರಿಂದ ಗ್ಯಾರಂಟಿ ಯೋಜನೆಗಳ ಹಣವನ್ನು ಕೊಡುತ್ತಿಲ್ಲವೆಂದು ಹೇಳಿದರು. ಈಗಾಗಲೇ ಖರ್ಚು ಮಾಡಿರುವ ಹಣದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಯಾರೂ ಕೂಡ ಹಸಿವಿನಿಂದ ಸಾಯಬಾರದೆಂದು ಅನ್ನಭಾಗ್ಯ ವಿಚಾರದಲ್ಲಿಯೂ ಕೂಡ National Food Security Act ಮೇಲೆ....

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾಗರಾಜುರವರು ನಮ್ಮ ಕಡೆ ನೋಡಿ ಮಾತನಾಡುತ್ತಿದ್ದಾರೆ. ಅವರು ಪೀಠವನ್ನು ನೋಡಿಕೊಂಡು ಮಾತನಾಡಲಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ಮಾತನಾಡುತ್ತಿದ್ದೇನೆ, ಪೀಠಕ್ಕೆ ಮಾತನಾಡುತ್ತಿದ್ದೇನೆ. ನಾನು ಯಾರಿಗೂ ಸಹ disturb ಮಾಡುತ್ತಿಲ್ಲ, ದಯಮಾಡಿ ನನ್ನ ಮಾತುಗಳನ್ನು ಕೇಳಿ. ದಯಮಾಡಿ ನನ್ನನ್ನು stop ಮಾಡಲಿಕ್ಕೆ ಹೋಗಬೇಡಿ. I will not stop so easily. ಹಾಗಾಗಿ ನಾನು ಹೇಳುತ್ತಿರುವುದೇನೆಂದರೆ, ಅನ್ನಭಾಗ್ಯ ಯೋಜನೆಗೋಸ್ಕರ ನಾವು ಕೊಟ್ಟಿರತಕ್ಕಂಥ 5 ಕೆ.ಜಿ. ಅಕ್ಕಿಯ ಜೊತೆಗೆ ಒಬ್ಬೊಬ್ಬರಿಗೆ 170 ರೂಪಾಯಿಗಳನ್ನು ಕೊಟ್ಟಿರುವುದನ್ನು ನೋಡಿದಾಗ ನಾವು ಮೀಸಲಿಟ್ಟಿದ್ದ ಹಣ 8,779 ಕೋಟಿ ರೂಪಾಯಿಗಳು 2024-25ರ ಬಜೆಟ್‌ನಲ್ಲಿ ಹೇಳಿದ್ದರು. ಅದನ್ನು ಅನುಷ್ಠಾನಗೊಳಿಸಲಿಕ್ಕೋಸ್ಕರ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿರುವುದು ನಿಜ. ಹಾಗಾಗಿ ಅದರಲ್ಲಿ ಈಗಾಗಲೇ ಡಿಸೆಂಬರ್‌ವರೆವಿಗೂ ಖರ್ಚು ಮಾಡಿರುವುದು 4,595 ಕೋಟಿ ರೂಪಾಯಿಗಳು. ಅದೇ ರೀತಿ ಆವತ್ತು 5 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನಮಗೆ ಸಹಕಾರವನ್ನು ಕೊಡಲಿಲ್ಲ. ಆ ಕಾರಣಕ್ಕೋಸ್ಕರ ಹಣ ಹಾಕತಕ್ಕಂಥ ಪರಿಸ್ಥಿತಿ ಬಂತು. ಈಗ ಕೇಂದ್ರ ಸರ್ಕಾರ

ಅಕ್ಕಿಯನ್ನು ಕೊಡಲು ನಾವು ತಯಾರಿದ್ದೇವೆಂದು ಹೇಳುರುವುದರಿಂದ ಅದೇ ಅಕ್ಕಿಯನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಂಡು ಅದನ್ನು ಹಂಚಿಕೆ ಮಾಡಲು ತಯಾರಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದೇ ರೀತಿ ಗೃಹ ಜ್ಯೋತಿ ಯೋಜನೆ ವಿಚಾರ ಬಂದಾಗ ಮೀಸಲಟ್ಟ 9,657 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 8,389 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದರ ಪ್ರಯೋಜನವನ್ನು 1.6 ಕೋಟಿ ಕುಟುಂಬಗಳು ಪಡೆದುಕೊಂಡಿವೆ. ಅದನ್ನು ಅವರು ಅಭಿನಂದಿಸಬೇಕೇ ಹೊರತು ಅದನ್ನು ಬಿಟ್ಟು ಏಕೆ ಗ್ಯಾರಂಟಿಗಳನ್ನು ಕೊಡುತ್ತೀರಿ, ಏಕೆ ಮಾಡುತ್ತೀರಿ ಎಂದರೆ, ಯಾರು ಬಡತನದಲ್ಲಿದ್ದರು, ಯಾರು ಹಸಿವಿನಿಂದ ಇದ್ದರು, ಯಾರು ಬಡತನ ರೇಖೆಯಲ್ಲಿ ನೊಂದು ಹೋಗಿದ್ದರು, ಅವರಿಗೆ ನಾವು ಅಭಯಹಸ್ತವನ್ನು ಕೊಟ್ಟಿರುವ ಕಾರಣವೇನೆಂದರೆ, ಅವರೆಲ್ಲರೂ ಸ್ವಾಭಿಮಾನಿ ಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇವೆ. ಶ್ರೀಮಂತರು ಇರತಕ್ಕಂಥ ದೇಶದಲ್ಲಿ ಅತೀ ಬಡವರಿರತಕ್ಕಂಥ ದೇಶ ಆಗಿರತಕ್ಕಂಥಾದ್ದು, ಕೆಲವೇ ಕೆಲವು ಶ್ರೀಮಂತರ ಕೈಯಲ್ಲಿ ಅಂದರೆ, ಒಂದು ಪರ್ಸೆಂಟ್ ಜನಗಳ ಕೈಯಲ್ಲಿ ಇಡೀ ದೇಶದ ಆಸ್ತಿಯನ್ನು ಇಟ್ಟುಕೊಂಡಿರುವಂಥ ಸಂದರ್ಭದಲ್ಲಿ ನಾವು ಸಮ ಸಮಾಜವನ್ನು ಕಟ್ಟಲಿಕ್ಕೋಸ್ಕರ, ಡಾ॥ ಬಿ.ಆರ್.ಅಂಬೇಡ್ಕರ್‌ರವರ ಪರಿಕಲ್ಪನೆಯನ್ನು ತರಲಿಕ್ಕೋಸ್ಕರ ಈ ಗ್ಯಾರಂಟಿಗಳನ್ನು ತಂದಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

(ಮುಂದು)

(147) 06/03/2025 7:40 ಎಸ್‌ಪಿಆರ್/ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು)**

ಹಾಗಾಗಿ ಉಚಿತ ವಿದ್ಯುತ್ತನ್ನೂ ಸಹ ಕೊಡುವುದಕ್ಕೆ ಸಾಧ್ಯವಾಯಿತು ಎಂಬ ಮಾತನ್ನು ಹೇಳುತ್ತಿದ್ದೇನೆ. ಗೃಹ ಲಕ್ಷ್ಮೀ ಯೋಜನೆಯಡಿ ಮೂರು-ನಾಲ್ಕು ತಿಂಗಳುಗಳ ಕಾಲ ಹಣ ನೀಡಲಿಲ್ಲ ಎಂಬ ಬಗ್ಗೆ ಬಹಳ ಜನ ಟೀಕಿಸುತ್ತಿದ್ದರು. ಕರ್ನಾಟಕ ರಾಜ್ಯ ಸರ್ಕಾರವು ಯಾವಾಗಲೂ ಸಹ ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುವಂತಹ ಕೆಲಸವನ್ನು ಮಾಡಿದೆ ಎಂಬ ಮಾತನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ಕಾರಣಕ್ಕಾಗಿ ಆಯವ್ಯದಲ್ಲಿ ಮೀಸಲಟ್ಟ 28,608 ಕೋಟಿ ರೂಪಾಯಿಗಳ ಪೈಕಿ ನವೆಂಬರ್ ಮಾಹೆಯ ಅಂತ್ಯದವರೆಗೆ ಈಗಾಗಲೇ 18,353 ಕೋಟಿ ರೂಪಾಯಿಗಳನ್ನು ಉಪಯೋಗಿಸಲಾಗಿದೆ. ಈ ಮೊತ್ತದಲ್ಲಿಯೇ ಗೃಹ ಲಕ್ಷ್ಮೀ ಯೋಜನೆಯಡಿ ಮನೆಯ ಯಜಮಾನಿಗೆ 2,000/- ರೂಪಾಯಿಗಳನ್ನು ನೀಡಿದೆ. ಇಂತಹ ಕೆಲಸವನ್ನು ಇಡೀ ದೇಶದಲ್ಲಿಯೇ ಮಾಡಿರುವ ಮೊದಲನೆ ಸರ್ಕಾರವೆಂದರೆ ಅದು ಶ್ರೀ ಸಿದ್ದರಾಮಯ್ಯ ನವರ ನೇತೃತ್ವದ ಸರ್ಕಾರ ಆಗಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. 1.17 ಕೋಟಿ ಮಹಿಳಾ ಫಲಾನುಭವಿಗಳು ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ. ಇದನ್ನು ಎಲ್ಲರೂ ಸಹ ಮೆಚ್ಚಿಕೊಳ್ಳಬೇಕೆಂಬ ವಿಚಾರವನ್ನು ಹೇಳುತ್ತೇನೆ. ಗ್ಯಾರಂಟಿ ಯೋಜನೆಗಳ ಕುರಿತು ಟೀಕೆ ಮಾಡುವ ಅವುಗಳನ್ನು ಸಮಾಜದ ಯಾವ ವರ್ಗಗಳಿಗೆ ನೀಡಲಾಗುತ್ತಿದೆ ಎಂಬ ಅಂಶಗಳ ಬಗ್ಗೆ ಆಲೋಚನೆ

ಮಾಡಬೇಕು. ಇಂತಹ ಫಲಾನುಭವಿಗಳಿಗೆ ಸರ್ಕಾರವು ನೀಡುತ್ತಿರುವುದು ಯಾವುದೇ ದಾನ ಅಥವಾ ಭಿಕ್ಷೆಯೂ ಸಹ ಅಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅವರುಗಳು ಜಿ.ಎಸ್.ಟಿ.ಯನ್ನು ಪಾವತಿಸುತ್ತಾರೆ. ಇವತ್ತಿನ ದಿವಸ ರಸ್ತೆಯಲ್ಲಿ ಭಿಕ್ಷೆ ಬೇಡುವ ಭಿಕ್ಷುಕನೂ ಸಹ ಟೂಥ್‌ಪೇಸ್ಟ್ ಅನ್ನು ಖರೀದಿ ಮಾಡಬೇಕಾದರೆ, ಆತನೂ ಸಹ ಜಿ.ಎಸ್.ಟಿ.ಯನ್ನು ಪಾವತಿಸುತ್ತಾನೆ. ಆತನ ಹಣವನ್ನು ಆತನಿಗೆ ಕೊಡುತ್ತಿರುವ ಸಂದರ್ಭದಲ್ಲಿ ಇದನ್ನು ಒಂದು ರೀತಿಯಲ್ಲಿ ಸರ್ಕಾರವು ಸಾಲ ಮಾಡುತ್ತಿದೆ ಎಂಬುದಾಗಿ ಹೇಳುತ್ತಾರೆ. ಇಲ್ಲಿ ನಾನು ಹೇಳುವುದನ್ನು ವಿರೋಧ ಪಕ್ಷದವರು ಕೇಳಬೇಕು. 2014 ನೇ ಇಸ್ವಿಯಲ್ಲಿ ಕೇಂದ್ರ ಸರ್ಕಾರವು ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಆಗ ಕೇವಲ 54 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಇತ್ತು. ಇದರ ಹಿಂದಿನ ಸರ್ಕಾರವು 67 ವರ್ಷಗಳ ಕಾಲ ಅಧಿಕಾರ ನಡೆಸಿದೆ. ಆದರೆ ಇವತ್ತಿನ ದಿವಸ ಈ ಸಾಲದ ಪ್ರಮಾಣವು 200 ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ. ದೇಶವನ್ನು ಅಡಮಾನ ಇಡುವುದಕ್ಕೆ ಇವರಿಗೆ ಯಾರು ಅಧಿಕಾರವನ್ನು ನೀಡಿದ್ದಾರೆ ಎಂಬ ಮಾತನ್ನು ನಾನು ಕೇಂದ್ರ ಸರ್ಕಾರದಲ್ಲಿ ಅಧಿಕಾರದಲ್ಲಿರುವ ಪಕ್ಷದವರನ್ನು ಕೇಳಬಯಸುತ್ತೇವೆ. ನಾವು ಸಾಲ ಮಾಡಿರುವುದು ಇಂತಹ ಯೋಜನೆಗಳ ಅನುಷ್ಠಾನಗೊಳಿಸಲು ಮಾತ್ರವೇ ಹೊರತು..., ನೀವು ಮತ್ತೊಂದು ಕಡೆ ಸಾಲ ಮಾಡಿ 200 ಲಕ್ಷ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದೀರಿ. 45 ವರ್ಷಗಳಿಂದ ಅತೀ ಹೆಚ್ಚಿನ ಪ್ರಮಾಣದಲ್ಲಿ ನಿರುದ್ಯೋಗವು ಸೃಷ್ಟಿಯಾಗಿರಬೇಕಾದರೆ, ಕಳೆದ ಹತ್ತು ವರ್ಷಗಳಿಂದ ಕೇಂದ್ರದಲ್ಲಿ ಆಡಳಿತ ಮಾಡುವ ಸರ್ಕಾರದ ಬಗ್ಗೆ ಬಹಳ ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವರು ಒಂದು ಕಡೆ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಎಂಬುದಾಗಿ ಹೇಳುತ್ತಿದ್ದು, ಉದ್ಯೋಗಗಳನ್ನು ಸೃಷ್ಟಿ ಮಾಡದೇ, ಅದರ ಬದಲಾಗಿ ನಿರುದ್ಯೋಗವನ್ನು ಸೃಷ್ಟಿ ಮಾಡಿದ್ದಾರೆ. ಬಡವರನ್ನು ಬಡವರಾಗಿಯೇ ಇಟ್ಟಿದ್ದಾರೆ. ಶ್ರೀಮಂತರನ್ನು ಇನ್ನೂ ಶ್ರೀಮಂತರನ್ನಾಗಿ ಮಾಡಲು ಹೊರಟ್ಟಿದ್ದಾರೆ. ಬಡವರು ಮತ್ತು ಶ್ರೀಮಂತರ ನಡುವೆ ಇರುವ ಅಂತರವನ್ನು ಜಾಸ್ತಿ ಮಾಡಿರುವುದನ್ನು ನಾನು ಪ್ರಶ್ನಿಸುತ್ತಿದ್ದೇನೆ.

ಯುವ ನಿಧಿ ಯೋಜನೆಯಲ್ಲಿಯೂ ಸಹ ನಮ್ಮ ಸರ್ಕಾರವು 650 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದು, ಈ ಪೈಕಿ 240 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಇದು ಪದವಿಧರರು ಅಥವಾ ಡಿಪ್ಲೋಮಾದವರಿಗೆ ಇರಬಹುದು. ಅವಶ್ಯವಿದ್ದಲ್ಲಿ ಇದೇ ವಿಚಾರವಾಗಿ ಒಂದೊಂದು ಗಂಟೆ ಸಮಯದಷ್ಟು ಮಾತನಾಡಬಹುದು.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಗಂಟೆ ಅಲ್ಲ ಕೇವಲ ಮೂರು ನಿಮಿಷಗಳ ಕಾಲಾವಕಾಶ ಮಾತ್ರವೇ ನಿಮಗೆ ಇದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಈಗಷ್ಟೇ ನನ್ನ ಭಾಷಣವನ್ನು ಪ್ರಾರಂಭಿಸಿದ್ದೇನೆ. ನಾನು ಒಬ್ಬ ಪ್ರಾಮಾಣಿಕ ಸದಸ್ಯನಾಗಿ ಸದನದಲ್ಲಿ ಬೆಳಗ್ಗೆಯಿಂದ ಕುಳಿತುಕೊಂಡು ಬೇರೆ ಸದಸ್ಯರುಗಳು ಮಾತನಾಡುವ ಎಲ್ಲಾ ವಿಚಾರಗಳನ್ನು ಕೇಳಿಸಿಕೊಳ್ಳುತ್ತೇನೆ. ಅದೇ ರೀತಿ ನಾನು ಮಾತನಾಡಬೇಕಾದರೆ, ನನ್ನ ಮಾತನ್ನು ಕೇಳಬೇಕೆಂದು ವಿರೋಧ ಪಕ್ಷದ ಸದಸ್ಯರಿಗೆ ಮನವಿ ಮಾಡುತ್ತೇನೆ.

ಅವರುಗಳು ಇನ್ನೂ ಅರ್ಧ ಗಂಟೆಗಳ ಕಾಲ ಸದನದಲ್ಲಿ ಕುಳಿತುಕೊಂಡರೆ, ಏನೂ ಆಗುವುದಿಲ್ಲ ಎಂದು ನಾನು ಬಹಳ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಇನ್ನೂ ಹೆಚ್ಚಿನ ಸಮಯಾವಕಾಶ ಬೇಕಾಗುತ್ತದೆ. ಬೇರೆ ಸದಸ್ಯರುಗಳಿಗೆ ಅರ್ಧ ಗಂಟೆ – ಒಂದು ಗಂಟೆಗಳಷ್ಟು ಸಮಯಾವಕಾಶವನ್ನು ಕೊಟ್ಟಿರಬೇಕಾದರೆ, ನನಗೆ ಅರ್ಧ ಗಂಟೆಗಳಷ್ಟು ಸಮಯವನ್ನು ....,

**ವೈಸ್ ಛೇರ್ಮನ್:–** ನೀವು ಮಾತನಾಡುವಾಗ ಮಧ್ಯದಲ್ಲಿ ಯಾರೂ ಮಾತನಾಡಬಾರದು ಎಂದು ನಾನು ಈಗಾಗಲೇ ಹೇಳಿದ್ದೇನೆ. ಹೀಗಾಗಿ ನೀವು ಮುಂದುವರೆಸಿ. ಇನ್ನು ಮೂರು ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ನನಗೆ ಇನ್ನೂ ಹೆಚ್ಚಿನ ಸಮಯಾವಕಾಶವನ್ನು ನೀಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಸದಸ್ಯರು ಹೀಗೆ ತುಂಬಾ ವೇಗವಾಗಿ ಮಾತನಾಡಿದರೆ, ಅದನ್ನು ದಾಖಲಿಸಿಕೊಳ್ಳುವ ಶೀಘ್ರಲಿಪಿಗಾರರು... **(ಗೊಂದಲ)**

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ಈಗ ನಾವುಗಳು ಕೃತಕ ಬುದ್ಧಿಮತ್ತೆಯ (ಎ.ಐ.) ತಂತ್ರಾಂಶದ ಪ್ರಪಂಚದಲ್ಲಿದ್ದೇವೆ. ಇನ್ನೂ ಶೀಘ್ರಲಿಪಿಯಲ್ಲಿ ಬರೆದುಕೊಳ್ಳುವ ಪ್ರಪಂಚದಲ್ಲಿ ನಾವು ಇಲ್ಲ. ನಾವು ಮಾತನಾಡುವುದನ್ನು ಮೊದಲು ರೆಕಾರ್ಡಿಂಗ್ ಮಾಡಿಕೊಂಡು, ನಂತರದಲ್ಲಿ ಅದನ್ನು ಬೆರಳಚ್ಚುಗೊಳಿಸಬೇಕಾಗುತ್ತದೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಎಂಬುದಾಗಿ ನಾನು ಹೇಳುತ್ತಿದ್ದೇನೆ. ಮಾಹಿತಿ ತಂತ್ರಜ್ಞಾನವನ್ನು ಈ ದೇಶಕ್ಕೆ ಯಾರಾದರೂ ನೀಡಿದ್ದರೆ, ಅದು ಕಾಂಗ್ರೆಸ್ ಪಕ್ಷದ ದಿವಂಗತ ಎಸ್.ಎಂ.ಕೃಷ್ಣ ರವರ ನೇತೃತ್ವದ ಸರ್ಕಾರದ ಅವಧಿಯಲ್ಲಿ. ಅವರ ಅಧಿಕಾರಾವಧಿಯ ಸಂದರ್ಭದಲ್ಲಿ ನಮ್ಮ ರಾಜ್ಯವು ಇಡೀ ದೇಶಕ್ಕೆಲ್ಲಾ ಮಾದರಿಯಾದ ರಾಜ್ಯವಾಗಿತ್ತು. ಇನ್ನೂ ಶೀಘ್ರಲಿಪಿಯಲ್ಲಿ ಬರೆದುಕೊಳ್ಳುವ ಕಾಲದಲ್ಲಿಯೇ ಇದ್ದರೆ ಆಗುವುದಿಲ್ಲ. Will have to go in for a technology ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ರಾಜ್ಯದ ಒಬ್ಬೊಬ್ಬ ನಾಗರಿಕನು ಕೇಂದ್ರ ಸರ್ಕಾರಕ್ಕೆ ಎಷ್ಟು ಜಿ.ಎಸ್.ಟಿ.ಯನ್ನು ಪಾವತಿಸುತ್ತಾನೆ ಎನ್ನುವುದು ಗೊತ್ತಿದೆಯೇ? ನಮ್ಮ ಕನ್ನಡಿಗರು 13,428 ಕೋಟಿ ರೂಪಾಯಿಗಳಷ್ಟು ಜಿ.ಎಸ್.ಟಿ. ಅನ್ನು ಪಾವತಿಸುತ್ತಾರೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಆದರೆ, ಉತ್ತರ ಪ್ರದೇಶ ರಾಜ್ಯದಲ್ಲಿರುವ ನಾಗರಿಕರು ಕೇವಲ 2,793/- ಕೋಟಿ ರೂಪಾಯಿಗಳನ್ನು ಮಾತ್ರವೇ ಜಿ.ಎಸ್.ಟಿ. ಆಗಿ ಪಾವತಿಸುತ್ತಾರೆ. ಅದೇ ರೀತಿಯಾಗಿ ಮಧ್ಯ ಪ್ರದೇಶ ರಾಜ್ಯದಲ್ಲಿರುವ ನಾಗರಿಕರು ಕೇವಲ 3,000/- ಕೋಟಿ ರೂಪಾಯಿಗಳನ್ನು ಮಾತ್ರವೇ ಜಿ.ಎಸ್.ಟಿ. ಆಗಿ ಪಾವತಿಸುತ್ತಾರೆ. ಆದರೆ, ನಮ್ಮ ಕನ್ನಡಿಗರು ದೇಶದ ಖಜಾನೆಗೆ 13,428/- ಕೋಟಿ ರೂಪಾಯಿಗಳನ್ನು ಪಾವತಿಸುತ್ತಾರೆ. ಕೇಂದ್ರ ಸರ್ಕಾರವು ನಮ್ಮಿಂದಲೇ 4.5 ಲಕ್ಷ ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಪಡೆದುಕೊಂಡು, ನಮಗೆ ಕೇವಲ ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟನ್ನೇ ಮಾತ್ರವೇ ನೀಡುತ್ತಿದೆ. ವಾಸ್ತವವಾಗಿ ನಮಗೆ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು

ವಾಪಸ್ಸು ಬರಬೇಕು. ಆದರೆ ಕೇವಲ ಇಷ್ಟು ಮೊತ್ತವನ್ನು ಮಾತ್ರವೇ ನೀಡಿ, ಕನ್ನಡಿಗರಿಗೆ ಅವಮಾನ ಮಾಡುವ ಕೆಲಸವನ್ನು ಮಾಡಿದೆ. ಮುಂದುವರೆದು ಹೇಳುವುದಾದರೆ, ಶ್ರೀ ಗೋವಿಂದರಾಜು ರವರು ಮಾತನಾಡುವ ಸಂದರ್ಭದಲ್ಲಿ ಸಾಲ ಮಾಡುತ್ತಾರೆ ಎಂಬ ಅಂಶದ ಬಗ್ಗೆ ಪ್ರಸ್ತಾಪಿಸಿದರು. ಅವರು ಈಗಷ್ಟೇ ಸದನದಿಂದ ಹೊರಗಡೆ ಹೋಗಿದ್ದಾರೆ. ನಮಗೆ ಬರಬೇಕಾದ ತೆರಿಗೆ ಪಾಲು ಸರಿಯಾಗಿ ಬಂದಿದ್ದೇ ಆದರೆ, ನಮ್ಮ ರಾಜ್ಯವು ಒಂದು ರೂಪಾಯಿಯನ್ನೂ ಸಹ ಸಾಲ ಮಾಡುವ ಅವಶ್ಯಕತೆ ಇರುವುದಿಲ್ಲ. ನಾವು ಸಂಪತ್ಭರಿತವಾಗಿ ಕೆಲಸವನ್ನು ಮಾಡಬಹುದು. ವಿರೋಧ ಪಕ್ಷದವರಿಗೆ ಅರ್ಥವಾಗಬೇಕೆಂದರೆ, ಈ ವಿಚಾರವನ್ನು ಬಹಳ ಸರಳವಾಗಿ ಹೇಳಬೇಕಾಗುತ್ತದೆ. ನಾನು ಕೇಂದ್ರ ಸರ್ಕಾರಕ್ಕೆ 100/- ರೂಪಾಯಿಗಳನ್ನು ನೀಡಿದರೆ, ಅದು ನಮಗೆ ಕೇವಲ 13/- ರೂಪಾಯಿಗಳನ್ನು ಮಾತ್ರವೇ ವಾಪಸ್ಸು ನೀಡುತ್ತದೆ. ಇನ್ನೊಂದು ದೊಡ್ಡ ದುರಂತವೇನೆಂದರೆ, 14 ನೇ ಹಣಕಾಸು ಆಯೋಗದಲ್ಲಿ ನಮ್ಮ ರಾಜ್ಯದ ಪಾಲು ಶೇಕಡಾ 4.70 ರಷ್ಟಿದ್ದರೆ, 15 ನೇ ಹಣಕಾಸು ಆಯೋಗದಲ್ಲಿ ಶೇಕಡಾ 3.64 ರಷ್ಟು ಇದೆ. ಇದರ ನಡುವಿನ ವ್ಯತ್ಯಾಸ ಶೇಕಡಾ 1.07 ರಷ್ಟು ಆಗಿರುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಕನ್ನಡಿಗರಿಗೆ ಅವಮಾನ ಮಾಡಿರುವ ವಿಚಾರವನ್ನು ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸ್ಥಾಪಿತವಾದ ಬ್ಯಾಂಕುಗಳಾದ ಮೈಸೂರು ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ವಿಜಯ ಬ್ಯಾಂಕ್ ಇವುಗಳೆಲ್ಲವನ್ನೂ ಕೇಂದ್ರ ಸರ್ಕಾರದಲ್ಲಿ ಅಧಿಕಾರದಲ್ಲಿರುವ ಪಕ್ಷವು ನಿರ್ನಾಮ ಮಾಡಿದೆ. ಇದು ಕರ್ನಾಟಕ, ಕನ್ನಡಿಗರಿಗೆ ಮತ್ತು ಕರಾವಳಿ ಪ್ರದೇಶಕ್ಕೆ ಮಾಡಿದ ಅವಮಾನವಾಗಿದೆ. ನೀರಾವರಿ ವಿಷಯದಲ್ಲಿಯೂ ಸಹ ರಾಜ್ಯ ಸರ್ಕಾರವು ಬಹಳ ವಿಚಾರಗಳನ್ನು ಮಾಡಿದೆ. ನನಗೆ ಬಹಳ ನೋವಿನ

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ,...

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಶ್ರೀ ರವಿಕುಮಾರ್ ರವರೇ ನಾನು ಯೀಲ್ಡ್ ಆಗಿಲ್ಲ. I have not yielded, I am very sorry.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ತಾವು ಹೇಳಿರುವುದನ್ನು ಸ್ವಲ್ಪ ಬರೆದುಕೊಳ್ಳುವುದಕ್ಕಾಗುತ್ತಿಲ್ಲ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಇದಕ್ಕೆ ಬೇಕಾಗಿರುವುದು ಆಧುನಿಕ ತಂತ್ರಜ್ಞಾನ ಎಂಬ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ನನ್ನ ಭಾಷೆಯಲ್ಲಿ ಅಥವಾ ನಾನು ಬಳಸುವ ಪದದಲ್ಲಿ ಯಾವುದೇ ತಪ್ಪುಗಳಿದ್ದರೆ, ಯಾರು ಬೇಕಾದರೂ ... (ಗೊಂದಲ)

**ವೈಸ್ ಛೇರ್ಮನ್:-** ನೀವು ಪೀಠದೊಂದಿಗೆ ಮಾತನಾಡಿ ಹಾಗೂ ತಮ್ಮ ಭಾಷಣವನ್ನು ಬೇಗ ಮುಗಿಸಿ. ಇನ್ನು ಎರಡೇ ನಿಮಿಷಗಳ ಕಾಲಾವಕಾಶವಿದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಪೀಠಕ್ಕೆ ಹೇಳುತ್ತಿದ್ದೇನೆ. ನಾನು ಬಹಳ ದುಃಖದಿಂದ ಹೇಳುವುದೇನೆಂದರೆ, ವಿರೋಧ ಪಕ್ಷದವರು ಸಾಲ, ಸಾಲ ಎಂದು ಹೇಳಿ ಬಹಳ ಬೇಜಾರು

ಮಾಡಿಕೊಂಡಿದ್ದರು. ಕೇಂದ್ರ ಸರ್ಕಾರವು ಘೋಷಿಸಿದ ಆಯವ್ಯಯದಲ್ಲಿ ನಮ್ಮ ರಾಜ್ಯಕ್ಕೆ ಕೊಡಬೇಕಾದ ಅನುದಾನದಲ್ಲಿ..., ಭದ್ರಾ ಮೇಲ್ದಂಡೆ ಯೋಜನೆಗೆ 5,300/- ಕೋಟಿ ರೂಪಾಯಿಗಳನ್ನು ನೀಡಿ ಅದನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುತ್ತೇವೆಂದು ಚುನಾವಣಾ ಸಂದರ್ಭದಲ್ಲಿ ಕೊಚ್ಚಿಕೊಂಡಿದ್ದರು. ಇಲ್ಲಿಯವರೆಗೆ ಕೇವಲ ಒಂದು ರೂಪಾಯಿಯನ್ನೂ ಸಹ ಇದಕ್ಕಾಗಿ ಬಿಡುಗಡೆ ಮಾಡದೇ ಇರುವುದು ದುರಂತ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಬಹಳ ಸದಸ್ಯರು ಮಾತನಾಡುತ್ತಿದ್ದರು. ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರದ ನಾಯಕರೊಂದಿಗೆ ಮಾತನಾಡಿ, ಪರಿಸರ ಅನುಮತಿಯನ್ನು ಪಡೆಯುವಂತೆ ಹಾಗೂ ಇದನ್ನು ಪಡೆದುಕೊಂಡ ತಕ್ಷಣವೇ ಯೋಜನೆಯ ಕೆಲಸಗಳನ್ನು ಪ್ರಾರಂಭ ಮಾಡುವುದಾಗಿ ನಾನು ಇಲ್ಲಿರುವ ವಿರೋಧ ಪಕ್ಷದ ಸದಸ್ಯರಿಗೆ ಹೇಳುತ್ತಿದ್ದೇನೆ. You have not given us the environmental clearance ಎಂಬ ಮಾತನ್ನು ನಾನು ವಿರೋಧ ಪಕ್ಷದವರಿಗೆ ಹೇಳುತ್ತಿದ್ದೇನೆ. ಅದನ್ನು ಬಿಟ್ಟು ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಪ್ರಸ್ತಾಪಿಸಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಅವರ ಜವಾಬ್ದಾರಿ ಏನು ಎಂದು ಅರಿತುಕೊಂಡು ಅವರುಗಳು ಮಾತನಾಡಬೇಕು. ಅದೇ ರೀತಿಯಾಗಿ ಕಳಸಾ-ಬಂಡೂರಿ ಯೋಜನೆಗೂ ಸಹ ಕೇಂದ್ರ ಸರ್ಕಾರವು ಅನುಮೋದನೆಯನ್ನು ಯಾವ ಕಾರಣಕ್ಕಾಗಿ ನೀಡುತ್ತಿಲ್ಲವೆಂದು ನಾನು ಪ್ರಶ್ನಿಸುತ್ತೇನೆ. ಮೇಕೇದಾಟು ಯೋಜನೆಯ ಬಗ್ಗೆಯೂ ಸಹ ವಿರೋಧ ಪಕ್ಷದವರು ಟೀಕೆ ಟಿಪ್ಪಣಿಗಳನ್ನು ಮಾಡುತ್ತಾರೆ. ಬೆಂಗಳೂರಿನಿಂದ ನಾವು 150 ಕಿಲೋಮೀಟರ್‌ನಷ್ಟು ಪಾದಯಾತ್ರೆಯನ್ನು ಮಾಡಿದ್ದೇವೆ. ಬೆಂಗಳೂರಿಗೆ ನೀರು ಕೊಡಬೇಕು ಎನ್ನುವ ವಿಚಾರಕ್ಕೋಸ್ಕರ ನಾವು ಇದನ್ನು ಮಾಡಿದ್ದೇವೆ. ಆದರೆ, ಇದುವರೆವಿಗೂ ಸಹ ಈ ಯೋಜನೆಗೆ ಅನುಮೋದನೆಯನ್ನು ನೀಡುವುದಕ್ಕೆ ಕೇಂದ್ರ ಸರ್ಕಾರವು ತಯಾರಿಲ್ಲ ಎನ್ನುವುದಾದರೆ, ಬೆಂಗಳೂರು ನಗರದ ಸುತ್ತಮುತ್ತ ಚುನಾಯಿತರಾದ ಎಲ್ಲಾ ಸಂಸದರಿಗೆ ನಾಚಿಕೆಯಾಗುವುದಿಲ್ಲವೇ? ಯಾವ ಕಾರಣಕ್ಕೋಸ್ಕರ

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ವೈಸ್ ಛೇರ್ಮನ್:-** ಶ್ರೀ ನಾಗರಾಜುರವರೇ, ನಿಮ್ಮ ಭಾಷಣವನ್ನು ಬೇಗ ಮುಗಿಸಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ,..

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ...

**ವೈಸ್ ಛೇರ್ಮನ್:-** ನೀವು ಪೀಠದ ಹತ್ತಿರ ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಜನರು ನಮ್ಮ ರಾಜ್ಯದಿಂದ 25 ಸಂಸದರನ್ನು ಗೆಲ್ಲಿಸಿದ್ದಾರೆ

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಮಾತನಾಡುತ್ತಿದ್ದು, ಅವರಿಗೆ ಯೀಲ್ಡ್ ಆಗಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಸದಸ್ಯರು ಜನರಿಗೆ ಅವಮಾನ ಮಾಡಲು ಹೊರಟಿದ್ದಾರೆ.

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಜನರ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೇನೆ. ನಾನು ಹೇಳುವುದನ್ನು ಕೇಳಿ. ಒಂದು ನಿಮಿಷ ತಾಳಿ. **(ಗೊಂದಲ)** ನನ್ನ ಸಮಯವನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಕರ್ನಾಟಕ ಜನರಿಗೆ ಅವಮಾನ ಮಾಡಲು ಹೊರಟಿದ್ದಾರೆ.

**ವೈಸ್ ಛೇರ್ಮನ್:-** ಶ್ರೀ ನಾಗರಾಜುರವರೇ, ನಿಮ್ಮ ಸಮಯ ಆಗಿದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನನ್ನ ಸಮಯ ಇನ್ನೂ ಇದೆ. ಬೆಂಗಳೂರು ನಗರದಲ್ಲಿ ಹುಟ್ಟಿರುವ ನಾವು ವಿರೋಧ ಪಕ್ಷದ ಗಮನಕ್ಕೆ ತರುವ ವಿಚಾರವೇನೆಂದರೆ, ಬೆಂಗಳೂರು ನಗರದ ಫೆರಿಫೆರಲ್ ರಸ್ತೆಗೆ ಮೂರು ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ನೀಡುವುದಾಗಿ ತಿಳಿಸಿದ್ದರು. ಆದರೆ ಇದಕ್ಕೆ ಕನಿಷ್ಠ ಮೂರು ರೂಪಾಯಿಗಳನ್ನಾದರೂ ಸಹ ನೀಡಲಿಲ್ಲ. ಬೆಂಗಳೂರು ನಗರದಿಂದ ಮೂರು ಜನ ಸಂಸದರು ಆಯ್ಕೆಗೊಂಡಿದ್ದಾರೆ. ಹೀಗಾಗಿ ನಾವು ಯಾರ ಬಗ್ಗೆ ಹೇಳಬೇಕು. ನಾವು ಯಾರ ಹತ್ತಿರ ಹೋಗಿ ಅಳಬೇಕು ಎಂಬ ವಿಚಾರವನ್ನು ನಾನು ಕೇಳುತ್ತಿದ್ದೇನೆ. ಅದೇ ರೀತಿಯಾಗಿ ಬೆಂಗಳೂರು ಸುತ್ತಮುತ್ತಲಿನ ಕೆರೆಗಳನ್ನು ತುಂಬಿಸುವುದಕ್ಕಾಗಿ ಮೂರು ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ನೀಡುವುದಾಗಿ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿತ್ತು. ಆದರೆ ಇದಕ್ಕೆ ಕನಿಷ್ಠ ಮೂರು ರೂಪಾಯಿಗಳನ್ನಾದರೂ ಸಹ ನೀಡಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಿರೋಧ ಪಕ್ಷದವರು ನಮ್ಮ ಸರ್ಕಾರವನ್ನು ಪ್ರಶ್ನೆ ಮಾಡಲು ಹೊರಟಿದ್ದಾರೆ. ನಮ್ಮದು ನುಡಿದಂತೆ ನಡೆದ ಸರ್ಕಾರವಾಗಿದೆ. ಕಳೆದ ವರ್ಷದ ಅಂದರೆ 2024-25 ನೇ ಸಾಲಿನಲ್ಲಿ ಘೋಷಿಸಿದ 344 ಯೋಜನೆಗಳ ಪೈಕಿ 330 ಕ್ಕಿಂತಲೂ ಹೆಚ್ಚಿನ ಆಶ್ವಾಸನೆಗಳನ್ನು ಈಡೇರಿಸಿದ್ದಕ್ಕಾಗಿ ನಮ್ಮನ್ನು ಅಭಿನಂದಿಸಬೇಕು. ಆದರೆ ಅದನ್ನು ಬಿಟ್ಟು ಯಾವ ಬಾಯಿಯಿಂದ ಟೀಕೆ ಟಿಪ್ಪಣಿಗಳನ್ನು ಮಾಡುತ್ತೀರಿ ಎಂದು ನಾನು ಪ್ರಶ್ನಿಸುತ್ತೇನೆ. ಮೆಟ್ರೋ ಬಗೆಗಿನ ಅನುದಾನವನ್ನು ಕೇವಲ ನಿಮ್ಮ ಆಯವ್ಯಯದ ಪುಸ್ತಕದಲ್ಲಿಯೇ ಮಾತ್ರವೇ ತೋರಿಸಲಾಗುತ್ತಿದೆ. ಮೆಟ್ರೋ ಸಾರಿಗೆಯ ದರವನ್ನು ಹೆಚ್ಚಳ ಮಾಡಿದ್ದಕ್ಕೆ ನಮ್ಮ ಸರ್ಕಾರದ ಮೇಲೆ ಗೂಬೆಯನ್ನು ಕೂಡಿಸುತ್ತಾರೆ. ಇದರ ಅಧ್ಯಕ್ಷರು ಯಾರು ಎಂದು ನಾನು ಕೇಳಬೇಕಾಗುತ್ತದೆ. ಇದರಲ್ಲಿನ ಮೂರು ಸದಸ್ಯರುಗಳ ಪೈಕಿ ಇಬ್ಬರನ್ನು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುತ್ತಾರೆ ಎಂಬ ಮಾತನ್ನು

ವಿರೋಧ ಪಕ್ಷದವರು ಮರೆಯಬಾರದು ಎಂದು ನಾನು ಹೇಳುತ್ತೇನೆ. ರಾಜ್ಯ ಸರ್ಕಾರವು ಮೆಟ್ರೋ ಸಾರಿಗೆ ದರವನ್ನು ಹೆಚ್ಚಳ ಮಾಡಿದೆ ಎಂದು ಹೇಳುವ ಮೂಲಕ ಜನರ ದಿಕ್ಕನ್ನು ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿಯಾಗಿ ಸುಳ್ಳನ್ನು ಹೇಳುವುದಕ್ಕೂ ಸಹ ಇವರಿಗೆ ನಾಚಿಕೆಯಾಗಬೇಕು. ಈ ರೀತಿಯಾಗಿ ಮಾಡಬಾರದು ಎಂದು ನಾನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮನವಿಯನ್ನು ಮಾಡುತ್ತಿದ್ದೇನೆ.

**ವೈಸ್ ಛೇರ್ಮನ್:-** ಶ್ರೀ ನಾಗರಾಜುರವರೇ, ನಿಮಗೆ ಇನ್ನು ಕೇವಲ ಎರಡು ನಿಮಿಷಗಳಷ್ಟು ಕಾಲಾವಕಾಶವು ಮಾತ್ರವೇ ಉಳಿದಿದೆ. ನಾನು ಬೆಲ್ ಮಾಡಿದ ತಕ್ಷಣವೇ ನೀವು ಭಾಷಣವನ್ನು ಮುಗಿಸಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಪೀಠಕ್ಕೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ನಾನು ಬೆಳಗ್ಗೆ 10 ಗಂಟೆಯಿಂದ ಇಲ್ಲಿಯೇ ಕುಳಿತುಕೊಂಡು ನನ್ನ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ನೀವು ಈ ರೀತಿಯಾಗಿ ಮಾಡಿದರೆ, ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ನಾನು ತಪ್ಪು ಮಾತನಾಡಿದರೆ ಅದನ್ನು ಹೇಳಿ. No, this is not fair.

**ವೈಸ್ ಛೇರ್ಮನ್:-** ಶ್ರೀ ನಾಗರಾಜುರವರೇ, ನಿಮಗೆ ಕೇವಲ ಎರಡು ನಿಮಿಷಗಳಷ್ಟು ಸಮಯ ಮಾತ್ರವೇ ಇದೆ. ಎಲ್ಲರಿಗಿಂತ ಹೆಚ್ಚಿನ ಸಮಯವನ್ನು ನಿಮಗೆ ನೀಡುತ್ತಿದ್ದೇನೆ. ಹೀಗಾಗಿ ಎರಡು ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ನಾನು ತಪ್ಪು ಅಥವಾ ಸುಳ್ಳನ್ನು ಮಾತನಾಡಿದರೆ, ನನ್ನನ್ನು ಕೂಡುವುದಕ್ಕೆ ಹೇಳಿ.

**ವೈಸ್ ಛೇರ್ಮನ್:-** ಇಲ್ಲಿ ತಪ್ಪಿನ ಪ್ರಶ್ನೆ ಇಲ್ಲ; ಕೇವಲ ಸಮಯದ ಪ್ರಶ್ನೆ ಇದೆ ಅಷ್ಟೇ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಇದು ಸಮಯದ ಪ್ರಶ್ನೆಯಲ್ಲ; ನನ್ನ ಹಕ್ಕಿನ ಪ್ರಶ್ನೆಯಾಗಿದೆ. ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. There is no limit for this. ನಾನು ಯೀಲ್ಡ್ ಆಗಿಲ್ಲ; ನನಗೆ ಇನ್ನೂ ಸಮಯ ಬೇಕು ಎಂದು ನಾನು ಹೇಳುತ್ತಿದ್ದೇನೆ.

ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ., ಮತ್ತು ಶೋಷಿತ ವರ್ಗಗಳ ವಿಚಾರದ ಬಗ್ಗೆ ಅವರು ಸಾಕಷ್ಟು ಮಾತನಾಡುತ್ತಾ, ಅಲ್ಲಿನ ಹಣ ಡೀವಿಯೇಟ್ ಆಗಿದೆ ಎಂದು ಹೇಳುತ್ತಿದ್ದರು. ಆದರೆ, ಕಾಂಗ್ರೆಸ್ ಪಕ್ಷದ ಶ್ರೀ ಸಿದ್ದರಾಮಯ್ಯರವರ ನೇತೃತ್ವದ ಸರ್ಕಾರವು SCSP (Scheduled Castes Sub Plan) and TSP (Tribal Sub Plans) ಯೋಜನೆಯನ್ನು ಜಾರಿಗೊಳಿಸಿದೆ. ನಮ್ಮ ದೇಶದಲ್ಲಿ ಇದನ್ನು ಜಾರಿಗೊಳಿಸಿದ್ದರಲ್ಲಿ ನಮ್ಮ ರಾಜ್ಯವು ಎರಡನೇ ರಾಜ್ಯವಾಗಿದೆ. ವಿರೋಧ ಪಕ್ಷದವರಿಗೆ ಟೀಕೆ ಮಾಡುವ ನೈತಿಕತೆ ಇರುವುದಾರೆ, ಭಾರತೀಯ ಜನತಾ ಪಕ್ಷದ ಸರ್ಕಾರಗಳಲ್ಲಿ ಈ ರೀತಿಯ ಕಾಯ್ದೆಗಳನ್ನು ಜಾರಿಗೊಳಿಸಿ, ರಾಷ್ಟ್ರದಲ್ಲಿಯೇ ಅವುಗಳನ್ನು ಅನುಷ್ಠಾನಗೊಳಿಸುವ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತೇನೆ. ಆದರೆ, ಈ ರೀತಿಯಾಗಿ ಮಾಡುವುದಕ್ಕೆ ಯೋಗ್ಯತೆ ಇಲ್ಲದೇ ಇರುವವರು ನಮ್ಮ ಸರ್ಕಾರದ ಬಗ್ಗೆ ಪ್ರಶ್ನೆಯನ್ನು ಮಾಡುತ್ತಾರೆ ಎಂದರೆ

ಅದು ಯಾವ ಕಾರಣಕ್ಕಾಗಿ ಎಂದು ನಾನು ಕೇಳುತ್ತೇನೆ. ಕಳೆದ ಸಾಲಿನ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಿಗಾಗಿ 39,129 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ.

**ವೈಸ್ ಛೇರ್ಮನ್:-** ಶ್ರೀ ನಾಗರಾಜು ರವರೇ ನಿಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಹೀಗೆ ಹಣವನ್ನು ಮೀಸಲಿಡುವ ವ್ಯಕ್ತಿ ಯಾರಾದರೂ ಇದ್ದರೆ ಅದು ಆರ್ಥಿಕ ಸಚಿವರಾಗಿದ್ದಾರೆ. ಇವರು ನಾಳೆಯ ದಿನ ಬೆಳಗ್ಗೆ ತಮ್ಮ 16ನೇಯ ಆಯವ್ಯಯವನ್ನು ಮಂಡಿಸಲಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ...

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, I have not yielded. ನಾನು ಯೀಲ್ಡ್ ಆಗಿಲ್ಲ.

**(ಗೊಂದಲ)**

(ಮುಂದು)

(148) 06-03-2025(7-50) **BKP-BNS** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಛಲವಾದಿ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು);-** ಮಾನ್ಯ ಎಂ. ನಾಗರಾಜುರವರೆ, you have to yield. You respect the Chair.

**Sri M.NAGARAJU:-** I have not yielded.

**ಶ್ರೀ ಛಲವಾದಿ ಎಂ. ನಾರಾಯಣಸ್ವಾಮಿ:-** ಮಾನ್ಯ ಎಂ. ನಾಗರಾಜುರವರೆ, ನೀವು ಏನು ಮಾತನಾಡುತ್ತಿದ್ದೀರಿ? ಮಾನ ಮರ್ಯಾದೆ ಇಲ್ಲ ಎಂಬ ಮಾತುಗಳನ್ನು ಆಡುತ್ತಿದ್ದೀರಿ. ನೀವು ಹೇಳುತ್ತಿರುವುದೆಲ್ಲಾ ಸುಳ್ಳು ಎಂದು ನಾನು ರುಜುವಾತು ಪಡಿಸುತ್ತೇನೆ. ಕುಳಿತುಕೊಳ್ಳಿ. ನಾಲಿಗೆಗೆ ಬಂದಂತೆಲ್ಲಾ ಮಾತನಾಡುವುದಲ್ಲ. Respect ಕೊಡಿ.

**ಶ್ರೀ ಎಂ.ನಾಗರಾಜು:-** ನೀವು ಹೇಳಿದ ರೀತಿಯಲ್ಲಿ ನಾವು ಮಾತನಾಡಲಿಕ್ಕೆ ಆಗುವುದಿಲ್ಲ. ಭಾಷೆಯ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ (ಗೊಂದಲ) ದೇಶ ಒಡೆಯುವ ಅವಶ್ಯಕತೆ ಇಲ್ಲ.

**(ಗೊಂದಲ)**

**ಶ್ರೀ ಛಲವಾದಿ ಎಂ. ನಾರಾಯಣಸ್ವಾಮಿ:-** ಸ್ವಲ್ಪ ಗೌರವದಿಂದ ಮಾತನಾಡಬೇಕು. ಈ ರೀತಿಯೆಲ್ಲಾ ಮಾತನಾಡಬಾರದು. SCP/TSP ಬಗ್ಗೆ ನಿಮಗೆ ಏನು ಗೊತ್ತಿದೆ? ಏನೂ ಗೊತ್ತಿಲ್ಲದೇ ಭಾಷಣ ಮಾಡುತ್ತಿದ್ದೀರಿ.

**(ಗೊಂದಲ)**

**ವೈಸ್‌ಛೇರ್ಮನ್:-** ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 15 ನಿಮಿಷದವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಶುಕ್ರವಾರ, 7ನೇ ಮಾರ್ಚ್ 2025 ರಂದು ಬೆಳಗ್ಗೆ 10 ಗಂಟೆ 15 ನಿಮಿಷಗಳಿಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)**